ಶುಕ್ರವಾರ, ಮೇ 13, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ
ನವದೆಹಲಿಯಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ಧಾಕಡ್' ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಬಾಲಿವುಡ್ ನಟಿ ಕಂಗನಾ ರನೌತ್




ಸ್ವಾತಂತ್ರ್ಯದ ಅಮೃತ ಮಹೋತ್ಸವ

ಸಾಮಾಜಿಕ ಭದ್ರತೆ ನಮ್ಮ ಆದ್ಯತೆ



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು



ಕಂದಾಯ ಇಲಾಖೆಯು **"ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ"**, **"ರೈತರ ಮನೆ ಬಾಗಿಲಿಗೆ ಕಂದಾಯ ದಾಖಲೆಗಳು"** ಕಾರ್ಯಕ್ರಮಗಳ ಮೂಲಕ ನಾಗರಿಕರು ತಮ್ಮ ಸಮಸ್ಯೆಗಳನ್ನು ಅಧಿಕಾರಿಗಳೊಂದಿಗೆ ನೇರವಾಗಿ ಹಂಚಿಕೊಳ್ಳಲು ಮತ್ತು ತಾವಿರುವಲ್ಲಿಯೇ ದಾಖಲಾತಿಗಳನ್ನು ಪಡೆಯುವ ಮತ್ತು **"ಸ್ವಾವಲಂಬಿ"** ಮೊಬೈಲ್ ಆ್ಯಪ್ ಮೂಲಕ ತಮ್ಮ ಸ್ವಂತ ಖಾಸಗಿ ಜಮೀನಿನ ನಕ್ಷೆಯನ್ನು ಸ್ವಯಂ ಸರ್ವೆ ಮಾಡಿಕೊಳ್ಳುವ ಅವಕಾಶವನ್ನು ರೂಪಿಸಿದ್ದು, ಇದೀಗ "ಮನೆಬಾಗಿಲಿಗೆ ಪಿಂಚಣಿ" ಯೋಜನೆಯಡಿಯಲ್ಲಿ ದೂರವಾಣಿ ಮೂಲಕವೇ ಪಿಂಚಣಿ ಕೋರಿಕೆ ಸ್ವೀಕರಿಸಿ 72 ಗಂಟೆಯಲ್ಲಿ ಪಿಂಚಣಿ ಮಂಜೂರಾತಿ ಮಾಡುವ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಹಲೋ, ಕಂದಾಯ ಸಚಿವರೆ! ಸಹಾಯವಾಣಿ
(Toll Free) ಸಂಖ್ಯೆ
155245
ಕರೆ ಮೂಲಕ
ಪಿಂಚಣಿ ಸೌಲಭ್ಯ
ಕೋರಿಕೆ ಸಲ್ಲಿಸಬಹುದು.

ಕುಟುಂಬದ ವಾರ್ಷಿಕ ಆದಾಯ ರೂ.32,000/– ಕ್ಕಿಂತ ಕಡಿಮೆ ಇರುವ

ವೃದ್ಧರು **ವಿಶೇಷ ಚೇತನರು** **ವಿಧವೆಯರು** ಹಾಗೂ

ಅವಿವಾಹಿತ ಅಥವಾ ವಿಚ್ಛೇದಿತ ಮಹಿಳೆಯರು

ಮಾಸಿಕ ಪಿಂಚಣಿ ಸೌಲಭ್ಯಕ್ಕಾಗಿ ದೂರವಾಣಿ ಮುಖೇನ ಕೋರಿಕೆ ಸಲ್ಲಿಸಬಹುದು.

- ನಾಗರಿಕರು ಶುಲ್ಕರಹಿತ (Toll Free) ಸಂಖ್ಯೆ 155245ಗೆ ಉಚಿತವಾಗಿ ದೂರವಾಣಿ ಕರೆ ಮೂಲಕ ಕಡ್ಡಾಯವಾಗಿ ತಮ್ಮ ಆಧಾರ್ ಸಂಖ್ಯೆ ಒದಗಿಸಿ ಪಿಂಚಣಿ ಸೌಲಭ್ಯ ಕೋರಿಕೆ ಸಲ್ಲಿಸಬಹುದು.
- ತಮ್ಮ ವ್ಯಾಪ್ತಿಯ ಗ್ರಾಮ ಲೆಕ್ಕಾಧಿಕಾರಿಗಳು ಅರ್ಜಿದಾರರ ಮನೆಬಾಗಿಲಿಗೆ ಭೇಟಿ ನೀಡಿ "ನವೋದಯ" ಮೊಬೈಲ್ ಆ್ಯಪ್ ಮೂಲಕ ಅರ್ಜಿದಾರರಿಂದ ಮಾಹಿತಿ ಹಾಗೂ ದಾಖಲಾತಿಗಳ ಸಂಗ್ರಹ.
- ಗ್ರಾಮ ಲೆಕ್ಕಾಧಿಕಾರಿಗಳು ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಸಲ್ಲಿಸಬೇಕಾದ ದಾಖಲೆಗಳು: • ಕಡ್ಡಾಯವಾಗಿ ಆಧಾರ್ ಕಾರ್ಡ್. • ಬ್ಯಾಂಕ್/ಅಂಚೆ ಖಾತೆ ವಿವರದ ಪ್ರತಿ. • ವಿಳಾಸ ಮತ್ತು ವಯಸ್ಸಿಗೆ ಸಂಬಂಧಿಸಿದ ದಾಖಲಾತಿ (ಪಡಿತರ ಚೀಟಿ, ಚುನಾವಣೆ ಗುರುತಿನ ಚೀಟಿ ಅಥವಾ ಸರ್ಕಾರ ವಿತರಿಸಿದ ಗುರುತಿನ ಚೀಟಿ) • ಮೊಬೈಲ್ ಆ್ಯಪ್ ಮೂಲಕ ಭಾವಚಿತ್ರ ಸೆರೆಹಿಡಿಯಲಾಗುವುದು.
- ಅರ್ಹರಿಗೆ 72 ಗಂಟೆಯೊಳಗೆ ನಾಡ ಕಚೇರಿ ಉಪ ತಹಸೀಲ್ದಾರರಿಂದ ಪಿಂಚಣಿ ಮಂಜೂರಾತಿ ಅನುಮೋದನೆ.
- ಫಲಾನುಭವಿಗಳ ಮನೆಬಾಗಿಲಿಗೆ ಪಿಂಚಣಿ ಮಂಜೂರಾತಿ ಆದೇಶ ವಿತರಣೆ ಮಾಡಲಾಗುವುದು.

ಕೇಂದ್ರ ಸರ್ಕಾರ ಪ್ರಾಯೋಜಿತ ಎನ್‌ಎಸ್‌ಎಪಿ ಯೋಜನೆಯಡಿ ವೃದ್ಧರು, ವಿಶೇಷ ಚೇತನರು, ವಿಧವೆಯರು ಸೇರಿದಂತೆ ಒಟ್ಟು 13.98 ಲಕ್ಷ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ ಮೂಲಕ ಮಾಸಿಕ ಪಿಂಚಣಿ ಸೌಲಭ್ಯ ನೀಡಲಾಗುತ್ತಿದೆ.



ಮಾನ್ಯ ಕಂದಾಯ ಸಚಿವರಾದ **ಶ್ರೀ ಆರ್. ಅಶೋಕ** ಅವರು ಗ್ರಾಮ ವಾಸ್ತವ್ಯ ಮಾಡಿದ ಸಂದರ್ಭದಲ್ಲಿ ಫಲಾನುಭವಿಗಳಿಗೆ ದಾಖಲಾತಿಗಳನ್ನು ನೀಡುತ್ತಿರುವುದು

ಹೆಚ್ಚಿನ ಮಾಹಿತಿಗೆ ನಾಗರೀಕರು ತಮ್ಮ ವ್ಯಾಪ್ತಿಯ ತಾಲ್ಲೂಕು ಕಚೇರಿಯನ್ನು ಸಂಪರ್ಕಿಸಿ.

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

225 ಸದಸ್ಯ ಬಲದ ಸಂಸತ್ತಿನಲ್ಲಿ ಒಂದೇ ಸ್ಥಾನ ಹೊಂದಿರುವ ವಿಕ್ರಮಸಿಂಘೆ ಪಕ್ಷ

ರಾನಿಲ್ ವಿಕ್ರಮಸಿಂಘೆ ಶ್ರೀಲಂಕಾದ ನೂತನ ಪ್ರಧಾನಿ

ಕೊಲಂಬೊ(ಪಿಟಿಐ): ಶ್ರೀಲಂಕಾದ ಪ್ರಧಾನಿ ಮಹಿಂದಾ ರಾಜಪಕ್ಸ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ನಾಲ್ಕೇ ದಿನಗಳಲ್ಲಿ, ವಿರೋಧ ಪಕ್ಷದ ನಾಯಕ ರಾನಿಲ್ ವಿಕ್ರಮಸಿಂಘೆ ಅವರು ಗುರುವಾರ ಸಂಜೆ ನೂತನ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದರು.

ಬುಧವಾರ ಮತ್ತು ಗುರುವಾರ ಅಧ್ಯಕ್ಷ ಗೊಟಬಯ ರಾಜಪಕ್ಸ ಹಾಗೂ ರಾನಿಲ್ ವಿಕ್ರಮಸಿಂಘೆ ಮಧ್ಯೆ ನಿರಂತರ ಮಾತುಕತೆ ಬಳಿಕ, ಗುರುವಾರ ಸಂಜೆ ಯುನೈಟೆಡ್ ನ್ಯಾಷನಲ್ ಪಕ್ಷದ ನಾಯಕ ರನಿಲ್ ವಿಕ್ರಮಸಿಂಘೆ ಅವರನ್ನು ಗೊಟಬಯ ಅವರು ಪ್ರಧಾನಿಯನ್ನಾಗಿ ನೇಮಕ ಮಾಡಿದ್ದಾರೆ.

ಆಡಳಿತಾರೂಢ ಶ್ರೀಲಂಕಾ ಪೊಡುಜನ ಪೆರಮುನ (ಎಸ್‌ಎಲ್‌ಪಿಪಿ) ಹಾಗೂ ವಿರೋಧ ಪಕ್ಷದ ಎಸ್‌ಜೆಬಿಯ ಕೆಲವು ನಾಯಕರು ಸೇರಿದಂತೆ ಇತರ ರಾಜಕೀಯ ನಾಯಕರು ವಿಕ್ರಮಸಿಂಘೆ ಅವರಿಗೆ ಬೆಂಬಲ ವ್ಯಕ್ತಪಡಿಸಿದರು ಎಂದು ಮೂಲಗಳು ತಿಳಿಸಿವೆ.

ಈ ಹಿಂದೆ ಪ್ರಧಾನಿಯಾಗಿದ್ದ ವಿಕ್ರಮಸಿಂಘೆ ಅವರನ್ನು 2018ರಲ್ಲಿ ಆಗಿನ ಅಧ್ಯಕ್ಷ ಮೈತ್ರಿಪಾಲ ಸಿರಿಸೇನಾ ಅವರು ಪ್ರಧಾನಿ ಸ್ಥಾನದಿಂದ ಕೆಳಗಿಳಿಸಿದ್ದರು. ಆದರೆ, ಇದಾಗಿ 2 ತಿಂಗಳ ಬಳಿಕ ವಿಕ್ರಮಸಿಂಘೆ ಅವರನ್ನು ಮತ್ತೆ ಪ್ರಧಾನಿಯನ್ನಾಗಿ ನೇಮಕ ಮಾಡಲಾಗಿತ್ತು. ಶ್ರೀಲಂಕಾದ 225 ಸದಸ್ಯ ಬಲದ ಸಂಸತ್ತಿನಲ್ಲಿ ವಿಕ್ರಮಸಿಂಘೆ ಪಕ್ಷವು ಒಬ್ಬರು ಸಂಸದರನ್ನು ಮಾತ್ರ ಹೊಂದಿದೆ ಎಂಬುದು ವಿಶೇಷ.

ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ಶ್ರೀಲಂಕಾದಲ್ಲಿ ಕಳೆದ ಕೆಲ ದಿನಗಳಿಂದ ಸರ್ಕಾರದ ವಿರುದ್ಧ ಭಾರಿ ಪ್ರತಿಭಟನೆಗಳು ನಡೆಯುತ್ತಲೇ ಇವೆ. ಇತ್ತೀಚಿನ ಹಿಂಸಾಚಾರದಲ್ಲಿ 8 ಮಂದಿ ಸಾವನ್ನಪ್ಪಿದ್ದರು. ಇದರ ಬೆನ್ನಲ್ಲೇ, ಮಹಿಂದಾ ರಾಜಪಕ್ಸ ಅವರು ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ವಿಕ್ರಮಸಿಂಘೆ ಅವರಿಗೆ ಅಧ್ಯಕ್ಷ ಗೊಟಬಯ ಅವರು ಪ್ರಮಾಣ ವಚನ ಬೋಧಿಸಿದರು. ಅವರು 6ನೇ ಬಾರಿಗೆ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಂತಾಗಿದೆ. ಆದರೆ, ಈವರೆಗೂ ಒಂದು ಸಲವೂ ಪ್ರಧಾನಿಯಾಗಿ ಅಧಿಕಾರವಧಿ ಪೂರ್ಣಗೊಳಿಸಿಲ್ಲ.



ಶ್ರೀಲಂಕಾದ ನೂತನ ಪ್ರಧಾನಿ ರಾನಿಲ್ ವಿಕ್ರಮಸಿಂಘೆ (ಎಡ ಬದಿ) ಅವರು ಗುರುವಾರ ಕೊಲಂಬೊದಲ್ಲಿ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು ಎಎಫ್‌ಪಿ ಚಿತ್ರ

‘ಶ್ರೀಲಂಕಾದ ಹೊಸ ಸರ್ಕಾರದ ಜತೆ ಕೆಲಸ’

ಕೊಲಂಬೊ (ಪಿಟಿಐ): ‘ಪ್ರಜಾಸತ್ತಾತ್ಮಕವಾಗಿ ರಚನೆಯಾದ ಶ್ರೀಲಂಕಾದ ಹೊಸ ಸರ್ಕಾರದೊಂದಿಗೆ ಕೆಲಸ ಮಾಡಲು ಭಾರತ ಎದುರು ನೋಡುತ್ತಿದೆ. ದ್ವೀಪ ರಾಷ್ಟ್ರದ ಜನರಿಗೆ ನವದೆಹಲಿಯ ಕಾಳಜಿ ಮತ್ತು ಬದ್ಧತೆ ಮುಂದುವರಿಯುತ್ತದೆ’ ಎಂದು ಭಾರತೀಯ ಹೈಕಮಿಷನ್ ಗುರುವಾರ ತಿಳಿಸಿದೆ.

ರನಿಲ್ ವಿಕ್ರಮಸಿಂಘೆ ಅವರು ನೂತನ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ, ಮೊದಲ ಪ್ರತಿಕ್ರಿಯೆಯಾಗಿ ಟ್ವೀಟ್ ಮಾಡಿರುವ ಭಾರತೀಯ ಹೈಕಮಿಷನ್, ‘ಭಾರತವು ಶ್ರೀಲಂಕಾದಲ್ಲಿ ರಾಜಕೀಯ ಸ್ಥಿರತೆಯನ್ನು ಬಯಸುತ್ತದೆ’ ಎಂದು ಹೇಳಿದೆ.

‘ಮಹಿಂದಾ ದೇಶ ತೊರೆಯುವಂತಿಲ್ಲ’

ಶ್ರೀಲಂಕಾ ರಾಜಧಾನಿ ಕೊಲಂಬೊದಲ್ಲಿ ಇತ್ತೀಚೆಗಷ್ಟೇ ಸರ್ಕಾರಿ ವಿರೋಧಿ ಪ್ರತಿಭಟನಕಾರರ ಮೇಲೆ ನಡೆದ ದಾಳಿಗಳ ಹಿನ್ನೆಲೆಯಲ್ಲಿ ತನಿಖೆ ಎದುರಿಸುತ್ತಿರುವ ಮಾಜಿ ಪ್ರಧಾನಿ ಮಹಿಂದಾ ರಾಜಪಕ್ಸ, ಅವರ ಪುತ್ರ ನಮಲ್ ರಾಜಪಕ್ಸ ಹಾಗೂ ಇತರ 15 ಮಂದಿ ದೇಶಬಿಟ್ಟು ಹೋಗದಂತೆ ಸ್ಥಳೀಯ ನ್ಯಾಯಾಲಯವೊಂದು ನಿರ್ಬಂಧ ಹೇರಿದೆ.

‘ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ದಾಳಿ ನಡೆಸಿದ ಪ್ರಕರಣದ ಬಗ್ಗೆ ತನಿಖೆ ನಡೆಯುತ್ತಿದೆ. ಈ ಘಟನೆಗೆ ಮಹಿಂದಾ ರಾಜಪಕ್ಸ ಸೇರಿದಂತೆ 17 ಮಂದಿ ಸಂಚು ರೂಪಿಸಿ, ಈ ದಾಳಿಗಳನ್ನು ಯೋಜಿಸಿದಂತೆ ಕಾಣುತ್ತಿದೆ. ಈ ಹಿನ್ನೆಲೆಯಲ್ಲಿ ಮಹಿಂದಾ ರಾಜಪಕ್ಸ ಸೇರಿದಂತೆ 17 ಮಂದಿ ಹೊರದೇಶಗಳಿಗೆ ಪ್ರಯಾಣಿಸದಂತೆ ನಿರ್ಬಂಧ ಹೇರಬೇಕು’ ಎಂದು ಅಟಾರ್ನಿ ಜನರಲ್ ಕೋರಿದ್ದರು. ಈ ಹಿನ್ನೆಲೆಯಲ್ಲಿ ಫೋರ್ಟ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು, ಈ ನಿರ್ಬಂಧ ಹೇರಿದೆ ಎಂದು ವರದಿಯಾಗಿದೆ.

‘ಶ್ರೀಲಂಕಾ ಪ್ರಜೆಗಳು ನುಸುಳುವ ಸಾಧ್ಯತೆ’

ಮಂಗಳೂರು: ಶ್ರೀಲಂಕಾ ಪ್ರಜೆಗಳು ಸಮುದ್ರ ಮಾರ್ಗದ ಮೂಲಕ ಒಳ ನುಸುಳುವ ಸಾಧ್ಯತೆ ಇರುವುದರಿಂದ ಎಚ್ಚರಿಕೆ ವಹಿಸಬೇಕು ಎಂದು ಮಂಗಳೂರಿನ ಕರಾವಳಿ ಕಾವಲು ಪೊಲೀಸ್ ಠಾಣೆ ಎಚ್ಚರಿಕೆ ನೀಡಿದೆ.

ಅಪರಿಚಿತ ವ್ಯಕ್ತಿಗಳಿಗೆ ಮನೆ ಬಾಡಿಗೆ ನೀಡುವ ಮುನ್ನ ಅವರ ಪೂರ್ವಾಪರ ಮಾಹಿತಿ ತಿಳಿದು ದಾಖಲೆ ಪಡೆದು, ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು ಎಂದು ತಿಳಿಸಿರುವ ಕರಾವಳಿ ಕಾವಲು ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಅವರು ಈ ಸಂಬಂಧ ಉತ್ತರ ದಕ್ಕೆ ಬಂದರಿನ ಮಂಗಳೂರು ಕರಾವಳಿ ಅಲ್ಪಸಂಖ್ಯಾತ ಮೀನುಗಾರರ ಪ್ರಾಥಮಿಕ ಸಹಕಾರಿ ಸಂಘಕ್ಕೆ ಪತ್ರ ಕಳುಹಿಸಿದ್ದಾರೆ.

ಸುದ್ದಿ 2 ನಿಮಿಷ

ಹಳೆಯ ವಾಹನ ಬಳಕೆ: ಶುಲ್ಕ ಏರಿಕೆಗೆ ಹೈಕೋರ್ಟ್ ತಡೆ

ಬೆಂಗಳೂರು: ಹಳೆಯ ವಾಹನಗಳ ಬಳಕೆ ನವೀಕರಣದ ಮೇಲೆ ಹೇರಲಾದ ಹೆಚ್ಚುವರಿ ಶುಲ್ಕ ಮತ್ತು ದಂಡ ವಿಧಿಸುವ ಕೇಂದ್ರ ಸರ್ಕಾರದ ಅಧಿಸೂಚನೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಕೇಂದ್ರದ ಅಧಿಸೂಚನೆ ಪ್ರಶ್ನಿಸಿ ಕರ್ನಾಟಕ ಲಾರಿ ಮಾಲೀಕರ ಸಂಘದ ಒಕ್ಕೂಟ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

‘ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಾರಿಗೆ ಸಚಿವಾಲಯವು ಅರ್ಜಿದಾರರ ವಿರುದ್ಧ ಯಾವುದೇ ಕ್ರಮಕ್ಕೆ ಮುಂದಾಗಬಾರದು’ ಎಂದು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಹದಿನೈದು ವರ್ಷಗಳಿಗೂ ಮೀರಿದ ವಾಹನಗಳ ಮೇಲೆ ಹೇರಲಾಗಿದ್ದ ಬಳಕೆ ನವೀಕರಣ ಶುಲ್ಕ ಮತ್ತು ದಂಡವನ್ನು ಅರ್ಜಿದಾರರು ಪ್ರಶ್ನಿಸಿದ್ದಾರೆ. ಕಳೆದ ಏಪ್ರಿಲ್ 1ರಿಂದ ಜಾರಿಗೊಳಿಸಲಾಗಿರುವ ಈ ಆದೇಶದ ಅನುಸಾರ, 15 ವರ್ಷ ಮೀರಿದ ಕಾರುಗಳ ಪರವಾನಗಿ ನವೀಕರಣದ ಶುಲ್ಕವನ್ನು ₹ 600 ರಿಂದ ₹ 5 ಸಾವಿರದವರೆಗೆ ಮತ್ತು ಬೈಕ್‌ಗಳ ಶುಲ್ಕವನ್ನು ₹ 300 ರಿಂದ 1 ಸಾವಿರದವರೆಗೆ ಏರಿಸಲಾಗಿದೆ. 15 ವರ್ಷ ಮೀರಿದ ಬಸ್ ಮತ್ತು ಟ್ರಕ್‌ಗಳ ಸಾಮರ್ಥ್ಯ ದೃಢೀಕರಣದ ನವೀಕರಣದ ಶುಲ್ಕವನ್ನು ₹ 1,500 ರಿಂದ 12,500ರವರೆಗೆ ಏರಿಸಲಾಗಿದೆ.



ಶ್ರೀಕೃಷ್ಣ ಜನ್ಮಭೂಮಿ: 4 ತಿಂಗಳೊಳಗೆ ವಿಲೇವಾರಿಗೆ ಹೈಕೋರ್ಟ್ ನಿರ್ದೇಶನ

ಲಖನೌ: ಶ್ರೀಕೃಷ್ಣ ಜನ್ಮಭೂಮಿ ಇರುವ ಸಂಪೂರ್ಣ ಜಾಗದ ಮಾಲೀಕತ್ವದ ಹಕ್ಕು ನೀಡುವುದು ಮತ್ತು ಅದರ ಪಕ್ಕದ ಶಾಹಿ ಈದ್ಗಾ ಮಸೀದಿ ತೆರವುಗೊಳಿಸುವಂತೆ ಕೋರಿ ಸಲ್ಲಿಸಿರುವ ಅರ್ಜಿಗಳನ್ನು ನಾಲ್ಕು ತಿಂಗಳೊಳಗೆ ವಿಲೇವಾರಿ ಮಾಡುವಂತೆ ಅಲಹಾಬಾದ್ ಹೈಕೋರ್ಟ್ ಗುರುವಾರ ಮಥುರಾ ನ್ಯಾಯಾಲಯಕ್ಕೆ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿ ಸಲೀಲ್ ಕುಮಾರ್ ರೈ ಅವರಿದ್ದ ಏಕಸದಸ್ಯ ನ್ಯಾಯಪೀಠವು, ಎಲ್ಲಾ ಅರ್ಜಿಗಳನ್ನು ಒಟ್ಟಿಗೆ ವಿಚಾರಣೆ ನಡೆಸಬೇಕು. ಈ ವಿಷಯದಲ್ಲಿ ಎಲ್ಲಾ ಕಕ್ಷಿದಾರರ ಹಾಜರಾತಿಯನ್ನು ಖಚಿತಪಡಿಸಿಕೊಳ್ಳಲು ಮತ್ತು ವಿವಾದದಲ್ಲಿ ಪ್ರತಿವಾದಿಯಾಗಿರುವ ಸುನ್ನಿ ಸೆಂಟ್ರಲ್ ವಕ್ಫ್ ಮಂಡಳಿ ವಿಚಾರಣೆಗೆ ಗೈರು ಹಾಜರಾದರೂ ಆದೇಶವನ್ನು ಹೊರಡಿಸಬೇಕು ಎಂದು ಜಿಲ್ಲಾ ನ್ಯಾಯಾಲಯಕ್ಕೆ ಸೂಚಿಸಿತು.

ಈ ಪ್ರಕರಣದ ಅರ್ಜಿಗಳನ್ನು ನಿತ್ಯ ವಿಚಾರಣೆ ನಡೆಸಿ ತ್ವರಿತವಾಗಿ ವಿಲೇವಾರಿ ಮಾಡುವಂತೆ ಹಿಂದೂ ಸಂಘಟನೆಯ ನಾಯಕರೊಬ್ಬರು ಸಲ್ಲಿಸಿದ ಅರ್ಜಿ ವಿಚಾರಣೆ ನಡೆಸಿದ, ಹೈಕೋರ್ಟ್ ಈ ಆದೇಶ ನೀಡಿದೆ.

ಶ್ರೀಕೃಷ್ಣ ಜನ್ಮಭೂಮಿ-ಶಾಹಿ ಈದ್ಗಾ ಸಂಕೀರ್ಣದ ಮಾಲೀಕತ್ವದ ಹಕ್ಕುಗಳಿಗೆ ಸಂಬಂಧಿಸಿದಂತೆ ಮಥುರಾ ಜಿಲ್ಲಾ ನ್ಯಾಯಾಲಯಗಳಲ್ಲಿ ಪ್ರಸ್ತುತ ಒಂಬತ್ತು ಅರ್ಜಿಗಳು ಬಾಕಿ ಉಳಿದಿವೆ. ಈ ಎಲ್ಲಾ ಅರ್ಜಿಗಳನ್ನು ಹಿಂದೂ ಸಮುದಾಯದವರು, ಸಂಘಟನೆಗಳು ಸಲ್ಲಿಸಿವೆ. ಈ ಪೈಕಿ ಒಂದು ಅರ್ಜಿಗೆ ಸಂಬಂಧಿಸಿದ ಆದೇಶವನ್ನು ಮೇ 19 ಪ್ರಕಟಿಸಲು ಮಥುರಾ ನ್ಯಾಯಾಲಯ ನಿರ್ಧರಿಸಿದೆ.

ಜ್ಞಾನವಾಪಿ ಮಸೀದಿ ಒಳಗೆ ಸಮೀಕ್ಷೆ ವಿಡಿಯೊ ಚಿತ್ರೀಕರಣ: ಕೋರ್ಟ್ ಅಸ್ತು

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರ ಪ್ರದೇಶದಲ್ಲಿ ಕಾಶಿ ವಿಶ್ವನಾಥ ದೇಗುಲಕ್ಕೆ ಹೊಂದಿಕೊಂಡಿರುವ ಜ್ಞಾನವಾಪಿ ಮಸೀದಿಯ ಒಳಗೆ ಸಮೀಕ್ಷೆ, ವಿಡಿಯೊ ಚಿತ್ರೀಕರಣ ಮುಂದುವರಿಯಲಿದೆ ಎಂದು ವಾರಾಣಸಿಯ ಸ್ಥಳೀಯ ನ್ಯಾಯಾಲಯ ಹೇಳಿದೆ.

ಮಸೀದಿ ಸ್ಥಳದ ಸಮೀಕ್ಷೆ ಮತ್ತು ವಿಡಿಯೊ ಚಿತ್ರೀಕರಣ ನಿಲ್ಲಿಸಲು ಆದೇಶಿಸಬೇಕು ಎಂದು ಕೋರಿದ್ದ ಅರ್ಜಿಯನ್ನು ಕೋರ್ಟ್ ತಳ್ಳಿಹಾಕಿತು.

ಮೇ 17ರೊಳಗೆ ಸಮೀಕ್ಷೆ ಮುಗಿಸಿ, ವರದಿ ಸಲ್ಲಿಸಬೇಕು ಎಂದೂ ಆದೇಶಿಸಿತು. ಕೆಳಮಹಡಿ, ಮುಚ್ಚಿದ ಕೊಠಡಿಗಳು ಸೇರಿ ಸಂಪೂರ್ಣವಾಗಿ ಸಮೀಕ್ಷೆ ಕಾರ್ಯ ನಡೆಯಬೇಕು ಎಂದು ಕೋರ್ಟ್ ಆದೇಶಿಸಿತು.

ಅಜಯ್ ಕುಮಾರ್ ಮಿಶ್ರಾ ಅವರನ್ನು ಅಡ್ವೊಕೇಟ್ ಕಮಿಷನರ್ ಸ್ಥಾನದಿಂದ ಕೈಬಿಡಬೇಕು ಎಂದು ಕೋರಿದ್ದ ಮುಸಲ್ಮಾನರ ಅರ್ಜಿಯನ್ನು ಕೋರ್ಟ್ ತಿರಸ್ಕರಿಸಿತು. ಅಲ್ಲದೆ, ಮಿಶ್ರಾ ಅವರಿಗೆ ನೆರವಾಗಲು ಹೆಚ್ಚುವರಿ ಕಮಿಷನರ್ ಮತ್ತು ಸಹಾಯಕ ಕಮಿಷನರ್ ಅವರನ್ನು ಕೋರ್ಟ್ ನೇಮಕ ಮಾಡಿತು.

ಸಮೀಕ್ಷೆಗೆ ಆಕ್ಷೇಪ ವ್ಯಕ್ತಪಡಿಸಿದ್ದ ಮುಸಲ್ಮಾನ ಸಂಘಟನೆಗಳು ಯಾವುದೇ ಕೋರ್ಟ್ ಆದೇಶವಿರದಿದ್ದರೂ ಸಮೀಕ್ಷೆ ನಡೆಸಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದವು.

ಕಾಶಿ ವಿಶ್ವನಾಥ ದೇವಸ್ಥಾನ – ಜ್ಞಾನವಾಪಿ ಮಸೀದಿ ಆವರಣದಲ್ಲಿಯೇ ಇರುವ ಶೃಂಗಾರ ಗೌರಿ ದೇವಸ್ಥಾನದಲ್ಲಿ ನಿತ್ಯ ಪೂಜೆ ಸಲ್ಲಿಸಲು ಅವಕಾಶ ಕಲ್ಪಿಸಬೇಕು ಎಂದು ಕೋರಿ ಐವರು ಮಹಿಳೆಯರು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ಆಧರಿಸಿ ಈಗ ಕೋರ್ಟ್ ಮಸೀದಿ ಒಳಗೆ ಸಮೀಕ್ಷೆ ಮತ್ತು ವಿಡಿಯೊಗ್ರಫಿ ನಡೆಸಲು ಆದೇಶಿಸಿದೆ.

ಮತ್ತೊಬ್ಬ ಅರ್ಜಿದಾರ ವಿಜಯ್ ಶಂಕರ್ ರಸ್ತೋಗಿ ಅವರು, ಮಸೀದಿ ಸ್ಥಳ ಸೇರಿದಂತೆ ಇಡೀ ಆವರಣ ಕಾಶಿ ವಿಶ್ವನಾಥ ದೇವಸ್ಥಾನಕ್ಕೆ ಸೇರಿದ್ದಾಗಿದೆ ಎಂದು ವಾದಿಸಿದ್ದು, ಈ ಅರ್ಜಿಯು 1991ರಿಂದ ಕೋರ್ಟ್‌ನಲ್ಲಿದೆ.

ಕಾಶಿ ವಿಶ್ವನಾಥ ದೇವಸ್ಥಾನವನ್ನು ಎರಡು ಸಾವಿರ ವರ್ಷಗಳ ಹಿಂದೆ ನಿರ್ಮಿಸಲಾಗಿದೆ. ಈ ದೇವಸ್ಥಾನವನ್ನು ಮೊಘಲ್ ಚಕ್ರವರ್ತಿ ಔರಂಗಜೇಬನ ಆಡಳಿತದಲ್ಲಿ ನೆಲಸಮಗೊಳಿಸಲಾಗಿದೆ ಎಂದು ರಸ್ತೋಗಿ ವಾದಿಸಿದ್ದಾರೆ.

ತಾಜ್‌ಮಹಲ್ ಇತಿಹಾಸ: ಸತ್ಯಶೋಧನೆ ಕೋರಿಕೆ ಅರ್ಜಿ ವಜಾ

ಲಖನೌ (ಪಿಟಿಐ): ತಾಜ್‌ಮಹಲ್‌ನ ‘ಇತಿಹಾಸ’ವನ್ನು ತಿಳಿಯಲು ಸತ್ಯಶೋಧನಾ ತನಿಖೆ ನಡೆಸಲು ಭಾರತೀಯ ಪ್ರಾಚ್ಯವಸ್ತು ಸರ್ವೇಕ್ಷಣಾ ಇಲಾಖೆಗೆ ಆದೇಶಿಸಬೇಕು ಎಂದು ಕೋರಿ ಬಿಜೆಪಿ ಮುಖಂಡರೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ಗುರುವಾರ ತಿರಸ್ಕರಿಸಿದೆ.

ತಾಜ್ ಮಹಲ್‌ನ ಇತಿಹಾಸ ತಿಳಿಯಲು ಈ ಸ್ಮಾರಕದೊಳಗೆ ಕಾಯಂ ಬಾಗಿಲು ಮುಚ್ಚಿರುವ 22 ಕೊಠಡಿಗಳ ಬೀಗಮುದ್ರೆಯನ್ನು ತೆರವುಗೊಳಿಸಬೇಕು, ಸತ್ಯಶೋಧನಾ ತನಿಖೆಗೆ ಆದೇಶಿಸಬೇಕು ಎಂದು ಅರ್ಜಿದಾರರಾದ ಬಿಜೆಪಿಯ ಅಯೋಧ್ಯಾ ಘಟಕದ ಮಾಧ್ಯಮ ಉಸ್ತುವಾರಿ ಮತ್ತು ವಕೀಲ ರಜನೀಶ್ ಸಿಂಗ್ ಅವರು ಹೈಕೋರ್ಟ್‌ನ ಲಖನೌ ಪೀಠಕ್ಕೆ ಅರ್ಜಿ ಸಲ್ಲಿಸಿದ್ದರು.



ಅರ್ಜಿ ವಿಚಾರಣೆ ಕೈಗೆತ್ತಿಕೊಂಡ ನ್ಯಾಯಮೂರ್ತಿಗಳಾದ ಡಿ.ಕೆ. ಉಪಾಧ್ಯಾಯ, ಸುಭಾಷ್ ವಿದ್ಯಾರ್ಥಿ ಅವರಿದ್ದ ಪೀಠವು, ಇದರಲ್ಲಿ ಕಾನೂನು ಅಥವಾ ಸಾಂವಿಧಾನಿಕ ಹಕ್ಕುಗಳು ಉಲ್ಲಂಘನೆಯಾಗಿದೆ ಎನ್ನುವುದನ್ನು ಸಾಬೀತುಪಡಿಸಲು ಅರ್ಜಿದಾರರು ವಿಫಲರಾಗಿದ್ದಾರೆ ಎಂದು ಅಭಿಪ್ರಾಯಪಟ್ಟಿತು.

‘ಸತ್ಯ, ಅದು ಏನೇ ಇರಲಿ. ಈ ಸ್ಮಾರಕದ ಇತಿಹಾಸದ ಸತ್ಯಶೋಧನೆಯನ್ನು ಇತಿಹಾಸಕಾರರ ತೀರ್ಮಾನಕ್ಕೆ ಬಿಡುವುದು ಸೂಕ್ತ’ ಎಂದು ಪೀಠ ಹೇಳಿದೆ.

ಅರ್ಜಿದಾರರ ವಕೀಲ ರುದ್ರ ವಿಕ್ರಮ್ ಸಿಂಗ್ ಅವರು ಅರ್ಜಿ ಹಿಂಪಡೆಯಲು ಮತ್ತು ಹೊಸದಾಗಿ ಅರ್ಜಿ ಸಲ್ಲಿಸಲು ಅನುಮತಿ ನೀಡುವಂತೆ ಪೀಠಕ್ಕೆ ಮನವಿ ಮಾಡಿದರು. ಆದರೆ, ಪೀಠವು ಅವರ ಮನವಿ ಪುರಸ್ಕರಿಸಲಿಲ್ಲ. ಅರ್ಜಿಯನ್ನು ವಜಾಗೊಳಿಸಿತು.

ಮೊಘಲ್ ಚಕ್ರವರ್ತಿಗಳ ಆಡಳಿತಾವಧಿಯಲ್ಲಿ ನಿರ್ಮಿಸಲಾಗಿರುವ ತಾಜ್ ಮಹಲ್‌ನ ಸ್ಥಳದಲ್ಲಿ ಅದಕ್ಕೂ ಹಿಂದೆ ಶಿವನ ದೇವಸ್ಥಾನ ಇತ್ತು ಎಂದು ಹಿಂದೂ ಸಂಘಟನೆಗಳು ಪ್ರತಿಪಾದಿಸಿವೆ. ಸದ್ಯ, ಈ ಸ್ಮಾರಕವನ್ನು ಭಾರತೀಯ ಪ್ರಾಚ್ಯವಸ್ತು ಸರ್ವೇಕ್ಷಣಾ ಇಲಾಖೆ ಸಂರಕ್ಷಿಸುತ್ತಿದೆ.

ತುರ್ತು ಪರಿಸ್ಥಿತಿ ಘೋಷಿಸಿದ ಕಿಮ್

ಉತ್ತರ ಕೊರಿಯಾ: ಕೋವಿಡ್‌ನ ಮೊದಲ ಪ್ರಕರಣ ಪತ್ತೆ

ಸೋಲ್ (ಎಎಫ್‌ಪಿ): ಉತ್ತರ ಕೊರಿಯಾದಲ್ಲಿ ಇದೇ ಮೊಟ್ಟ ಮೊದಲ ಬಾರಿಗೆ ಕೋವಿಡ್–19 ಪ್ರಕರಣಗಳು ವರದಿಯಾಗಿದ್ದು, ಸೋಂಕು ಪ್ರಸರಣ ತಡೆಯಲು ಗುರುವಾರ ತುರ್ತು ಪರಿಸ್ಥಿತಿ ಘೋಷಿಸಲಾಗಿದೆ.

ಇದೇ ಮೊದಲ ಬಾರಿಗೆ ಮಾಸ್ಕ್ ಧರಿಸಿ, ಟಿವಿಯಲ್ಲಿ ಕಾಣಿಸಿಕೊಂಡ ಅಧ್ಯಕ್ಷ ಕಿಮ್ ಜಾಂಗ್ ಉನ್, ದೇಶವ್ಯಾಪಿ ಲಾಕ್‌ಡೌನ್ ಘೋಷಿಸಿದರು. ಉನ್ನತ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಕೊರೊನಾ ಸೋಂಕು ಪ್ರಸರಣ ತಡೆಯಲ ‘ಗರಿಷ್ಠ ತುರ್ತು ನಿಯಂತ್ರಣ ಕ್ರಮಗಳನ್ನು’ ಜಾರಿಗೊಳಿಸಲಾಗುವುದು ಎಂದರು.

ರಾಷ್ಟ್ರದಲ್ಲಿ ಈ ವರೆಗೆ ಒಂದೇ ಒಂದು ಕೋವಿಡ್ ಪ್ರಕರಣ ವರದಿಯಾಗಿಲ್ಲ ಎಂದೇ ಉತ್ತರ ಕೊರಿಯಾ ಹೇಳುತ್ತಿತ್ತು. 2019ರಲ್ಲಿ ಸಾಂಕ್ರಾಮಿಕ ರೋಗ ಕಾಣಿಸಿಕೊಂಡಾಗಿನಿಂದಲೂ ದೇಶದ ಎಲ್ಲ ಗಡಿಗಳಲ್ಲಿ ಕಠಿಣ ದಿಗ್ಬಂಧನ ವಿಧಿಸಲಾಗಿತ್ತು.

ರಾಜಧಾನಿ ಪ್ಯೊಂಗ್ಯಾಂಗ್‌ನಲ್ಲಿ ಜ್ವರದಿಂದ ಬಳಲುತ್ತಿದ್ದ ರೋಗಿಯನ್ನು ಪರೀಕ್ಷೆ ಒಳಪಡಿಸಿದಾಗ, ವ್ಯಕ್ತಿಗೆ ರೂಪಾಂತರಿ ಓಮೈಕ್ರಾನ್ ಬಿಎ.2 ತಳಿ ಸೋಂಕು ತಗುಲಿರುವುದು ದೃಢಪಟ್ಟಿದೆ ಎಂದು ಸರ್ಕಾರಿ ಸುದ್ದಿಸಂಸ್ಥೆ ವರದಿ ಮಾಡಿದೆ.

‘ಉತ್ತರಕೊರಿಯಾದ ಆರೋಗ್ಯಕ್ಷೇತ್ರದಲ್ಲಿ ಮೂಲಸೌಕರ್ಯಗಳ ಕೊರತೆ ಇದೆ. ದೇಶದ 2.5 ಕೋಟಿ ಜನರು ಲಸಿಕೆ ಪಡೆಯದೇ ಇರುವ ಕಾರಣ ಕೋವಿಡ್ ಪ್ರಸರಣ ಎದುರಿಸಲು ಕಷ್ಟವಾಗಬಹುದು’ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

‘ಯುರೋಪ್: 20 ಲಕ್ಷ ಗಡಿ ದಾಟಿದ ಮೃತರ ಸಂಖ್ಯೆ’

ಜಿನೀವಾ/ಕೊಪೆನ್‌ಹೆಗನ್(ಎಪಿ/ಎಎಫ್‌ಪಿ): ಯುರೋಪ್‌ನಲ್ಲಿ ಕೋವಿಡ್‌ನಿಂದಾಗಿ ಮೃತಪಟ್ಟವರ ಸಂಖ್ಯೆ ಗುರುವಾರ 20 ಲಕ್ಷ ಗಡಿ ದಾಟಿತು ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಹೇಳಿದೆ.

ಅಮೆರಿಕದಲ್ಲಿ 10 ಲಕ್ಷಕ್ಕೂ ಹೆಚ್ಚು ಜನರು ಕೋವಿಡ್‌ನಿಂದಾಗಿ ಸಾವನ್ನಪ್ಪಿದ್ದಾರೆ. ಅಲ್ಲದೇ, ಅಮೆರಿಕ ಹಾಗೂ ಆಫ್ರಿಕಾ ಹೊರತುಪಡಿಸಿ ಜಗತ್ತಿನ ಅನೇಕ ದೇಶಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆ ಕಂಡುಬರುತ್ತಿದೆ ಎಂದು ತಿಳಿಸಿದೆ.

ಎರಡನೇ ‘ಜಾಗತಿಕ ಕೋವಿಡ್–19 ಶೃಂಗಸಭೆ’ಯಲ್ಲಿ ಪ್ರಧಾನಿ ಮೋದಿ ಪ್ರತಿಪಾದನೆ

‘ಲಸಿಕೆ ಅನುಮೋದನೆ ಪ್ರಕ್ರಿಯೆ ಸರಳಗೊಳಿಸಿ’

ನವದೆಹಲಿ (ಪಿಟಿಐ): ‘ಲಸಿಕೆಗೆ ಅನುಮೋದನೆ ನೀಡುವ ವಿಶ್ವ ಆರೋಗ್ಯ ಸಂಸ್ಥೆಯ ಪ್ರಕ್ರಿಯೆಗಳನ್ನು ಸರಳಗೊಳಿಸಬೇಕು’ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಆಯೋಜಿಸಿದ್ದ ಎರಡನೇ ‘ಜಾಗತಿಕ ಕೋವಿಡ್–19 ಶೃಂಗಸಭೆ’ (ವರ್ಚ್ಯುವಲ್) ಉದ್ದೇಶಿಸಿ ಗುರುವಾರ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು, ಈ ನಿಯಮಗಳಲ್ಲಿ ಸುಧಾರಣೆಯಾಗಬೇಕಿದೆ. ಔಷಧಗಳ ಪೂರೈಕೆ ವ್ಯವಸ್ಥೆಯಲ್ಲಿ ಸ್ಥಿರತೆ ಕಾಯ್ದುಕೊಳ್ಳಲು ಅನುಕೂಲವಾಗುವಂತೆ ಲಸಿಕೆಗಳು ಹಾಗೂ ಇತರೆ ಚಿಕಿತ್ಸಾ ವಿಧಾನಗಳ ಅನುಮೋದನೆ ಪ್ರಕ್ರಿಯೆಯನ್ನು ಸರಳಗೊಳಿಸಬೇಕು’ ಎಂದು ಅಭಿಪ್ರಾಯಪಟ್ಟರು.

ದೇಶೀಯವಾಗಿ ಅಭಿವೃದ್ಧಿಪಡಿಸಿ, ಭಾರತದಲ್ಲಿ ಕೋಟ್ಯಂತರ ಜನರಿಗೆ ನೀಡಿದ್ದ ಕೋವ್ಯಾಕ್ಸಿನ್ ಕೋವಿಡ್ ಲಸಿಕೆಗೆ ವಿಶ್ವ ಆರೋಗ್ಯ ಸಂಸ್ಥೆಯು ತೀರಾ ತಡವಾಗಿ ಮಾನ್ಯತೆ ನೀಡಿತ್ತು.

‘ಬೌದ್ಧಿಕ ಆಸ್ತಿ ಹಕ್ಕಿನ ವ್ಯಾಪಾರ ಸಂಬಂಧಿ ವಿಚಾರಗಳೂ ಒಳಗೊಂಡಂತೆ ವಿಶ್ವ ವ್ಯಾಪಾರ ಸಂಘಟನೆಯ (ಡಬ್ಲ್ಯುಟಿಒ) ನಿಯಮಗಳನ್ನು ಸಡಿಲಗೊಳಿಸಲು ಪ್ರಧಾನಿ ಇದೇ ವೇಳೆ ಕರೆ ನೀಡಿದರು. ಔಷಧಗಳು ಹಾಗೂ ಲಸಿಕೆಗಳು ಸುಲಭವಾಗಿ ದೊರೆಯುವಂತೆ ಮಾಡಲು ಸರಳೀಕೃತ ಜಾಗತಿಕ ಪೂರೈಕೆ ಸರಪಳಿಯನ್ನು ನಿರ್ಮಿಸಬೇಕು. ಭವಿಷ್ಯದಲ್ಲಿ ಎದುರಾಗುವ ಆರೋಗ್ಯ ತುರ್ತುಸ್ಥಿತಿಯನ್ನು ಎದುರಿಸಲು ಇದು ಅನಿವಾರ್ಯ ಎಂದು ಅವರು ಪ್ರತಿಪಾದಿಸಿದರು.

ಶ್ರೀಮಂತ ದೇಶಗಳು ಕೋವಿಡ್ ಲಸಿಕೆಯ ಡೋಸ್‌ಗಳನ್ನು ಸಂಗ್ರಹಿಸಿಕೊಂಡವು. ಲಸಿಕೆ ತಂತ್ರಜ್ಞಾನ ಮತ್ತು ಸೂತ್ರಗಳನ್ನು ಹಂಚಿಕೊಳ್ಳಲಿಲ್ಲ. ಇದರಿಂದ ವಿಶ್ವದ ಬಹುತೇಕ ಲಸಿಕೆ ತಯಾರಿಕಾ ಘಟಕಗಳು ಬಳಕೆಯಾಗಲಿಲ್ಲ. ಇಂತಹ ಸಮಸ್ಯೆ ನಿವಾರಣೆಯಾಗಬೇಕು ಎಂದು ಮೋದಿ ಹೇಳಿದರು.

ಭಾರತವು ಕೋವಿಡ್ ಸಾಂಕ್ರಾಮಿಕವನ್ನು ನಿಭಾಯಿಸಿದ ಬಗೆಯನ್ನು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದ ಮೋದಿ, ದೇಶದ ಲಸಿಕಾ ಕಾರ್ಯಕ್ರಮ ಜಗತ್ತಿನಲ್ಲಿಯೇ ಅತಿದೊಡ್ಡದು ಎಂದು ಹೇಳಿದರು. ಭಾರತವು ಕೋವಿಡ್ ವಿರುದ್ಧದ ಹೋರಾಟದಲ್ಲಿ ನಾಗರಿಕ ಕೇಂದ್ರಿತ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ ಎಂದು ಹೇಳಿದರು.

ಹೋರಾಟಕ್ಕೆ ಶಕ್ತಿ ತುಂಬಬೇಕಿದೆ: ‘ಕೋವಿಡ್ ಸಾಂಕ್ರಾಮಿಕ ಇನ್ನೂ ಮುಗಿದಿಲ್ಲ’ ಎಂದ ಅಮೆರಿಕ ಅಧ್ಯಕ್ಷ ಜೋ ಬೈಡೆನ್ ಅವರು ‘ಅಂತರರಾಷ್ಟ್ರೀಯ ಮಟ್ಟದಲ್ಲಿ ವೈರಾಣು ವಿರುದ್ಧದ ಹೋರಾಟವು ಹುರುಪು ಕಳೆದುಕೊಂಡಿದೆ. ಹೋರಾಟಕ್ಕೆ ಪುನಃ ಶಕ್ತಿ ತುಂಬಬೇಕು’ ಎಂದು ಜಾಗತಿಕ ನಾಯಕರಿಗೆ ಮನವಿ ಮಾಡಿದರು.

ಮುನ್ನೆಚ್ಚರಿಕೆ ಡೋಸ್: ವಿದೇಶಕ್ಕೆ ತೆರಳುವವರಿಗೆ ಅವಧಿಗೆ ಮೊದಲೇ ಪಡೆಯಲು ಅವಕಾಶ

ನವದೆಹಲಿ (ಪಿಟಿಐ): ಮುನ್ನೆಚ್ಚರಿಕೆ ಡೋಸ್ ಪಡೆಯಲು ಇರುವ ನಿಯಮವನ್ನು ಕೇಂದ್ರ ಸರ್ಕಾರ ಗುರುವಾರ ಸಡಿಲಿಸಿದೆ. ಆ ಪ್ರಕಾರ ಎರಡನೇ ಡೋಸ್ ಲಸಿಕೆ ಪಡೆದು 9 ತಿಂಗಳು ಆಗದೇ ಇದ್ದರೂ ವಿದೇಶಕ್ಕೆ ತೆರಳುವವರು ಮುನ್ನೆಚ್ಚರಿಕೆ ಡೋಸ್ ಪಡೆಯಬಹುದಾಗಿದೆ.

ಕೋವಿನ್ ಜಾಲತಾಣದಲ್ಲಿ ಶೀಘ್ರವೇ ಈ ನೂತನ ಸೇವೆ ಲಭ್ಯವಾಗಲಿದೆ’ ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಟ್ವೀಟ್ ಮಾಡಿದ್ದಾರೆ. ಕಳೆದ ವಾರ ಲಸಿಕೆ ಕುರಿತ ರಾಷ್ಟ್ರೀಯ ತಾಂತ್ರಿಕ ಸಲಹಾ ಗುಂಪು (ಎನ್‌ಟಿಎಜಿಐ),ವಿದೇಶಕ್ಕೆ ತೆರಳುವ ನಾಗರಿಕರು, ವಿದ್ಯಾರ್ಥಿಗಳಿಗೆ ಎರಡನೇ ಡೋಸ್ ಮತ್ತು ಮುನ್ನೆಚ್ಚರಿಕೆ ಡೋಸ್ ನಡುವೆ ಕಡ್ಡಾಯವಾಗಿ 9 ತಿಂಗಳ ಅಂತರ ಇರಬೇಕು ಎಂಬ ನಿಯಮದಿಂದ ವಿನಾಯಿತಿ ನೀಡಬೇಕು ಎಂದು ಶಿಫಾರಸು ಮಾಡಿತ್ತು. ಇದರ ಬೆನ್ನಲ್ಲೇ ಕೇಂದ್ರ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ.

ಚುನಾವಣೆಗೂ ಮುನ್ನವೇ ಜೆಡಿಎಸ್, ಬಿಜೆಪಿ ನಡುವಿನ ಸಂಘರ್ಷ ತಾರಕಕ್ಕೆ

ಹಾಸನ: ಜಟಾಪಟಿಗೆ ಕಾರಣವಾದ ‘ಅಭಿವೃದ್ಧಿ’

• ಕೆ.ಎಸ್.ಸುನಿಲ್

ಹಾಸನ: ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು, ಶಾಸಕರಾದ ಪ್ರೀತಂ ಗೌಡ ಮತ್ತು ಎಚ್.ಡಿ.ರೇವಣ್ಣ ನಡುವೆ ಬಹಿರಂಗ ವಾಕ್ಸಮರಕ್ಕೆ ಎಡೆ ಮಾಡಿಕೊಟ್ಟಿವೆ.

ಜಿಲ್ಲಾ ಕೇಂದ್ರವನ್ನು ಹಿಡಿತಕ್ಕೆ ತೆಗೆದುಕೊಳ್ಳಲೇಬೇಕೆಂದು ಹಠಕ್ಕೆ ಬಿದ್ದಿರುವ ಹೊಳೆನರಸೀಪುರ ಕ್ಷೇತ್ರದ ಶಾಸಕ ಎಚ್.ಡಿ.ರೇವಣ್ಣ, ಅಭಿವೃದ್ಧಿ ಕಾಮಗಾರಿ, ಚಟುವಟಿಕೆಗಳ ಮೇಲೆ ಹದ್ದಿನ ಕಣ್ಣಿಟ್ಟಿದ್ದಾರೆ.‘ಹಾಸನ ತಾಲ್ಲೂಕಿನ ಎರಡು ಹೋಬಳಿ ಹೊಳೆನರಸೀಪುರ ಕ್ಷೇತ್ರಕ್ಕೂ ಸೇರಿದ್ದು, ನನಗೂ ಮಾತನಾಡುವ ಹಕ್ಕಿದೆ’ ಎಂದು ಪ್ರತಿಪಾದಿಸುತ್ತಿದ್ದಾರೆ.

ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ನಗರದ ಚನ್ನಪಟ್ಟಣ ಕೆರೆ ಅಭಿವೃದ್ಧಿಗೆ ಮಂಜೂರಾಗಿದ್ದ ₹ 144 ಕೋಟಿ ಅನುದಾನವನ್ನು ಆರು ಕೆರೆ, ಎಂಟು ಉದ್ಯಾನಗಳ ಅಭಿವೃದ್ಧಿಗೆ ಹಂಚಿರುವುದು ಅವರನ್ನು ಕೆರಳಿಸಿದೆ. ಕೆರೆ ವಿಚಾರದಿಂದ ಆರಂಭವಾದ ವಿರೋಧ, ತಾಲ್ಲೂಕು ಕಚೇರಿ ಕಟ್ಟಡದ ದಿಢೀರ್ ನೆಲಸಮ ವಿವಾದಕ್ಕೆ ಬಂದು ನಿಂತಿದೆ. ‘ಕಾಮಗಾರಿ ಮಾಡಿಯೇ ತೀರುತ್ತೇನೆ’ ಎಂದು ಪ್ರೀತಂ ಗೌಡರೂ ಹಠಕ್ಕೆ ಬಿದ್ದಿದ್ದಾರೆ.

ಕುಮಾರಸ್ವಾಮಿ ನೇತೃತ್ವದ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಲ್ಲಿ ಬಹುತೇಕ ಅಭಿವೃದ್ಧಿ ಕಾಮಗಾರಿಗಳು ಮಂಜೂರಾಗಿದ್ದವು. ಆ ನಂತರ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಅನುದಾನ ತಡೆ ಹಿಡಿದಿತ್ತು. ನಂತರ ಪ್ರೀತಂ ಗೌಡರ ಸತತ ಪ್ರಯತ್ನದಿಂದ ಹಂತಹಂತವಾಗಿ ಅನುದಾನ ಬಿಡುಗಡೆ ಆಗಲಾರಂಭಿಸಿತ್ತು.

ಕ್ಷೇತ್ರದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳ ಪೈಕಿ ಮಹಾರಾಜ ಉದ್ಯಾನ, ವಿಮಾನ ನಿಲ್ದಾಣ, ತಾಲ್ಲೂಕು ಕಚೇರಿ, ಟ್ರಕ್ ಟರ್ಮಿನಲ್, ಚನ್ನಪಟ್ಟಣ ಕೆರೆ ಅಭಿವೃದ್ಧಿ ಕಾಮಗಾರಿಗೆ ಜೆಡಿಎಸ್ ತೀವ್ರ ವಿರೋಧ ವ್ಯಕ್ತಪಡಿಸಿದೆ.

‘ಶಿವಮೊಗ್ಗದ ಮಾದರಿಯಲ್ಲಿ ವಿಮಾನ ನಿಲ್ದಾಣ ನಿರ್ಮಿಸದಿರುವುದು, ಸುಸ್ಥಿತಿಯಲ್ಲಿದ್ದ ತಾಲ್ಲೂಕು ಕಚೇರಿ ಕಟ್ಟಡ ಕೆಡವಿರುವುದು, ಪಾರ್ಕ್‌ನಲ್ಲಿ ಕಟ್ಟಡಗಳ ನಿರ್ಮಾಣ, ಹೇಮ ಗಂಗೋತ್ರಿ ವಿದ್ಯಾರ್ಥಿನಿಯರ ಹಾಸ್ಟೆಲ್ ಬಳಿ ಟ್ರಕ್ ಟರ್ಮಿನಲ್ ನಿರ್ಮಿಸುತ್ತಿರುವುದು ಸರಿಯಲ್ಲ’ ಎಂಬುದು ಜೆಡಿಎಸ್ ವಾದ.

ಈ ನಡುವೆಯೇ ಹಾಸನ ತಾಲ್ಲೂಕು ಕಚೇರಿ ಕಟ್ಟಡವನ್ನು ರಾತ್ರೋರಾತ್ರಿ ನೆಲಸಮಗೊಳಿಸಲಾಯಿತು. ಹಳೆಯ ಕಟ್ಟಡ ಒಡೆಯದೆ ಹಿಂಭಾಗದ ಜಾಗದಲ್ಲಿ ಕಟ್ಟಡ ನಿರ್ಮಿಸಬೇಕೆಂದು ರೇವಣ್ಣ ಆಗ್ರಹಿಸಿದ್ದರು. ಟ್ರಕ್ ಟರ್ಮಿನಲ್ ನಿರ್ಮಾಣದ ಸಾಧಕ, ಬಾಧಕದ ಚರ್ಚೆಗಿಂತ ಶಾಸಕರ ನಡುವಿನ ಪ್ರತಿಷ್ಠೆಯೇ ಮೇಲುಗೈ ಪಡೆದಿದೆ. ಈ ವಿವಾದ ಈಗ ಮುಖ್ಯಮಂತ್ರಿ ಅಂಗಳದಲ್ಲಿದೆ.

‘ಕ್ಷೇತ್ರವು ಅಭಿವೃದ್ಧಿ ಹೊಂದಲಿದೆ ಎಂಬ ಕಾರಣಕ್ಕೆ ವಿರೋಧಿಸುವುದು ಸರಿಯಲ್ಲ. ವಿರೋಧಿಸುವವರು ಅಭಿವೃದ್ಧಿಯ ದೃಷ್ಟಿಕೋನದಲ್ಲೂ ಆಲೋಚಿಸಬೇಕು’ ಎಂದು ರಾಜಘಟ್ಟ ನಿವಾಸಿ ಗವಿರಂಗ ಅಭಿಪ್ರಾಯಪಟ್ಟರು.

ರಾಜಕೀಯವಾಗಿ ಸೂಕ್ಷ್ಮ ಜಿಲ್ಲೆಯಾಗಿರುವ ಹಾಸನದಲ್ಲಿ ವಿವಾದಗಳು ಸುಲಭವಾಗಿ ಸುಖಾಂತ್ಯಗೊಳ್ಳುವುದಿಲ್ಲ. ವಿಧಾನಸಭೆಗೆ ಚುನಾವಣೆ ಒಂದು ವರ್ಷವಿರುವಾಗಲೇ, ತಾರಕಕ್ಕೇರಿರುವ ಸಂಘರ್ಷ ಸದ್ಯ ಕೊನೆಗೊಳ್ಳುವ ಲಕ್ಷಣಗಳಂತೂ ಕಾಣುತ್ತಿಲ್ಲ.



ಹಾಸನ ಹೊರವಲಯದ ಹೇಮಾಗಂಗೋತ್ರಿ ಬಳಿ ನಿರ್ಮಿಸುತ್ತಿರುವ ಟ್ರಕ್ ಟರ್ಮಿನಲ್ ಸ್ಥಳದಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ.



ಶೇ 40 ಕಮಿಷನ್‌ಗಾಗಿಯೇ ಶಾಸಕ ಪ್ರೀತಂ ಗೌಡ ಹಾಸನ ಹೊರವಲಯದಲ್ಲಿ ಟ್ರಕ್ ಟರ್ಮಿನಲ್ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಸಾರ್ವಜನಿಕರ ಹಿತಕ್ಕಲ್ಲ

ಕೆ.ಪಿ.ಶಿವಕುಮಾರ್, ಆಮ್ ಆದ್ಮಿ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ



ಅಭಿವೃದ್ಧಿ ಕಾರ್ಯಗಳನ್ನು ಜೆಡಿಎಸ್ ರಾಜಕೀಯ ದುರುದ್ದೇಶದಿಂದ ವಿರೋಧಿಸುತ್ತಿದೆ. ನನ್ನ ಕ್ಷೇತ್ರದಲ್ಲಿ ನನ್ನದೇ ನಿರ್ಧಾರ. ಕಮಿಷನ್ ಆರೋಪ ಆಧಾರರಹಿತ

ಪ್ರೀತಂ ಗೌಡ
ಹಾಸನ ಕ್ಷೇತ್ರದ ಶಾಸಕ



ಅಭಿವೃದ್ಧಿ ಕಾಮಗಾರಿಗೆ ವಿರೋಧವಿಲ್ಲ. ಸುಸ್ಥಿತಿಯಲ್ಲಿದ್ದ ಕಟ್ಟಡವನ್ನು ಹಣ ಮಾಡಲೆಂದೇ ರಾತ್ರೋರಾತ್ರಿ ಉರುಳಿಸಲಾಗಿದೆ. ಜನರ ವಿರೋಧದ ನಡುವೆ ಕಾಮಗಾರಿ ಮಾಡುವುದು ಸರಿಯೇ?

ಎಚ್.ಡಿ.ರೇವಣ್ಣ
ಹೊಳೆನರಸೀಪುರ ಕ್ಷೇತ್ರದ ಶಾಸಕ

ಡ್ರೋನ್ ಮೂಲಕ ವಕ್ಫ್ ಆಸ್ತಿಗಳ ಸರ್ವೆ

ಬೆಂಗಳೂರು: ‘ರಾಜ್ಯದಲ್ಲಿರುವ ವಕ್ಫ್ ಆಸ್ತಿಗಳ ಸಮೀಕ್ಷೆಯನ್ನು ಡ್ರೋನ್ ಮೂಲಕ ಶೀಘ್ರ ಆರಂಭಿಸಲಾಗುವುದು’ ಎಂದು ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷ ಮೌಲಾನ ಎನ್.ಕೆ. ಮುಹಮ್ಮದ್ ಶಾಫಿ ಸಅದಿ ತಿಳಿಸಿದ್ದಾರೆ.

‘ಆಸ್ತಿಗಳ ನಕ್ಷೆಯನ್ನು ಸಿದ್ಧಪಡಿಸಿ ಸಂರಕ್ಷಿಸಲು ಸರ್ಕಾರದ ವತಿಯಿಂದ ₹2.5 ಕೋಟಿ ಅನುದಾನ ಬಿಡುಗಡೆಯಾಗಿದೆ’ ಎಂದು ಅವರು ತಿಳಿಸಿದ್ದಾರೆ.

‘ರಾಜ್ಯದಲ್ಲಿ ವಕ್ಫ್ ಆಸ್ತಿಗಳ ಮೊದಲ ಹಂತದ ಸಮೀಕ್ಷೆ ಕಾರ್ಯ ಪೂರ್ಣಗೊಂಡಿದೆ. ಎರಡನೇ ಹಂತದ ಸಮೀಕ್ಷೆ ಕಾರ್ಯವು ಮುಕ್ತಾಯದ ಹಂತದಲ್ಲಿದೆ. ಜತೆಗೆ ಆಸ್ತಿಗಳ ನಕ್ಷೆಗಳ ಸಂರಕ್ಷಣಾ ಕಾರ್ಯಕ್ಕೂ ಮಂಡಳಿ ವತಿಯಿಂದ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ’ ಎಂದು ತಿಳಿಸಿದ್ದಾರೆ.

‘ಎಂಎಸ್‌ಡಬ್ಲ್ಯು’ ನಕಲಿ ಅಂಕಪಟ್ಟಿ: ಗುತ್ತಿಗೆ ಉದ್ಯೋಗಿಗೆ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಅಂಕಪಟ್ಟಿ ಕೊಟ್ಟು ಸರ್ಕಾರಿ ಕೆಲಸ ಗಿಟ್ಟಿಸಿಕೊಳ್ಳಲು ಯತ್ನಿಸಿ ಸಿಕ್ಕಿಬಿದ್ದಿದ್ದ ಜಿ. ನಾಗರತ್ನಾ ಭಟ್ (49) ಎಂಬಾಕೆಗೆ 6 ತಿಂಗಳ ಜೈಲು ಶಿಕ್ಷೆ ಹಾಗೂ ₹ 10 ಸಾವಿರ ದಂಡ ವಿಧಿಸಿ ನಗರದ ಒಂದನೇ ಎಸಿಎಂಎಂ ನ್ಯಾಯಾಲಯ ಆದೇಶ ಹೊರಡಿಸಿದೆ.

2016ರ ಜುಲೈ 24ರಂದು ಹಲಸೂರು ಗೇಟ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಮೂರ್ತಿ ಆನಂದ್ ಟಿ. ಚವ್ಹಾಣ್ ನಡೆಸಿದ್ದರು. ಹಿರಿಯ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ಎ.ವಿ. ಮಧು ವಾದಿಸಿದ್ದರು.

‘ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಬಾಳೆಹೊಳೆಯ ನಾಗರತ್ನಾ, ಕರ್ನಾಟಕ ಗ್ರಾಮೀಣ ನೀರು ಸರಬರಾಜು ಹಾಗೂ ನೈರ್ಮಲ್ಯ ಇಲಾಖೆಯ ಸ್ವಚ್ಛ ಭಾರತ್ ಅಭಿಯಾನದಡಿ ಗುತ್ತಿಗೆ ಆಧಾರದಲ್ಲಿ 2011ರಲ್ಲಿ ಕೆಲಸಕ್ಕೆ ನೇಮಕಗೊಂಡಿದ್ದಳು. ಕಾವೇರಿ ಭವನದಲ್ಲಿರುವ ಮಾಹಿತಿ ಶಿಕ್ಷಣ ಮತ್ತು ಸಂಪರ್ಕ (ಐಇಸಿ) ವಿಭಾಗದಲ್ಲಿ ಸಲಹೆಗಾರ್ತಿಯಾಗಿ ಕೆಲಸ ಆರಂಭಿಸಿದ್ದಳು’ ಎಂಬ ಮಾಹಿತಿ ಆದೇಶದಲ್ಲಿದೆ.

‘2016ರಲ್ಲಿ ಕೆಲಸ ಕಾಯಂಗೊಳಿಸಲು ಮುಂದಾಗಿದ್ದ ಇಲಾಖೆ, ಹುದ್ದೆಗೆ ಅಗತ್ಯವಾಗಿದ್ದ ಎಂಎಸ್‌ಡಬ್ಲ್ಯು ಅಂಕಪಟ್ಟಿ ಸಲ್ಲಿಸುವಂತೆ ತಿಳಿಸಿತ್ತು. ಆಗ ನಾಗರತ್ನಾ, ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಹೆಸರಿನಲ್ಲಿದ್ದ ಅಂಕಪಟ್ಟಿ ಕೊಟ್ಟಿದ್ದಳು. ನೇಮಕಾತಿ ಅಧಿಕಾರಿಗಳು, ಅಂಕಪಟ್ಟಿ ಪರಿಶೀಲಿಸಿದಾಗ ನಕಲಿ ಎಂಬುದು ಗೊತ್ತಾಗಿತ್ತು. ಆಗ ಹಲಸೂರು ಗೇಟ್ ಠಾಣೆಗೆ ದೂರು ನೀಡಿದ್ದರು. ವಂಚನೆ (ಐಪಿಸಿ 420), ಸಹಿ ನಕಲು (ಐಪಿಸಿ 465), ನಕಲಿ ದಾಖಲೆ ಸೃಷ್ಟಿ (ಐಪಿಸಿ 468) ಹಾಗೂ ನಕಲಿ ದಾಖಲೆಗಳನ್ನು ಅಸಲಿ ಎಂದು ಬಳಸಿದ (ಐಪಿಸಿ 471) ಆರೋಪದಡಿ ನಾಗರತ್ನಾ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು’ ಎಂಬ ಅಂಶವೂ ಆದೇಶದಲ್ಲಿದೆ.

ಜಿಲ್ಲಾ, ತಾಲ್ಲೂಕು ಪಂಚಾಯಿತಿ ಚುನಾವಣೆ

ಇದೇ 17 ಕ್ಕೆ ಹೈಕೋರ್ಟ್ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ರಾಜ್ಯದ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳ ಸಾರ್ವತ್ರಿಕ ಚುನಾವಣೆಗೆ ಸಂಬಂಧಿಸಿದ ಅರ್ಜಿಯನ್ನು ಇದೇ 17 ರಂದು ವಿಚಾರಣೆ ನಡೆಸುವುದಾಗಿ ಹೈಕೋರ್ಟ್ ಹೇಳಿದೆ.

ಈ ಸಂಬಂಧ ರಾಜ್ಯ ಚುನಾವಣಾ ಆಯೋಗವು ಗುರುವಾರ ಸಲ್ಲಿಸಿದ ಜ್ಞಾಪನಾ ಪತ್ರವನ್ನು (ಮೆಮೊ) ಪರಿಗಣಿಸಿದ ನ್ಯಾಯಮೂರ್ತಿ ಬಿ.ಎಂ. ಶ್ಯಾಮ್‌ಪ್ರಸಾದ್ ನೇತೃತ್ವದ ರಜಾ ಕಾಲದ ವಿಭಾಗೀಯ ನ್ಯಾಯಪೀಠ, ‘ಮೆಮೊ ಪರಿಗಣಿಸಲಾಗುವುದು’ ಎಂದು ತಿಳಿಸಿತು.



ಬೆಳಗಿನ ಕಲಾಪ ಆರಂಭವಾಗುತ್ತಿದ್ದಂತೆ ರಾಜ್ಯ ಚುನಾವಣಾ ಆಯೋಗದ ಪರ ಹಾಜರಾದ ಹಿರಿಯ ವಕೀಲ ಕೆ.ಎನ್. ಫಣೀಂದ್ರ, ‘ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ತೀರ್ಪು ನೀಡಿದೆ. ಅದರಂತೆ, ರಾಜ್ಯದಲ್ಲೂ ಜಿ.ಪಂ. ತಾ.ಪಂ ಚುನಾವಣೆ ನಡೆಸಬೇಕಾಗಿದೆ. ಸುಪ್ರೀಂಕೋರ್ಟ್ ತೀರ್ಪಿನಿಂದ ತುರ್ತು ಸ್ಥಿತಿ ಎದುರಾಗಿದ್ದು, ಅದಕ್ಕಾಗಿ ಮೆಮೊ ಸಲ್ಲಿಸಲಾಗುತ್ತಿದೆ’ ಎಂದರು. ಇದನ್ನು ಪರಿಗಣಿಸಿದ ನ್ಯಾಯಪೀಠ, ಅರ್ಜಿಯನ್ನು ಇದೇ 17ರಂದು ವಿಚಾರಣೆ ನಡೆಸುವುದಾಗಿ ತಿಳಿಸಿ, ವಿಚಾರಣೆ ಮುಂದೂಡಿದೆ.

ಕಳೆದ ವರ್ಷ ಏಪ್ರಿಲ್, ಮೇ ಮತ್ತು ಜೂನ್‌ನಲ್ಲಿ ಅವಧಿ ಪೂರ್ಣಗೊಂಡ ರಾಜ್ಯದ ಜಿ.ಪಂ ಹಾಗೂ ತಾ.ಪಂಗಳಿಗೆ ಚುನಾವಣೆ ನಡೆಸಲು ಸಿದ್ಧತೆ ಆರಂಭಿಸಿದ್ದ ಚುನಾವಣಾ ಆಯೋಗವು ಈ ಸಂಬಂಧ ಕ್ಷೇತ್ರ ಪುನರ್‌ವಿಂಗಡಣೆ ಮಾಡಿ ಮತದಾರರ ಅಂತಿಮ ಪಟ್ಟಿ ಪ್ರಕಟಿಸಿತ್ತು. ಅಂತೆಯೇ ಮೀಸಲಾತಿ ಕರಡು ಸಹ ಪ್ರಕಟಿಸಲಾಗಿತ್ತು. ದಿನಾಂಕ ಘೋಷಣೆ ಮಾಡಬೇಕು ಎನ್ನುವ ಸಂದರ್ಭದಲ್ಲಿ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ಅಧಿಕಾರವನ್ನು ಚುನಾವಣಾ ಆಯೋಗದಿಂದ ಹಿಂಪಡೆದ ಸರ್ಕಾರ ಪ್ರತ್ಯೇಕವಾಗಿ ಸೀಮಾ ನಿರ್ಣಯ ಆಯೋಗ ರಚಿಸಿತ್ತು. ಇದನ್ನು ಪ್ರಶ್ನಿಸಿ ಚುನಾವಣಾ ಆಯೋಗ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದು ಈ ಅರ್ಜಿ ವಿಚಾರಣಾ ಹಂತದಲ್ಲಿದೆ.

ಶುಕ್ರವಾರ, ಮೇ 13, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 132 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

‘ರೋಗ್’ ಚಿತ್ರದ ಮುಖಾಂತರ ಬಣ್ಣದ ಲೋಕಕ್ಕೆ ನಾಯಕನಾಗಿ ಕಾಲಿಟ್ಟ ಇಶಾನ್, ನಿರ್ದೇಶಕ ಪವನ್ ಒಡೆಯರ್ ಜೊತೆಗೂಡಿ ರಾಕ್‌ಸ್ಟಾರ್ ಆಗುತ್ತಿದ್ದಾರೆ



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
52,930 ▼	15,808 ▼	₹52,700 (ಬೆಂಗಳೂರು) ▲	₹61,400 (ಬೆಂಗಳೂರು) ▼	77.50 ▼

ಆರ್‌ಬಿಐನಿಂದ ಮತ್ತೆ ರೆಪೊ ದರ ಹೆಚ್ಚಳ ಸಾಧ್ಯತೆ: ಸಾಲ ತುಟ್ಟಿ ಸಂಭವ

ಹಣದುಬ್ಬರ: 8 ವರ್ಷಗಳ ಗರಿಷ್ಠ

ನವದೆಹಲಿ (ಪಿಟಿಐ): ದೇಶದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಏಪ್ರಿಲ್‌ನಲ್ಲಿ ಎಂಟು ವರ್ಷಗಳ ಗರಿಷ್ಠ ಮಟ್ಟವಾದ ಶೇಕಡ 7.79ಕ್ಕೆ ತಲುಪಿದೆ. ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಚಿಲ್ಲರೆ ಹಣದುಬ್ಬರ ದರ ಏರಿಕೆಗೆ ಆಹಾರ ಮತ್ತು ಇಂಧನ ಬೆಲೆ ಹೆಚ್ಚಳ ಪ್ರಮುಖ ಕಾರಣ.


ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯ (ಎಂಪಿಸಿ) ಜೂನ್ ತಿಂಗಳಲ್ಲಿ ಸಭೆ ಸೇರಲಿದ್ದು, ಹಣದುಬ್ಬರದ ಈ ಏರಿಕೆಯನ್ನು ಗಮನದಲ್ಲಿ ಇರಿಸಿಕೊಂಡು ರೆಪೊ ದರ ಮತ್ತೆ ಹೆಚ್ಚಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಆ ರೀತಿ ಆದಲ್ಲಿ, ಬ್ಯಾಂಕ್ ಮತ್ತು ಬ್ಯಾಂಕೇತರ ಹಣಕಾಸು ಸಂಸ್ಥೆಗಳ ಬಡ್ಡಿ ದರ ಮತ್ತೆ ಹೆಚ್ಚಾಗಿ, ವಿವಿಧ ಸಾಲಗಳು ತುಟ್ಟಿಯಾಗಲಿವೆ. ಆರ್‌ಬಿಐ ಈ ತಿಂಗಳ ಆರಂಭದಲ್ಲಿ ರೆಪೊ ದರದವನ್ನು ಶೇ 0.40ರಷ್ಟು ಹೆಚ್ಚಿಸಿದೆ.

ಚಿಲ್ಲರೆ ಹಣದುಬ್ಬರ ದರವು ಈ ವರ್ಷದ ಜನವರಿಯಿಂದಲೂ ಶೇಕಡ 6ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಉಳಿದಿದೆ. ಆರ್‌ಬಿಐ ನಿಗದಿ ಮಾಡಿಕೊಂಡಿರುವ ಗುರಿಯ ಅನ್ವಯ, ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 6ರೊಳಗೆ ಇರಬೇಕು.

2014ರ ಮೇ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 8.33ರಷ್ಟು ಇತ್ತು. ಅದಾದ ನಂತರದ ಗರಿಷ್ಠ ಮಟ್ಟ ಈ ವರ್ಷದ ಏಪ್ರಿಲ್‌ನಲ್ಲಿ ದಾಖಲಾಗಿದೆ. ಮಾರ್ಚ್ ತಿಂಗಳಲ್ಲಿ ಇದು ಶೇ 6.95ರಷ್ಟು ಇತ್ತು. ಹಿಂದಿನ ವರ್ಷದ ಏಪ್ರಿಲ್‌ನಲ್ಲಿ ಹಣದುಬ್ಬರ ಪ್ರಮಾಣವು ಶೇ 4.23 ಮಾತ್ರ ಆಗಿತ್ತು.

ತಿಂಗಳ ಆರಂಭದಲ್ಲಿ ಅನಿರೀಕ್ಷಿತವಾಗಿ ರೆಪೊ ದರ ಹೆಚ್ಚಿಸುವ ಸಂದರ್ಭದಲ್ಲಿ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು, ‘ಜಾಗತಿಕ ಮಟ್ಟದಲ್ಲಿ ಆಹಾರ ವಸ್ತುಗಳ ಬೆಲೆಯು ಭಾರಿ ಪ್ರಮಾಣದಲ್ಲಿ ಏರಿಕೆ ಆಗಿರುವುದರ ಪರಿಣಾಮಗಳು ದೇಶಿ ಮಾರುಕಟ್ಟೆಯಲ್ಲಿಯೂ ಕಾಣಿಸುತ್ತಿವೆ. ಮುಂದಿನ ದಿನಗಳಲ್ಲಿಯೂ ಹಣದುಬ್ಬರ ಹೆಚ್ಚಿನ ಪ್ರಮಾಣದಲ್ಲಿ ಇರುವ ಸಾಧ್ಯತೆಗಳಿವೆ’ ಎಂದು ಹೇಳಿದ್ದರು.

‘ಹಣದುಬ್ಬರದ ಏರಿಕೆಯ ಪ್ರಮಾಣವು ಆರ್‌ಬಿಐ ಈಚೆಗೆ ರೆಪೊ ದರ ಹೆಚ್ಚಿಸಿರುವುದು ಸರಿ ಎಂಬುದನ್ನು ತೋರಿಸಿಕೊಟ್ಟಿದೆ. ಜೂನ್‌ನಲ್ಲಿಯೂ ರೆಪೊ ದರ ಮತ್ತೆ ಜಾಸ್ತಿಯಾಗುವ ಸಾಧ್ಯತೆಯನ್ನು ಹೆಚ್ಚು ಮಾಡಿದೆ. ಮೇ ತಿಂಗಳಲ್ಲಿ ಹಣದುಬ್ಬರ ಪ್ರಮಾಣವು ತುಸು ತಗ್ಗಿದರೂ ಅದು ಶೇ 6.5ಕ್ಕಿಂತ ಹೆಚ್ಚಿನ ಮಟ್ಟದಲ್ಲಿಯೇ ಇರಲಿದೆ’ ಎಂದು ರೇಟಿಂಗ್ಸ್ ಸಂಸ್ಥೆ ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.



ಪ್ರಜಾವಾಣಿ ಗ್ರಾಫಿಕ್ಸ್ ಮಾಹಿತಿ: ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯ

ರೂಪಾಯಿ ಮೌಲ್ಯ @ 77.50

ಮುಂಬೈ (ಪಿಟಿಐ/ರಾಯಿಟರ್ಸ್): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಸಾರ್ವಕಾಲಿಕ ಕನಿಷ್ಠ ಮಟ್ಟವಾದ 77.50ಕ್ಕೆ ಗುರುವಾರ ಕುಸಿದಿದೆ.

ಗುರುವಾರದ ವಹಿವಾಟಿನ ಒಂದು ಹಂತದಲ್ಲಿ ರೂಪಾಯಿ ಮೌಲ್ಯವು 77.63ಕ್ಕೆ ಇಳಿಕೆಯಾಗಿತ್ತು. ನಂತರ ತುಸು ಚೇತರಿಸಿಕೊಂಡಿತು. ಡಾಲರ್ ಮೌಲ್ಯವು ಎರಡು ದಶಕಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿದೆ.

ಅಮೆರಿಕದಲ್ಲಿ ಹಣದುಬ್ಬರ ಜಾಸ್ತಿಯಾಗಿರುವ ಕಾರಣ ಅಲ್ಲಿ ಮತ್ತೆ ಬಡ್ಡಿ ದರ ಏರಿಕೆಯಾಗುವ ಸಾಧ್ಯತೆ, ಅರ್ಥ ವ್ಯವಸ್ಥೆಯ ಬೆಳವಣಿಗೆಯು ಮಂದಗತಿಯಲ್ಲಿ ಇರಬಹುದು ಎಂಬ ಅಂದಾಜು ಹಾಗೂ ವಿದೇಶಿ ಬಂಡವಾಳವು ದೇಶದಿಂದ ಹೊರಹೋಗುತ್ತ ಇರುವುದು ರೂಪಾಯಿ ಮೌಲ್ಯ ಇಳಿಕೆಗೆ ಕಾರಣವಾದವು.

10ನೇ ಪುಟ ನೋಡಿ

ನಗರ ಯೋಜನಾ ಪ್ರಾಧಿಕಾರ ವ್ಯಾಪ್ತಿ ಕಡಿತ

ಕರ್ನಾಟಕ ಪುರಸಭೆಗಳ ಕಾಯ್ದೆ –1964ರ ಸೆಕ್ಷನ್ 387 ರದ್ದತಿಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತ್ಯೇಕ ನಗರ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿಲ್ಲದ ಪುರಸಭೆ, ಪಟ್ಟಣ ಪಂಚಾಯಿತಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಬಿಡಿ ನಿವೇಶನ ಹಾಗೂ ಒಂದು ಎಕರೆವರೆಗಿನ ವಿಸ್ತೀರ್ಣದಲ್ಲಿ ಕಟ್ಟಡ ನಿರ್ಮಾಣಕ್ಕೆ ಪರವಾನಗಿ, ನಕ್ಷೆ ಅನುಮೋದನೆ, 11ಇ ನಕ್ಷೆ ಹಾಗೂ ಇ- ಸ್ವತ್ತುಗಳನ್ನು ಸ್ಥಳೀಯ ಸಂಸ್ಥೆಗಳ ಮೂಲಕವೇ ನೀಡುವ ವ್ಯವಸ್ಥೆ ಜಾರಿಗೊಳಿಸುವ ತೀರ್ಮಾನವನ್ನು ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೈಗೊಳ್ಳಲಾಗಿದೆ.

ಇದಕ್ಕೆ ಪೂರಕವಾಗಿ ಪುರಸಭೆ ಕಾಯ್ದೆ–1964ರ ಸೆಕ್ಷನ್ 387 ಅನ್ನು ರದ್ದುಗೊಳಿಸುವ ಪ್ರಸ್ತಾವಕ್ಕೂ ಸಂಪುಟ ಅನುಮೋದನೆ ನೀಡಿದೆ.

ಇದರಿಂದಾಗಿ ಪ್ರತ್ಯೇಕ ನಗರ ಯೋಜನಾ ಪ್ರಾಧಿಕಾರಗಳಿಲ್ಲದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಆಸ್ತಿಗಳ ಮಾಲೀಕರು ಬಿಡಿ ನಿವೇಶನಗಳು ಹಾಗೂ ಸಣ್ಣ ವಿಸ್ತೀರ್ಣದ ಜಮೀನುಗಳಲ್ಲಿ ಕಟ್ಟಡ ನಿರ್ಮಾಣ ಮತ್ತು ಇತರೆ ಕೆಲಸಗಳಿಗೆ ಸಮೀಪದ ನಗರ ಯೋಜನಾ ಪ್ರಾಧಿಕಾರಗಳಿಂದ ಅನುಮತಿ ಪಡೆಯುವುದು ತಪ್ಪಲಿದೆ. 2021ರವರೆಗೂ ಸ್ಥಳೀಯ ಸಂಸ್ಥೆಗಳ ಆಸ್ತಿ ಪಟ್ಟಿಯಲ್ಲಿರುವ ಸ್ಥಿರಾಸ್ತಿಗಳಿಗೆ ಇದು ಅನ್ವಯವಾಗಲಿದೆ.

ಸಂಪುಟ ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ‘ಪ್ರತ್ಯೇಕ ನಗರ ಯೋಜನಾ ಪ್ರಾಧಿಕಾರಗಳಿಲ್ಲದ ಪ್ರದೇಶದ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ನಿರ್ಮಾಣ ಕಾಮಗಾರಿಗಳಿಗೆ ಸಮೀಪದ ನಗರ ಯೋಜನಾ ಪ್ರಾಧಿಕಾರಗಳಿಂದ ಒಪ್ಪಿಗೆ ಪಡೆಯಬೇಕು ಎಂಬ ಅಂಶ ಸೆಕ್ಷನ್ 387 ರಲ್ಲಿತ್ತು. ಅದರಿಂದ ಬಿಡಿ ನಿವೇಶನಗಳ ಮಾಲೀಕರು ಮತ್ತು ಕೃಷಿ ಜಮೀನುಗಳಲ್ಲಿ ಮನೆ ನಿರ್ಮಿಸುವವರಿಗೆ ತೊಂದರೆ ಆಗುತ್ತಿದೆ. ಈ ಕಾರಣಕ್ಕಾಗಿ ಸೆಕ್ಷನ್ 387 ಅನ್ನು ರದ್ದುಗೊಳಿಸುವ ತೀರ್ಮಾನ ಕೈಗೊಳ್ಳಲಾಗಿದೆ’ ಎಂದರು.

ಈ ನಿರ್ಬಂಧದಿಂದಾಗಿ 2016 ರಿಂದ ಈಚೆಗೆ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬಿಡಿ ನಿವೇಶನ ಹಾಗೂ ಸಣ್ಣ ವಿಸ್ತೀರ್ಣದ ಜಮೀನುಗಳಲ್ಲಿ ಮನೆ ನಿರ್ಮಾಣಕ್ಕೆ ತೊಂದರೆ ಆಗಿದೆ ಎಂದು ತಿಳಿಸಿದರು.

6ನೇ ಪುಟ ನೋಡಿ

ಬಗರ್ ಹುಕುಂ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಬೆಂಗಳೂರು: ಸರ್ಕಾರಿ ಜಮೀನುಗಳಲ್ಲಿ ಮಾಡುತ್ತಿರುವ ಅನಧಿಕೃತ ಸಾಗುವಳಿಯನ್ನು (ಬಗರ್ ಹುಕುಂ) ಸಕ್ರಮಗೊಳಿಸುವಂತೆ ಕೋರಿ ಅರ್ಜಿ ಸಲ್ಲಿಸಲು ಮತ್ತೆ ಆರು ತಿಂಗಳ ಕಾಲಾವಕಾಶ ನೀಡಲು ಸರ್ಕಾರ ನಿರ್ಧರಿಸಿದೆ.

ಈ ಕುರಿತು ಮಾಹಿತಿ ನೀಡಿದ ಸಚಿವ ಜೆ.ಸಿ. ಮಾಧುಸ್ವಾಮಿ, ‘ಕೋವಿಡ್ ಕಾರಣದಿಂದ ಹಿಂದೆ ಎಲ್ಲ ರೈತರೂ ಅರ್ಜಿ ಸಲ್ಲಿಸಲು ಸಾಧ್ಯವಾಗಿರಲಿಲ್ಲ. ಹೀಗಾಗಿ ಮತ್ತೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸುವಂತೆ ಅನೇಕ ಶಾಸಕರು ಒತ್ತಾಯಿಸಿದ್ದರು. ಈಗ ಆರು ತಿಂಗಳ ಕಾಲ ಅರ್ಜಿ ಸಲ್ಲಿಕೆಗೆ ಅವಕಾಶ ನೀಡುವುದಕ್ಕಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾವಕ್ಕೆ ಸಂಪುಟ ಒಪ್ಪಿಗೆ ಸೂಚಿಸಿದೆ’ ಎಂದರು.

- ಬಿಡಿ ನಿವೇಶನಗಳ ಮಾಲೀಕರು ಮತ್ತು ಕೃಷಿ ಜಮೀನುಗಳಲ್ಲಿ ಮನೆ ನಿರ್ಮಿಸುವವರಿಗೆ ತೊಂದರೆ ತಪ್ಪಲಿದೆ
- ಗ್ರಾಮ ಠಾಣಾ ವ್ಯಾಪ್ತಿಯಲ್ಲಿರುವ ಆಸ್ತಿಗಳು, ಗ್ರಾಮ ಪಂಚಾಯಿತಿಗಳಲ್ಲಿನ ಆಸ್ತಿ ಪಟ್ಟಿಗಳಲ್ಲಿರುವ ಆಸ್ತಿಗಳಿಗೂ ನಿಯಮ ಅನ್ವಯ
- ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ವ್ಯಾಪ್ತಿಯಲ್ಲಿ ನಗರ ಯೋಜನಾ ಪ್ರಾಧಿಕಾರಗಳಿಂದಲೇ ಅನುಮತಿ ಪಡೆಯುವ ವ್ಯವಸ್ಥೆ

ಮತಾಂತರ ನಿಷೇಧ: ಸುಗ್ರೀವಾಜ್ಞೆಗೆ ನಿರ್ಧಾರ

ಬೆಂಗಳೂರು: ‘ಕರ್ನಾಟಕ ಧಾರ್ಮಿಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ’ (ಮತಾಂತರ ನಿಷೇಧ) ಮಸೂದೆಯನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸುವ ಪ್ರಸ್ತಾವಕ್ಕೆ ಸಂಪುಟ ಸಭೆ ಗುರುವಾರ ಒಪ್ಪಿಗೆ ನೀಡಿದೆ.

ಈ ಮಸೂದೆಯನ್ನು 2021ರ ಡಿಸೆಂಬರ್‌ನಲ್ಲಿ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆದ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆಯಲಾಗಿತ್ತು. ಆದರೆ, ಪ್ರತಿಪಕ್ಷಗಳ ಪ್ರಬಲ ವಿರೋಧದಿಂದಾಗಿ ವಿಧಾನ ಪರಿಷತ್‌ನಲ್ಲಿ ಮಂಡಿಸಲು ಸರ್ಕಾರಕ್ಕೆ ಸಾಧ್ಯವಾಗಿರಲಿಲ್ಲ. ವಿಧಾನ ಸಭೆಯ ಒಪ್ಪಿಗೆ ಪಡೆದಿರುವ ಮಸೂದೆಯನ್ನೇ ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸುವ ತೀರ್ಮಾನ ಕೈಗೊಳ್ಳಲಾಗಿದೆ.



ಪರಿಷತ್: ನಾಲ್ಕು ಸ್ಥಾನಗಳಿಗೆ ಜೂನ್ 13ರಂದು ಚುನಾವಣೆ

ಬೆಂಗಳೂರು: ಪದವೀಧರ ಮತ್ತು ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಆಯ್ಕೆಯಾಗಿರುವ ನಾಲ್ವರು ಸದಸ್ಯರ ಅವಧಿ ಜುಲೈ 4ರಂದು ಮುಕ್ತಾಯವಾಗಲಿದ್ದು, ಈ ಸ್ಥಾನಗಳ ಭರ್ತಿಗೆ ಜೂನ್ 13ರಂದು ಚುನಾವಣೆ ನಡೆಯಲಿದೆ.

ಈ ಸಂಬಂಧ ಕೇಂದ್ರ ಚುನಾವಣಾ ಆಯೋಗ ಗುರು ವಾರ ವೇಳಾಪಟ್ಟಿ ಪ್ರಕಟಿಸಿದೆ.

ಮೇ 19 ರಂದು ನಾಮಪತ್ರ ಸಲ್ಲಿಕೆ ಆರಂಭವಾಗಲಿದ್ದು, 26ರ ವರೆಗೂ ಅವಕಾಶ ಇರಲಿದೆ. ಮೇ 27 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ನಾಮಪತ್ರ ಹಿಂಪಡೆಯಲು ಮೇ 30 ಕೊನೆಯ ದಿನ. ಜೂನ್ 13 ರಂದು ಬೆಳಿಗ್ಗೆ 8 ರಿಂದ ಸಂಜೆ 4ರವರೆಗೂ ಮತದಾನ ನಡೆಯಲಿದೆ. ಜೂನ್ 15ರಂದು ಮತ ಎಣಿಕೆ ನಡೆಯಲಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ರಾಜ್ಯಸಭೆ: ಜೂನ್ 10ರಂದು ಚುನಾವಣೆ

ನವದೆಹಲಿ (ಪಿಟಿಐ): ಕರ್ನಾಟಕದಿಂದ ನಾಲ್ಕು ಸೇರಿದಂತೆ ರಾಜ್ಯಸಭೆಯ 57 ಸ್ಥಾನಗಳಿಗೆ ಜೂನ್ 10ರಂದು ಚುನಾವಣೆ ನಡೆಯಲಿದ್ದು, ಅದೇ ದಿನ ಸಂಜೆ ಮತ ಎಣಿಕೆ ನಡೆಯಲಿದೆ.

ಕೇಂದ್ರ ಚುನಾವಣಾ ಆಯೋಗ ಗುರುವಾರ ವೇಳಾಪಟ್ಟಿಯನ್ನು ಪ್ರಕಟಿಸಿದ್ದು, ಆ ಪ್ರಕಾರ ಈ ತಿಂಗಳ 24ರಿಂದ ನಾಮಪತ್ರ ಸಲ್ಲಿಕೆ ಆರಂಭವಾಗಲಿದೆ. ರಾಜ್ಯದಿಂದ ಆಯ್ಕೆಯಾಗಿರುವ ನಿರ್ಮಲಾ ಸೀತಾರಾಮನ್, ಕೆ.ಸಿ. ರಾಮಮೂರ್ತಿ, ಜೈರಾಂ ರಮೇಶ್ ಅವರ ಅವಧಿ ಜೂನ್‌ನಲ್ಲಿ ಅಂತ್ಯವಾಗಲಿದೆ. ಆಸ್ಕರ್ ಫರ್ನಾಂಡಿಸ್ ನಿಧನದಿಂದ ಒಂದು ಸ್ಥಾನ ತೆರವಾಗಿದೆ.

ಚುನಾವಣೆಗೆ 3 ತಿಂಗಳ ಕಾಲಾವಕಾಶಕ್ಕೆ ಮನವಿ

ಹಿಂದುಳಿದವರಿಗೆ ಮೀಸಲಾತಿ ಸುಪ್ರೀಂ ಕೋರ್ಟ್‌ಗೆ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಿದ ಬಳಿಕವೇ ವಿವಿಧ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಮೂರು ತಿಂಗಳ ಕಾಲಾವಕಾಶ ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವದಗಿ ಹಾಗೂ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳ ಜತೆ ಗುರುವಾರ ಉನ್ನತ ಮಟ್ಟದ ಸಭೆ ನಡೆಸಿ, ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶದ ಬಗ್ಗೆ ಚರ್ಚಿಸಿದರು.

‘ಹೊಸದಾಗಿ ರಚಿಸಿರುವ ನ್ಯಾಯಮೂರ್ತಿ ಕೆ. ಭಕ್ತವತ್ಸಲ ನೇತೃತ್ವದ ಆಯೋಗದ ಮೂಲಕ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ವಿವಿಧ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ಗುರುತಿಸಿ, ಮೀಸಲಾತಿ ನಿಗದಿಪಡಿಸಿ ಚುನಾವಣೆ ನಡೆಸಲು ಮೂರು ತಿಂಗಳು ಸಮಯಾವಕಾಶ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ಸಭೆಯಲ್ಲಿ ನಿರ್ಧಾರಕ್ಕೆ ಬರಲಾಗಿದೆ. ಈ ಮನವಿಯನ್ನು ನ್ಯಾಯಾಲಯ ಒಪ್ಪದಿದ್ದರೆ, ಎಲ್ಲ ಸ್ಥಳೀಯ ಸಂಸ್ಥೆಗಳಿಗೂ ಹಿಂದಿನ ಚುನಾವಣೆಯನ್ನು ಆಧಾರವಾಗಿಟ್ಟುಕೊಂಡು ರೋಸ್ಟರ್ ಬದಲಿಸಿ ಮೀಸಲಾತಿ ಕಲ್ಪಿಸಿ ಚುನಾವಣೆ ನಡೆಸಲು ಅವಕಾಶ ಕೋರುವ ನಿರ್ಧಾರವನ್ನೂ ಮಾಡಲಾಯಿತು’ ಎಂದು ಮಾಧುಸ್ವಾಮಿ ಸುದ್ದಿಗಾರರಿಗೆ ತಿಳಿಸಿದರು.

ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ಕಲ್ಪಿಸಿಯೇ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಬೇಕು ಎಂಬುದು ರಾಜ್ಯ ಸರ್ಕಾರದ ಖಚಿತ ನಿಲುವು. ಈ ವಿಚಾರದಲ್ಲಿ ಯಾವುದೇ ಬದಲಾವಣೆ ಇಲ್ಲ. ತ್ವರಿತವಾಗಿ ಪರಿಶೀಲನೆ ನಡೆಸಿ ವರದಿ ನೀಡುವಂತೆ ಭಕ್ತವತ್ಸಲ ನೇತೃತ್ವದ ಆಯೋಗಕ್ಕೆ ಪತ್ರವನ್ನೂ ಬರೆಯಲಾಗಿದೆ ಎಂದರು.

ಎರಡು ವಾರದೊಳಗೆ ಚುನಾವಣಾ ಪ್ರಕ್ರಿಯೆ ಆರಂಭಿಸುವಂತೆ ಸುಪ್ರೀಂ ಕೋರ್ಟ್ ಆದೇಶಿಸಿದೆ. ಬಿಬಿಎಂಪಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳ ಚುನಾವಣೆ ಬಾಕಿ ಇದೆ. ಪುರಸಭೆಗಳಾಗಿರುವ ಗ್ರಾಮ ಪಂಚಾಯಿತಿಗಳಲ್ಲೂ ಚುನಾವಣೆ ಬಾಕಿ ಇದೆ. ಹಿಂದುಳಿದ ವರ್ಗಗಳ ಮೀಸಲಾತಿಗೆ ತೊಂದರೆ ಆಗದಂತೆ ರಕ್ಷಿಸುವ ಕೆಲಸವನ್ನು ಸರ್ಕಾರ ಮಾಡಲಿದೆ ಎಂದು ಹೇಳಿದರು.

ಬಿಬಿಎಂಪಿ ಚುನಾವಣೆಗೆ ಸಂಬಂಧಿಸಿದ ಮೇಲ್ಮನವಿಯ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ಜುಲೈ 12ಕ್ಕೆ ನಿಗದಿಯಾಗಿದೆ. ಹೈಕೋರ್ಟ್‌ನಲ್ಲೂ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದ ಅರ್ಜಿ ಬಾಕಿ ಇದೆ. ಎರಡೂ ಕಡೆಗಳಲ್ಲಿ ನ್ಯಾಯಾಲಯಗಳಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ನಡೆಸಲಾಗುವುದು ಎಂದರು.



ಪ್ರತಿಭಟನೆ ಹಣದುಬ್ಬರ, ನಿರುದ್ಯೋಗ ಸಮಸ್ಯೆ ವಿರುದ್ಧ ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ಗುರುವಾರ ನಡೆಸಿದ ಪ್ರತಿಭಟನೆಯ ವೇಳೆ ಪೊಲೀಸರು ಜಲಫಿರಂಗಿ ಪ್ರಯೋಗಿಸಿದರು –ಪಿಟಿಐ ಚಿತ್ರ

ರಾಜೀವ್ ಕುಮಾರ್ ಮುಖ್ಯ ಚುನಾವಣಾ ಆಯುಕ್ತ

ನವದೆಹಲಿ(ಪಿಟಿಐ): ಕೇಂದ್ರ ಚುನಾವಣಾ ಆಯೋಗದ ಆಯುಕ್ತ ರಾಜೀವ್ ಕುಮಾರ್ ಅವರನ್ನು ಮುಖ್ಯ ಆಯುಕ್ತರನ್ನಾಗಿ ಗುರುವಾರ ನೇಮಕ ಮಾಡಿದ್ದು, ಇದೇ 15ರಂದು ಅವರು ಅಧಿಕಾರ ವಹಿಸಿಕೊಳ್ಳಲಿದ್ದಾರೆ.



ರಾಜೀವ್ ಕುಮಾರ್

ಹಾಲಿ ಮುಖ್ಯ ಆಯುಕ್ತರಾಗಿರುವ ಸುಶೀಲ್ ಚಂದ್ರ ಅವರು ಮೇ 14ರಂದು ನಿವೃತ್ತಿಯಾಗಲಿದ್ದಾರೆ ಎಂದು ಕಾನೂನು ಸಚಿವಾಲಯ ತಿಳಿಸಿದೆ. ಈ ಕುರಿತ ಅಧಿಸೂಚನೆಯನ್ನು ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡಿರುವ ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು, ರಾಜೀವ್ ಕುಮಾರ್‌ಗೆ ಶುಭ ಕೋರಿದ್ದಾರೆ.

ರಾಜೀವ್ ಕುಮಾರ್ ನೇತೃತ್ವದಲ್ಲಿ ರಾಷ್ಟ್ರಪತಿ, ಉಪ ರಾಷ್ಟ್ರಪತಿ ಚುನಾವಣೆ ಮತ್ತು 2024ರ ಲೋಕಸಭೆ ಹಾಗೂ ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಗಳು ನಡೆಯಲಿವೆ. ರಾಜೀವ್ ಕುಮಾರ್ ಅವಧಿಯು 2025ರ ಫೆಬ್ರುವರಿ ಮಧ್ಯ ಭಾಗದಲ್ಲಿ ಅಂತ್ಯಗೊಳ್ಳಲಿದೆ.

ಉತ್ತರಪ್ರದೇಶ: ಮದರಸಾಗಳಲ್ಲಿ ರಾಷ್ಟ್ರಗೀತೆ ಹಾಡುವುದು ಕಡ್ಡಾಯ

ಲಖನೌ(ಪಿಟಿಐ): ರಾಜ್ಯದ ಎಲ್ಲಾ ಮದರಸಾಗಳಲ್ಲಿ ತರಗತಿ ಆರಂಭಕ್ಕೂ ಮೊದಲು ರಾಷ್ಟ್ರಗೀತೆ ಹಾಡುವುದನ್ನು ಉತ್ತರ ಪ್ರದೇಶದ ಸರ್ಕಾರ ಗುರುವಾರದಿಂದ ಕಡ್ಡಾಯಗೊಳಿಸಿದೆ.

ಮದರಸಾ ಶಿಕ್ಷಣ ಮಂಡಳಿ ರಿಜಿಸ್ಟ್ರಾರ್ ಎಸ್.ಎನ್. ಪಾಂಡೆ ಅವರು ಈ ನಿಯಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ರಾಜ್ಯದ ಎಲ್ಲಾ ಜಿಲ್ಲೆಗಳ ಅಲ್ಪಸಂಖ್ಯಾತ ಕಲ್ಯಾಣಾಧಿಕಾರಿಗಳಿಗೆ ಆದೇಶಿಸಿದ್ದಾರೆ.

‘ಮಾರ್ಚ್‌ನಲ್ಲಿ ನಡೆದ ಮಂಡಳಿಯ ಸಭೆಯಲ್ಲಿ ಕೈಗೊಂಡ ನಿರ್ಧಾರದಂತೆ, ಮದರಸಾಗಳಲ್ಲಿ ಪ್ರಾರ್ಥನೆ ವೇಳೆ ರಾಷ್ಟ್ರಗೀತೆ ಹಾಡುವುದು ಕಡ್ಡಾಯವಾಗಿದೆ. ರಂಜಾನ್ ರಜಾ ದಿನಗಳು ಕಳೆದ ಬಳಿಕ ಮದರಸಾಗಳಲ್ಲಿ ತರಗತಿಗಳು ಮೇ 12ರಂದು ಆರಂಭವಾಗಿವೆ. ಇದೇ ದಿನ ಈ ಆದೇಶ ಹೊರಡಿಸಲಾಗಿದೆ’ ಎಂದು ಪಾಂಡೆ ತಿಳಿಸಿದ್ದಾರೆ.

ಶಿಕ್ಷಕರ ಸಂಘ ಮದರಿಸ್ ಅರೇಬಿಯಾದ ಪ್ರಧಾನ ಕಾರ್ಯದರ್ಶಿ ದಿವಾನ್ ಸಾಹೆಬ್ ಜಮಾನ್ ಖಾನ್, ‘ಈವರೆಗೆ ಮದರಸಾಗಳಲ್ಲಿ ಸಾಮಾನ್ಯವಾಗಿ ಹಮ್ದ್ (ಅಲ್ಲಾಹನ ಸ್ತುತಿ) ಮತ್ತು ಸಲಾಂ (ಮೊಹಮ್ಮದ್ ಅವರಿಗೆ ನಮನ) ತರಗತಿಗಳ ಪ್ರಾರಂಭದ ಮೊದಲು ಪಠಿಸಲಾಗುತ್ತಿತ್ತು. ಕೆಲವು ಮದರಸಾಗಳಲ್ಲಿ ರಾಷ್ಟ್ರಗೀತೆಯನ್ನೂ ಹಾಡಲಾಗುತ್ತಿತ್ತು. ಆದರೆ, ಅದು ಕಡ್ಡಾಯವಾಗಿರಲಿಲ್ಲ. ಈಗ ಅದನ್ನು ಕಡ್ಡಾಯಗೊಳಿಸಲಾಗಿದೆ’ ಎಂದು ಹೇಳಿದರು.

ಮದರಸಾಗಳಲ್ಲಿ ರಾಷ್ಟ್ರೀಯತೆ ಬೋಧಿಸಲಾಗುವುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಧರ್ಮಪಾಲ್ ಸಿಂಗ್ ಅವರು ಇತ್ತೀಚೆಗಷ್ಟೇ ಹೇಳಿದ್ದರು. ಇದಾದ ಕೆಲ ದಿನಗಳಲ್ಲಿ ಈ ಆದೇಶ ಹೊರಬಿದ್ದಿದೆ. ಮದರಸಾದ ವಿದ್ಯಾರ್ಥಿಗಳು ದೇಶಪ್ರೇಮ ಮೆರೆಯ ಬೇಕೆಂದು ಸರ್ಕಾರ ಬಯಸುತ್ತಿದೆ ಎಂದು ಮತ್ತೊಬ್ಬ ಸಚಿವ ಡ್ಯಾನಿಶ್ ಅಜಾದ್ ಹೇಳಿದ್ದರು.

ತಹಶೀಲ್ ಕಚೇರಿಗೆ ನುಗ್ಗಿ ಕಾಶ್ಮೀರಿ ಪಂಡಿತ ನೌಕರನ ಹತ್ಯೆ

ಶ್ರೀನಗರ: ಮಧ್ಯ ಕಾಶ್ಮೀರದ ಬುಡ್ಗಾಂ ಜಿಲ್ಲೆಯ ಚದೂರ ತಹಶೀಲ್ ಕಚೇರಿಯಲ್ಲಿ ಗುರುವಾರ ಉಗ್ರನೊಬ್ಬ ಕಾಶ್ಮೀರಿ ಪಂಡಿತ ಸಮುದಾಯದ ಸರ್ಕಾರಿ ನೌಕರರೊಬ್ಬರನ್ನು ಗುಂಡಿಕ್ಕಿ ಹತ್ಯೆ ಮಾಡಿದ್ದಾನೆ.

ರಾಹುಲ್ ಭಟ್ ಹತ್ಯೆಯಾದ ಸರ್ಕಾರಿ ನೌಕರ. ಅವರು ಚದೂರು ಪಟ್ಟಣದ ತಹಶೀಲ್ ಕಚೇರಿಯಲ್ಲಿ ಗುಮಾಸ್ತರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ರಾಹುಲ್ ಭಟ್ ಅವರ ಕೊಠಡಿಯನ್ನುಏಕಾಏಕಿ ಪ್ರವೇಶಿಸಿದ ಉಗ್ರ ಗುಂಡು ಹಾರಿಸಿದ್ದಾನೆ. ಗುಂಡೇಟಿನಿಂದ ತೀವ್ರವಾಗಿ ಗಾಯಗೊಂಡಿದ್ದ ರಾಹುಲ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟರು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ದಾಳಿಕೋರನ ಪತ್ತೆಗಾಗಿ ಭದ್ರತಾ ಪಡೆಗಳು ಶೋಧ ಕಾರ್ಯಾಚರಣೆ ಆರಂಭಿಸಿವೆ.

ಎಸ್ಸೆಸ್ಸೆಲ್ಸಿ: ಉತ್ತೀರ್ಣರಾಗಲು ಶೇ 10 ಕೃಪಾಂಕ

ಬೆಂಗಳೂರು: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಅಂಕಗಳ ಕೊರತೆಯಾಗುವವರಿಗೆ ಈ ಬಾರಿಯೂ ಗರಿಷ್ಠ ಶೇ 10 ರಷ್ಟು ಕೃಪಾಂಕ ನೀಡಲು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಿರ್ಧರಿಸಿದೆ.

ಯಾವುದಾದರೂ ಮೂರು ವಿಷಯಗಳಿಗೆ ಮಾತ್ರ ಈ ಕೃಪಾಂಕ ಅನ್ವಯವಾಗಲಿದೆ. ಕಳೆದ ಎರಡು ವರ್ಷಗಳಲ್ಲಿ ಕೋವಿಡ್‌– 19 ಸಾಂಕ್ರಾಮಿಕ ಕಾಯಿಲೆಯಿಂದಾಗಿ ಕಲಿಕೆಯಲ್ಲಿ ಮಕ್ಕಳು ಹಿಂದೆ ಉಳಿದಿರುವುದನ್ನು ಗಮನದಲ್ಲಿರಿಸಿಕೊಂಡು ಈ ಕ್ರಮಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

25 ಕ್ಕಿಂತ ಹೆಚ್ಚು ಮತ್ತು 30ಕ್ಕಿಂತ ಕಡಿಮೆ ಅಂಕಗಳಿಸಿರುವ ವಿದ್ಯಾರ್ಥಿಗಳಿಗೆ ಇದರಿಂದ ಅನುಕೂಲವಾಗುತ್ತದೆ.

2021 ರಲ್ಲಿಯೂ ಶೇ 10 ರಷ್ಟು ಕೃಪಾಂಕ ನೀಡಲು ನಿರ್ಧರಿಸಲಾಗಿತ್ತು. ಆದರೆ, ಕೋವಿಡ್ ಕಾರಣಕ್ಕೆ ಪರೀಕ್ಷೆಗೆ ಹಾಜರಾದ ಎಲ್ಲರನ್ನೂ ಸಾಮೂಹಿಕವಾಗಿ ಉತ್ತೀರ್ಣಗೊಳಿಸಲಾಗಿತ್ತು.

ಪಿಎಸ್‌ಐ ಅಕ್ರಮ: ಡಿವೈಎಸ್ಪಿ ಶಾಂತಕುಮಾರ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು, ಪೊಲೀಸ್ ನೇಮಕಾತಿ ವಿಭಾಗದ ಡಿವೈಎಸ್ಪಿ ಶಾಂತಕುಮಾರ್ ಅವರನ್ನು ಗುರುವಾರ ಬಂಧಿಸಿದ್ದಾರೆ.

‘ನೇಮಕಾತಿ ವಿಭಾಗದಲ್ಲಿ 2011 ರಿಂದ ಕೆಲಸ ಮಾಡುತ್ತಿದ್ದ ಶಾಂತಕುಮಾರ್, ಅಕ್ರಮದಲ್ಲಿ ಭಾಗಿಯಾಗಿರುವ ಮಾಹಿತಿ ಲಭ್ಯವಾಗಿತ್ತು. ನೋಟಿಸ್ ನೀಡಿ ವಿಚಾರಣೆಗೆ ಕರೆಸಲಾಗಿತ್ತು. ಆರೋಪಕ್ಕೆ ಸಂಬಂಧಪಟ್ಟಂತೆ ಪುರಾವೆಗಳು ಸಿಗುತ್ತಿದ್ದಂತೆ ಶಾಂತಕುಮಾರ್ ಅವರನ್ನು ಬಂಧಿಸಲಾಗಿದೆ. ಶುಕ್ರವಾರ ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗುವುದು’ ಎಂದು ಸಿಐಡಿ ಮೂಲಗಳು ಹೇಳಿವೆ.

ನೇಮಕಾತಿ ವಿಭಾಗದ ಡಿಐಜಿ ಆಪ್ತ ಸಹಾಯಕ ಶ್ರೀನಿವಾಸ್, ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಹರ್ಷ, ವಿಭಾಗದಲ್ಲಿ ಭದ್ರತೆಗೆ ನಿಯೋಜನೆಗೊಂಡಿದ್ದ ನಗರ ಸಶಸ್ತ್ರ ಮೀಸಲು ಪಡೆಯ ಸಬ್ ಇನ್‌ಸ್ಪೆಕ್ಟರ್‌ಗಳಾದ ಲೋಕೇಶಪ್ಪ, ಮಂಜುನಾಥ್ ಹಾಗೂ ಶ್ರೀಧರ್ ಅವರನ್ನು ಇತ್ತೀಚೆಗಷ್ಟೇ ಸಿಐಡಿ ಬಂಧಿಸಿತ್ತು.



ಶಾಂತಕುಮಾರ್

‘ಪಿಎಸ್‌ಐ ನೇಮಕಾತಿ ಹೊಣೆ ಹೊತ್ತುಕೊಂಡಿದ್ದ ವಿಭಾಗದಲ್ಲೇ ಅಕ್ರಮ ನಡೆದಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಡಿವೈಎಸ್ಪಿ ಶಾಂತಕುಮಾರ್ ವಿಚಾರಣೆ ನಡೆಸಿದರೆ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ’ ಎಂದೂ ಸಿಐಡಿ ಮೂಲಗಳು ತಿಳಿಸಿವೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ





ಹುಲಿ ಉಗುರು ಮಾರಾಟ: ಬಂಧನ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಹುಲಿ ಉಗುರು ಮಾರುತ್ತಿದ್ದ ಆರೋಪಿ ಜಡೆಸ್ವಾಮಿ ಹಾಗೂ ರಾಮಚಂದ್ರ ಎಂಬ ಇಬ್ಬರನ್ನು ಸಿಐಡಿ ಪೊಲೀಸರ ಅರಣ್ಯ ಘಟಕದ ಸಿಬ್ಬಂದಿ ಗುರುವಾರ ಬಂಧಿಸಿದ್ದಾರೆ. ಆರೋಪಿಗಳಿಂದ 22 ಹುಲಿ ಉಗುರುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಮಸ್ಯೆ ಎದುರಾಗುವ ನಗರದ ಪ್ರಮುಖ ಪ್ರದೇಶಗಳಿಗೆ ಭೇಟಿ ನೀಡಿದ ತುಷಾರ್ ಗಿರಿನಾಥ್

ಮಳೆಗಾಲದ ಸಮಸ್ಯೆ ಆಲಿಸಿದ ಮುಖ್ಯ ಆಯುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೊಮ್ಮನಹಳ್ಳಿ ವಲಯದಲ್ಲಿ ಮಳೆಗಾಲದಲ್ಲಿ ಸಮಸ್ಯೆ ಎದುರಾಗುವ ಪ್ರಮುಖ ಪ್ರದೇಶಗಳಿಗೆ ಗುರುವಾರ ಭೇಟಿ ನೀಡಿದ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸ್ಥಳೀಯರ ಅಹವಾಲು ಆಲಿಸಿದರು.

'ಇತ್ತೀಚೆಗೆ ಮಳೆ ವೇಳೆ ಸಾಕಷ್ಟು ಮರಗಳು ಧರೆಗುರುಳಿವೆ. ಪ್ರತಿ ಮಳೆಗಾಲದಲ್ಲೂ ಸಮಸ್ಯೆ ಎದುರಾಗುತ್ತಿದ್ದು, ಇದನ್ನು ತಡೆಯಲು ಶಾಶ್ವತ ಪರಿಹಾರ ಕ್ರಮಕೈಗೊಳ್ಳಬೇಕು' ಎಂದು ಎಚ್‌ಎಸ್‌ಆರ್ ಬಡಾವಣೆಯ ನಿವಾಸಿಗಳು ಒತ್ತಾಯಿಸಿದರು.

ಬಡಾವಣೆಯ 6ನೇ ಸೆಕ್ಟರ್ ನಲ್ಲಿ 3ನೇ ಮುಖ್ಯ ರಸ್ತೆ ಮತ್ತು 16ನೇ ಅಡ್ಡ ರಸ್ತೆ ಬಳಿಯ ತಗ್ಗು ಪ್ರದೇಶಗಳು ಮಳೆಗಾಲದಲ್ಲಿ ಜಲಾವೃತವಾಗುತ್ತವೆ. ಇದನ್ನು ತಡೆಯಲು ರಾಜಕಾಲುವೆಯಲ್ಲಿ 286 ಮೀಟರ್ ಉದ್ದದ ಪೂರಕ ಕಾಲುವೆ ನಿರ್ಮಿಸಲಾಗುತ್ತಿದೆ ಅಧಿಕಾರಿಗಳು ಮಾಹಿತಿ ನೀಡಿದರು.

ಬಡಾವಣೆಯ 9ನೇ ಮುಖ್ಯ ರಸ್ತೆಯ ಬಳಿಯ ಸೇತುವೆಯನ್ನು 3.5 ಮೀಟರ್‌ನಷ್ಟು ಎತ್ತರಿಸಲಾಗಿದ್ದು, ಇಲ್ಲಿನ ರಾಜಕಾಲುವೆಯಲ್ಲಿ ಮಳೆ ನೀರು ಸರಾಗವಾಗಿ ಹರಿದು ಹೋಗಲು ವ್ಯವಸ್ಥೆ ಕಲ್ಪಿಸಲಾಗಿದೆ. ವಸತಿ ಪ್ರದೇಶ ಜಲಾವೃತವಾಗುವುದನ್ನು ತಡೆಯಲು ರಾಜಕಾಲುವೆಯಲ್ಲಿ 600 ಮೀಟರ್ ಉದ್ದದ ಪರ್ಯಾಯ ಕಾಲುವೆ ನಿರ್ಮಿಸಲಾಗುತ್ತಿದೆ. ಜೋರು ಮಳೆಯಾದಾಗ ತುಂಬಿಕೊಳ್ಳುವ ಹಿನ್ನೀರು ಸರಾಗವಾಗಿ ಹರಿದು ಹೋಗುವಂತೆ ವ್ಯವಸ್ಥೆ ಮಾಡಲಾಗಿದೆ ಎಂದು ಅಧಿಕಾರಿಗಳು ವಿವರಿಸಿದರು. ಬಾಕಿ ಕಾಮಗಾರಿಗಳನ್ನು ಮಳೆಗಾಲಕ್ಕೆ ಮುನ್ನವೇ ಪೂರ್ಣಗೊಳಿಸಲು ತುಷಾರ್ ಸೂಚನೆ ನೀಡಿದರು.

ಅನುಗ್ರಹ ಬಡಾವಣೆಯ ಮೊದಲ ಹಂತದ ತಗ್ಗು ಪ್ರದೇಶಗಳು ಮಳೆ ಬಂದಾಗ ಜಲಾವೃತವಾಗುತ್ತಿದ್ದು, ಇಲ್ಲಿ ಮಳೆ ನೀರನ್ನು ಮಡಿವಾಳ ಕೆರೆಗೆ ಸಂಪರ್ಕವಿರುವ ಕಾಲುವೆಗೆ ಪಂಪ್ ಮಾಡಲು 45 ಅಶ್ವಶಕ್ತಿ ಸಾಮರ್ಥ್ಯದ ಪಂಪ್‌ಸೆಟ್ ಅನ್ನು ಸ್ಥಳದಲ್ಲೇ ಇಡಲಾಗಿದೆ. ಈ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸಲು ಕ್ರಮಕೈಗೊಳ್ಳುವಂತೆ ಅಧಿಕಾರಿಗಳಿಗೆ ತುಷಾರ್ ಸೂಚನೆ ನೀಡಿದರು.

ಕರ್ತವ್ಯಕ್ಕೆ ಗೈರಾದ ಪೌರಕಾರ್ಮಿಕರ ವರ್ಗ: ಎಚ್.ಎಸ್.ಆರ್ ಬಡಾವಣೆಯ ಮಸ್ಟರಿಂಗ್ ಕೇಂದ್ರಕ್ಕೆ ತುಷಾರ್ ಅವರು ಬೆಳಿಗ್ಗೆ ಭೇಟಿ ನೀಡಿದಾಗ ಅಲ್ಲಿನ 64 ಪೌರಕಾರ್ಮಿಕರಲ್ಲಿ 54 ಮಂದಿ ಮಾತ್ರ ಹಾಜರಿದ್ದರು. ದೀರ್ಘಕಾಲ ಕರ್ತವ್ಯಕ್ಕೆ ಗೈರಾಗುವ ಪೌರ ಕಾರ್ಮಿಕರನ್ನು ಬೇರೆ ಕೇಂದ್ರಕ್ಕೆ ವರ್ಗಾಯಿಸುವಂತೆ ಅವರು ಸೂಚಿಸಿದರು.



ಎಚ್‌ಎಸ್‌ಆರ್ ಬಡಾವಣೆಯ ಮಸ್ಟರಿಂಗ್ ಕೇಂದ್ರಕ್ಕೆ ಗುರುವಾರ ಭೇಟಿ ನೀಡಿದ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಪೌರಕಾರ್ಮಿಕರ ಅಹವಾಲು ಆಲಿಸಿದರು

'ಕ್ರೀಡಾಂಗಣ: ಗುತ್ತಿಗೆದಾರರಿಂದಲೇ ದುರಸ್ತಿಪಡಿಸಿ'

'ಇತ್ತೀಚಿನ ಗಾಳಿ ಮಳೆಗೆ ಟೆನ್ನಿಸ್ ಚಾವಣಿಯು ಬಿದ್ದುಹೋಗಿರುವ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣವನ್ನು ಗುತ್ತಿಗೆದಾರರಿಂದಲೇ ದುರಸ್ತಿಪಡಿಸಬೇಕು' ಎಂದು ತುಷಾರ್ ಗಿರಿನಾಥ್ ಸೂಚನೆ ನೀಡಿದರು.

ಕ್ರೀಡಾಂಗಣಕ್ಕೆ ಭೇಟಿ ನೀಡಿದ ಅವರು, 'ದುರಸ್ತಿ ಕಾರ್ಯವನ್ನು ಒಂದು ತಿಂಗಳ ಒಳಗೆ ಮುಗಿಸಬೇಕು' ಎಂದು ತಾಕೀತು ಮಾಡಿದರು.

ಸುಮಾರು 7 ಎಕರೆ ಪ್ರದೇಶದಲ್ಲಿ ₹ 40 ಕೋಟಿ ವೆಚ್ಚದಲ್ಲಿ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣದ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಮೊದಲನೇ ಹಂತದಲ್ಲಿ ಟೆನ್ನಿಸ್, ಬ್ಯಾಸ್ಕೆಟ್ ಬಾಲ್, ವಾಲಿಬಾಲ್ ಅಂಗಣಗಳನ್ನು ಮತ್ತು ಗ್ಯಾಲರಿಗಳನ್ನು ₹ 3.25 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಇವುಗಳಿಗೆ ಟೆನ್ನಿಸ್ ಚಾವಣಿ ರೂಫ್, 10 ಕಡೆ ಹೊನಲು ಬೆಳಕಿನ (ಫ್ಲಡ್ ಲೈಟ್) ವ್ಯವಸ್ಥೆ ಕಲ್ಪಿಸುವ ಕಾರ್ಯ ಪೂರ್ಣಗೊಂಡಿದೆ. ಬಾಕಿಯಿರುವ ಕಾಮಗಾರಿಗಳನ್ನು ಗಡುವಿನೊಳಗೆ ಪೂರ್ಣಗೊಳಿಸಬೇಕು ಎಂದು ಮುಖ್ಯ ಆಯುಕ್ತರು ಸೂಚಿಸಿದರು.

ಸುಬ್ಬರಾಯನ ಕೆರೆ ವೀಕ್ಷಣೆ

ಗೊಟ್ಟಿಗೆರೆ ಮುಖ್ಯ ರಸ್ತೆಯ ಬಳಿ 5 ಎಕರೆ ಪ್ರದೇಶದಲ್ಲಿ ವ್ಯಾಪಿಸಿರುವ ಸುಬ್ಬರಾಯನ ಕೆರೆಯನ್ನು ₹ 2.6 ಕೋಟಿ ವೆಚ್ಚದಲ್ಲಿ ಬಿಬಿಎಂಪಿ ಅಭಿವೃದ್ಧಿ ಪಡಿಸುತ್ತಿದೆ. ಕೆರೆಯ ಹೂಳೆತ್ತುವಿಕೆ, ಬೇಲಿ ನಿರ್ಮಾಣ, ದಂಡೆ ಅಭಿವೃದ್ಧಿ, ನೀರಿನ ಒಳಹರಿವು ಮತ್ತು ಹೊರ ಹರಿವು ನಾಲೆಗಳ ದುರಸ್ತಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಕೆರೆಗೆ ಎರಡು ಕಡೆ ಶೌಚಾಲಯದ ನೀರು ಸೇರಿಕೊಳ್ಳುತ್ತಿದೆ.

ಈ ಕೆರೆಯ ಕಾಮಗಾರಿ ವೀಕ್ಷಿಸಿದ ಮುಖ್ಯ ಆಯುಕ್ತರು, 'ಕೊಳಚೆ ನೀರು ಕೆರೆಗೆ ಸೇರದಂತೆ ತಡೆಯಲು ಪರ್ಯಾಯ ಕಾಲುವೆ ನಿರ್ಮಿಸಬೇಕು' ಎಂದು ಜಲಮಂಡಳಿ ಅಧಿಕಾರಿಗಳಿಗೆ ಸೂಚಿಸಿದರು.

'ಹುದ್ದೆಗೆ ಗೌರವ ತನ್ನಿ'

ಬೆಂಗಳೂರು: 'ಸರ್ಕಾರಿ ನೌಕರರು ಆತ್ಮಸಾಕ್ಷಿಗನುಸಾರವಾಗಿ ಕಾರ್ಯ ನಿರ್ವಹಿಸಬೇಕು. ನಿವೃತ್ತಿಯ ಅಂಚಿನಲ್ಲಿದ್ದಾಗ ಸಿಂಹಾವಲೋಕನ ಮಾಡಿದಾಗ ನಿಮ್ಮ ಕೆಲಸದ ಬಗ್ಗೆ ಹೆಮ್ಮೆ ಮೂಡಬೇಕು' ಎಂದು ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಕಿವಿಮಾತು ಹೇಳಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ 'ಸಾರ್ವಜನಿಕ ಆಡಳಿತದಲ್ಲಿ ಸುಧಾರಣೆ, ಸರ್ಕಾರಿ ನೌಕರರ ಪಾತ್ರ' ಕುರಿತು ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, 'ಸರ್ಕಾರಿ ನೌಕರರು ತಮ್ಮ ಹುದ್ದೆಗೆ ಗೌರವ ತಂದುಕೊಳ್ಳಬೇಕು. ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸಿ ಮಾನವೀಯತೆಯಿಂದ ಕಾರ್ಯನಿರ್ವಹಿಸಬೇಕು. ಭ್ರಷ್ಟಾಚಾರ ರಹಿತ ಸೇವೆ ಪವಿತ್ರ ಎನ್ನುವುದನ್ನು ಅರಿತುಕೊಳ್ಳಬೇಕು. ಕರ್ತವ್ಯ ಮತ್ತು ನಿಷ್ಠೆ ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸದಿದ್ದರೆ ಸಂಕಷ್ಟಕ್ಕೆ ಸಿಲುಕುವುದು ಸಹಜ' ಎಂದರು. ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಇದ್ದರು.

'ವಿಷಬೀಜ ಬಿತ್ತುವ ಮುತಾಲಿಕರನ್ನು ಬಂಧಿಸಿ'

ಬೆಂಗಳೂರು: 'ಸಮುದಾಯಗಳ ಮಧ್ಯೆ ವಿಷಬೀಜ ಬಿತ್ತುವ ಪ್ರಮೋದ್ ಮುತಾಲಿಕ್ ಹಾಗೂ ಇತರರನ್ನು ಗೂಂಡಾ ಕಾಯ್ದೆಯ ಅಡಿ ಬಂಧಿಸಬೇಕು' ಎಂದು ಒತ್ತಾಯಿಸಿ ಕರ್ನಾಟಕ ಕ್ರೈಸ್ತರ ಸಾಮಾಜಿಕ ಕ್ಷೇಮಾಭಿವೃದ್ಧಿ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಸಂಕ್ಷಿಪ್ತ ಸುದ್ದಿ

ಮಲ್ಲಯ್ಯ ಚಿಲ್ಲಾಳ



ಬೆಂಗಳೂರು: ಕೈಮಗ್ಗ ಸಂಘದ ಹಿರಿಯ ಸದಸ್ಯ ಮಲ್ಲಯ್ಯ ಚಿಲ್ಲಾಳ (80) ಅವರು ಬುಧವಾರ ಸಂಜೆ ನಿಧನ ಹೊಂದಿದರು.

ನೇಕಾರ ಸಮುದಾಯದ ಸ್ವಕುಳಸಾಳಿ ಸಮಾಜದ ಪ್ರಮುಖರಾಗಿದ್ದ ಮಲ್ಲಯ್ಯ, ಸುಧಾಮ ನಗರದಲ್ಲಿ ವಾಸವಿದ್ದರು. ಅವರಿಗೆ ಪುತ್ರಿ ಹಾಗೂ ಮೂವರು ಪುತ್ರರು ಇದ್ದಾರೆ.

ರಾಷ್ಟ್ರೀಯ ಆರೋಗ್ಯ ಅಭಿಯಾನ
ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–560023
ದೂರವಾಣಿ: 080–23113584, ಇ–ಮೇಲ್: pdrch-hfws@karnataka.gov.in

ಸಂಖ್ಯೆ: NHM/Proc/09/2019-20 ದಿನಾಂಕ: 07.05.2022

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಬೆಂಗಳೂರು ಇವರು ಅರ್ಹ ನೋಂದಾಯಿತ ಸಾರಿಗೆ ಸಂಸ್ಥೆಗಳಿಂದ **ಮಾಸಿಕ ಹಾಗೂ ದಿನದ ಆಧಾರದ ಮೇಲೆ ಚಾಲಕ ಸಮೇತ ವಾಹನಗಳನ್ನು ಒದಗಿಸುವುದಕ್ಕಾಗಿ** ಟೆಂಡರ್ ಅನ್ನು ಅಗತ್ಯ ದಾಖಲೆಗಳೊಂದಿಗೆ ಆಹ್ವಾನಿಸಲಾಗಿದೆ.

ಟೆಂಡರ್ ದಾಖಲಾತಿಯನ್ನು ವೆಬ್‌ಸೈಟ್ **www.eproc.karnataka.gov.in** ನಲ್ಲಿ ನೀಡಲಾಗಿದೆ. ಇ–ಪೋರ್ಟಲ್‌ನಲ್ಲಿ ಸಂಪೂರ್ಣ ಮಾಹಿತಿಯನ್ನು ದಿನಾಂಕ:**12.05.2022ರ ಬೆಳಿಗ್ಗೆ 11.30 ಗಂಟೆಯ** ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಆಸಕ್ತಿಯುಳ್ಳ ಏಜೆನ್ಸಿಯು ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **30.05.2022 ಸಂಜೆ 5.30 ಗಂಟೆ**. ಹೆಚ್ಚಿನ ಮಾಹಿತಿಗಾಗಿ ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್) ರವರ ಕಚೇರಿ ಸಮಯ ಬೆಳಿಗ್ಗೆ **11.00 ಗಂಟೆಯಿಂದ ಸಂಜೆ 5.30 ಗಂಟೆಯೊಳಗೆ** ಪಡೆದುಕೊಳ್ಳಬಹುದಾಗಿದೆ.

ಸಹಿ/–
ಯೋಜನಾ ನಿರ್ದೇಶಕರು (ಆರ್‌ಸಿಹೆಚ್)

DIPR/CP/481/Yakshi/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರಸಭಾ ಕಾರ್ಯಾಲಯ
ದೊಡ್ಡಬಳ್ಳಾಪುರ–561203
ಇಮೇಲ್: itstaff_ulb_doddaballapur@yahoo.com
ವೆಬ್‌ಸೈಟ್: www.doddaballapurcity.mrc.gov.in

ಸಂಖ್ಯೆ:ನಸದೊ/ಕಂ.ಶಾ/ಜಾ.ರಾ/ಸಿಆರ್/01/2022–23 ದಿನಾಂಕ: 10.05.2022

ಪ್ರಕಟಣೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ನಗರಸಭೆಯ ವ್ಯಾಪ್ತಿಯ ಕೋರ್ಟ್ ರಸ್ತೆ, ಶ್ರೀ ಗಣೇಶನ ದೇವಸ್ಥಾನದಿಂದ ಹಿಂದೂಪುರ ಮುಖ್ಯ ರಸ್ತೆವರೆಗೆ ಹಾಗೂ ತಾಲ್ಲೂಕು ಕಛೇರಿಯಿಂದ ಸಮೃದ್ಧಿ ಗ್ರ್ಯಾಂಡ್ ಹೋಟೆಲ್‌ವರೆಗೆ ಒಟ್ಟು 91 ಪೋಲ್ಸ್‌ಗಳಿಗೆ 3x4 ಅಡಿಗಳ ಅಳತೆಯ ಬಿ.ಓ.ಟಿ ಜಾಹಿರಾತು ಪ್ರದರ್ಶಿಸಲು ಆಸಕ್ತ ಕಂಪನಿ/ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಜಾಹಿರಾತುದಾರರು ಈ ಹಿಂದೆ ಕಾರ್ಯನಿರ್ವಹಿಸಿದ ದಾಖಲೆಗಳೊಂದಿಗೆ ತಮ್ಮ ದರಗಳನ್ನು ನಮೂದಿಸಿ ದಿನಾಂಕ: **26.05.2022**ರ ಸಾಯಂಕಾಲ **5.00 ಗಂಟೆಯೊಳಗಾಗಿ** ಈ ಕಛೇರಿಗೆ ಸಲ್ಲಿಸುವುದು.

ಹೆಚ್ಚಿನ ಮಾಹಿತಿಗಾಗಿ ಮತ್ತು ಕಛೇರಿ ಸಮಯದಲ್ಲಿ ಕಂದಾಯ ಶಾಖೆಯ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

ಸೂಚನೆ: ಬಿ.ಓ.ಟಿ ಜಾಹಿರಾತು ಪ್ರಕಟಣೆಯು ಷರತ್ತುಗಳಿಗೆ ಅನ್ವಯಿಸುತ್ತದೆ.

ಸಹಿ/– (ಎಸ್.ಸುಧಾರಾಣಿ ಲಕ್ಷ್ಮೀನಾರಾಯಣ) ಅಧ್ಯಕ್ಷರು, ನಗರಸಭೆ, ದೊಡ್ಡಬಳ್ಳಾಪುರ
ಸಹಿ/– (ಫರ್ಹಾನತಾಜ್) ಉಪಾಧ್ಯಕ್ಷರು, ನಗರಸಭೆ, ದೊಡ್ಡಬಳ್ಳಾಪುರ
ಸಹಿ/– (ಶಿವಶಂಕರ್.ಕೆ.ಜಿ) ಪೌರಾಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ

DIPR/CP/KAVITA/450/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್,
ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಅಲ್ಪಾವಧಿ ಟೆಂಡರ್ ಮುಂದೂಡಿಕೆ ಅಧಿಸೂಚನೆ ಆಹ್ವಾನ (ಐ.ಎಫ್.ಟಿ)
ಸಂಖ್ಯೆ: 01–2/2022–23 ದಿನಾಂಕ: 10.05.2022

(ಸೇತುವೆ ಕಾಮಗಾರಿಗಾಗಿ–ಸ್ಟ್ಯಾಂಡರ್ಡ್ ಬಿಡ್ಡಿಂಗ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–3 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ)

ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ** ಪದ್ಧತಿಯಲ್ಲಿ ಟೆಂಡರ್‌ಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 2000ರ ಅನ್ವಯ ಈ ಕೆಳಗೆ ಸಹಿ ಮಾಡಿದವರು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ದಿನಾಂಕ: **11.05.2022 ರಿಂದ 18.05.2022ರ ಸಂಜೆ 4.00 ಗಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. **(1)** ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕಡೆಯ ದಿನಾಂಕ: **11.05.2022 (ಮಧ್ಯಾಹ್ನ 3.00 ಗಂಟೆಗೆ ಕಛೇರಿ ವೇಳೆಯಲ್ಲಿ). (2)** ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ: **18.05.2022 (ಸಂಜೆ 4.00 ಗಂಟೆಯವರೆಗೆ). (3)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **20.05.2022 ಸಂಜೆ 4.30 ಗಂಟೆಗೆ. (4)** ಆರ್ಥಿಕ ಬಿಡನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ **www.kpwd.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ68/ಎಂ.ಸಿ.ಎ/2022–23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ–3 ರವರ ಕಛೇರಿ,
ಘನ ತ್ಯಾಜ್ಯ ನಿರ್ವಹಣೆ–1,
ದಾಸಪ್ಪ ಆಸ್ಪತ್ರೆ ಕಟ್ಟಡ, ಬೆಂಗಳೂರು – 560 002.

ಸಂಖ್ಯೆ: ಕಾಪಾಅ–3/ಘತ್ಯಾನಿ/ಟೆಂಡರ್/03/2022–23 ದಿನಾಂಕ: 12/05/2022

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು–3, ಘನ ತ್ಯಾಜ್ಯ ನಿರ್ವಹಣೆ ವಿಭಾಗ ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರವರ ಪರವಾಗಿ **ಘನ ತ್ಯಾಜ್ಯ ನಿರ್ವಹಣೆ ವಿಭಾಗಕ್ಕಾಗಿ ವಿವರವಾದ ಯೋಜನಾ ವರದಿ (ಡಿಪಿಆರ್)** ಮೇಲ್ವಿಚಾರಣೆ ಹಾಗೂ ಪ್ರಮಾಣಗಳ ಬಿಲ್ ತಯಾರಿಸಲು ಕೆಳಗೆ ತಿಳಿಸಿರುವ ಎರಡು ಕಾಮಗಾರಿಗಳಿಗೆ ಪ್ರತಿಷ್ಠಿತ ಸಲಹೆದಾರರಿಂದ ಕೆಳಕಂಡ ಸಮಾಲೋಚಕರ ಸೇವೆಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಮೂಲಕ ಅಲ್ಪಾವಧಿ ಸೇವಾ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ಯೋಜನಾ ವೆಚ್ಚ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1.	1. ಲಕ್ಕಸಂದ್ರದಲ್ಲಿ ಉದ್ದೇಶಿತ ತ್ಯಾಜ್ಯ ಟೆಕ್ ಪಾರ್ಕ್‌ನಲ್ಲಿರುವ 1 ಎಕರೆ ನಿವೇಶನದಲ್ಲಿ 3 ಉತ್ಪಾದನೆಗಳಾದ ಆರ್ಗಾನಿಕ್ ಲಿಕ್ವಿಡ್, ಕೋಕೋಪೀಟ್ ಮತ್ತು ಪೆಲ್ಲೆಟ್‌ಗಳನ್ನು ಉತ್ಪಾದನೆ ಮಾಡುವ ಸಲುವಾಗಿ ಶ್ರೆಡ್ಡಿಂಗ್, ಸ್ಕ್ವೀಸಿಂಗ್, ಸ್ಕ್ರೀನಿಂಗ್, ಪಲ್ವರೈಸಿಂಗ್ ಹಾಗೂ ಪೆಲ್ಲೆಟಿಂಗ್ ಒಳಗೊಂಡಂತೆ 220 ಟಿಪಿಡಿ ತೆಂಗಿನಕಾಯಿ ಸಂಸ್ಕರಣಾ ಘಟಕದ ಸ್ಥಾಪನೆ. 2. ಬೃಬೆಂಮಪಾಲಿಕೆಯ ಹಾಲಿಯಿರುವ 3 ಉತ್ಪಾದನಾ ಘಟಕಗಳಲ್ಲಿ 50 ಟನ್ ಅರೆ ಸ್ವಯಂಚಾಲಿತ ಸಾಮಗ್ರಿ ಮನರ್‌ಗಳಿಕೆ ಸೌಲಭ್ಯದ ಆರ್‌ಎಫ್‌ಡಿ ಶೆಡ್‌ನ ಉನ್ನತೀಕರಣ.	1100.00	27,500/–
2.	1. ಮೌಲ್ಯವಾದ ಒಣ ತ್ಯಾಜ್ಯ ಸಂಗ್ರಹಣೆ, ವಿಂಗಡಣೆ ಹಾಗೂ ಪನರ್‌ಗಳಿಕೆಗಾಗಿ ಹೊಸ ವಿಕೇಂದ್ರೀಕೃತ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು (ಡಿಡಬ್ಲ್ಯೂಸಿಸಿ) ಉನ್ನತೀಕರಣ ಹಾಗೂ ಸ್ಥಾಪನೆ. 2. ಯಡಿಯೂರು ವಾರ್ಡ್ ಸಂಖ್ಯೆ 167 ರಲ್ಲಿ ಡಿಡಬ್ಲ್ಯೂಸಿಸಿ ಕೇಂದ್ರ ಹಾಗೂ ವಿಂಗಡಣೆ ಕೇಂದ್ರದ ಸುಧಾರಣೆ. 3. ಗೋವಿಂದರಾಜ ವಿಧಾನಸಭಾ ಕ್ಷೇತ್ರದ ಗೋವಿಂದರಾಜ ಉಪ ವಿಭಾಗ ಮತ್ತು ಚಂದ್ರ ಲೇಔಟ್‌ಗಳಲ್ಲಿರುವ ಒಣ ತ್ಯಾಜ್ಯ ಕೇಂದ್ರದ ಉನ್ನತೀಕರಣ ಹಾಗೂ ಕಸ ವಿಲೇವಾರಿ ಕೇಂದ್ರದ ಸುತ್ತಮುತ್ತ ಸುಧಾರಣೆ.	1235.00	31,000/–

ಟೆಂಡರ್ ದಾಖಲೆ ಬೆಲೆ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರಕಾರ
ಗುತ್ತಿಗೆ ಪೂರ್ಣಗೊಳ್ಳುವ ಅವಧಿ: 30 ದಿನಗಳು

ಟೆಂಡರ್ ಕಾರ್ಯಸೂಚಿ : (1) ಟೆಂಡರ್ ದಾಖಲೆಗಳನ್ನು 13.05.2022 ರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 25.05.2022 ರಂದು ಸಂಜೆ 4:00 ಗಂಟೆಯವರೆಗೆ. (3) ತಾಂತ್ರಿಕ ಬಿಡ್‌ಗಳನ್ನು ವೆಬ್‌ಸೈಟ್ https://eproc.karnataka.gov.in ಮೂಲಕ ತೆರೆಯುವ ದಿನಾಂಕ 27.05.2022 ರಂದು ಸಂಜೆ 4.00 ಗಂಟೆಯ ನಂತರ ಅಥವಾ ಮುಂದಿನ ಕೆಲಸದ ದಿನದಂದು. (4) ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ತಾಂತ್ರಿಕ ಅರ್ಹತೆ ಪಡೆದ ಬಿಡ್‌ದಾರರಿಗೆ ತಿಳಿಸಲಾಗುವುದು. ಹೆಚ್ಚಿನ ವಿವರಗಳನ್ನು https://eproc.karnataka.gov.in ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು–3
ಘನ ತ್ಯಾಜ್ಯ ನಿರ್ವಹಣೆ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ
ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಆರ್.ವಿ. ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು–560059 ಫೋನ್ : 080–28484515/080–28484518

ಅಧಿಸೂಚನೆ ಸಂಖ್ಯೆ: ಡಿಪಿಎಸ್42ಪಿಯುಆರ್(ಸಿ)2021–22/ಟಿಆರ್‌ಪಿ/ಕರೆ–2 ದಿನಾಂಕ: 12.05.2022

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಮುದ್ರಿತ ಸಾಮಗ್ರಿಗಳು, ಲೇಖನ ಮತ್ತು ಉಗ್ರಾಣ ಸಾಮಗ್ರಿಗಳ ಸಾಗಾಣಿಕೆಗಾಗಿ ದರಗುತ್ತಿಗೆ ಆಧಾರದ ಮೇರೆಗೆ ಆನ್‌ಲೈನ್ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ ರೂ. 45.00 ಲಕ್ಷಗಳಾಗಿರುತ್ತದೆ ಹಾಗೂ ಇ.ಎಂ.ಡಿ.ಯು ರೂ. 2.25 ಲಕ್ಷಗಳಾಗಿರುತ್ತದೆ. ಟೆಂಡರ್‌ನ ಪೂರ್ವಭಾವಿ ಸಭೆಯು ದಿನಾಂಕ 20.05.2022, ಬೆಳಿಗ್ಗೆ 11.30 ಕ್ಕೆ ಹಾಗೂ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 27.05.2022, 17.30 ಗಂಟೆ. ಮಾಹಿತಿಯನ್ನು https://eproc.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/–
ನಿರ್ದೇಶಕರು

ವಾ.ಸಾ.ಸಂ.ಇ/ವಾಪ್ರ/491/ಆಕಾರ್/22–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರಾಮನಗರ ಜಿಲ್ಲಾ ಪಂಚಾಯತ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ರಾಮನಗರ ವಿಭಾಗ

ಸಂಖ್ಯೆ: 06/ಕಾಅ/ಗ್ರಾ.ಕು.ನೀ&ನೈವಿ/ರಾ/ಟೆಂಡರ್/ಸ.ಇಂ–1/395–404/ 2022–23/Call-3 ದಿನಾಂಕ: 11–05–2022

ಮರು ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ ರಾಮನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಗ್ರಾಮೀಣ ಪ್ರದೇಶದಲ್ಲಿ JJM ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ರಾಮನಗರ ಜಿಲ್ಲೆಯ ರಾಮನಗರ ತಾಲ್ಲೂಕಿನ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಅಧಿಕೃತ ಪರಿಶಿಷ್ಟ ಜಾತಿ ಮತ್ತು ಸಾಮಾನ್ಯ ವರ್ಗದ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. **ಕಾಮಗಾರಿಗಳ ವಿವರಗಳು:** 1) ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ: **ರೂ. 26.53 ಲಕ್ಷಗಳು,** ಇ.ಎಂ.ಡಿ ಮೊತ್ತ: **ರೂ. 53000.00.** 2) ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ: **ರೂ. 17.94 ಲಕ್ಷಗಳು,** ಇ.ಎಂ.ಡಿ ಮೊತ್ತ: **ರೂ. 22500.00. 3)** ಕಾಲಾವಧಿ: **03 ತಿಂಗಳು.**

ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ ದಿನಾಂಕ: **18–05–2022ರ ಸಂಜೆ 5.30 ಗಂಟೆಯವರೆಗೆ.** ಬಿಡ್ ತೆರೆಯುವ ದಿನಾಂಕ: **20–05–2022ರ ಬೆಳಿಗ್ಗೆ 11.00 ಗಂಟೆಯ ನಂತರ** ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖೆ/ವೆಬ್‌ಸೈಟ್: **www.eproc.karnataka.gov.in** ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ರಾಮನಗರ ವಿಭಾಗ, ರಾಮನಗರ.

ವಾಸಾಸಂಇ/ರಾನ/ಅಡ್ವರ್ಟೋ/60/2022–23

PUBLIC NOTICE

This is to inform the General Public that, **Smt. SATHYA VISHWANATH,** D/o Sri. Rajam Narasimaiah W/o Late N.C. Vishwanath, claims to have lost the below referred Original document pertaining to Property bearing **Number 611, BBMP Municipal No. 611, PID No. 14-74-611, Ward No. 14,** situated at West of Chord Road II Stage Extension, Basaveshwara Nagar, Bangalore, which is more-fully described in Schedule Property and a police complaint is filed before Bangalore City Police Station to that effect. My client intends to purchase the Schedule Property

Any Person who finds the below mentioned Original Document shall return the same to the undersigned.

Final Decree O.S. No. 5234/2000 Registered as Document No. 8609/2003-04, Book-I, Stored in C.D. No. RJND-36,

SCHEDULE PROPERTY

All that piece and Parcel of the immovable Property bearing **Number 611, BBMP Municipal No. 611, PID No. 14-74-611, Ward No. 14,** situated at West of Chord Road II Stage Extension, Basaveshwara Nagar, Bangalore, **Measuring East to West 40 feet and North to South 61 feet, TOTALLY Measuring 2,440 Sq. ft.,** and bounded on :

East by : Site No. 610,
West by : Site No. 612,
North by : 10th 'B' Cross Road,
South by : Site No. 614,

If any person/institution has any claim or interest of any nature pertaining to aforesaid property and Document, the said claims along-with supporting documents shall be filed with undersigned within 10 days from the date of publication of this Notice at the address mentioned below. Any claims raised thereafter shall not be entertained or binding.

D.P. Shivaprasad (Advocate)
Shivaprasad Property Law Services LLP
(LLP No.AAL - 9694)
11-12, 2nd Main Road, Sripuram, Kumara Park West, Sampangiram Nagar, Bengaluru, Karnataka 560020
Contact Nos: 080-23561811
+91-9844034104
(Timings: 11.00 AM to 05.00 P.M)

ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ
ಪ್ರಧಾನ ಶಾಖೆ : ನಂ. 158, 8ನೇ ಮೇನ್, 17ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560003
Ph : 080-23442648, 23449450, Fax : 080-41281971, E-mail : gm@jcbank.in, managerho@jcbank.in

ಬಹಿರಂಗ ಹರಾಜಿನ ಮೂಲಕ ಸ್ಥಿರಾಸ್ತಿಗಳ ಮಾರಾಟ

ಸೆಕ್ಯುರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಪೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಅಧಿನಿಯಮ 2002 ರ ಪ್ರಕರಣ 13(4)ರನ್ವಯ ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ ಇದರ ಅಧಿಕಾರ ಹೊಂದಿದ ಅಧಿಕಾರಿ ಇವರು ಸ್ವಾಧೀನಪಡಿಸಿಕೊಂಡಿರುವ ಮತ್ತು ಈಗ ಅವರ ವಶದಲ್ಲಿರುವ ಕೆಳಕಂಡ ಸ್ಥಿರಾಸ್ತಿಗಳನ್ನು ಎಲ್ಲಿವೆಯೋ ಹೇಗಿವೆಯೋ ಹಾಗಿನ ಸ್ಥಿತಿಯಲ್ಲಿ ಸಾರ್ವಜನಿಕರ ಹರಾಜು ವಿಧಾನದಂತೆ ಬ್ಯಾಂಕಿನ ಅಧಿಕೃತ ಅಧಿಕಾರಿಯು ಈ ಕೆಳಕಂಡ ಕರಾರು ಮತ್ತು ಷರತ್ತುಗಳೊಂದಿಗೆ ಬಹಿರಂಗ ಹರಾಜು ಮಾಡಲು ನಿರ್ಧರಿಸಿರುತ್ತಾರೆ.

ಸಾಲಗಾರರ ಹೆಸರು & ವಿಳಾಸ	ಸ್ಥಿರಾಸ್ತಿಯ ವಿವರ	ಚೆಕ್ಕುಬಂದಿ ಮತ್ತು ವಿಸ್ತೀರ್ಣ	ಮೀಸಲು ಬೆಲೆ ರೂ	ಬ್ಯಾಂಕಿಗೆ ಬರಬೇಕಾದ ಬಾಕಿ ಮೊಬಲಗು	ಬಹಿರಂಗ ಹರಾಜಿನ ದಿನಾಂಕ
1. ಶ್ರೀಮತಿ ಗಂಗಮ್ಮ ಟಿ. ಕೋಂ. ಶ್ರೀ ಸುರೇಶ. ವಿಳಾಸ : ನಂ. 246/36, ಸುಂದರ್ ನಗರ, ಅರಿಶಿನಕುಂಟೆ ಗ್ರಾಮ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು–562123	ಮನೆ ಆಸ್ತಿ ಹೊಂದಿರುವ ನಂ. 242/36, ಸುಂದರ್‌ನಗರ, ಅರಿಶಿನಕುಂಟೆ ಗ್ರಾಮ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು–562123 ಗ್ರಾಮ ಪಂಚಾಯಿತಿ ನಂ 4–08/09/2017 (ಅರಿಶಿನಕುಂಟೆ)	ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ : 40ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 30ಅಡಿ, ಮತ್ತು **ಚೆಕ್ಕುಬಂದಿ ಪೂರ್ವಕ್ಕೆ:** ರಸ್ತೆ, **ಪಶ್ಚಿಮಕ್ಕೆ :** ಆಸ್ತಿ ಸಂಖ್ಯೆ 21, **ಉತ್ತರಕ್ಕೆ :** ರಸ್ತೆ, **ದಕ್ಷಿಣಕ್ಕೆ** ಆಸ್ತಿ ಸಂಖ್ಯೆ 35	**ರೂ. 67,60,000/–** (ಅರವತ್ತೇಳು ಲಕ್ಷದ ಅರವತ್ತು ಸಾವಿರ ರೂಪಾಯಿಗಳು ಮಾತ್ರ)	**ರೂ. 59,74,571/–** (ಐವತ್ತೊಂಭತ್ತು ಲಕ್ಷದ ಎಪ್ಪತ್ತನಾಲ್ಕು ಸಾವಿರದ ಐದು ನೂರ ಎಪ್ಪತ್ತೊಂದು ರೂಪಾಯಿಗಳು ಮಾತ್ರ)	ದಿ: 16.06.2022 ಮಧ್ಯಾಹ್ನ: 11:00 ಘಂಟೆಗೆ ಸ್ಥಳ: ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ ಪ್ರಧಾನ ಶಾಖೆ : ನಂ. 158, 8ನೇ ಮೇನ್, 17ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560003

ಬಹಿರಂಗ ಹರಾಜಿನ ನಿಯಮ ಮತ್ತು ಷರತ್ತುಗಳು:

1.ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಮೀಸಲು ಬೆಲೆಯ 10% ಮರುಪಾವತಿಸಬಹುದಾದ ಇಎಂಡಿ ಹಣವನ್ನು ಅರ್ ಟಿ ಜಿ ಎಸ್ / ಎನ್ ಇ ಎಫ್ ಟಿ / ಹಣ ವರ್ಗಾವಣೆಯ ಮೂಲಕ ಖಾತೆ ಸಂಖ್ಯೆ ಜಿ ಎಲ್ ಕೋಡ್ – 2001 2004–01 ಖಾತೆ ಹೆಸರು: ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ. ಐ ಎಫ್ ಎಸ್ ಸಿ ಸಂಖ್ಯೆ: HDFC0CJCBKL ಬ್ಯಾಂಕ್ ಹೆಸರು: ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ. ಶಾಖೆ: ಮಲ್ಲೇಶ್ವರಂ. ಬೆಂಗಳೂರಿನಲ್ಲಿ ನಗದಿಕರಿಸುವ ರೀತಿ ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ ಹೆಸರಿನಲ್ಲಿ ಡಿಮ್ಯಾಂಡ್ ಡ್ರಾಫ್ಟ್ / ಪೇ ಆರ್ಡರ್ ನ್ನು ಮತ್ತು ಅಸಕ್ತ ಬಿಡ್ಡುದಾರರರು ಐಡಿ / ವಿಳಾಸ ಪುರಾವೆ ಮತ್ತು ಪ್ಯಾನ್ ಕಾರ್ಡ್ ಪ್ರತಿಗಳನ್ನು ದಿನಾಂಕ: 15.06.2022ರ ಸಂಜೆ 5:00 ಗಂಟೆಯ ಒಳಗಾಗಿ ಬ್ಯಾಂಕಿನ ಅಧಿಕೃತ ಅಧಿಕಾರಿ. ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ. ಮಲ್ಲೇಶ್ವರಂ, ಬೆಂಗಳೂರು–560055 ಇವರಿಗೆ ತಲುಪಿಸ ಬೇಕು. ಇಎಂಡಿ ಹಣವು ಯಾವುದೇ ರೀತಿಯಾದ ಬಡ್ಡಿಯನ್ನು ಹೊಂದಿರುವುದಿಲ್ಲ. **2.** ಯಾವುದೇ ಕಾರಣಕ್ಕೂ ಸ್ವತ್ತನ್ನು ಮೀಸಲು ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡುವುದಿಲ್ಲ. **3.** ಯಶಸ್ವಿ ಬಿಡ್ಡುದಾರರರು ಹರಾಜು ಪ್ರಕ್ರಿಯೆ ಮುಗಿದ ನಂತರ ಶೇ25 ರಷ್ಟು (ಇಎಂಡಿ ಸೇರಿದಂತೆ) ಮೊತ್ತವನ್ನು ತಕ್ಷಣ ಪಾವತಿಸಬೇಕಾಗುತ್ತದೆ. ಉಳಿಕೆ ಶೇ 75 ರಷ್ಟು ಮೊತ್ತವನ್ನು 15 ದಿನಗಳ ಒಳಗಾಗಿ ಪಾವತಿಸಬೇಕು. ಪಾವತಿಯು ಅರ್ ಟಿ ಜಿ ಎಸ್ / ಎನ್ ಇ ಎಫ್ ಟಿ / ಹಣ ವರ್ಗಾವಣೆಯ ಮೂಲಕ ಖಾತೆ ಸಂಖ್ಯೆ ಜಿ ಎಲ್ ಕೋಡ್ – 2001 2004–01 ಖಾತೆ ಹೆಸರು: ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ. ಐ ಎಫ್ ಎಸ್ ಸಿ ಸಂಖ್ಯೆ: HDFC0CJCBKL ಬ್ಯಾಂಕ್ ಹೆಸರು: ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ. ಶಾಖೆ: ಮಲ್ಲೇಶ್ವರಂ. ಬೆಂಗಳೂರಿನಲ್ಲಿ ನಗದಿಕರಿಸುವ ರೀತಿಯಿರಬೇಕು. **4.** ಯಶಸ್ವಿ ಬಿಡ್ಡುದಾರರರು ಹರಾಜು ಪ್ರಕ್ರಿಯೆ ಮುಗಿದ ನಂತರ ಉಳಿಕೆ ಶೇ 75 ರಷ್ಟು ಮೊತ್ತವನ್ನು 15 ದಿನಗಳ ಒಳಗಾಗಿ ಪಾವತಿಸಬೇಕು. ಯಾವುದೇ ಹಂತದಲ್ಲಿ ಪಾವತಿ ಮೊತ್ತ ವಿಳಂಬ/ ವಿಫಲವಾದರೆ, ಮಾರಾಟ ಪ್ರಕ್ರಿಯೆಯನ್ನು ರದ್ದುಗೊಳಿಸಲಾಗಿದೆಯೆಂದು ಪರಿಗಣಿಸಲಾಗುತ್ತದೆ ಮತ್ತು ಈಗಾಗಲೇ ಪಾವತಿಸಿರುವ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. **5.** ಹರಾಜಿನ ಸ್ವತ್ತು "ಎಲ್ಲಿ ಇದೆಯೋ ಹಾಗೆ" ಮತ್ತು "ಏನಿದೆಯೋ ಹಾಗೆ" ಮತ್ತು "ಯಾವುದೇ ರಿಕೋರ್ಸ್" ಆಧಾರದ ಮೇಲೆ ಹರಾಜು ಪ್ರಕ್ರಿಯೆ ನೆಡೆಯುತ್ತದೆ. ಅಸಕ್ತ ಬಿಡ್ಡುದಾರರರು ಸ್ವತ್ತಿಗೆ ಸಂಬಂದಿಸಿದಂತೆ ಶೀರ್ಷಿಕೆ, ಮಾಲೀಕತ್ವ, ಶಾಸನಬದ್ಧ ಅನುಮೋದನೆಗಳು, ಕ್ಲೈಮು, ಇತ್ಯಾದಿಗಳ ಬಗ್ಗೆ ಖುದ್ದು ವಿಚಾರಿಸಿ ಹರಾಜು ಪ್ರಕ್ರಿಯೆಯಲ್ಲಿ ಬಾಗವಹಿಸಬಹುದಾಗಿದೆ. ನೋಂದಣಿ ಶುಲ್ಕಗಳು, ಸ್ಟ್ಯಾಂಪ್ ಡ್ಯೂಟಿ, ಸೆಸ್, ಮಾರಾಟ ತೆರಿಗೆ, ಮತ್ತು ಯಾವುದೇ ಇತರೆ ಶಾಸನಬದ್ಧ ಬಾಕಿಗಳನ್ನು ಅಥವಾ ಪುರಸಭೆ ತೆರಿಗೆ, ವಿದ್ಯುತ್ ಶುಲ್ಕಗಳು, ಭೂ ಬಳಕೆ ಪರಿವರ್ತನೆ ಶುಲ್ಕಗಳು, ಸೊಸೈಟಿ ಶುಲ್ಕಗಳು, ನಿರ್ವಹಣೆ ಶುಲ್ಕಗಳು, ಅಕ್ರಮ / ಸಕ್ರಮ ಮತ್ತು ಇತರೆ ಪ್ರಾಸಂಗಿಕ ವೆಚ್ಚಗಳನ್ನು ಯಶಸ್ವಿ ಬಿಡ್ಡುದಾರರೇ ಭರಿಸಬೇಕಾಗುತ್ತದೆ. **6.**ಅಸಕ್ತ ಬಿಡ್ಡುದಾರರ ಪರವಾಗಿ ಏಜೆಂಟರು, ಯಾವುದೇ ಪವರ್ ಅಫ್ ಅಟಾರ್ನಿ ಹೊಂದಿರುವವರನ್ನು ಹರಾಜು ಪ್ರಕ್ರಿಯೆಯಲ್ಲಿ ಬಾಗವಹಿಸಲು ಅನುಮತಿಸುವುದಿಲ್ಲ. **7.** ಸಾಲಗಾರರು/ ಜಾಮೀನುದಾರರರಿಗೆ ಈ ಪ್ರಕಟಣೆ ಮೂಲಕ ತಿಳಿಸುವುದೇನೆಂದರೆ ಹರಾಜು ಪ್ರಕ್ರಿಯೆ ದಿನಾಂಕದೊಳಗೆ ಬಾಕಿಯಿರುವ ಮೊತ್ತವನ್ನು ಮರುಪಾವತಿಸಲು ಕೊನೆಯ ಅವಕಾಶವಾಗಿದೆ. **8.** ಯಾವುದೇ ಕಾರಣವನ್ನು ನೀಡದೇ ಹರಾಜನ್ನು ಅಂಗೀಕರಿಸುವ/ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ. **9.** ಬ್ಯಾಂಕಿನ ಅಧಿಕೃತ ಅಧಿಕಾರಿಯವರಿಗೆ ಅಡಮಾನದ ಸ್ವತ್ತಿನ ಬಗ್ಗೆ ಮಾಹಿತಿಯಿರುತ್ತಾದೆಯಾದರೂ, ಅವರ ಗಮನಕ್ಕೆ ಬಾರದ ಯಾವುದೇ ತಪ್ಪು ಮಾಹಿತಿಗಳಿಗೆ ಬ್ಯಾಂಕಿನ ಅಧಿಕೃತ ಅಧಿಕಾರಿಗಳು ಜವಾಬ್ದಾರರಾಗುವುದಿಲ್ಲ.

Note: 1. The intending bidders may contact **Mr. Umapathi G E, CEO Mob No:9845515981**, The Janatha Co Operative Bank Ltd., Malleshwaram Branch. For ascertaining the details of property and contact M/s P.T Security Services Pvt. Ltd, Bangalore. Mr. Kiran Kumar Mob No.8971433644 for inspection of property.Note: 2. Sealed Cover along with EMD and Handed over to the Authorised Officer Mr. Umapathi G E, CEO at HO.Note: 3. If Borrower as paid the amount auction will be cancelled subject to condition Authorized officer will take.

ದಿನಾಂಕ : 08.03.2022
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ



ಇಂದಿನಿಂದ ಚರ್ಮ ಕುಶಲ ವಸ್ತುಪ್ರದರ್ಶನ, ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಮಟ್ಟದ ಚರ್ಮ ಕುಶಲ ಕರ್ಮಿಗಳ ಐದು ದಿನಗಳ ಬೃಹತ್ ಸಮಾವೇಶ, ಚರ್ಮ ಕರಕುಶಲ ವಸ್ತುಪ್ರದರ್ಶನ ಮತ್ತು ಮಾರಾಟ ಶುಕ್ರವಾರದಿಂದ (ಮೇ 13) ಇಲ್ಲಿ ಆರಂಭವಾಗಲಿದೆ.

ಈ ಕುರಿತ ವಿವರವನ್ನು ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಎನ್.ಲಿಂಗಣ್ಣ ಹಾಗೂ ಲಿಡ್ಕರ್ ವ್ಯವಸ್ಥಾಪಕ ನಿರ್ದೇಶಕ ಎಚ್. ನಟರಾಜ್ ಪತ್ರಿಕಾ ಗೋಷ್ಠಿಯಲ್ಲಿ ವಿವರಿಸಿದರು.

ಅರಮನೆ ಮೈದಾನದ 'ತ್ರಿಪುರ ವಾಸಿನಿ' ಅಂಗಳದಲ್ಲಿ ನಡೆಯಲಿರುವ ಈ ಸಮಾವೇಶದಲ್ಲಿ ರಾಜ್ಯದ 31 ಜಿಲ್ಲೆಗಳ ಕುಶಲಕರ್ಮಿಗಳು ಪಾಲ್ಗೊಳ್ಳಲಿದ್ದು, ಸುಮಾರು 200 ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗಿದೆ. ಈ ಸಮಾವೇಶ ಮುಂಬರುವ 'ಬೆಂಗಳೂರು ಲೆದರ್ ಫೇರ್'ಗೆ ಪೂರ್ವಭಾವಿಯಾಗಿರಲಿದೆ ಎಂದು ಅವರು ತಿಳಿಸಿದರು.

ಚರ್ಮ ಕೈಗಾರಿಕೆಯಲ್ಲಿ ತೊಡಗಿರುವ ಸಣ್ಣ ಪ್ರಮಾಣದ ಉದ್ದಿಮೆದಾರರಿಗೆ, ಲೆದರ್ ಫರ್ನಿಚರ್ ಮತ್ತು ಅಪ್‌ಹೋಲ್‌ಸ್ಟೆರಿ (ಮೆತ್ತನೆಯ) ಉತ್ಪಾದಕರನ್ನು ಆಹ್ವಾನಿಸುವುದರಿಂದ ಗ್ರಾಹಕರಿಗೆ ಚರ್ಮ ವಸ್ತುಗಳ ಬಗ್ಗೆ ಅರಿವು, ಕುಶಲಕರ್ಮಿಗಳು ತಯಾರಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವ ಏಜೆನ್ಸಿಗಳನ್ನು ಪರಿಚಯ ಮಾಡಲಾಗುವುದು. ಇನ್ನು ಮುಂದೆ ಕೊಲ್ಹಾಪುರಿ ಚಪ್ಪಲಿಗಳ ಬ್ರಾಂಡ್ ಅನ್ನು ಕರ್ನಾಟಕದ ಬ್ರಾಂಡ್ ಆಗಿ ಪರಿವರ್ತಿಸುವ ದಿಸೆಯಲ್ಲಿ 'ಅಥಣಿ ಬ್ರಾಂಡ್' ಎಂಬ ಹೆಸರಿನಲ್ಲಿ ಮಾರುಕಟ್ಟೆಗೆ ಪರಿಚಯಿಸಲಾಗುತ್ತದೆ. ಇದನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಪಡಿಸಿ ಕರ್ನಾಟಕದ ಕುಶಲಕರ್ಮಿಗಳಿಗೆ ಉತ್ತೇಜನ ನೀಡಲಾಗುವುದು' ಎಂದು ಲಿಂಗಣ್ಣ ಹಾಗೂ ನಟರಾಜ್ ಹೇಳಿದರು.

ಕಚ್ಚಾಮಾಲು ಹಾಗೂ ಯಂತ್ರೋಪಕರಣಗಳ ಲಭ್ಯತೆಯ ಮೂಲಗಳ ಬಗ್ಗೆ ಮಾಹಿತಿ ಒದಗಿಸುವುದು, ಕುಶಲಕರ್ಮಿಗಳಿಗೆ ಆಧುನಿಕ ತಾಂತ್ರಿಕತೆ ಬಗ್ಗೆ ಮತ್ತು ಚರ್ಮ ತಾಂತ್ರಿ ಕತೆಯಲ್ಲಿ ಶೈಕ್ಷಣಿಕ ಅವಕಾಶಗಳ ಬಗ್ಗೆ ಅರಿವು ಮೂಡಿಸುವುದು ಮತ್ತು ರಾಜ್ಯದಲ್ಲಿ ಚರ್ಮೋದ್ಯಮದ ಬೆಳವಣಿಗೆಗೆ ಪೂರಕವಾದ ವಾತಾವರಣ ಕಲ್ಪಿಸುವುದು ಈ ಸಮಾವೇಶದ ಉದ್ದೇಶವಾಗಿರಲಿದೆ. ಮುಂದಿನ ಮೂರು ವರ್ಷಗಳಲ್ಲಿ ₹100 ಕೋಟಿ ವಹಿವಾಟು ನಿರೀಕ್ಷಿಸಲಾಗಿದೆ ಎಂದು ಅವರು ತಿಳಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬೆಳಗ್ಗೆ 11.30ಕ್ಕೆ ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದಾರೆ. ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ರಾಜ್ಯ ಸಚಿವ ಎ.ನಾರಾಯಣ ಸ್ವಾಮಿ ಹಾಗೂ ಇತರ ಪ್ರಮುಖರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ನಾಳೆ ನೀರು ಪೂರೈಕೆಯಲ್ಲಿ ವ್ಯತ್ಯಯ

ಬೆಂಗಳೂರು: ಶ್ರೀಗಂಧಕಾವಲ್ ಪಂಪ್ ಹೌಸ್‌ನಲ್ಲಿರುವ 375 ಎಚ್.ಪಿ ಪಂಪ್ ನಂ-2ನಲ್ಲಿ ದುರಸ್ತಿ ಕಾರ್ಯ ಕೈಗೊಂಡಿದ್ದು, ವಿವಿಧೆಡೆ ಮೇ 14ರಂದು ನೀರು ಪೂರೈಕೆ ವ್ಯತ್ಯಯವಾಗಲಿದೆ.

ಶಿವನಹಳ್ಳಿ, ಮಹಾಗಣಪತಿ ನಗರ, ಮಂಜುನಾಥನಗರ, ಜಡ್ಜಸ್ ಕಾಲೊನಿ, ಬೋವಿ ಕಾಲೊನಿ, ಕಾವೇರಿ ನಗರ, ಕರ್ನಾಟಕ ಲೇಔಟ್, ಗೃಹಲಕ್ಷ್ಮೀ ಲೇಔಟ್, ಎಸ್‌ಬಿಐ ಸ್ಟಾಫ್ ಕಾಲೊನಿ, ಸಂಜಯಗಾಂಧಿ ನಗರ, ಶಕ್ತಿ ಗಣಪತಿ ನಗರ, ಬಿಇಎಂಎಲ್ ಲೇಔಟ್, ಕಿರ್ಲೋಸ್ಕರ್ ಲೇಔಟ್, ಕರೆಕಲ್ಲು, ಜೆ.ಸಿ.ನಗರ, ರಾಜಾಜಿನಗರ ಕೈಗಾರಿಕಾ ಪ್ರದೇಶ, ಕಂಠೀರವ ಕಾಲೊನಿ, ಅಗ್ರಹಾರ ದಾಸರಹಳ್ಳಿ, ರಾಜಾಜಿನಗರ 6ನೇ ಬ್ಲಾಕ್, ಇತರೆ ಪ್ರದೇಶ ಗಳಲ್ಲಿ ನೀರು ಪೂರೈಕೆ ವ್ಯತ್ಯಯ ವಾಗಲಿದೆ ಎಂದು ಜಲಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ನರ್ಸಿಂಗ್ ಕಾಲೇಜುಗಳ ಅಭಿವೃದ್ಧಿ ಬಗ್ಗೆ ಸಿ.ಎಂ ಬೊಮ್ಮಾಯಿ ಭರವಸೆ

'ಗುಣಮಟ್ಟ ಸುಧಾರಣೆಗೆ ಆದ್ಯತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿರುವ ನರ್ಸಿಂಗ್ ಕಾಲೇಜುಗಳ ಗುಣಮಟ್ಟ ಸುಧಾರಣೆಗೆ ಆದ್ಯತೆ ನೀಡಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಆಂಗ್ಲೋ ಇಂಡಿಯನ್ ಯುನಿಟಿ ಸೆಂಟರ್ ಸಹಭಾಗಿತ್ವದಲ್ಲಿ ಗುರುವಾರ ಆಯೋಜಿಸಿದ್ದ 'ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ ಮತ್ತು 20ನೇ ಕರ್ನಾಟಕ ರಾಜ್ಯ ಮಟ್ಟದ ಫ್ಲಾರೆನ್ಸ್ ನೈಟಿಂಗೇಲ್ ಶುಶ್ರೂಷ ಅಧಿಕಾರಿಗಳ ಪ್ರಶಸ್ತಿ– 2020-2021'ರ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.



ನಗರದಲ್ಲಿ ಗುರುವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 'ಫ್ಲಾರೆನ್ಸ್ ನೈಟಿಂಗೇಲ್ ಶುಶ್ರೂಷ ಅಧಿಕಾರಿಗಳ ಪ್ರಶಸ್ತಿ' ಪ್ರದಾನ ಮಾಡಿದರು. ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ಮಾಜಿ ಶಾಸಕ ಇವಾನ್ ನೆಗ್ಗಿ ಇದ್ದರು.

'ಉದಾತ್ತವಾದ ವೃತ್ತಿಯಲ್ಲಿರುವ ಶುಶ್ರೂಷಕರ ಮಾನವೀಯ ಸೇವೆಗೆ ಬೆಲೆ ಕಟ್ಟಲಾಗದು. ವೃತ್ತಿಪರ ಶುಶ್ರೂಷಕರಿಂದ ರೋಗಿಗಳ ಮಾನಸಿಕ ಸ್ಥೈರ್ಯ ಹೆಚ್ಚುತ್ತದಲ್ಲದೇ, ಯುದ್ಧ ಸಂದರ್ಭದಲ್ಲಿ ಫ್ಲಾರೆನ್ಸ್ ನೈಟಿಂಗೇಲ್ ಅವರು ಮಾಡಿದ ಸೇವೆ ವಿಶ್ವಕ್ಕೆ ಮಾದರಿಯಾಗಿದೆ' ಎಂದು ಬೊಮ್ಮಾಯಿ ಅವರು ಸ್ಮರಿಸಿದರು.

'ಉತ್ತರ ಕರ್ನಾಟಕ ಭಾಗದಲ್ಲಿ ಉತ್ತಮ ನರ್ಸಿಂಗ್ ಕಾಲೇಜುಗಳು ಹಾಗೂ ಶುಶ್ರೂಷಕರಿದ್ದಾರೆ. ದೂರದ ಊರುಗಳಲ್ಲಿರುವ ನರ್ಸ್‌ಗಳ ಸೇವೆ ಗುರುತಿಸಿದರೆ, ಆ ಪ್ರದೇಶ ದಲ್ಲಿರುವ ನರ್ಸ್‌ಗಳಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅವರು ಸಲಹೆ ನೀಡಿದರು.

'ಶಿವಮೊಗ್ಗದ ಜಾಹ್ನವಿ ಗೌಡ ಎಂಬ 24 ವರ್ಷದ ಶುಶ್ರೂಷಕಿ ಮೃತಪಟ್ಟಾಗ ತಮ್ಮ ಅಂಗಾಂಗಗಳನ್ನು ದಾನ ಮಾಡುವ ಮೂಲಕ ಆರು ಜನರಿಗೆ ಜೀವದಾನ ಮಾಡಿ, ಎಲ್ಲರಿಗೂ ಮಾದರಿಯಾಗಿದ್ದಾರೆ. ತಮ್ಮ ಮರಣದ ನಂತರವೂ ತನ್ನ ಅಂಗಾಂಗಗಳು ಇತರರಿಗೆ ಉಪಯೋಗವಾಗಲಿ ಎಂಬ ಉದಾತ್ತ ಭಾವ ನಿಜಕ್ಕೂ ಶ್ಲಾಘನೀಯ' ಎಂದು ಅವರು ತಿಳಿಸಿದರು.

ಸಾಮರಸ್ಯ ಪಯಣ: ಸಹಬಾಳ್ವೆ ಸಂದೇಶ

ಪ್ರಜಾವಾಣಿ ವಾರ್ತೆ



ಮೆಜೆಸ್ಟಿಕ್ ಬಿಎಂಟಿಸಿ ನಿಲ್ದಾಣದ ಸ್ಕೈವಾಕ್‌ನಲ್ಲಿ ವಿದ್ಯಾರ್ಥಿಗಳು ಮತ್ತು ಹೋರಾಟಗಾರರು ಸಾಮರಸ್ಯ ನಡಿಗೆ ಕುರಿತಾದ ಜಾಗೃತಿ ಫಲಕ ಪ್ರದರ್ಶಿಸಿದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ಉಡುಪಿಯಲ್ಲಿ ಇದೇ 14ರಂದು ನಡೆಯಲಿರುವ ಸಾಮರಸ್ಯ ನಡಿಗೆಯ ಭಾಗವಾಗಿ ನಗರದಲ್ಲಿ ಗುರುವಾರ ವಿವಿಧ ಸಂಘಟನೆಗಳ ಕಾರ್ಯಕರ್ತರು ಮತ್ತು ವಿದ್ಯಾರ್ಥಿಗಳು ಸಾಮರಸ್ಯ ಪಯಣ ನಡೆಸಿದರು.

ಲಿಂಗರಾಜಪುರ, ವಿಜಯನಗರ, ಜಯನಗರ ಮತ್ತು ಶಿವಾಜಿನಗರದಿಂದ ಫಲಕ ಹಿಡಿದು ಬಿಎಂಟಿಸಿ ಬಸ್‌ಗಳಲ್ಲಿ ವಿದ್ಯಾರ್ಥಿಗಳು ಮತ್ತು ಹೋರಾಟಗಾರರು ಪ್ರಯಾಣಿಸಿದರು.


ವಿಜಯನಗರದಿಂದ ಹೋರಾಟಗಾರ್ತಿ ದು. ಸರಸ್ವತಿ, ಕರ್ನಾಟಕ ವಿದ್ಯಾರ್ಥಿ ಸಂಘಟನೆ ಮತ್ತು ಬಹುತ್ವ ಕರ್ನಾಟಕದ ಕಾರ್ಯಕರ್ತರು, ಜಯನಗರದಿಂದ ಸ್ತ್ರೀ ಜಾಗೃತಿ ಸಮಿತಿಯ ಗೀತಾ ಮೆನನ್, ಹೋರಾಟಗಾರ ವಿನಯ್ ಶ್ರೀನಿವಾಸ್, ಶಿವಾಜಿನಗರದಿಂದ ಅಖಿಲ ಭಾರತ ವಿದ್ಯಾರ್ಥಿ ಸಂಘಟನೆ ಕಾರ್ಯಕರ್ತರ ತಂಡಗಳು ಮೆಜೆಸ್ಟಿಕ್‌ಗೆ ಬಂದಿಳಿದವು.

ಬಿಎಂಟಿಸಿ ಬಸ್ ನಿಲ್ದಾಣದ ಪ್ಲಾಟ್ ಫಾರಂಗಳು, ಸ್ಕೈವಾಕ್‌ಗಳ ಮೇಲೆ ಸಾಮರಸ್ಯದ ಫಲಕಗಳನ್ನು ಹಿಡಿದು ಜಾಗೃತಿ ಮೂಡಿಸಿದರು. ಬಸ್‌ನಲ್ಲಿ ಮತ್ತು ಬಸ್ ನಿಲ್ದಾಣಗಳಲ್ಲಿ ಸಾಮರಸ್ಯದ ಗೀತೆಗಳನ್ನು ಹಾಡುವ ಮೂಲಕ ಸಹಬಾಳ್ವೆಯ ಸಂದೇಶ ಸಾರಿದರು. ಜನಾರ್ದನ ಕೆಸರುಗದ್ದೆ ಅವರು ಬರೆದ 'ಪ್ರೀತಿಯ ಗಾಳಿ ಬೀಸುತಿದೆ' ಪದ್ಯ ಸೇರಿ ಕಾವ್ಯ ಸಂಜೆ ತಂಡದಿಂದ ರಚಿಸಿರುವ ಕವಿತೆಗಳನ್ನು ಹಾಡಲಾಯಿತು.

'ಬಸ್ ಮತ್ತು ಬಸ್ ನಿಲ್ದಾಣಗಳಲ್ಲಿ ಹಲವು ಜನರನ್ನು ಭೇಟಿಯಾಗಿ ಸಾಮರಸ್ಯದ ಬಗ್ಗೆ ಮಾತನಾಡಿದೆವು. ಎಲ್ಲರಿಂದಲೂ ಸಾಮರಸ್ಯ ನಡಿಗೆ ಬಗ್ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಎಲ್ಲರಿಗೂ ಸಾಮರಸ್ಯ ಬೇಕು ಎಂಬುದು ಅರ್ಥವಾಯಿತು' ಎಂದು ವಿನಯ್ ಶ್ರೀನಿವಾಸ್ 'ಪ್ರಜಾವಾಣಿ'ಗೆ ತಿಳಿಸಿದರು.

ನವಭಾರತಕ್ಕಾಗಿ ಸರ್ಕಾರದ ಜತೆ ಕೈಜೋಡಿಸಿ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ



ಸಮ್ಮೇಳನದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ಸಮ್ಮೇಳನದ ಸಂಘಟನಾ ಸಮಿತಿ ಪ್ರಧಾನ ಕಾರ್ಯದರ್ಶಿ ಎಂ. ರವಿಶಂಕರ್, ಸಮಿತಿ ಅಧ್ಯಕ್ಷ ಬಿ.ಎ. ಮಧುಕರ್, ಸಮ್ಮೇಳನದ ಅಧ್ಯಕ್ಷ ಟಿ.ಎಸ್ ಗುರುರಾಜ್ ಹಾಗೂ 'ಇನ್‌ಸ್ಟ್ರಕ್ಟ್' ಸಂಸ್ಥೆ ಅಧ್ಯಕ್ಷ ಕೆ.ಎಲ್ ಮೋಹನ್ ರಾವ್ ಇದ್ದರು – ಪ್ರಜಾವಾಣಿ ಚಿತ್ರ

ಬೆಂಗಳೂರು: 'ತಂತ್ರಜ್ಞಾನ ಕ್ಷೇತ್ರದಲ್ಲಿ ಕರ್ನಾಟಕ ಯಾವಾಗಲೂ ಮುಂಚೂಣಿಯಲ್ಲಿದೆ. ಭವಿಷ್ಯದಲ್ಲೂ ಈ ಸ್ಥಾನವನ್ನು ಉಳಿಸಿಕೊಳ್ಳಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ವಾಸ ವ್ಯಕ್ತಪಡಿಸಿದರು.

ನಗರದಲ್ಲಿ ಗುರುವಾರ ಆರಂಭವಾದ ಸುರಂಗ ಮತ್ತು ಭೂಗತ ನಿರ್ಮಾಣ ಕುರಿತ ಎರಡು ದಿನಗಳ ಅಂತರ ರಾಷ್ಟ್ರೀಯ ಸಮ್ಮೇಳನ 'ನಿರ್ಮಾಣ–2022'ಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 'ನವಭಾರತಕ್ಕಾಗಿ ನವ ಕರ್ನಾಟಕದ ನಿರ್ಮಾಣದ ಧ್ಯೇಯವನ್ನು ಸಾಕಾರಗೊಳಿಸಲು ನಿರ್ಮಾಣ ಸಂಸ್ಥೆಗಳು ಸರ್ಕಾರದೊಂದಿಗೆ ಕೈಜೋಡಿಸಬೇಕು' ಎಂದು ಹೇಳಿದರು.

'ನಮ್ಮ ಮುಂದೆ ಸವಾಲುಗಳು ಸಾಕಷ್ಟಿವೆ. ಅದೇ ರೀತಿ, ತಂತ್ರಜ್ಞಾನವೂ ಬೆಳೆದಿದೆ. ಬದಲಾಗುತ್ತಿರುವ ಕಾಲಘಟ್ಟದಲ್ಲಿ ಎದುರಾಗುತ್ತಿರುವ ಸವಾಲುಗಳನ್ನು ತಂತ್ರಜ್ಞಾನದ ನೆರವಿನೊಂದಿಗೆ ಪರಿಹರಿಸಿಕೊಳ್ಳಬೇಕು. ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳು ಒಗ್ಗೂಡಿ ಕಾರ್ಯನಿರ್ವಹಿಸಬೇಕು' ಎಂದು ಸಲಹೆ ನೀಡಿದರು.

'ಸುರಂಗಮಾರ್ಗ ನಿರ್ಮಾಣ ಹೊಸದಲ್ಲ. ಸುರಂಗ ಕೊರೆಯುವ ಯಂತ್ರಗಳು ಇಲ್ಲದಿದ್ದಾಗಲೂ ಕಾಮಗಾರಿಗಳು ನಡೆದಿವೆ. 1970ರಿಂದಲೂ ರಾಜ್ಯದಲ್ಲಿ ಸುರಂಗಗಳನ್ನು ನಿರ್ಮಿಸಲಾಗಿದೆ. ಆದರೆ, ಅಂದು ನೀರಾವರಿ ಮತ್ತಿತರ ಉದ್ದೇಶಗಳಿಗೆ ಸುರಂಗಗಳು ನಿರ್ಮಾಣಗೊಳ್ಳುತ್ತಿದ್ದವು. ಈಗ ಮಹಾನಗರಗಳ ದಟ್ಟಣೆ ಪ್ರದೇಶದಲ್ಲಿ ಮೆಟ್ರೊ ಮತ್ತು ಅನಿಲ ಸಂಪರ್ಕ ಸೇರಿದಂತೆ ಹಲವು ಉದ್ದೇಶಗಳಿಗೆ ಸುರಂಗ ನಿರ್ಮಿಸುವುದು ದೊಡ್ಡ ಸವಾಲಾಗಿದೆ' ಎಂದು ಅವರು ಅಭಿಪ್ರಾಯಪಟ್ಟರು.

'ಸುರಂಗ ನಿರ್ಮಾಣ ಕಾರ್ಯದಲ್ಲಿ ಕಾರ್ಮಿಕರ ಪಾತ್ರ ದೊಡ್ಡದು. ಜೀವದ ಹಂಗು ತೊರೆದು ಅವರು ಕಾರ್ಯನಿರ್ವಹಿಸುತ್ತಾರೆ. ಕಾರ್ಮಿಕರು ನಿಜವಾದ ದೇಶದ ಆಸ್ತಿ. ಇವರ ಹಿತರಕ್ಷಣೆ ಹಾಗೂ ಸುರಕ್ಷತೆಗೆ ಆದ್ಯತೆ ನೀಡಬೇಕು' ಎಂದು ಹೇಳಿದರು.

ಸಮ್ಮೇಳನದಲ್ಲಿ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್, ರೈಲ್ವೆ ಮೂಲಸೌಕರ್ಯಗಳ ಅಭಿವೃದ್ಧಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಅಮಿತ್ ಗರ್ಗ್, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ. ಕರಿಸಿದ್ದಪ್ಪ ಇದ್ದರು.

ಶಿವರಾಮ ಕಾರಂತ ಬಡಾವಣೆ: ಇಂದಿನಿಂದ ಪ್ರಮಾಣಪತ್ರ

ಮತ್ತೆ 480 ಕಟ್ಟಡ ಸಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಭಿವೃದ್ಧಿ (ಬಿಡಿಎ) ಪಡಿಸುತ್ತಿರುವ ಶಿವರಾಮ ಕಾರಂತ ಬಡಾವಣೆಗೆ ಅಧಿಸೂಚನೆ ಹೊರಡಿಸಲಾದ ಪ್ರದೇಶದಲ್ಲಿ ಮತ್ತೆ 480 ಕಟ್ಟಡಗಳನ್ನು ಸಕ್ರಮಗೊಳಿಸಿ ಸುಪ್ರೀಂ ಕೋರ್ಟ್ ಆದೇಶ ಮಾಡಿದೆ. ಈವರೆಗೆ ಒಟ್ಟು 2,825 ಕಟ್ಟಡಗಳನ್ನು ಸಕ್ರಮಗೊಳಿಸಿದಂತಾಗಿದೆ.

2018ಕ್ಕಿಂತ ಮುಂಚೆ ಸ್ಥಳೀಯ ಪ್ರಾಧಿಕಾರದ ಅನುಮತಿ ಪಡೆದು ಕಟ್ಟಡ ಕಟ್ಟಿರುವ ಜಮೀನು ಮಾಲೀಕರು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿ ನ್ಯಾ.ಎ.ವಿ. ಚಂದ್ರಶೇಖರ್ ಸಮಿತಿ 14ನೇ ವರದಿಯನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿತ್ತು. ಇದನ್ನು ಅಂಗೀಕರಿಸಿರುವ ಸುಪ್ರೀಂ ಕೋರ್ಟ್ ಈ ಕುರಿತು ಆದೇಶಿಸಿದೆ.

ನ್ಯಾಯಾಲಯದ ಆದೇಶದಂತೆ ಈ ಬಡಾವಣೆ ವ್ಯಾಪ್ತಿಯ ಕಟ್ಟಡಗಳ ಮಾಲೀಕರಿಗೆ ನ್ಯಾ.ಎ.ವಿ. ಚಂದ್ರಶೇಖರ್ ಸಮಿತಿ ನೇತೃತ್ವದಲ್ಲಿ ಬಿಡಿಎಯು ಸಕ್ರಮ ಪ್ರಮಾಣಪತ್ರವನ್ನು ವಿತರಿಸಬೇಕು. ಈ ಮಾಲೀಕರಿಗೆ ಕಾನೂನುಬದ್ಧವಾಗಿ ಸುಧಾರಣಾ ಶುಲ್ಕ ವಿಧಿಸಬೇಕು ಎಂದೂ ಸುಪ್ರೀಂ ಕೋರ್ಟ್ ಸೂಚಿಸಿದೆ.

ಪ್ರಾಧಿಕಾರವು ಮೇಡಿ ಅಗ್ರಹಾರದ ಉರ್ದು ಪ್ರಾಥಮಿಕ ಶಾಲೆಯಲ್ಲಿ ಇದೇ 13ರಿಂದ (ಶುಕ್ರವಾರ) ಕಟ್ಟಡಗಳ ಮಾಲೀಕರಿಗೆ ಸಕ್ರಮ ಪ್ರಮಾಣಪತ್ರವನ್ನು ವಿತರಿಸಲಿದೆ. ಸಕ್ರಮ ಪ್ರಮಾಣಪತ್ರವನ್ನು ಪಡೆಯಲು ಫಲಾನುಭವಿಗಳು ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ, ಆಧಾರ್‌ಕಾರ್ಡ್, ಸಮಿತಿಯಿಂದ ಬಂದಿರುವ ಎಸ್.ಎಂ.ಎಸ್, ಸಮಿತಿಯು ನೀಡಿರುವ ರಶೀದಿಯನ್ನು ಸಲ್ಲಿಸಬೇಕು ಎಂದು ಸಮಿತಿಯು ಪ್ರಕಟಣೆಯಲ್ಲಿ ತಿಳಿಸಿದೆ.

ವಲಗೇರಹಳ್ಳಿಯಲ್ಲಿ ಕೆಎಚ್‌ಬಿಯಿಂದ ಮಲ್ಟಿಪ್ಲೆಕ್ಸ್

ಬೆಂಗಳೂರು: ಕರ್ನಾಟಕ ಗೃಹ ಮಂಡಳಿಯಿಂದ (ಕೆಎಚ್‌ಬಿ) ನಗರದ ಕೆಂಗೇರಿ ಹೋಬಳಿಯ ವಲಗೇರಹಳ್ಳಿಯಲ್ಲಿ ₹ 150 ಕೋಟಿ ವೆಚ್ಚದಲ್ಲಿ ವಾಣಿಜ್ಯ ಸಂಕೀರ್ಣ ಮತ್ತು ಮಲ್ಟಿಪ್ಲೆಕ್ಸ್ ನಿರ್ಮಿಸುವ ಕಾಮಗಾರಿಯ ಅಂದಾಜು ಪಟ್ಟಿಗೆ ಗುರುವಾರ ನಡೆದ ಸಂಪುಟ ಸಭೆಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

'ವಲಗೇರಹಳ್ಳಿಯ ಸರ್ವೆ ನಂಬರ್ 20/8ರಲ್ಲಿ ಕೆಎಚ್‌ಬಿ ವಾಣಿಜ್ಯ ಸಂಕೀರ್ಣ ಮತ್ತು ಮಲ್ಟಿಪ್ಲೆಕ್ಸ್ ನಿರ್ಮಿಸಲಿದೆ' ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಸಂಪುಟ ಸಭೆಯ ಬಳಿಕ ಮಾಹಿತಿ ನೀಡಿದರು.

ವೆಚ್ಚ ಹೆಚ್ಚಳಕ್ಕೆ ಒಪ್ಪಿಗೆ: ಹಳೆ ವಿಮಾನ ನಿಲ್ದಾಣ ರಸ್ತೆಯಿಂದ ಹೋಪ್ ಫಾರ್ಮ್‌ವರೆಗಿನದ ಸಿಗ್ನಲ್ ರಹಿತ ಕಾರಿಡಾರ್ ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿಯ ವೆಚ್ಚವನ್ನು ₹ 13.12 ಕೋಟಿಯಷ್ಟು ಹೆಚ್ಚಳ ಮಾಡುವ ಪ್ರಸ್ತಾವಕ್ಕೂ ಸಂಪುಟ ಒಪ್ಪಿಗೆ ಸೂಚಿಸಿದೆ.

'ಈ ಮೊದಲು ₹ 150 ಕೋಟಿ ವೆಚ್ಚದ ಕಾಮಗಾರಿಗೆ ಒಪ್ಪಿಗೆ ನೀಡಲಾಗಿತ್ತು. ಗುಂಡಿ ಮುಚ್ಚುವುದು ಸೇರಿದಂತೆ ಕೆಲವು ಅಂಶಗಳು ಅಂದಾಜು ಪಟ್ಟಿಯಲ್ಲಿರಲಿಲ್ಲ ಎಂಬ ಕಾರಣದಿಂದ ಅದನ್ನು ₹ 163.12 ಕೋಟಿಗೆ ಹೆಚ್ಚಳ ಮಾಡುವ ಪ್ರಸ್ತಾವಕ್ಕೆ ಒಪ್ಪಿಗೆ ನೀಡಲಾಗಿದೆ' ಎಂದು ಸಚಿವರು ತಿಳಿಸಿದರು.

2587 ವಿನೂತನ ವಿನ್ಯಾಸದ ಟ್ರಾನ್ಸ್‌ಫಾರ್ಮರ್

ಬೆಂಗಳೂರು: ಪ್ರಸ್ತುತ ಕೈಗೊಂಡಿರುವ ಟ್ರಾನ್ಸ್‌ಫಾರ್ಮರ್ ನಿರ್ವಹಣಾ ಅಭಿಯಾನದ ಜತೆಗೆ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ 2587 ವಿನೂತನ ವಿನ್ಯಾಸದ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಕಾರ್ಯವನ್ನು ಬೆಸ್ಕಾಂ ಕೈಗೊಂಡಿದೆ.

ಪಾದಚಾರಿ ರಸ್ತೆ ಹಾಗೂ ಚರಂಡಿ ಮೇಲಿರುವ ಎರಡು, ಮೂರು ಅಥವಾ ನಾಲ್ಕು ಕಂಬಗಳ ಮೇಲಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ವಿನೂತನ ವಿನ್ಯಾಸದ ಮೂಲಕ 11 ಮೀಟರ್ ಎತ್ತರದ 'ಸ್ಪನ್ ಪೋಲ್' ಉಪಯೋಗಿಸಿ ಅಳವಡಿಸಲಾಗುತ್ತಿದೆ ಎಂದು ಬೆಸ್ಕಾಂ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಈ ಕ್ರಮದಿಂದಾಗಿ ಪಾದಚಾರಿ ರಸ್ತೆಗಳಲ್ಲಿ ಜನರ ಸುಗಮ ಸಂಚಾರಕ್ಕೆ ಸಹಕಾರಿಯಾಗಲಿದೆ. ಅಲ್ಲದೆ ಟ್ರಾನ್ಸ್‌ಫಾರ್ಮರ್‌ಗಳಿಂದ ಸಂಭವಿಸಹುದಾದ ವಿದ್ಯುತ್ ಅವಘಡಗಳನ್ನು ತಪ್ಪಿಸಬಹುದಾಗಿದೆ. 2587 ವಿದ್ಯುತ್ ಪರಿವರ್ತಕಗಳು ಬೆಂಗಳೂರು ನಗರದ ಪಾದಚಾರಿ ಮಾರ್ಗ ಹಾಗೂ ಚರಂಡಿ ಮೇಲಿರುವುದನ್ನು ಬೆಸ್ಕಾಂ ಮತ್ತು ಬಿಬಿಎಂಪಿಯ ಅಧಿಕಾರಿಗಳು ಜಂಟಿ ಸಮೀಕ್ಷೆ ಮಾಡಿ ಗುರುತಿಸಿದ್ದಾರೆ ಎಂದು ವಿವರಿಸಿದ್ದಾರೆ.

ಬೆಸ್ಕಾಂ ವ್ಯಾಪ್ತಿಯ 8 ಜಿಲ್ಲೆಗಳಲ್ಲಿ ಏಕಕಾಲದಲ್ಲಿ ಈ ಅಭಿಯಾನ ನಡೆಸುತ್ತಿದ್ದು, ಬೆಂಗಳೂರು ನಗರ ಜಿಲ್ಲೆಯೊಂದರಲ್ಲಿ 1719 ಟ್ರಾನ್ಸ್‌ಫಾರ್ಮರ್‌ಗಳ ನಿರ್ವಹಣೆಯನ್ನು ಬೆಸ್ಕಾಂ ಮುಗಿಸಿದೆ.

ಗಾಣಿಗರ ಸಂಸ್ಥಾನ ಮಠ ಉದ್ಘಾಟನೆ, ಪೀಠಾರೋಹಣ 15ಕ್ಕೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಕ್ಷೇತ್ರ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದ ಉದ್ಘಾಟನೆ ಹಾಗೂ ಪ್ರಥಮ ಗುರುಗಳ ಪೀಠಾರೋಹಣ, ಪಟ್ಟಾಭಿಷೇಕ ಮಹೋತ್ಸವ ಮೇ 15ರಂದು ಬೆಳಿಗ್ಗೆ 11.50ಕ್ಕೆ ಬೆಂಗಳೂರು ಉತ್ತರ ತಾಲ್ಲೂಕಿನ ನಗರೂರು ಗ್ರಾಮದಲ್ಲಿ ನಡೆಯಲಿದೆ' ಎಂದು ಗಾಣಿಗ ಸಮುದಾಯದ ಮುಖಂಡ ಅನಂತು ತಿಳಿಸಿದರು.

'ಸಮಾರಂಭವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಠವನ್ನು ಶಾಸಕ ಬಿ.ಎಸ್.ಯಡಿಯೂರಪ್ಪ ಉದ್ಘಾಟಿಸುವರು. ಬಿಜೆಪಿ ನಾಯಕ ಎಸ್.ಎಂ.ಕೃಷ್ಣ ಆಶೀರ್ವಾದ ನುಡಿ ಆಡುವರು. ಮುಖ್ಯ ಅತಿಥಿಗಳಾಗಿ ಸಿದ್ದರಾಮಯ್ಯ, ಎಚ್.ಡಿ.ಕುಮಾರಸ್ವಾಮಿ, ಡಿ.ವಿ. ಸದಾನಂದಗೌಡ, ಸಿ.ಟಿ.ರವಿ, ಡಿ.ಕೆ.ಶಿವಕುಮಾರ್, ಆರ್. ಅಶೋಕ್, ವಿ.ಸೋಮಣ್ಣ, ಕೆ.ಎಸ್.ಈಶ್ವರಪ್ಪ, ಕೋಟ ಶ್ರೀನಿವಾಸ ಪೂಜಾರಿ ಭಾಗವಹಿಸುವರು' ಎಂದರು.

'ಮಠದ ಪ್ರಥಮ ಪೀಠಾಧ್ಯಕ್ಷ ಪೂರ್ಣಾನಂದ ಪುರಿ ಸ್ವಾಮೀಜಿ (ಬಿ.ಜೆ.ಪುಟ್ಟಸ್ವಾಮಿ) ಅವರಿಗೆ ಪಟ್ಟಾಭಿಷೇಕ ನೆರವೇರಿಸಲಾಗುತ್ತದೆ. ರಾಜ್ಯದ 20 ಸ್ವಾಮೀಜಿಗಳು ಪಾಲ್ಗೊಳ್ಳಲಿದ್ದಾರೆ. ಇದರಲ್ಲಿ ಎಲ್ಲ ಜನಾಂಗದ ಜನರು ಪಾಲ್ಗೊಳ್ಳಬೇಕು' ಎಂದು ಮನವಿ ಮಾಡಿದರು.

ಜೆಎನ್‌ಸಿಎಎಸ್‌ಆರ್ ವಿಜ್ಞಾನಿಗಳಿಂದ ಅಭಿವೃದ್ಧಿ

ತಂತ್ರಜ್ಞಾನ ವರ್ಗಾವಣೆ ಒಪ್ಪಂದಕ್ಕೆ ಸಹಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಕ್ಕೂರಿನ ಜವಾಹರ ಲಾಲ್ ನೆಹರೂ ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರವು (ಜೆಎನ್‌ಸಿಎಎಸ್‌ಆರ್) ಸಂಶೋಧನೆ ಮೂಲಕ ಅಭಿವೃದ್ಧಿಪಡಿಸಿದ ಎರಡು ತಂತ್ರಜ್ಞಾನಗಳನ್ನು ಕೈಗಾರಿಕೆಗಳಿಗೆ ಹಸ್ತಾಂತರಿಸುವ ಒಪ್ಪಂದಕ್ಕೆ ಗುರುವಾರ ಸಹಿ ಹಾಕಲಾಯಿತು.

'ಪ್ರಯೋಗಾಲಯದಲ್ಲಿ ಕೈಗೊಂಡ ಸಂಶೋಧನೆಗಳು ಕೈಗಾರಿಕೆಗಳಿಗೆ ತಲುಪುತ್ತಿರುವುದು ಸಂತೋಷದ ಸಂಗತಿ' ಎಂದು ಪ್ರೊ. ಸಿ.ಎನ್.ಆರ್ ರಾವ್ ಮೆಚ್ಚುಗೆ ವ್ಯಕ್ತಪಡಿಸಿದರು.

ಆ್ಯಕ್ಸಿಲರ್ ವೆಂಚುರ್ಸ್ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕ ಮತ್ತು ಇನ್ಫೊಸಿಸ್ ಸಹ ಸಂಸ್ಥಾಪಕ ಕ್ರಿಸ್ ಗೋಪಾಲಕೃಷ್ಣ, 'ಶಿಕ್ಷಣ ಮತ್ತು ಸಂಶೋಧನೆಗಳು ದೇಶದ ಅಭಿವೃದ್ಧಿಗೆ ತಳಪಾಯವನ್ನು ಹಾಕುತ್ತವೆ. ಸಂಶೋಧನಾ ಕ್ಷೇತ್ರದಲ್ಲಿ ಖಾಸಗಿ ವಲಯವು ಹೂಡಿಕೆ ಮಾಡಬೇಕು' ಎಂದು ಹೇಳಿದರು. ಜೆಎನ್‌ಸಿಎಎಸ್‌ಆರ್ ಅಧ್ಯಕ್ಷ ಪ್ರೊ. ಜಿ.ಯು. ಕುಲಕರ್ಣಿ ಇದ್ದರು.

ವಿಜ್ಞಾನಿ ಪ್ರೊ.ಟಿ. ಗೋವಿಂದರಾಜು ಮತ್ತು ಅವರ ತಂಡ ಅಭಿವೃದ್ಧಿಪಡಿಸಿರುವ ಔಷಧವನ್ನು ಮರೆಗುಳಿ ಕಾಯಿಲೆಗೆ ಚಿಕಿತ್ಸೆ ನೀಡಲು ಸಹಕಾರಿಯಾಗಲಿದೆ. ಈ ಸಂಶೋಧನಾ ಕಾರ್ಯಕ್ಕೆ ಹಕ್ಕುಸ್ವಾಮ್ಯ ಪಡೆದುಕೊಳ್ಳಲಾಗಿದೆ.

ದೇಶದಲ್ಲಿ ಮರೆಗುಳಿ ಕಾಯಿಲೆ ಹೆಚ್ಚು ಮಂದಿಯನ್ನು ಬಾಧಿಸಲಿದೆ ಎಂದು ಅಧ್ಯಯನಗಳು ತಿಳಿಸಿವೆ. ದೇಶದಲ್ಲಿ ಲಭ್ಯ ಇರುವ ಔಷಧಗಳು ತಾತ್ಕಾಲಿಕ ಪರಿಹಾರ ನೀಡುತ್ತಿವೆ. ಈಗ ಅಭಿವೃದ್ಧಿಪಡಿಸಿರುವ ಔಷಧದಿಂದ ಮರೆಗುಳಿ ಕಾಯಿಲೆ ನಿವಾರಿಸಲು ನೆರವಾಗಲಿದೆ ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ದೆಹಲಿಯ ಹಂಸ ಬಯೋಫಾರ್ಮಾ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿ ಈ ಔಷಧವನ್ನು ಪಡೆಯಲು ಜೆಎನ್‌ಸಿಎಎಸ್‌ಆರ್ ಜತೆ ಒಪ್ಪಂದ ಮಾಡಿಕೊಂಡಿದೆ. ಈ ಔಷಧವನ್ನು ಮತ್ತಷ್ಟು ಕ್ಲಿನಿಕಲ್ ಪ್ರಯೋಗಾಲಯದ ಮೂಲಕ ಅಭಿವೃದ್ಧಿಪಡಿಸುವುದಾಗಿ ಕಂಪನಿ ತಿಳಿಸಿದೆ. ಕಂಪನಿಯ ರಾಮ ಮುಕುಂದ ಇದ್ದರು.

ಡಾ.ಎಸ್.ವಿ. ದಿವಾಕರ್ ಅವರ ನೇತೃತ್ವದ ಇನ್ನೊಂದು ತಂಡ ಮೊಬೈಲ್ ಆಮ್ಲಜನಕ ಕಾನ್ಸಂಟ್ರೇಟರ್ ಅಭಿವೃದ್ಧಿಪಡಿಸಿದೆ. ಯಾವುದೇ ಸ್ಥಳದಲ್ಲಿ ಈ ಉಪಕರಣವನ್ನು ಅಳವಡಿಸಬಹುದಾಗಿದೆ. ಇದಕ್ಕೆ 'ಆಕ್ಸಿಜನಿ' ಎಂದು ಹೆಸರಿಡಲಾಗಿದೆ. ರುಗ್ಣ ಅಭಿಲೇಖ್‌ಗೆ ಈ ಕಾನ್ಸಂಟ್ರೇಟರ್ ತಂತ್ರಜ್ಞಾನದ ಹಕ್ಕುಗಳನ್ನು ವರ್ಗಾವಣೆ ಮಾಡಿದೆ.

ವೈದ್ಯರ ವರ್ಗಾವಣೆ ಹಿಂಪಡೆದ ಆದೇಶಕ್ಕೆ ತಡೆ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಇಬ್ಬರು ಪ್ರಾಧ್ಯಾಪಕರನ್ನು 2019ರಲ್ಲಿ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಗೆ ಕಾಯಂ ಆಗಿ ವರ್ಗಾವಣೆ ಮಾಡಲಾಗಿದ್ದ ಆದೇಶವನ್ನು ಏಕಾಏಕಿ ಹಿಂಪಡೆದಿರುವುದನ್ನು ಪ್ರಶ್ನಿಸಲಾದ ರಿಟ್ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಅಂಗರಚನಾ ಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಡಾ.ಮೀನಾಕ್ಷಿ ಪಾರ್ಥಸಾರಥಿ ಮತ್ತು ಶರೀರ ಕ್ರಿಯಾಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಶ್ರೀನಿವಾಸ ನಾಯ್ಡು ಸಲ್ಲಿಸಿರುವ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಾಜರಾಗಿದ್ದ ಹಿರಿಯ ವಕೀಲ ಡಿ.ಆರ್.ರವಿಶಂಕರ್, 'ಆಡಳಿತಾತ್ಮಕ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಅರ್ಜಿದಾರರ ವರ್ಗಾವಣೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ ಎಂಬ ರಾಜ್ಯ ವೈದ್ಯಕೀಯ ಶಿಕ್ಷಣ ಇಲಾಖೆಯ ಆದೇಶ ಕಾನೂನು ಬಾಹಿರವಾಗಿದೆ. ಆದ್ದರಿಂದ, ಕೂಡಲೇ ಈ ಆದೇಶವನ್ನು ರದ್ದುಪಡಿಸಬೇಕು' ಎಂದು ಕೋರಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, 'ಅರ್ಜಿದಾರರನ್ನು ಈಗಿರುವ ಸ್ಥಾನದಿಂದ ಪಲ್ಲಟಗೊಳಿಸಬಾರದು' ಎಂದು ಮಧ್ಯಂತರ ಆದೇಶ ನೀಡಿ, ಪ್ರತಿವಾದಿಗಳಾದ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಡೀನ್ ಮತ್ತು ನಿರ್ದೇಶಕರು ಹಾಗೂ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಯ ಡೀನ್ ಮತ್ತು ನಿರ್ದೇಶಕರಿಗೂ ನೋಟಿಸ್ ಜಾರಿಗೊಳಿಸಿತು. ವಿಚಾರಣೆಯನ್ನು ಇದೇ 25ಕ್ಕೆ ಮುಂದೂಡಲಾಗಿದೆ.

ನಗರದಲ್ಲಿ ಇಂದು

ಕಲಾವಿದ ಬಿ.ಜಯರಾಂ ಅವರ ಇತ್ತೀಚಿನ ವರ್ಣ ಹಾಗೂ ರೇಖಾಚಿತ್ರಗಳ ಪ್ರದರ್ಶನ: ಉದ್ಘಾಟನೆ– ಲಲಿತಕಲಾ ಅಕಾಡೆಮಿ ಅಧ್ಯಕ್ಷ ಡಿ.ಮಹೇಂದ್ರ, ಮುಖ್ಯ ಅತಿಥಿಗಳು– ಕಲಾವಿದ ಕೆ.ಆಚಾರ್ಯ, ಕಲಾಪೋಷಕ ಅರಕಲಿ ವೆಂಕಟೇಶ್, ಬಿ.ಸತ್ಯನಾರಾಯಣ, ಸಹಯೋಗ– ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ– ವರ್ಲ್ಡ್ ಕಲ್ಚರಲ್ ಸೆಂಟರ್, ಡಿ.ವಿ.ಜಿ ರಸ್ತೆ, ಸಂಜೆ 5.30.

ವಿಶ್ವ ಮಾದಿಗ ದಿನದ ಅಂಗವಾಗಿ ಮಾದಿಗ ಸಮುದಾಯದ ಚಿಂತಕರ ಮತ್ತು ಬುದ್ಧಿಜೀವಿಗಳ ಕಾರ್ಯಾಗಾರ: ಉದ್ಘಾಟನೆ– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಭಾಗವಹಿಸುವವರು– ಕೇಂದ್ರದ ವಾರ್ತಾ ಮತ್ತು ಪ್ರಸಾರ ಸಚಿವ ಎಲ್. ಮುರುಗನ್, ಆಯೋಜನೆ– ರಾಷ್ಟ್ರೀಯ ಚಿಂತಕರ ವೇದಿಕೆ, ಸ್ಥಳ– ಲಲಿತ್ ಅಶೋಕ್ ಹೋಟೆಲ್, ಬೆಳಿಗ್ಗೆ 10

ನರಸಿಂಹ ಜಯಂತಿ ದಾಸವಾಣಿ: ಸ್ಥಳ– ತ್ಯಾಗರಾಜನಗರದ ಕಂಬದ ನರಸಿಂಹಸ್ವಾಮಿ ದೇವಸ್ಥಾನ, ಸಂಜೆ 6

ಶ್ರೀ ವೈಯಾಕರಣಿ ಗರಣಿ ಕೃಷ್ಣಾಚಾರ್ಯ ದತ್ತಿ ಉಪನ್ಯಾಸ: ಶಂಕರ ಮೊಕಾಶಿ ಪುಣೇಕರ ಬಗ್ಗೆ ಉಪನ್ಯಾಸ– ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತಪ್ರತಿ ಸಂಯೋಜನಾಧಿಕಾರಿ ಬಿ.ಎಸ್. ಗುರುಪ್ರಸಾದ್, ಅಧ್ಯಕ್ಷತೆ– ಡಾ. ಬೈರಮಂಗಲ ರಾಮೇಗೌಡ, ಆಯೋಜನೆ– ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ– ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಸಂಜೆ 5

ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದ ಅಂಗವಾಗಿ ಕಲಾ ವಸ್ತು ಪ್ರದರ್ಶನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ: ಉದ್ಘಾಟನೆ– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾರ್ಯದರ್ಶಿ ಎಂ.ಟಿ.ರೇಜು, ಅಧ್ಯಕ್ಷತೆ– ಬಾಲ ಭವನ ಸೊಸೈಟಿ ಅಧ್ಯಕ್ಷೆ ಚಿಕ್ಕಮ್ಮ ಬಸವರಾಜು, ಸ್ಥಳ– ಕಬ್ಬನ್ ಉದ್ಯಾನದ ಬಾಲಭವನ, ಬೆಳಿಗ್ಗೆ 10.30

ವಿಧುಶೇಖರ ಭಾರತಿ ಸನ್ನಿದಾನಂಗಳವರ ವಿಜಯಯಾತ್ರೆ ಅಂಗವಾಗಿ ಅವರ ವಿಶೇಷ ಮೆರವಣಿಗೆ: ಸ್ಥಳ– ಬಸವನಗುಡಿಯ ನಾರ್ತ್ ರೋಡ್ ವೇದ ಮಾಗಡಿ ಕನಿಕರ ಪಾಠಶಾಲಾ ಮುಂಭಾಗದಿಂದ ಶಂಕರಪುರದ ಶೃಂಗೇರಿ ಶಂಕರಮಠದ ತನಕ (9448511866), ಸಂಜೆ 4

ವಯೋ ಸಹಜದಿಂದ ಮೃತಪಟ್ಟ ಕರಡಿ

ಆನೇಕಲ್ : ಬನ್ನೇರುಘಟ್ಟ ಜೈವಿಕ ಉದ್ಯಾನ ಮೃಗಾಲಯ ಹಿಮಾಲಯದ ಕಪ್ಪು ಕರಡಿ ಮೋಹನ್ (27) ವಯೋಸಹಜ ಕಾಯಿಲೆಯಿಂದಾಗಿ ಮೃತಪಟ್ಟಿದೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕರಡಿ ಮೋಹನ್‌ನನ್ನು ಬೆಳಗಾವಿ ನ್ಯೂ ಗ್ರ್ಯಾಂಡ್ ಸರ್ಕಸ್‌ನಿಂದ 2002ರಲ್ಲಿ ಸಂರಕ್ಷಿಸಿ ಜೈವಿಕ ಉದ್ಯಾನದಲ್ಲಿ ಆಶ್ರಯ ಕಲ್ಪಿಸಲಾಗಿತ್ತು. ಲಿಂಪೋ ಸರ್ಕೋಮಾ (ಹಾನಿಕರಕ ಗಡ್ಡೆ) ಎಂಬ ಕಾಯಿಲೆಯಿಂದ ಬಳಲುತ್ತಿತ್ತು. 15 ದಿನಗಳಿಂದ ಚಿಕಿತ್ಸೆ ನೀಡಿದರೂ ಸ್ಪಂದಿಸದೆ ಮೃತಪಟ್ಟಿದೆ.

ಅಭ್ಯರ್ಥಿ ಮತ್ತೆ ನಾಲ್ಕು ದಿನ ಸಿಐಡಿ ಕಸ್ಟಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಬಂಧಿಸಲಾಗಿರುವ ಅಭ್ಯರ್ಥಿ ಜಿ.ಸಿ. ರಾಘವೇಂದ್ರ ಅವರನ್ನು ನಾಲ್ಕು ದಿನಗಳವರೆಗೆ ಸಿಐಡಿ ಕಸ್ಟಡಿಗೆ ನೀಡಲಾಗಿದೆ.

ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾದ ಪ್ರಕರಣದಲ್ಲಿ ಬಂಧಿಸಲಾಗಿದ್ದ ರಾಘವೇಂದ್ರ, ಸೂರ್ಯನಾರಾಯಣ ಹಾಗೂ ಜಿ.ಆರ್. ಮನುಕುಮಾರ್ ಅವರನ್ನು ತನಿಖಾಧಿಕಾರಿ ಬಿ.ಕೆ. ಶೇಖರ್ ನೇತೃತ್ವದ ಸಿಐಡಿ ತಂಡ ನ್ಯಾಯಾಲಯಕ್ಕೆ ಗುರುವಾರ ಹಾಜರುಪಡಿಸಿತು.

‘ರಾಘವೇಂದ್ರ ಪರೀಕ್ಷೆ ಬರೆದಿದ್ದ ಕೇಂದ್ರದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಸಂಗ್ರಹಿಸಬೇಕಿದೆ. ಹೀಗಾಗಿ, ಕಸ್ಟಡಿಗೆ ನೀಡಬೇಕು’ ಎಂದು ಅಧಿಕಾರಿಗಳು ಕೋರಿದರು.

ನ್ಯಾಯಾಧೀಶ ಆನಂದ್ ಟಿ. ಚವ್ಹಾಣ್, ರಾಘವೇಂದ್ರ ಅವರನ್ನು 4 ದಿನ ಕಸ್ಟಡಿಗೆ ಒಪ್ಪಿಸಿದರು. ಇನ್ನಿಬ್ಬರನ್ನು ನ್ಯಾಯಾಂಗ ಬಂಧನಕ್ಕೆ ನೀಡಿದೆ.

ಹೊರಮಾವು– ಅಗರ ಕೆರೆ ಅಂತಿಮ ಹಂತದ ಕಾಮಗಾರಿ ಬಾಕಿ: ತೊಡಕಾದ ಮಳೆ

ಕುಂಟುತ್ತಾ ಸಾಗಿದ ಕೆರೆ ಪುನರುಜ್ಜೀವನ

• ವಿಜಯಕುಮಾರ್ ಎಸ್.ಕೆ.

ಹೊರ ವಲಯ ಒಳ ಬೇಗುದಿ

ಬೆಂಗಳೂರು: ಹಲವು ವರ್ಷಗಳಿಂದ ಕುಂಟುತ್ತಾ ಸಾಗಿದ್ದ ಹೊರಮಾವು– ಅಗರ ಕೆರೆ ಪುನರುಜ್ಜೀವನ ಕಾಮಗಾರಿ ಬಹುತೇಕ ಅಂತಿಮ ಹಂತಕ್ಕೆ ಬಂದಿದ್ದು, ಇದೀಗ ಕಾಮಗಾರಿಗೆ ಮಳೆ ತೊಡಕಾಗಿದೆ.

ಸುಮಾರು 60 ಎಕರೆ ವಿಸ್ತೀರ್ಣದ ಈ ಕೆರೆಯಲ್ಲಿ ಕಲ್ಯಾಣಿ, ಭದ್ರತಾ ಕೊಠಡಿ, ಸುತ್ತಲು ಬೇಲಿ ನಿರ್ಮಾಣ ಕಾಮಗಾರಿಯನ್ನು ಬಿಬಿಎಂಪಿ ಪೂರ್ಣಗೊಳಿಸಿದೆ. ಚೈನ್ ಲಿಂಕ್ ಬೇಲಿಗೆ ಬಣ್ಣ ಬಳಿಯುವ ಕೆಲಸ ಪ್ರಗತಿಯಲ್ಲಿದೆ.

ಸುಮಾರು ಎರಡು ಕಿಲೋ ಮೀಟರ್ ಉದ್ದದ ಪಾದಚಾರಿ ಮಾರ್ಗದ ಕಾಮಗಾರಿಯೂ ಅಂತಿಮ ಹಂತದಲ್ಲಿದೆ. ಒಳಚರಂಡಿ ನೀರು ಕೆರೆಗೆ ಸೇರುವುದನ್ನು ತಪ್ಪಿಸುವ ಕಾಮಗಾರಿ ಇನ್ನೂ ಬಾಕಿ ಇದೆ.

ನಿರ್ಮಾಣ ತ್ಯಾಜ್ಯ, ಕೋಳಿ ಅಂಗಡಿಗಳ ತ್ಯಾಜ್ಯ ಸೇರಿ ಬೇಡದ ವಸ್ತುಗಳನ್ನು ಎಸೆದಿದ್ದರಿಂದ ಕೆರೆ ಸಂಪೂರ್ಣ ಕಲುಷಿತಗೊಂಡಿತ್ತು. ಹೊರಮಾವು– ಅಗರ ಕೆರೆ ಉಳಿಸಲು ಸ್ಥಳೀಯರು ದೊಡ್ಡ ಮಟ್ಟದ ಹೋರಾಟಗಳನ್ನು ನಡೆಸಿದ್ದರು. ಅದರ ಫಲವಾಗಿ ಕೆರೆ ಪುನರುಜ್ಜೀವನಗೊಳಿಸುವ ಕಾಮಗಾರಿಯನ್ನು ಬಿಬಿಎಂಪಿ ಕೈಗೆತ್ತಿಕೊಂಡಿದೆ.

‘ಅಚ್ಚುಕಟ್ಟಾಗಿದ್ದ ಕೆರೆಯ ನೀರನ್ನು ಕುಡಿಯಲು ಬಳಸುತ್ತಿದ್ದ ಕಾಲವೊಂದಿತ್ತು. ನಗರ ಬೆಳೆದಂತೆ ಒಳಚರಂಡಿ ನೀರು ಕೆರೆ ಸೇರಿ ಕಲುಷಿತಗೊಂಡಿತ್ತು. ಅಭಿವೃದ್ಧಿಪಡಿಸುವ ಕಾಮಗಾರಿ ಆರಂಭವಾಗಿ ಹಲವು ವರ್ಷಗಳೇ ಕಳೆದಿವೆ. ಆಮೆ ವೇಗದಲ್ಲಿ ಕಾಮಗಾರಿ ನಿರ್ವಹಿಸುತ್ತಿದ್ದು, ಇನ್ನೂ ಪೂರ್ಣಗೊಳಿಸಿಲ್ಲ. ನಾಲ್ಕೈದು ಮಂದಿ ಕಾರ್ಯ ನಿರ್ವಹಿಸಿದರೆ ಪೂರ್ಣಗೊಳ್ಳುವುದು ಯಾವಾಗ’ ಎಂದು ಸ್ಥಳೀಯರು ಪ್ರಶ್ನಿಸುತ್ತಾರೆ.

‘ನಾಲ್ಕು ವರ್ಷಗಳಿಂದ ಕೆರೆಯ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದೆ. ಆಗೊಮ್ಮೆ, ಈಗೊಮ್ಮೆ ಕೆಲವೇ ಸಿಬ್ಬಂದಿ ಕೆಲಸ ಮಾಡುವುದು ಕಾಣಿಸುತ್ತದೆ. ಬಿಬಿಎಂಪಿ ಅಧಿಕಾರಿಗಳನ್ನು ಕೇಳಿದರೆ ಯಾರೊಬ್ಬರೂ ಸರಿಯಾದ ಮಾಹಿತಿ ನೀಡುವುದಿಲ್ಲ. ಮಳೆಗಾಲ ಸಮೀಪಿಸುವ ವೇಳೆಗೆ ಕಾಮಗಾರಿ ಪೂರ್ಣಗೊಳಿಸಿದ್ದರೆ ಮತ್ತಷ್ಟು ವಿಳಂಬ ಆಗುವುದು ತಪ್ಪುತ್ತಿತ್ತು’ ಎಂದು ಕೆರೆ ಸಂರಕ್ಷಣೆಗೆ ಹೋರಾಟ ನಡೆಸುತ್ತಿರುವ ಅನುಪ್ರೀತ್ ಬೇಸರ ವ್ಯಕ್ತಪಡಿಸುತ್ತಾರೆ.


ಹೊರಮಾವು– ಅಗರ ಕೆರೆಯ ನೋಟ —ಪ್ರಜಾವಾಣಿ ಚಿತ್ರ/ಅನೂಪ್ ರಾಘ ಟಿ.


ಕೆರೆಯ ಸುತ್ತ ಇರುವ ಚೈನ್ ಲಿಂಕ್ ಬೇಲಿಗೆ ಬಣ್ಣ ಬಳಿಯುತ್ತಿರುವುದು

‘ಹತ್ತು ದಿನಗಳಲ್ಲಿ ಕಾಮಗಾರಿ ಪೂರ್ಣ’

‘ಕೆರೆ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿವೆ. ಒಳಚರಂಡಿ ನೀರು ಕೆರೆ ಸೇರುವುದನ್ನು ತಪ್ಪಿಸುವ ಕಾಮಗಾರಿಯಷ್ಟೇ ಬಾಕಿ ಇದೆ’ ಎಂದು ಬಿಬಿಎಂಪಿ ಕೆರೆಗಳ ವಿಭಾಗದ ಅಧಿಕಾರಿಗಳು ಹೇಳುತ್ತಾರೆ.

‘₹1.50 ಕೋಟಿ ಮೊತ್ತದಲ್ಲಿ ಕೆರೆ ಅಭಿವೃದ್ಧಿಪಡಿಸಲಾಗುತ್ತಿದೆ. ಪಾದಚಾರಿ ಮಾರ್ಗ, ಸುತ್ತಲು ಬೇಲಿ, ಭದ್ರತಾ ಕೊಠಡಿ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿವೆ. ಒಳಚರಂಡಿ ನೀರಿನ ಮಾರ್ಗ ಬದಲಿಸುವ ಕಾಮಗಾರಿಯೂ ಆರಂಭವಾಗಿದೆ. ಮಳೆ ಬಿಡುವು ನೀಡಿದರೆ ಹತ್ತು ದಿನಗಳಲ್ಲಿ ಪೂರ್ಣಗೊಳ್ಳಲಿದೆ’ ಎಂದು ಕೆರೆ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸ್ವಪ್ನಾ ‘ಪ್ರಜಾವಾಣಿ’ಗೆ ತಿಳಿಸಿದರು.

ಪ್ರಶ್ನೆ ಸೋರಿಕೆ ಪ್ರಕರಣ; ಸಿಸಿಬಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಯ ಪ್ರಶ್ನೆಗಳ ಸೋರಿಕೆ ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿದೆ. ಸಿಸಿಬಿಯ ವಿಶೇಷ ತಂಡ ಈಗಾಗಲೇ ತನಿಖೆ ಆರಂಭಿಸಿದ್ದು, ಪ್ರಶ್ನೆ ಸೋರಿಕೆಗೆ ಸಂಬಂಧಪಟ್ಟಂತೆ ಮಾಹಿತಿ ಕಲೆಹಾಕುತ್ತಿದೆ.

‘ಮಾರ್ಚ್ 14ರಂದು ನಡೆದಿದ್ದ ಭೂಗೋಳಶಾಸ್ತ್ರ ವಿಷಯದ ಪ್ರಶ್ನೆ ಪತ್ರಿಕೆಯ 18 ಪ್ರಶ್ನೆಗಳು, ಪರೀಕ್ಷೆಗೂ ಮುನ್ನ ಸೋರಿಕೆ ಆಗಿವೆ’ ಎಂಬುದಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯನಿರ್ವಾಹಕ ನಿರ್ದೇಶಕಿ ರಮ್ಯಾ ದೂರು ನೀಡಿದ್ದರು. ಎಫ್ಐಆರ್ ದಾಖಲಿಸಿಕೊಂಡಿದ್ದ ಮಲ್ಲೇಶ್ವರ ಪೊಲೀಸರು, ಅತಿಥಿ ಉಪನ್ಯಾಸಕಿ ಆರ್. ಸೌಮ್ಯಾ ಹಾಗೂ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಪ್ರೊ. ಎಚ್. ನಾಗರಾಜ್ ಅವರನ್ನು ಬಂಧಿಸಿದ್ದರು.

‘ನೇಮಕಾತಿಯಲ್ಲಿ ಪ್ರಶ್ನೆ ಸೋರಿಕೆ ಮಾತ್ರವಲ್ಲದೇ ಬೇರೆ ರೀತಿಯಲ್ಲೂ ಅಕ್ರಮ ನಡೆದಿರುವ ಅನುಮಾನವಿದೆ. ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ಕೋವಿಡ್‌ನಿಂದ ಗುಣಮುಖರಾದವರಲ್ಲಿ ಎರಡು ವರ್ಷಗಳ ಬಳಿಕವೂ ರೋಗಲಕ್ಷಣ’

ಬೀಜಿಂಗ್ (ಪಿಟಿಐ): ಕೋವಿಡ್ –19 ಬಾಧಿಸಿ ಆಸ್ಪತ್ರೆಗೆ ದಾಖಲಾಗಿದ್ದವರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಜನರು ಎರಡು ವರ್ಷಗಳ ಬಳಿಕವೂ ಕನಿಷ್ಠ ಒಂದು ರೋಗ ಲಕ್ಷಣವನ್ನು ಹೊಂದಿದ್ದಾರೆ ಎಂದು ದಿ ಲ್ಯಾನ್ಸೆಟ್ ರೆಸ್ಪಿರೇಟರಿ ಮೆಡಿಕಲ್ ಜರ್ನಲ್‌ನಲ್ಲಿ ಪ್ರಕಟವಾದ ಅಧ್ಯಯನ ವರದಿಯು ಬಹಿರಂಗಪಡಿಸಿದೆ.

2020ರ ಕೋವಿಡ್ ಮೊದಲ ಅಲೆಯ ಸಂದರ್ಭದಲ್ಲಿ ಚೀನಾದಲ್ಲಿ ಸೋಂಕಿಗೊಳಗಾಗಿದ್ದ 1,192 ಮಂದಿಯು ಈ ಅಧ್ಯಯನದಲ್ಲಿ ಪಾಲ್ಗೊಂಡಿದ್ದರು. ಇವರಲ್ಲಿ ದೈಹಿಕ ಮತ್ತು ಮಾನಸಿಕ ಆರೋಗ್ಯವು ಕಾಲಾನಂತರ ಸುಧಾರಿಸಿದ್ದರೂ, ಇವರ ಆರೋಗ್ಯ ಸ್ಥಿತಿಯು ಸಾಮಾನ್ಯ ಜನರ ಆರೋಗ್ಯ ಸ್ಥಿತಿಗಿಂತ ಕೆಳಮಟ್ಟದಲ್ಲಿತ್ತು ಎಂದೂ ಹೇಳಲಾಗಿದೆ.

‘2 ವರ್ಷಗಳ ಹಿಂದೆ ಕೋವಿಡ್ ಬಾಧಿಸಿದ್ದವರಲ್ಲಿ ಈಗಲೂ ಆಯಾಸ, ಉಸಿರಾಟದ ತೊಂದರೆ, ನಿದ್ರಾಹೀನತೆ ಸೇರಿದಂತೆ ಯಾವುದಾದರೂ ಒಂದು ಲಕ್ಷಣ ಕಾಣಿಸಿಕೊಳ್ಳುತ್ತಿದೆ’ ಎಂದೂ ಹೇಳಿದೆ.


ಪಾರಿವಾಳದ ಪರಿವಾರ ಕಬ್ಬನ್‌ಪಾರ್ಕ್ ಆವರಣದಲ್ಲಿ ಹೈಕೋರ್ಟ್ ಕಟ್ಟಡದ ಎದುರಿನ ಮರದಲ್ಲಿ ಪಾರಿವಾಳಗಳು ಕ್ಯಾಮೆರಾ ಕಣ್ಣಿಗೆ ಸೆರೆ ಸಿಕ್ಕಿದ್ದು ಹೀಗೆ... ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಬಾಂಗ್ಲಾದಿಂದ ಬಂದು ಕಳವು: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಂಗ್ಲಾದೇಶದಿಂದ ಅಕ್ರಮವಾಗಿ ನುಸುಳಿ ಬಂದು ನಗರದಲ್ಲಿ ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಆರೋಪದಡಿ ಇಬ್ಬರನ್ನು ಕೆಂಪೇಗೌಡ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಬಾಂಗ್ಲಾದೇಶದ ಬಿಮುಲ್ಲಾ ಅಲಿಯಾಸ್ ಅಭಿ ಮುಲ್ಲಾ (32) ಹಾಗೂ ಮಹಮ್ಮದ್ ನಾಸೀರ್ ಶೇಖ್ ಅಲಿಯಾಸ್ ಗುಪ್ರಾನ್ (35) ಬಂಧಿತರು. ಇವರಿಬ್ಬರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅತ್ತಿಬೆಲೆ ತಾಲ್ಲೂಕಿನ ಬರಗರನಹಳ್ಳಿಯಲ್ಲಿ ವಾಸವಿದ್ದುಕೊಂಡು ಅಪರಾಧ ಕೃತ್ಯ ಎಸಗುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಕೊಲೆ, ಸುಲಿಗೆ ಹಾಗೂ ದರೋಡೆ ಪ್ರಕರಣದಲ್ಲಿ ಬಂಧಿತರಾಗಿದ್ದ ಆರೋಪಿಗಳು, ಕೆಲ ವರ್ಷ ಬಾಂಗ್ಲಾದೇಶದ ಜೈಲಿನಲ್ಲಿದ್ದರು. ಜಾಮೀನು ಮೇಲೆ ಹೊರಬಂದಿದ್ದ ಅವರು, ಬಾಂಗ್ಲಾದಿಂದ ಅಕ್ರಮವಾಗಿ ಭಾರತಕ್ಕೆ ನುಸುಳಿದ್ದರು. ಬೆಂಗಳೂರಿಗೆ ಬಂದು ಬಾಡಿಗೆ ಮನೆಯಲ್ಲಿ ನೆಲೆಸಿದ್ದರು. ದ್ವಿಚಕ್ರ ವಾಹನಗಳನ್ನು ಕದ್ದು ಮಾರಿ, ಬಂದ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದರು. ಇವರಿಂದ 8 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದೂ ತಿಳಿಸಿದರು.

ದರೋಡೆಗೆ ಸಂಚು: ರೌಡಿ ಹಂದಿ ಬಂಧನ

ಬೆಂಗಳೂರು: ಲಗ್ಗೆರೆ ಮೇಲ್ಸೇತುವೆ ಬಳಿ ಸಾರ್ವಜನಿಕರನ್ನು ಅಡ್ಡಗಟ್ಟಿ ಸುಲಿಗೆ ಮಾಡಲು ಸಂಚು ರೂಪಿಸಿದ್ದ ರೌಡಿ ಚೇತನ್ ಅಲಿಯಾಸ್ ಹಂದಿ ಹಾಗೂ ಆತನ 6 ಸಹಚರರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಹಲವು ಪ್ರಕರಣಗಳಲ್ಲಿ ಭಾಗಿಯಾಗಿದ್ದ ರೌಡಿ ಚೇತನ್, ಸಹಚರರ ಜೊತೆ ಸೇರಿ ಅಪರಾಧ ಕೃತ್ಯ ಎಸಗುತ್ತಿದ್ದ. ಆತನ ದರೋಡೆ ಸಂಚಿನ ಬಗ್ಗೆ ಮೇ 9ರಂದು ಮಾಹಿತಿ ಸಿಕ್ಕಿತ್ತು. ಕಾರ್ಯಾಚರಣೆ ನಡೆಸಿ ಕಾರು ಹಾಗೂ ಮಾರಕಾಸ್ತ್ರಗಳ ಸಮೇತ ಆರೋಪಿಗಳನ್ನು ಬಂಧಿಸಲಾಗಿದೆ. ಅವರ ವಿರುದ್ಧ ಮಹಾಲಕ್ಷ್ಮಿ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಸಿಸಿಬಿ ದಾಳಿ: ₹ 2.05 ಲಕ್ಷ ಜಪ್ತಿ

ಬೆಂಗಳೂರು: ಶ್ರೀಗಂಧಕಾವಲು 8ನೇ ಅಡ್ಡರಸ್ತೆಯಲ್ಲಿರುವ ನಿರ್ಮಾಣ ಹಂತದ ಕಟ್ಟಡವೊಂದರ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿ, ಜೂಜಾಟವಾಡುತ್ತಿದ್ದ 10 ಮಂದಿಯನ್ನು ಬಂಧಿಸಿದ್ದಾರೆ.

‘ಸ್ಥಳೀಯರು ಮೇ 10ರಂದು ಜೂಜು ಆಡುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು. ಅವರಿಂದ ₹ 2.05 ಲಕ್ಷ ಜಪ್ತಿ ಮಾಡಲಾಗಿದೆ. ಈ ಬಗ್ಗೆ ರಾಜಗೋಪಾಲನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

ವಿದ್ಯಾರ್ಥಿನಿ ಆತ್ಮಹತ್ಯೆ

ಮಂಡ್ಯ: ಮೊಬೈಲ್ ಫೋನ್ ಹೆಚ್ಚು ಬಳಸದಂತೆ ಕುಟುಂಬ ಸದಸ್ಯರು ಬೈದಿದ್ದಕ್ಕೆ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ, ಬೆಂಗಳೂರಿನ ಕೆ.ಭಾವನಾ (18) ನಗರದಲ್ಲಿ ರೈಲಿಗೆ ಸಿಲುಕಿ ಬುಧವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನಗರದಲ್ಲಿದ್ದ ಅಜ್ಜಿ ಮನೆಗೆಂದು ಯಲಹಂಕ ರೈಲು ನಿಲ್ದಾಣದಿಂದ ಬಂದಿದ್ದ ಅವರು, ಅಲ್ಲಿಗೆ ಹೋಗಿರಲಿಲ್ಲ. ‘ನಿಲ್ದಾಣ ಸಿಬ್ಬಂದಿ ಟ್ರ್ಯಾಕ್ ಪರಿಶೀಲನೆ ನಡೆಸುವಾಗ ಮೃತದೇಹ ಪತ್ತೆಯಾಗಿದೆ. ಯಾವ ರೈಲಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಮಾಹಿತಿ ಸಿಕ್ಕಿಲ್ಲ’ ಎಂದು ಪೊಲೀಸರು ತಿಳಿಸಿದರು.

ಈ ಸಂಬಂಧ ರೈಲು ನಿಲ್ದಾಣದ ಹೊರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಬೆಂಗಳೂರು ಹುಡುಗ’ನಿಂದ ‘ಕನ್ನಡ ನಿತ್ಯೋತ್ಸವ ಅಭಿಯಾನ’

ಬಣ್ಣ ಮಾಸಿದ ಬಾವುಟ ಬದಲಿಸುವ ‘ಕರ್ತವ್ಯ’


• ಜಿ.ಶಿವಕುಮಾರ

ಬೆಂಗಳೂರು: ಹಲವು ಸಂಘ ಸಂಸ್ಥೆಗಳು ಹಾಗೂ ಕನ್ನಡಪರ ಸಂಘಟನೆಗಳು ನಗರದ ಹಲವೆಡೆ ಹಾರಿಸಿರುವ ನಾಡಧ್ವಜಗಳ ಪೈಕಿ ಹಲವು ಹರಿದು ಹೋಗಿವೆ. ಕೆಲ ಬಾವುಟಗಳ ಬಣ್ಣವೇ ಮಾಸಿ ಹೋಗಿದೆ. ಇಂತಹ ಧ್ವಜಗಳನ್ನು ತೆರವು ಮಾಡಿ ಹೊಸ ಬಾವುಟ ಹಾರಿಸುವ ಉದ್ದೇಶದಿಂದ ‘ಕನ್ನಡ ನಿತ್ಯೋತ್ಸವ ಅಭಿಯಾನ’ ಶುರುವಾಗಿದೆ.

ಈ ಅಭಿಯಾನದ ರೂವಾರಿ ವಿನೋದ್ ಕರ್ತವ್ಯ. ‘ಬೆಂಗಳೂರು ಹುಡುಗರು’ ತಂಡದ ವಿನೋದ್, ಪ್ರತಿ ಭಾನುವಾರ ನಗರದ ಒಂದೊಂದು ಸ್ಥಳಕ್ಕೆ ಭೇಟಿ ನೀಡಿ ಹಾಳಾದ ಧ್ವಜ ತೆರವು ಮಾಡುತ್ತಿದ್ದಾರೆ. ಸ್ವಂತ ಹಣದಲ್ಲೇ ಹೊಸ ಧ್ವಜವನ್ನು ಖರೀದಿಸಿ ಅಳವಡಿಸುತ್ತಿದ್ದಾರೆ. ಈವರೆಗೂ ಒಟ್ಟು 17 ಸ್ಥಳಗಳಲ್ಲಿ ಹೊಸ ಬಾವುಟ ರಾರಾಜಿಸುವಂತೆ ಮಾಡಿದ್ದಾರೆ.

‘ಮಹಾರಾಷ್ಟ್ರದಲ್ಲಿ ಕನ್ನಡ ಧ್ವಜ ಸುಟ್ಟುಹಾಕಿದ್ದಕ್ಕೆ ರಾಜ್ಯದೆಲ್ಲೆಡೆ ಆಕ್ರೋಶ ವ್ಯಕ್ತವಾಗಿತ್ತು. ನಾಡ ಧ್ವಜದ ಬಗ್ಗೆ ಅಷ್ಟೊಂದು ಅಭಿಮಾನ ಹೊಂದಿರುವ ನಮ್ಮ ಜನ, ತಮ್ಮ ಬೀದಿಗಳಲ್ಲೇ ಹರಿದ ಹಾಗೂ ಬಣ್ಣ ಮಾಸಿದ ಬಾವುಟ ಕಂಡರೂ ಬದಲಿಸದಿರುವುದು ಬೇಸರ ತರಿಸಿತ್ತು. ನಾಗರಿಕರಿಗೆ ನಾಡಧ್ವಜದ ಮಹತ್ವ ಮನವರಿಕೆ ಮಾಡಿಕೊಡುವ ಉದ್ದೇಶದಿಂದ ಈ ಅಭಿಯಾನ ಆರಂಭಿಸಲಾಯಿತು’ ಎಂದು ವಿನೋದ್ ತಿಳಿಸಿದರು.


ವೈಟ್‌ಫೀಲ್ಡ್ ಬಳಿ ಹರಿದಿದ್ದ ಧ್ವಜ ತೆರವುಗೊಳಿಸಿದ ವಿನೋದ್ ಕರ್ತವ್ಯ


ಯಶವಂತಪುರ ಬಳಿಯ ಸ್ಥಳದಲ್ಲಿ ಹೊಸ ಧ್ವಜ ಹಾರಿಸಿರುವುದು

‘ಇಂದಿರಾನಗರ ಮೆಟ್ರೊ ನಿಲ್ದಾಣದ ಬಳಿ ಧ್ವಜವೊಂದು ಶಿಥಿಲಾವಸ್ಥೆಯಲ್ಲಿತ್ತು. ಈ ವರ್ಷದ ಗಣರಾಜ್ಯೋತ್ಸವದಂದು ಅದನ್ನು ಬದಲಾಯಿಸುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದೆವು. ಅಂದಿನಿಂದ ಪ್ರತಿ ವಾರವೂ ಈ ಕಾರ್ಯ ಮುಂದುವರಿದಿದೆ. ಆಟೊ ಹಾಗೂ ಕ್ಯಾಬ್ ಚಾಲಕರು ಹಾಳಾಗಿರುವ ಬಾವುಟದ ಚಿತ್ರ ಹಾಗೂ ಸ್ಥಳದ ಮಾಹಿತಿ ನೀಡುತ್ತಾರೆ’ ಎಂದು ಅವರು ಹೇಳಿದರು.

‘ಕೆಂಪಾಂಬುಧಿ ಕೆರೆ, ಮಾರತ್ತಹಳ್ಳಿ, ಇಂದಿರಾನಗರ, ಜಯನಗರ, ಲಕ್ಷ್ಮಿಪುರ, ಕೆ.ಜಿ.ರಸ್ತೆ, ಚಿಕ್ಕಪೇಟೆ, ಮೆಜೆಸ್ಟಿಕ್, ಬಿನ್ನಿಪೇಟೆ, ಯಶವಂತಪುರ ಸೇರಿದಂತೆ ಹಲವೆಡೆ ಬಾವುಟ ಬದಲಿಸಿದ್ದೇನೆ. ಈ ಕಾರ್ಯಕ್ಕೆ ಅನೇಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ನನ್ನ ಕೆಲಸದಿಂದ ಪ್ರೇರಣೆಗೊಂಡು ಬೆಳಗಾವಿ ಮತ್ತು ಹಾಸನದಲ್ಲೂ ಯುವಕರ ತಂಡಗಳು ಮಾಸಿದ ಬಾವುಟಗಳನ್ನು ಬದಲಿಸುವ ಅಭಿಯಾನ ಆರಂಭಿಸಿರುವುದು ಖುಷಿ ನೀಡಿದೆ’ ಎಂದು ಹೇಳಿದರು.

‘ಮೊದಲು ₹150 ತೆತ್ತು ಬಾವುಟವೊಂದನ್ನು ಖರೀದಿಸುತ್ತಿದ್ದೆ. ನನ್ನ ಕನ್ನಡ ಕಾಯಕ ಮೆಚ್ಚಿ ಅಂಗಡಿಯವರು ರಿಯಾಯಿತಿ ದರದಲ್ಲಿ ಧ್ವಜ ಒದಗಿಸುತ್ತಿದ್ದಾರೆ’ ಎಂದರು.

ನವೆಂಬರ್‌ನಲ್ಲಿ ನಾವೆಲ್ಲಾ ಕನ್ನಡ ಬಾವುಟ ಹಾರಿಸಿ ಸಂಭ್ರಮಿಸುತ್ತೇವೆ. ರಾಷ್ಟ್ರಧ್ವಜದಂತೆ ಅದನ್ನು ಆಯಾ ದಿನವೇ ಇಳಿಸುವ ಕೆಲಸ ಆಗಬೇಕು. ಹಾಗಾದಾಗ ಮಾತ್ರ ನಾಡಧ್ವಜದ ಘನತೆ ಉಳಿಯುತ್ತದೆ.
ವಿನೋದ್ ಕರ್ತವ್ಯ

‘ಅಭಿಷೇಕ್ ಬ್ಯಾನರ್ಜಿ ವಿಚಾರಣೆ ಕೋಲ್ಕತ್ತದಲ್ಲೇ ನಡೆಸಿ’

ನವದೆಹಲಿ(ಪಿಟಿಐ): ಪಶ್ಚಿಮ ಬಂಗಾಳದ ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ಪಕ್ಷದ ನಾಯಕ ಅಭಿಷೇಕ್ ಬ್ಯಾನರ್ಜಿ ಅವರನ್ನು ದೆಹಲಿಗೆ ಕರೆಸಿಕೊಂಡು ವಿಚಾರಣೆ ನಡೆಸುವ ಬದಲು ಕೋಲ್ಕತ್ತದಲ್ಲೇ ಏಕೆ ನಡೆಸುತ್ತಿಲ್ಲ ಎಂದು ಸುಪ್ರೀಂ ಕೋರ್ಟ್, ಜಾರಿ ನಿರ್ದೇಶನಾಲಯವನ್ನು(ಇ.ಡಿ) ಪ್ರಶ್ನಿಸಿದೆ.

ನ್ಯಾಯಮೂರ್ತಿ ಯು.ಯು. ಲಲಿತ್ ಅವರಿದ್ದ ಪೀಠವು ಗುರುವಾರ ವಿಚಾರಣೆ ವೇಳೆ, ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಅಭಿಷೇಕ್ ಬ್ಯಾನರ್ಜಿ ಅವರು ಸಾಕ್ಷಿದಾರರಾಗಿದ್ದು, ಅವರೇನು ಆರೋಪಿಯಲ್ಲ ಎಂದು ಹೇಳಿದೆ.

ಈ ವೇಳೆ ಇ.ಡಿ ಪರ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು, ಅಭಿಷೇಕ್ ಬ್ಯಾನರ್ಜಿ ಅವರು ಪ್ರಭಾವಿ ನಾಯಕರಾಗಿದ್ದು, ಈ ಹಿಂದೆ ಸಿಬಿಐ ಅಧಿಕಾರಿಗಳನ್ನು ಘೇರಾವ್ ಹಾಕಿದ್ದ ವಿಚಾರವನ್ನು ಉದಾಹರಿಸಿ, ಕೇಂದ್ರೀಯ ಸಂಸ್ಥೆಗಳನ್ನು ಕೋಲ್ಕತ್ತದಲ್ಲಿ ಹೇಗೆ ನಡೆಸಿಕೊಳ್ಳಲಾಗುತ್ತದೆ ಎಂಬುದು ಈಗಾಗಲೇ ನ್ಯಾಯಾಲಯ ಗಮನಿಸಿದೆ ಎಂದು ಹೇಳಿದರು. ಈ ವೇಳೆ ಕೋಲ್ಕತ್ತದಲ್ಲಿ ಯಾವುದೇ ನಾಯಕರ ವಿಚಾರಣೆಗೆ ಕೇಂದ್ರೀಯ ತನಿಖಾ ಸಂಸ್ಥೆಗಳು ಬಂದಾಗ, ರಾಜ್ಯ ಪೊಲೀಸರು ಅಗತ್ಯ ಕ್ರಮ ಕೈಗೊಳ್ಳಬೇಕು. ಅಲ್ಲದೆ, ಪಶ್ಚಿಮ ಬಂಗಾಳ ಸರ್ಕಾರವನ್ನು ಹೊಣೆಯಾಗಿಸಬೇಕು. ವಿಚಾರಣೆಗೆ ಹೋಗುವ 72 ಗಂಟೆಗಳ ಮುಂಚಿತವಾಗಿ ರಾಜ್ಯ ಸರ್ಕಾರಕ್ಕೆ ಮಾಹಿತಿ ನೀಡಬೇಕು. ಆಗ ರಾಜ್ಯ ಪೊಲೀಸರು, ಕೇಂದ್ರೀಯ ತನಿಖಾ ಸಂಸ್ಥೆಗಳಿಗೆ ಸಹಕಾರ ನೀಡಲಿದ್ದಾರೆ ಎಂದು ನ್ಯಾಯಾಲಯ ಹೇಳಿದೆ.

ಹೆಲಿಕಾಪ್ಟರ್ ಪತನ: ಪೈಲಟ್‌ಗಳ ಸಾವು

ರಾಯಪುರ (ಪಿಟಿಐ): ಛತ್ತೀಸಗಡ ಸರ್ಕಾರದ ಹೆಲಿಕಾಪ್ಟರ್ ಗುರುವಾರ ರಾತ್ರಿ ರಾಯಪುರದ ವಿಮಾನ ನಿಲ್ದಾಣದಲ್ಲಿ ಪತನವಾಗಿ ಇಬ್ಬರು ಪೈಲಟ್‌ಗಳು ಮೃತಪಟ್ಟಿದ್ದಾರೆ.

ರಾಯಪುರದ ಸ್ವಾಮಿ ವಿವೇಕಾನಂದ ವಿಮಾನ ನಿಲ್ದಾಣದಲ್ಲಿ ಪರೀಕ್ಷಾರ್ಥ ಹಾರಾಟದ ವೇಳೆ ಈ ದುರಂತ ಸಂಭವಿಸಿದೆ. ತೀವ್ರವಾಗಿ ಗಾಯಗೊಂಡಿದ್ದ ಇಬ್ಬರು ಪೈಲಟ್‌ಗಳನ್ನು ತ್ವರಿತವಾಗಿ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಗಿಯಿತು. ಆದರೆ, ಅಷ್ಟೊತ್ತಿಗಾಗಲೇ ಪೈಲಟ್‌ಗಳು ಮೃತಪಟ್ಟಿದ್ದರು ಎಂದು ಹಿರಿಯ ಪೊಲೀಸ್ ಅಧೀಕ್ಷಕ (ಎಸ್ಎಸ್‌ಪಿ) ಪ್ರಶಾಂತ್ ಅಗ್ರವಾಲ್ ಹೇಳಿದ್ದಾರೆ.

ಮೃತ ಪೈಲಟ್‌ಗಳನ್ನು ಕ್ಯಾಪ್ಟನ್ ಗೋಪಾಲ ಕೃಷ್ಣ ಪಾಂಡಾ ಮತ್ತು ಕ್ಯಾಪ್ಟನ್ ಎ.ಪಿ. ಶ್ರೀವಾಸ್ತವ ಎಂದು ಗುರುತಿಸಲಾಗಿದೆ. ಘಟನೆಗೆ ಕಾರಣವೇನು ಎಂದು ತಿಳಿದುಬಂದಿಲ್ಲ.

ಸಂಕ್ಷಿಪ್ತ ಸುದ್ದಿ

ಕೊಲೆ: ತಲೆ ಬೋಳಿಸಿ ಶರಣಾದ ಆರೋಪಿಗಳು

ಬೆಂಗಳೂರು: ಬಿಟಿಎಂ ಲೇಔಟ್‌ನ 4ನೇ ಹಂತದ ದೇವರಚಿಕ್ಕನಹಳ್ಳಿ ನಿವಾಸಿ ಸುಹಾಸ್ (19) ಕೊಲೆ ಪ್ರಕರಣದ ಆರು ಆರೋಪಿಗಳು ತಮ್ಮ ತಲೆ ಬೋಳಿಸಿಕೊಂಡು ಬಂದು ಪೊಲೀಸರಿಗೆ ಶರಣಾಗಿದ್ದಾರೆ.

‘ಮೇ 9ರಂದು ಸುಹಾಸ್ ಕೊಲೆ ಆಗಿತ್ತು. ಸ್ಥಳದಿಂದ ಪರಾರಿಯಾಗಿದ್ದ ಆರೋಪಿಗಳಾದ ಪ್ರಜ್ವಲ್, ಜೀವನ್, ಹಿಮಾದ್ರಿ, ಅವಿನಾಶ್, ರಾಕೇಶ್ ಹಾಗೂ ಸಾಗರ್ ಶರಣಾಗಿದ್ದಾರೆ. ಅವರನ್ನು ಬಂಧಿಸಿ, ಕಾನೂನು ಕ್ರಮ ಜರುಗಿಸಲಾಗಿದೆ’ ಎಂದು ಎಲೆಕ್ಟ್ರಾನಿಕ್ ಸಿಟಿ ಠಾಣೆ ಪೊಲೀಸ್ ಮೂಲಗಳು ಹೇಳಿವೆ.

‘ದೇವರಚಿಕ್ಕನಹಳ್ಳಿಯಲ್ಲಿ ವರ್ಚಸ್ಸು ಹೊಂದುವ ವಿಚಾರಕ್ಕಾಗಿ ಸುಹಾಸ್ ಹಾಗೂ ಆರೋಪಿಗಳ ನಡುವೆ ಹಲವು ಬಾರಿ ಗಲಾಟೆ ಆಗಿತ್ತು. ಸುಹಾಸ್ ಅವರನ್ನು ಅಪಹರಿಸಿದ್ದ ಆರೋಪಿಗಳು, ಕೊಲೆ ಮಾಡಿ ಪರಾರಿಯಾಗಿದ್ದರು. ತಿರುಪತಿಗೆ ಹೋಗಿ ತಲೆ ಬೋಳಿಸಿಕೊಂಡಿದ್ದರು’ ಎಂದೂ ತಿಳಿಸಿವೆ.

ಪ್ರಾಣಿ ಬಲಿ: 23 ಮಂದಿ ವಿರುದ್ಧ ಪ್ರಕರಣ ದಾಖಲು

ಪಾವಗಡ: ತಾಲ್ಲೂಕಿನ ಬೆಳ್ಳಿಬಟ್ಟಲು ಗ್ರಾಮದ ಚೌಡೇಶ್ವರಿ ದೇವಿಗೆ ಮಂಗಳವಾರ ಗ್ರಾಮದ ಹೊರವಲಯದಲ್ಲಿ ಪ್ರಾಣಿಬಲಿ ನೀಡಲಾಗಿದೆ. ಈ ಸಂಬಂಧ 23 ಮಂದಿಯ ವಿರುದ್ಧ ಅರಸೀಕೆರೆ ಪೊಲೀಸ್ ಠಾಣೆಯಲ್ಲಿ ಗುರುವಾರ ಪ್ರಕರಣ ದಾಖಲಾಗಿದೆ.

ಪ್ರಾಣಿವಧೆ ಮಾಡಿದ ಬೆಳ್ಳಿ ಬಟ್ಟಲು ಗ್ರಾಮದ ಗೋಪಿ, ಭದ್ರಿ, ಕೃಷ್ಣಪ್ಪ ಹಾಗೂ ವಧಾ ಸ್ಥಳದಲ್ಲಿದ್ದ ಗ್ರಾಮದ 20 ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ.

ಋಷಿಕುಮಾರ ಸ್ವಾಮೀಜಿ ಮುಖಕ್ಕೆ ಮಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಸೀಕೆರೆ ಕಾಳಿ ಮಠದ ಋಷಿಕುಮಾರ ಸ್ವಾಮೀಜಿ ಅವರ ಮುಖಕ್ಕೆ ಮಸಿ ಬಳಿಯಲಾಗಿದ್ದು, ಕನ್ನಡ ಸಂಘಟನೆಯ ಕಾರ್ಯಕರ್ತರು ಕೃತ್ಯ ಎಸಗಿರುವುದಾಗಿ ಗೊತ್ತಾಗಿದೆ

ಮಲ್ಲೇಶ್ವರದ ಗಂಗಮ್ಮ ದೇವಸ್ಥಾನಕ್ಕೆ ಸ್ವಾಮೀಜಿ ಗುರುವಾರ ಸಂಜೆ ಬಂದಿದ್ದರು. ಇದೇ ವೇಳೆ ಸ್ಥಳದಲ್ಲಿದ್ದ ಕೆಲವರು, ಸ್ವಾಮೀಜಿ ಅವರ ಮುಖಕ್ಕೆ ಕಪ್ಪು ಮಸಿ ಬಳಿದಿದ್ದಾರೆ. ‘ಕನ್ನಡ ಹೋರಾಟಗಾರರನ್ನು ಗುಂಡಿಕ್ಕಿ ಕೊಲ್ಲಿ ಎಂಬುದಾಗಿ ಸ್ವಾಮೀಜಿ ಹೇಳಿಕೆ ನೀಡಿದ್ದರು. ಇದನ್ನು ವಿರೋಧಿಸಿ ಕಪ್ಪು ಮಸಿ ಬಳಿಯಲಾಗಿದೆ’ ಎಂದು ತಿಳಿದುಬಂದಿದೆ.

ಈ ಘಟನೆ ಸಂಬಂಧ ಸ್ವಾಮೀಜಿ ಅವರು ಪೊಲೀಸರಿಗೆ ಯಾವುದೇ ದೂರು ನೀಡಿಲ್ಲ.


ಹರಪನಹಳ್ಳಿ ತಾಲ್ಲೂಕಿನ ಮಾದಾಪುರ ಗ್ರಾಮದಲ್ಲಿ ಗುರುವಾರ ಬೀರಲಿಂಗೇಶ್ವರ ದೇವಸ್ಥಾನ ಉದ್ಘಾಟನಾ ಸಮಾರಂಭದಲ್ಲಿ ನಿರಂಜನಾನಂದ ಪುರಿ ಸ್ವಾಮೀಜಿ ಅವರಿಗೆ ಗ್ರಾಮಸ್ಥರು ಕಂಬಳಿ ಹಾಗೂ ಕುರಿಮರಿ ನೀಡಿದರು

ವಿವಾಹಕ್ಕೆ ಮುಂದಾದ ಯುವತಿಯರು

ತುಮಕೂರು: ಪರಸ್ಪರ ಪ್ರೀತಿಸುತ್ತಿದ್ದ ಯುವತಿಯರಿಬ್ಬರು ವಿವಾಹವಾಗಲು ಅವಕಾಶ ಮಾಡಿಕೊಡುವಂತೆ ಕೋರಿ ಪೊಲೀಸರ ಮೊರೆ ಹೋಗಿದ್ದಾರೆ. ಆದರೆ, ಪೊಲೀಸರು ಅದಕ್ಕೆ ಅವಕಾಶ ಮಾಡಿಕೊಡದ ಕಾರಣ ಪೋಷಕರು ಯುವತಿಯರ ಮನವೊಲಿಸಿ ಮನೆಗೆ ಕರೆದೊಯ್ದಿದ್ದಾರೆ.

ನಗರದ ಡಿಪ್ಲೊಮಾ ಕಾಲೇಜೊಂದರಲ್ಲಿ ಓದುತ್ತಿದ್ದ 22 ವರ್ಷ ಹಾಗೂ 19 ವರ್ಷದ ಯುವತಿರಿಬ್ಬರೂ ಸಹಪಾಠಿಗಳು. ಕಾಲೇಜಿನಲ್ಲಿ ಕಲಿಯುವಾಗಲೇ ಇಬ್ಬರ ಮಧ್ಯೆ ಪ್ರೀತಿ ಮೊಳಕೆಯೊಡೆದಿತ್ತು. ವಿವಾಹವಾಗಲು ಆಗಲೇ ಇಬ್ಬರೂ ನಿರ್ಧರಿಸಿದ್ದರು.

ಯುವತಿಯರಿಬ್ಬರೂ ಒಂದೇ ಸಮುದಾಯಕ್ಕೆ ಸೇರಿದ್ದು, ಮದುವೆಯಾಗಲು ಯುವತಿಯರ ಮನೆಯವರೂ ಒಪ್ಪದ ಕಾರಣ, ಅವರು ನಗರದ ತಿಲಕ್ ಪಾರ್ಕ್ ಪೊಲೀಸರ ಮೊರೆ ಹೋಗಿದ್ದರು. ಅವರ ಬೇಡಿಕೆಗೆ ಪೊಲೀಸರು ಸ್ಪಂದಿಸದಿದ್ದಾಗ ಇಬ್ಬರೂ ನಗರದಿಂದ ಪರಾರಿಯಾಗಿದ್ದರು. ಗುರುವಾರ ನಗರಕ್ಕೆ ವಾಪಸ್ ಬಂದಿದ್ದು, ಮದುವೆ ಸಿದ್ಧತೆಯಲ್ಲಿ ತೊಡಗಿದ್ದರು. ಈ ವಿಚಾರ ತಿಳಿದ ಇಬ್ಬರು ಯುವತಿಯರ ಪೋಷಕರು ಪೊಲೀಸ್ ಠಾಣೆಗೆ ಬಂದಿದ್ದಾರೆ. ಯುವತಿಯರ ಮನವೊಲಿಸಿ ಮನೆಗೆ ಕರೆದುಕೊಂಡು ಹೋಗಿದ್ದಾರೆ.

ಬಿದ್ದಿರುವ ಬಿಳಲು ಕತ್ತರಿಸಲು ಸಂರಕ್ಷಣಾ ಸಮಿತಿ ಶಿಫಾರಸು

ಉರುಳಿತು ದೊಡ್ಡ ಆಲದ ಮರದ ಬಿಳಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: 400 ವರ್ಷಗಳಷ್ಟು ಹಳೆಯದಾದ ಹಾಗೂ ದೇಶದ 6ನೇ ಅತೀ ದೊಡ್ಡ ಆಲದ ಮರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ದೊಡ್ಡ ಆಲದ ಮರದ ಬಿಳಲು ರೂಪದ ಬೇರಿನ ಸಮೂಹವು ಭಾರಿ ಮಳೆ ಮತ್ತು ಗಾಳಿಯಿಂದಾಗಿ ಭಾನುವಾರ ರಾತ್ರಿ ನೆಲಕ್ಕುರುಳಿದೆ. ಅವುಗಳನ್ನು ಕತ್ತರಿಸಿ ತೆರವುಗೊಳಿಸಲು ದೊಡ್ಡ ಆಲದ ಮರ ಸಂರಕ್ಷಣಾ ಸಮಿತಿ ಶಿಫಾರಸು ಮಾಡಿದೆ.

ಸ್ಥಳಕ್ಕೆ ಗುರುವಾರ ಭೇಟಿ ನೀಡಿದ್ದ ಸಮಿತಿಯ ಅಧ್ಯಕ್ಷ ಡಾ.ಅ.ನ.ಯಲ್ಲಪ್ಪರೆಡ್ಡಿ, ಬೊಟಾನಿಕಲ್ ಸರ್ವೆ ಆಫ್ ಇಂಡಿಯಾದ ನಿರ್ದೇಶಕ ಡಾ.ಸಂಜಪ್ಪ ನೇತೃತ್ವದ ತಜ್ಞರ ತಂಡವು ಅಧಿಕಾರಿಗಳು ಮತ್ತು ಸ್ಥಳೀಯರ ಸಮ್ಮುಖದಲ್ಲಿ ಪರಿಶೀಲನೆ ನಡೆಸಿತು. 3 ಎಕರೆಗಳಷ್ಟು ವಿಸ್ತೀರ್ಣದಲ್ಲಿ ಹರಡಿಕೊಂಡಿರುವ ಈ ಆಲದ ಮರದಲ್ಲಿ ಒಟ್ಟು 1,359 ಬಿಳಲು ಬೇರುಗಳಿದ್ದು, ಈ ಪೈಕಿ 811 ಸಂಖ್ಯೆಯ ಬಿಳಲುಗಳು ನೆಲದೊಳಕ್ಕೆ ಬೇರುಬಿಟ್ಟಿವೆ. ಉಳಿದ 548 ಬಿಳಲುಗಳು ನೆಲದಿಂದ 10ರಿಂದ 20 ಅಡಿ ಎತ್ತರದಲ್ಲಿ ತೂಗುತ್ತಿವೆ.


ದೊಡ್ಡ ಆಲದ ಮರದ ಬಿಳಲು ಸಮೂಹವೊಂದು ಉರುಳಿರುವುದು —ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

‘ದೊಡ್ಡ ಆಲದ ಮರದ ಮೂಲ ಕಾಂಡವು 60 ವರ್ಷಗಳ ಹಿಂದೆಯೇ ನೈಸರ್ಗಿಕವಾಗಿ ಬಿದ್ದು ನಾಶವಾಗಿದೆ. ಬಿಳಲು ಬೇರುಗಳ ಸಮೂಹ ಭಾನುವಾರ ರಾತ್ರಿ ಬಿದ್ದಿರುವುದು ಕೂಡ ಮಳೆ–ಗಾಳಿಯ ಕಾರಣದಿಂದಲೇ’ ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

‘ಮಣ್ಣು ತೆಗೆದಿರುವುದರಿಂದ ಬೇರುಗಳ ಸಮೂಹ ಉರುಳಿದೆ ಎಂಬುದು ಸುಳ್ಳು. ತಜ್ಞರ ಸಮಿತಿ ಶಿಫಾರಸಿನಂತೆ ಕಾಡುಗಿಡಗಳನ್ನು ತೆರವುಗೊಳಿಸಿ ಹೆಚ್ಚುವರಿ 30 ಲೋಡ್ ಕೆಂಪು ಮಣ್ಣು ಹರಡಿ, 3 ಟನ್ ಸಾವಯವ ಗೊಬ್ಬರ ಮತ್ತು ಸಾವಯವ ಮಿಶ್ರಣ ಹಾಕಿ ಹದಗೊಳಿಸಲಾಗಿದೆ. ಇಡೀ ಆವರಣಕ್ಕೆ ಹುಲ್ಲುಹಾಸು ಹಾಕಿರುವುದನ್ನೂ ಸಮಿತಿ ಗಮನಿಸಿತು’ ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ (ಲಾಲ್‌ಬಾಗ್) ಎಂ.ಜಗದೀಶ್ ‘ಪ್ರಜಾವಾಣಿ’ಗೆ ವಿವರಿಸಿದರು.

‘ಪಕ್ಕದ ಬೇರುಗಳ ಸಮೂಹಕ್ಕೆ ಹಾನಿ ಆಗುವುದನ್ನು ತಪ್ಪಿಸಲು ಈಗ ಬಿದ್ದಿರುವ ಬಿಳಲು ಬೇರುಗಳನ್ನು ಕತ್ತರಿಸಿ ತೆರವುಗೊಳಿಸುವುದು ಸೂಕ್ತ. ಬಿದ್ದಿರುವ ಬೇರುಗಳಲ್ಲಿ ಆಯ್ದ 2–3 ಕಾಂಡಗಳನ್ನು ಕತ್ತರಿಸಿ ಅದೇ ಸ್ಥಳದಲ್ಲಿ ನೆಡುವುದರಿಂದ ಮುಂದೆ ಅವು ಕೂಡ ಆಲದ ಮರದ ಭಾಗವಾಗುತ್ತವೆ ಎಂದೂ ಸಮಿತಿ ಸಲಹೆ ನೀಡಿದೆ’ ಎಂದು ತಿಳಿಸಿದರು.

‘ಮತ್ತೆರಡು ಬಿಳಲುಗಳ ಸಮೂಹದ ದೃಢತೆ ನೈಸರ್ಗಿಕವಾಗಿ ಕುಗ್ಗಿದ್ದು, ಅವುಗಳೂ ಮಳೆ ಗಾಳಿಗೆ ಹಾನಿಗೊಳ್ಳುವ ಸಂಭವ ಇದೆ. ಅವುಗಳ ಸುತ್ತ ಕಲ್ಲುಗಳನ್ನು ಜೋಡಿಸಿ ಮಧ್ಯಭಾಗಕ್ಕೆ ಕೆಂಪು ಮಣ್ಣನ್ನು ತುಂಬಿಸಿದರೆ ಅವಘಡ ತಪ್ಪಿಸಬಹುದು. ಭೂಮಿಗೆ ತಾಕಲು ಹತ್ತಿರದಲ್ಲಿರುವ ಕಾಂಡಗಳಿಗೆ ಕಬ್ಬಿಣದ ಸಲಾಕೆಗಳಿಂದ ಆಸರೆ ಒದಗಿಸಬೇಕು. ಬಾಗಿರುವ ಬೇರುಗಳನ್ನು ನಿಧಾನವಾಗಿ ಎಳೆದು ಕಟ್ಟಬೇಕು ಎಂಬ ಸಲಹೆಯನ್ನೂ ಸಮಿತಿ ನೀಡಿದೆ. ಅದರಂತೆ ಕ್ರಮ ವಹಿಸಲಾಗುವುದು’ ಎಂದು ಅವರು ವಿವರಿಸಿದರು.

ಪುತ್ಥಳಿಗಳ ಹೆಸರಲ್ಲಿ ಕೆಲವರಿಂದ ಜಾತಿ ಗಲಭೆ, ಸಂಘರ್ಷ

ಪುತ್ಥಳಿ ಬದಲು ಗ್ರಂಥಾಲಯ ನಿರ್ಮಿಸಿ: ಸ್ವಾಮೀಜಿ ಸಲಹೆ

ಪ್ರಜಾವಾಣಿ ವಾರ್ತೆ

ಹರಪನಹಳ್ಳಿ (ವಿಜಯನಗರ ಜಿಲ್ಲೆ): ‘ಪುತ್ಥಳಿಗಳಿಂದ ಸಮಾಜದ ಸಾಮರಸ್ಯ ಕದಡುತ್ತಿದ್ದು, ಅದರ ಬದಲು ಗ್ರಂಥಾಲಯ ನಿರ್ಮಿಸಲು ಮುಂದಾಗಬೇಕು’ ಎಂದು ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದ ಪುರಿ ಸ್ವಾಮೀಜಿ ಸಲಹೆ ನೀಡಿದರು.

ತಾಲ್ಲೂಕಿನ ಮಾದಾಪುರ ಗ್ರಾಮದಲ್ಲಿ ಗುರುವಾರ ಆಯೋಜಿಸಿದ್ದ ಬೀರಲಿಂಗೇಶ್ವರ ದೇವಸ್ಥಾನ ಉದ್ಘಾಟನೆ, ಬೀರಲಿಂಗೇಶ್ವರ ಮೂರ್ತಿ ಪ್ರತಿಷ್ಠಾಪನೆ ಮತ್ತು ಸಂಗೊಳ್ಳಿ ರಾಯಣ್ಣ ಪುತ್ಥಳಿ ಅನಾವರಣ ಕಾರ್ಯಕ್ರಮದ ಬಳಿಕ ಧರ್ಮಸಭೆ ಉದ್ಘಾಟಿಸಿ ಅವರು ಮಾತನಾಡಿದರು.

‘ಮಹಾತ್ಮ ಗಾಂಧಿ, ಅಂಬೇಡ್ಕರ್, ಬಸವಣ್ಣ, ಕನಕದಾಸ, ರಾಯಣ್ಣ, ವಾಲ್ಮೀಕಿ ಸೇರಿದಂತೆ ಅನೇಕ ಮಹನೀಯರ ಬಗ್ಗೆ ಅಪಾರ ಗೌರವವಿದೆ. ಆದರೆ, ಸಾಮರಸ್ಯದ ಸಂಕೇತವಾಗಿರುವ ನಾಯಕರ ಪುತ್ಥಳಿಗಳ ಹೆಸರಲ್ಲಿ ಕೆಲವರು ಜಾತಿ ಗಲಭೆ ಉಂಟು ಮಾಡುತ್ತಿರುವುದು ಬೇಸರ ಮೂಡಿಸಿದೆ’ಎಂದರು.

‘ಬಳ್ಳಾರಿ ಜಿಲ್ಲೆ ಸಂಡೂರು ಸಮೀಪದ ಹಳ್ಳಿಯೊಂದರಲ್ಲಿ ಕನಕ ಮೂರ್ತಿ ಪ್ರತಿಷ್ಠಾಪಿಸಲು ಮುಂದಾದ ಐವರ ಮೇಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಬೆಳಗಾವಿಯಲ್ಲಿ ರಾಯಣ್ಣನ ಪ್ರತಿಮೆ ಭಗ್ನಗೊಳಿಸಿದ ಘಟನೆ ನಂತರ ಎರಡು ದಿನ ಅಧಿವೇಶನದಲ್ಲಿ ಚರ್ಚೆ ನಡೆಸಿದ್ದು ಇವೆಲ್ಲ ಯಾವ ಪುರುಷಾರ್ಥಕ್ಕೆ’ ಎಂದು ಅವರು ಪ್ರಶ್ನಿಸಿದರು.

‘ಇಂತಹ ಜಾತಿ ಗಲಭೆಗಳಿಂದ ನಿತ್ಯ ನಾನು ಪೊಲೀಸ್ ಅಧಿಕಾರಿಗಳೊಟ್ಟಿಗೆ ಮಾತನಾಡಬೇಕಾದ ಪರಿಸ್ಥಿತಿ ಎದುರಾಗಿದೆ.6 ತಿಂಗಳಿನಿಂದ ಯಾವುದೇ ಪುತ್ಥಳಿ ಅನಾವರಣಕ್ಕೆ ಹೋಗದಿರಲು ನಿರ್ಧರಿಸಿದ್ದೆ. ಒಂದು ವೇಳೆ ದಾರ್ಶನಿಕರ ಪುತ್ಥಳಿ ನಿರ್ಮಿಸುವುದಾದರೆ ಸಂಬಂಧಪಟ್ಟ ಇಲಾಖೆ ಅನುಮತಿ ಪಡೆದು ನಿರ್ಮಿಸಿ, ಅಷ್ಟೇ ಕಾಳಜಿಯಿಂದ ಸಂರಕ್ಷಿಸಬೇಕು’ ಎಂದರು.

ದ್ವೇಷ ಭಾಷಣದಿಂದ ವಾತಾವರಣ ಹಾಳಾಗುತ್ತಿದೆ: ಸುಪ್ರೀಂ



ನವದೆಹಲಿ: ಉತ್ತರಾಖಂಡದ ಹರಿದ್ವಾರದಲ್ಲಿ 2021ರ ಡಿಸೆಂಬರ್‌ನಲ್ಲಿ ನಡೆದಿದ್ದ 'ಧರ್ಮ ಸಂಸದ್' ಕಾರ್ಯಕ್ರಮದಲ್ಲಿ ಮಾಡಲಾಗಿದ್ದ ದ್ವೇಷ ಭಾಷಣಗಳ ಕುರಿತು ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

'ಈ ರೀತಿ ದ್ವೇಷ ಭಾಷಣ ಮಾಡುವವರು ದೇಶದ ವಾತಾವರಣವನ್ನು ಹಾಳುಮಾಡುತ್ತಿದ್ದಾರೆ. ಸಮಾಜದಲ್ಲಿ ಶಾಂತಿ ನೆಲೆಸಲು ಅವರು ಸಂವೇದನಾಶೀಲತೆ ಬೆಳೆಸಿಕೊಳ್ಳಬೇಕು' ಎಂದು ಕೋರ್ಟ್ ಹೇಳಿದೆ. 'ಧರ್ಮ ಸಂಸದ್' ಕಾರ್ಯಕ್ರಮದಲ್ಲಿ ದ್ವೇಷ ಭಾಷಣ ಮಾಡಿದ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಜಿತೇಂದ್ರ ತ್ಯಾಗಿ ಅವರ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಮತ್ತು ವಿಕ್ರಮ್ ನಾಥ್ ಅವರ ಪೀಠವು, ಉತ್ತರಾಖಂಡ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿತು.

ಅರ್ಜಿದಾರರ ಪರ ವಕೀಲರಾದ ಸಿದ್ಧಾರ್ಥ್ ಲೂತ್ರ ಹಾಜರಿದ್ದರು. ನ್ಯಾಯಾಲಯವು ವಿಚಾರಣೆಯನ್ನು ಇದೇ 17ಕ್ಕೆ ಮುಂದೂಡಿತು.

ಲಾಲ್‌ಬಾಗ್ ಉದ್ಯಾನದಲ್ಲಿ ತುರ್ತು ಸೇವೆ ನೀಡುತ್ತಿರುವ ಆರೋಗ್ಯ ಕೇಂದ್ರ

3 ವರ್ಷದಲ್ಲಿ 20 ಸಾವಿರ ಜನರಿಗೆ ಚಿಕಿತ್ಸೆ

• ಮನೋಹರ್ ಎಂ.

ಬೆಂಗಳೂರು: ಲಾಲ್‌ಬಾಗ್ ಉದ್ಯಾನದಲ್ಲಿ ತುರ್ತು ಚಿಕಿತ್ಸೆ ನೀಡಲು ಆರಂಭಿಸಿದ್ದ 'ಲಾಲ್‌ಬಾಗ್ ಆಸ್ಪತ್ರೆ' ಮೂರು ವರ್ಷಗಳಲ್ಲಿ ಸುಮಾರು 20 ಸಾವಿರಕ್ಕೂ ಹೆಚ್ಚು ಮಂದಿಗೆ ಉಚಿತ ಆರೋಗ್ಯ ಸೇವೆ ಒದಗಿಸಿದೆ.

ಉದ್ಯಾನಕ್ಕೆ ಭೇಟಿ ನೀಡುವ ಪ್ರವಾಸಿಗರು, ವಾಯುವಿಹಾರಿಗಳಿಗೆ ಆರೋಗ್ಯ ಸಮಸ್ಯೆ ಎದುರಾದರೆ, ತುರ್ತು ಚಿಕಿತ್ಸೆ ನೀಡುವ ಉದ್ದೇಶದಿಂದ ತೋಟಗಾರಿಕೆ ಇಲಾಖೆಯು 2019ರಲ್ಲಿ ಈ ಕಿರು ಆರೋಗ್ಯ ಕೇಂದ್ರವನ್ನು ಆರಂಭಿಸಿತ್ತು. ಉದ್ಯಾನದ ಗಾಜಿನ ಮನೆ ಸಮೀಪವೇ ಈ ಚಿಕಿತ್ಸಾ ಕೇಂದ್ರವಿದ್ದು, ಸೇವೆ ಒದಗಿಸಲು ಒಬ್ಬರು ಶುಶ್ರೂಷಕಿಯನ್ನೂ ಇಲಾಖೆ ನಿಯೋಜಿಸಿದೆ.

ನೂರಾರು ಎಕರೆಗಳಷ್ಟು ವಿಸ್ತಾರವಾಗಿರುವ ಉದ್ಯಾನಕ್ಕೆ ಪ್ರತಿದಿನ ಸಾವಿರಾರು ಮಂದಿ ವಾಯುವಿಹಾರಿಗಳು ಮತ್ತು ಪ್ರವಾಸಿಗರು ಭೇಟಿ ನೀಡುತ್ತಾರೆ. ಹಾಗಾಗಿ ಮುಂಜಾಗ್ರತಾ ಕ್ರಮವಾಗಿ ಆರೋಗ್ಯ ಕೇಂದ್ರವನ್ನು ಆರಂಭಿಸಿದ್ದ ಇಲಾಖೆಯು ಸಾರ್ವಜನಿಕರಿಗೆ ಉಚಿತ ಸೇವೆ ಒದಗಿಸುತ್ತಿದೆ.

ಜೇನುನೊಣಗಳ ದಾಳಿ, ಕೀಟಗಳ ಕಡಿತ ಅಥವಾ ಹಾವು ಕಚ್ಚಿದ ಸಂದರ್ಭಗಳಲ್ಲಿ ಶೀಘ್ರವೇ ತುರ್ತು ಚಿಕಿತ್ಸೆ ಇಲ್ಲಿ ಲಭ್ಯ. ಪ್ರತಿನಿತ್ಯ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಈ ಆರೋಗ್ಯ ಕೇಂದ್ರವು ತೆರೆದಿರುತ್ತದೆ. ದಿನವಿಡೀ ಸೇವೆ ಒದಗಿಸಲು ವೈದ್ಯರ ಅಗತ್ಯವಿದ್ದು, ಇದಕ್ಕಾಗಿ ಸರ್ಕಾರಕ್ಕೆ ಇಲಾಖೆ ಪ್ರಸ್ತಾವ ಸಲ್ಲಿಸಿದೆ.

'ವಾಯುವಿಹಾರಕ್ಕೆ ಬರುತ್ತಿದ್ದ ವಯಸ್ಸಾದವರೂ ಆರೋಗ್ಯ ತಪಾಸಣೆಗೆ ಇಲ್ಲಿಗೆ ಬರುತ್ತಿದ್ದಾರೆ. ಮೊದಲಿಗೆ ದಿನಕ್ಕೆ 70ಕ್ಕೂ ಹೆಚ್ಚು ಮಂದಿ ಬರುತ್ತಿದ್ದರು. ಕೋವಿಡ್‌ನಿಂದ ರೋಗಿಗಳ ಸಂಖ್ಯೆ ಕಡಿಮೆಯಾಗಿತ್ತು. ಈಗ ವಾರಾಂತ್ಯದಲ್ಲಿ ರೋಗಿಗಳ ಸಂಖ್ಯೆ ಹೆಚ್ಚು ಇರುತ್ತದೆ' ಎಂದು ಶುಶ್ರೂಷಕಿ ಸುಪ್ರಿತಾ ಹೇಳಿದರು.

'ರಕ್ತದೊತ್ತಡ, ಮಧುಮೇಹ ಸಮಸ್ಯೆ ಇರುವವರೇ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ವಾಯುವಿಹಾರದ ವೇಳೆ ಸುಸ್ತಾದವರೂ ಬಂದು ವಿಶ್ರಾಂತಿ ಪಡೆಯುತ್ತಾರೆ. ಇದಕ್ಕಾಗಿ ಹಾಸಿಗೆ ವ್ಯವಸ್ಥೆ ಇದೆ. ಜ್ವರ, ಬೇಧಿ, ವಾಂತಿ, ತಲೆನೋವು ಸಮಸ್ಯೆಗಳಿಗೆ ಚುಚ್ಚುಮದ್ದು ಹಾಗೂ ಮಾತ್ರೆ ನೀಡಲಾಗುವುದು' ಎಂದು ವಿವರಿಸಿದರು.

'ಉದ್ಯಾನದಲ್ಲಿ ಆಟವಾಡುವಾಗ ಬಿದ್ದು ಗಾಯಗೊಂಡವರಿಗೆ ಡ್ರೆಸ್ಸಿಂಗ್ ಮಾಡಲಾಗುವುದು. ನಾಯಿ ಕಚ್ಚಿದ ಹಲವರಿಗೆ ಇಲ್ಲಿ ಚಿಕಿತ್ಸೆ ನೀಡಲಾಗಿದೆ. ಹೃದಯ ಸಂಬಂಧಿ ಸಮಸ್ಯೆಯಿಂದ ಬಂದವರಿಗೂ ತುರ್ತು ಚಿಕಿತ್ಸೆ ನೀಡಲಾಗಿದೆ. ಹೆಚ್ಚಿನ ಚಿಕಿತ್ಸೆಗಾಗಿ ಆಂಬುಲೆನ್ಸ್ ಮೂಲಕ ಬೇರೆ ಆಸ್ಪತ್ರೆಗಳಿಗೆ ಸಾಗಿಸುವ ವ್ಯವಸ್ಥೆಯೂ ಇದೆ' ಎಂದರು.



ಲಾಲ್‌ಬಾಗ್ ಉದ್ಯಾನದಲ್ಲಿರುವ ಆಸ್ಪತ್ರೆ –ಪ್ರಜಾವಾಣಿ ಚಿತ್ರ



ಲಾಲ್‌ಬಾಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿರುವ ವೃದ್ಧೆ –ಪ್ರಜಾವಾಣಿ ಚಿತ್ರ

ಅಂಕಿ–ಅಂಶ

50 ಆಸ್ಪತ್ರೆಗೆ ಪ್ರತಿನಿತ್ಯ ಬರುವ ರೋಗಿಗಳು (ಕನಿಷ್ಠ)

ಬೆಳಿಗ್ಗೆ **6.30**ರಿಂದ ಮಧ್ಯಾಹ್ನ **1.30** ಆಸ್ಪತ್ರೆಯ ಸಮಯ

ಪ್ರವೇಶ ದ್ವಾರಗಳಲ್ಲಿ ಗಾಲಿಕುರ್ಚಿ



ಕುಸುಮಾ

'ಉದ್ಯಾನಕ್ಕೆ ಬರುವ ಪ್ರವಾಸಿಗರು ಹಾಗೂ ವಾಯುವಿಹಾರಿಗಳ ಅನುಕೂಲಕ್ಕಾಗಿ ಉದ್ಯಾನದ ನಾಲ್ಕೂ ಪ್ರವೇಶದ್ವಾರಗಳಲ್ಲಿ ತಲಾ ಒಂದು ಗಾಲಿ ಕುರ್ಚಿ ಇರಿಸಿದ್ದೇವೆ. ವಯಸ್ಸಾದವರು, ನಡೆಯಲು ಸಾಧ್ಯವಾಗದವರು ಹಾಗೂ ವಾಯುವಿಹಾರಕ್ಕೆ ಬರುವ ರೋಗಿಗಳು ಇದನ್ನು ಬಳಸಿಕೊಳ್ಳಬಹುದು' ಎಂದು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕಿ (ಲಾಲ್‌ಬಾಗ್) ಜಿ.ಕುಸುಮಾ 'ಪ್ರಜಾವಾಣಿ'ಗೆ ತಿಳಿಸಿದರು.

'ಗಾಲಿಕುರ್ಚಿಯನ್ನು ಉಚಿತವಾಗಿ ಒದಗಿಸುತ್ತೇವೆ. ಆದರೆ ಭದ್ರತಾ ದೃಷ್ಟಿಯಿಂದ ₹100 ಠೇವಣಿ ಇಡಬೇಕು. ಉದ್ಯಾನ ಸುತ್ತಿ ಹಿಂದಿರುಗುವಾಗ ಅವರಿಗೆ ಅದನ್ನು ಮರಳಿಸುತ್ತೇವೆ' ಎಂದರು.

ಸುದ್ದಿ 2 ನಿಮಿಷ

ಧ್ವನಿವರ್ಧಕ ಬಳಕೆಗೆ ಅನುಮತಿ ಪಡೆಯಲು ಗಡುವು: ಪಂತ್

ಬೆಂಗಳೂರು: 'ಮಸೀದಿ, ಚರ್ಚ್, ದೇವಸ್ಥಾನ ಹಾಗೂ ಇತರೆಡೆಗಳಲ್ಲಿ ಧ್ವನಿವರ್ಧಕಗಳನ್ನು ಬಳಸಲು ಅನುಮತಿ ಕಡ್ಡಾಯ. 15 ದಿನದೊಳಗೆ, ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿ ಅನುಮತಿ ಪಡೆಯಬೇಕು' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸದ್ಯ ಬಳಕೆ ಮಾಡುತ್ತಿರುವ ಧ್ವನಿವರ್ಧಕಗಳಿಗೂ ಹಾಗೂ ಹೊಸ ಧ್ವನಿವರ್ಧಕಗಳಿಗೂ ಅನುಮತಿ ಪಡೆಯಬೇಕು' ಎಂದರು.

'ಧ್ವನಿವರ್ಧಕ ಬಳಕೆ ಸಂಬಂಧ ಸರ್ಕಾರ ಹೊರಡಿಸಿರುವ ಆದೇಶ ಹಾಗೂ ಸುಪ್ರೀಂಕೋರ್ಟ್ ನಿರ್ದೇಶನಗಳನ್ನು ಎಲ್ಲರೂ ಪಾಲಿಸಬೇಕು. ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 6 ಗಂಟೆವರೆಗೆ ಧ್ವನಿವರ್ಧಕ ಬಳಸಲು ಅವಕಾಶವಿರುವುದಿಲ್ಲ. ನಿಯಮ ಉಲ್ಲಂಘಿಸಿ ಧ್ವನಿವರ್ಧಕ ಬಳಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದೂ ಅವರು ಹೇಳಿದರು.

ಎಸಿಪಿ ಕಚೇರಿಗೆ ಅರ್ಜಿ ಸಲ್ಲಿಸಿ: 'ಧ್ವನಿವರ್ಧಕ ಅರ್ಜಿಗಳ ಪರಿಶೀಲನೆ ಹಾಗೂ ಅನುಮತಿ ನೀಡುವ ಅಧಿಕಾರವನ್ನು ಸಹಾಯಕ ಪೊಲೀಸ್ ಕಮಿಷನರ್‌ಗಳಿಗೆ (ಎಸಿಪಿ) ನೀಡಲಾಗಿದೆ. ಮಸೀದಿ, ಚರ್ಚ್, ದೇವಸ್ಥಾನ ಹಾಗೂ ಇತರರು, ಎಸಿಪಿಗೆ ಅರ್ಜಿ ಸಲ್ಲಿಸಬೇಕು' ಎಂದೂ ಕಮಲ್ ಪಂತ್ ತಿಳಿಸಿದರು.



ಹಿಂದುಳಿದವರ ಬಗ್ಗೆ ಕಾಂಗ್ರೆಸ್ ಕಣ್ಣೀರು: ನಳಿನ್‌ಕುಮಾರ್

ಬೆಂಗಳೂರು: ಜಾತಿ ಜನಗಣತಿ ವರದಿಗೆ ಸಹಿ ಮಾಡದೇ ಅದನ್ನು ಅನಧಿಕೃತಗೊಳಿಸಿ ಕೋಲ್ಡ್ ಸ್ಟೋರೇಜ್‌ನಲ್ಲಿ ಇಟ್ಟಿದ್ದೇ ಸಿದ್ದರಾಮಯ್ಯ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹೇಳಿದರು.

ಪಕ್ಷದ ಹಿಂದುಳಿದ ವರ್ಗಗಳ ಮೋರ್ಚಾದ ಸಭೆಯಲ್ಲಿ ಗುರುವಾರ ಮಾತನಾಡಿದ ಅವರು, 'ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ ಜಾತಿ ಜನಗಣತಿಗಾಗಿ ಕಾಂತರಾಜು ನೇತೃತ್ವದಲ್ಲಿ ಆಯೋಗ ರಚಿಸಲಾಯಿತು. ಆದರೆ ಆ ವರದಿಗೆ ಕಾರ್ಯದರ್ಶಿಗಳ ಸಹಿಯೇ ಇಲ್ಲವೆಂದು ಹಿಂದುಳಿದ ವರ್ಗಗಳ ಈಗಿನ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಹೇಳಿದ್ದಾರೆ' ಎಂದರು.

'ಆದರೆ ಈಗ ಕಾಂಗ್ರೆಸ್ ಪಕ್ಷದವರು ಹಿಂದುಳಿದ ವರ್ಗದವರ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ. ಅಹಿಂದ ಚಳವಳಿಯನ್ನು ಆರಂಭಿಸಿದವರು ಸಿದ್ದರಾಮಯ್ಯ. ಮುಖ್ಯಮಂತ್ರಿ ಆದ ಮೇಲೆ ಆ ಎಲ್ಲ ಸಮುದಾಯವನ್ನು ಹಿಂದಕ್ಕೆ ಇಟ್ಟರು. ಅಲ್ಲದೇ ಹಿಂದುಳಿದ ವರ್ಗಗಳ ಯಾವುದೇ ಸಮುದಾಯಕ್ಕೂ ನ್ಯಾಯ ಕೊಡಲಿಲ್ಲ' ಎಂದು ಟೀಕಿಸಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನಾ, ಪ್ರಧಾನಕಾರ್ಯದರ್ಶಿ ಸಿದ್ದರಾಜು, ಸಚಿವ ಎನ್.ಮುನಿರತ್ನ, ಒಬಿಸಿ ಮೋರ್ಚಾ ರಾಜ್ಯ ಅಧ್ಯಕ್ಷ ನೆ.ಲ.ನರೇಮದ್ರಬಾಬು ಇದ್ದರು.

ಹೆದ್ದಾರಿ: ಭೂ ಸ್ವಾಧೀನ ಕಂಟಕ

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು–ಮೈಸೂರು ನಡುವೆ ನಿರ್ಮಾಣ ಆಗುತ್ತಿರುವ ದಶಪಥ ಕಾಮಗಾರಿಗೆ ಭೂಸ್ವಾಧೀನ ವಿಘ್ನ ಎದುರಾಗಿದ್ದು, ನಿಗದಿತ ಅವಧಿಯಲ್ಲಿ ಕಾಮಗಾರಿ ಮುಗಿಸುವುದು ಅನುಮಾನವಾಗಿದೆ.

ಬೆಂಗಳೂರು- ಮೈಸೂರು ನಡುವಿನ 117 ಕಿ.ಮೀ ಉದ್ದದ ಹೆದ್ದಾರಿ ದಶಪಥವನ್ನಾಗಿ ಮೇಲ್ದರ್ಜೆಗೆ ಏರಿಸಲಾಗುತ್ತಿದೆ. ಕಳೆದ ಮೂರು ವರ್ಷಗಳಿಂದ ಕಾಮಗಾರಿ ನಡೆದಿದೆ. ಇದೇ ವರ್ಷ ದಸರಾ ವೇಳೆಗೆ ಈ ಕಾಮಗಾರಿ ಮುಕ್ತಾಯಗೊಳಿಸುವುದಾಗಿ ಕೇಂದ್ರ ಲೋಕೋಪಯೋಗಿ ಸಚಿವ ನಿತಿನ್ ಗಡ್ಕರಿ ಈಚೆಗೆ ಟ್ವೀಟ್ ಮಾಡಿದ್ದರು. ಕೆಂಗೇರಿ ನೈಸ್ ರಸ್ತೆಯಿಂದ ಮಂಡ್ಯ ಜಿಲ್ಲೆ ನಿಡಘಟ್ಟ ವರೆಗಿನ 56.2 ಕಿ.ಮೀ. ಉದ್ದದ ಮೊದಲ ಹಂತದ ಕಾಮಗಾರಿ ಇದೇ ಜೂನ್‌ಗೆ ಮುಗಿಯುವ ನಿರೀಕ್ಷೆ ಇತ್ತು. ಆದರೆ, ಅಲ್ಲಲ್ಲಿ ಇನ್ನೂ ಸೇತುವೆ ನಿರ್ಮಾಣ ಮೊದಲಾದ ಕೆಲಸ ಬಾಕಿ ಉಳಿದುಕೊಂಡಿವೆ.

ಭೂ ವಿವಾದ: ರಾಮನಗರ ಜಿಲ್ಲೆಯ ಕೆಂಚನಕುಪ್ಪೆ ಗ್ರಾಮದಲ್ಲಿ ಕೆಂಪಣ್ಣ ಅವರಿಗೆ ಸೇರಿದ ಸರ್ವೆ ಸಂಖ್ಯೆ 197ರ ಭೂ ವಿವಾದದಿಂದಾಗಿ ವಾಹನದ ಕೆಳ ಸೇತುವೆ ನಿರ್ಮಾಣ ಕಾರ್ಯ ಸ್ಥಗಿತಗೊಂಡಿದೆ.

ಚೋರಮಾರನಹಳ್ಳಿ ಗ್ರಾಮದ ಚಂದ್ರಕಾಂತ್ ಅವರಿಗೆ ಸೇರಿದ ಭೂವಿವಾದ ಬಗೆಹರಿಯದ ಕಾರಣ ಸುಮಾರು 300 ಮೀಟರ್ ವರೆಗಿನ ಕಾಮಗಾರಿ ನಿಂತಿದೆ. ಹಾಗೆಯೇ ಅಲ್ಲದೆ, ರವಿ ಮತ್ತು ಸಿದ್ದರಾಮಯ್ಯ ಒಡೆತನದ ಸರ್ವೆ ನಂಬರ್ 10/1ಎ, 10/1ಬಿ ಭೂಮಿಯಲ್ಲಿ ಹಾದು ಹೋಗಲಿರುವ 45 + 400 ರಿಂದ 45 + 600 ಕಿ.ಮೀ ಸರ್ವಿಸ್ ರಸ್ತೆ ನಿರ್ಮಾಣ ಕಾರ್ಯ ಸ್ಥಗಿತಗೊಂಡಿದೆ.

ಮೊದಲ ಪ್ಯಾಕೇಜ್ ವ್ಯಾಪ್ತಿಯ ಕೆಲವು ಗ್ರಾಮಗಳಲ್ಲಿನ ಭೂ ಮಾಲೀಕರು ಪರಿಹಾರ ಮೊತ್ತಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಭೂಸ್ವಾಧೀನ ಪ್ರಕ್ರಿಯೆ ಆರಂಭವಾದಾಗ ಬಿಡದಿ ಗ್ರಾಮ ಪಂಚಾಯಿತಿ ಆಗಿತ್ತು. ಈಗ ಪುರಸಭೆಯಾಗಿ ಮೇಲ್ದರ್ಜೆಗೆ ಏರಿರುವ ಕಾರಣ ಹೆಚ್ಚಿನ ಪರಿಹಾರಕ್ಕೆ ಒತ್ತಾಯಿಸಿ ನ್ಯಾಯಾಲಯದ ಮೆಟ್ಟಿಲು ಹತ್ತಿದ್ದಾರೆ. ಹೀಗಾಗಿ ಭೂವ್ಯಾಜ್ಯ ಬಗೆಹರಿಯದ ಕಾರಣ ಹೆದ್ದಾರಿ ನಿರ್ಮಾಣ ಕಾರ್ಯ ವಿಳಂಬವಾಗುತ್ತಿದೆ.

ಸಂಸದ ಸಿಂಹ ಪತ್ರ

ಕಾಮಗಾರಿಯಲ್ಲಿ ಆಗುತ್ತಿರುವ ವಿಳಂಬ ಕುರಿತು ಮೈಸೂರು ಸಂಸದ ಪ್ರತಾಪ ಸಿಂಹ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧ್ಯಕ್ಷರಿಗೆ ಪತ್ರ ಬರೆದು ಗಮನ ಸೆಳೆದಿದ್ದು, ಶೀಘ್ರ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿದ್ದಾರೆ.

ಶಿಯೊಮಿ ಕಂಪನಿಗೆ ಕೇಂದ್ರದ ಕೂರಂಬು

ತೆರಿಗೆ 'ಧರ್ಮ'ಕ್ಕೆ ಕಟ್ಟಿದ್ದೀರಾ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತದ ನೆಲದಲ್ಲಿ ಬಂಡವಾಳ ಹೂಡಿ ಸಹಸ್ರಾರು ಕೋಟಿ ಲಾಭ ಗಳಿಸಿದ್ದೀರಿ. ಅದಕ್ಕೇ ಲಕ್ಷಗಟ್ಟಲೆ ತೆರಿಗೆ ಕಟ್ಟಿದ್ದೀರಿ, ಅದು ಬಿಟ್ಟು ನೀವೇನಾದರೂ 'ಧರ್ಮ'ಕ್ಕೆ ತೆರಿಗೆ ಕಟ್ಟಿದ್ದೀರಾ' ಎಂದು ಚೀನಾದ ಶಿಯೊಮಿ ಕಂಪನಿಯನ್ನು ಖಾರವಾಗಿ ಪ್ರಶ್ನಿಸಿದ ಕೇಂದ್ರ ಸರ್ಕಾರ, ಕಂಪನಿಯ ಬೃಹತ್ ಮೊತ್ತವನ್ನು ಜಪ್ತಿ ಮಾಡಿರುವ ಜಾರಿ ನಿರ್ದೇಶನಾಲಯದ (ಇ.ಡಿ) ಕ್ರಮವನ್ನು ಹೈಕೋರ್ಟ್‌ನಲ್ಲಿ ಬಲವಾಗಿ ಸಮರ್ಥಿಸಿಕೊಂಡಿದೆ.



ಬೆಂಗಳೂರಿನಲ್ಲಿರುವ ತನ್ನ ನಾಲ್ಕು ಬ್ಯಾಂಕ್ ಖಾತೆಗಳಲ್ಲಿನ ₹ 5,551.27 ಕೋಟಿ ಮೊತ್ತವನ್ನು ಜಪ್ತಿ ಮಾಡಿರುವ ಇ.ಡಿ ಕ್ರಮವನ್ನು ಪ್ರಶ್ನಿಸಿ ಶಿಯೊಮಿ ಇಂಡಿಯಾ ಕಂಪನಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ರಜಾ ಕಾಲದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕಂಪನಿ ಪರ ಹಿರಿಯ ವಕೀಲ ಗಣೇಶನ್, 'ಕಂಪನಿಯು, ಕಳೆದ ಎಂಟು ವರ್ಷಗಳಲ್ಲಿ ಅಂದಾಜು ಒಂದು ಲಕ್ಷ ಕೋಟಿ ಮೊತ್ತವನ್ನು ತೆರಿಗೆ ರೂಪದಲ್ಲಿ ಸರ್ಕಾರಕ್ಕೆ ಪಾವತಿ ಮಾಡಿದೆ. ಕಾನೂನು ಚೌಕಟ್ಟಿನಲ್ಲೇ ತನ್ನ ವಹಿವಾಟು ಮುಂದುವರಿಸಿದೆ. ಆದರೆ, ಈಗ ಇ.ಡಿ, ಅಕ್ರಮ ವರ್ಗಾವಣೆ ನೆಪದಲ್ಲಿ ಬಹುಕೋಟಿ ಹಣವನ್ನು ಜಪ್ತಿ ಮಾಡಿರುವುದು ಕಾನೂನಿಗೆ ವಿರುದ್ಧವಾಗಿದೆ' ಎಂದು ಆಕ್ಷೇಪಿಸಿದರು.

ಇದನ್ನು ಬಲವಾಗಿ ಅಲ್ಲಗಳೆದ ಇ.ಡಿ ಪರ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಂ.ಬಿ. ನರಗುಂದ, 'ಭಾರತದ ನೆಲದಲ್ಲಿ ಗಳಿಸಿರುವ ಲಾಭದ ಹಣವನ್ನು ಶಿಯೋಮಿ ವಿದೇಶಿ ಕಂಪನಿಗಳಿಗೆ ರಾಯಧನದ ಹೆಸರಿನಲ್ಲಿ ಅಕ್ರಮವಾಗಿ ವರ್ಗಾವಣೆ ಮಾಡಿದೆ. ಕಂಪನಿಯ ಈ ಕ್ರಮವನ್ನು ಇ.ಡಿ ಕಾನೂನು ವ್ಯಾಪ್ತಿಯಲ್ಲಿಯೇ ಪ್ರಶ್ನಿಸಿದೆ. ಈ ಸಂಬಂಧ ಅದು ಕೈಗೊಂಡಿರುವ ಕ್ರಮಗಳು ಕಾನೂನು ಬದ್ಧವಾಗಿಯೇ ಇವೆ. ಇದಕ್ಕೆ ಕಂಪನಿ ತಕರಾರು ತೆಗೆದಿರುವುದು ಸಮರ್ಥನೀಯವಲ್ಲ' ಎಂದು ಪ್ರತಿಪಾದಿಸಿದರು.

ಉಭಯತ್ರರ ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, 'ಸದ್ಯದ ಮಟ್ಟಿಗೆ ಜಪ್ತಿಗೆ ಆದೇಶಿಸಲಾಗಿರುವ ಬ್ಯಾಂಕ್ ಖಾತೆಗಳಲ್ಲಿರುವ ಹಣದಲ್ಲಿ ಕಂಪನಿಯು ತನ್ನ ದೈನಂದಿನ ಖರ್ಚು ವೆಚ್ಚಗಳಿಗಾಗಿ ಒಂದು ಸಾವಿರ ಕೋಟಿ ಮೊತ್ತವನ್ನು ಓವರ್ ಡ್ರಾಫ್ಟ್ ಪಡೆದು ಬಳಸಬಹುದು' ಎಂದು ಆದೇಶಿಸಿ ವಿಚಾರಣೆಯನ್ನು ಇದೇ 23ಕ್ಕೆ ಮುಂದೂಡಿದೆ.

ಪ್ರಕರಣದಲ್ಲಿ ಪ್ರತಿವಾದಿಗಳನ್ನಾಗಿ ಕೇಂದ್ರ ಹಣಕಾಸು ಸಚಿವಾಲಯದ ಕಾರ್ಯದರ್ಶಿ ಸೇರಿದಂತೆ ಒಟ್ಟು ಆರು ಜನ ವಲಯಾಧಿಕಾರಿಗಳನ್ನು ಪ್ರತಿವಾದಿಗಳನ್ನಾಗಿ ಕಾಣಿಸಲಾಗಿದೆ. ಇ.ಡಿ ಪರ ವಕೀಲ ಪಿ.ಪ್ರಸನ್ನಕುಮಾರ್ ಹಾಜರಾಗಿದ್ದರು.

ರಾಯಧನದ ನೆಪದಲ್ಲಿ ಅಕ್ರಮ ವರ್ಗಾವಣೆ

'ಶಿಯೊಮಿ ಇಂಡಿಯಾ ಕಂಪನಿಯು, ಭಾರತದಲ್ಲಿ ಗಳಿಸಿದ ಹಣವನ್ನು ರಾಯಧನ ನೀಡುವ ನೆಪದಲ್ಲಿ ವಿದೇಶಿ ಕಂಪನಿಗಳಿಗೆ ಅಕ್ರಮವಾಗಿ ವರ್ಗಾವಣೆ ಮಾಡುತ್ತಿದೆ. ಆದ್ದರಿಂದ, ಇದು ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) 1999ರ ನಿಯಮಗಳ ಉಲ್ಲಂಘನೆ' ಎಂಬುದು ಇ.ಡಿ ಆರೋಪ.

ಈ ಆರೋಪಗಳಿಗೆ ಸಂಬಂಧಿಸಿದಂತೆ ಬೆಂಗಳೂರಿನ ಇ.ಡಿ ಕಚೇರಿಯ ಸಹಾಯಕ ನಿರ್ದೇಶಕ ಎನ್. ಸೋಮಶೇಖರ್, 'ಶಿಯೊಮಿ ಕಂಪನಿಯು ಬೆಂಗಳೂರು ನಗರದಲ್ಲಿನ ಸಿಟಿ ಬ್ಯಾಂಕ್, ಐಡಿಬಿಐ ಬ್ಯಾಂಕ್, ಡ್ಯೂಷ್ ಬ್ಯಾಂಕ್, ಎಚ್‌ಎಸ್‌ಬಿಸಿ ಬ್ಯಾಂಕ್‌ಗಳ ಚಾಲ್ತಿ ಖಾತೆ ಮತ್ತು ನಿಶ್ಚಿತ ಠೇವಣಿಗಳಲ್ಲಿ ಹೊಂದಿರುವ ₹ 5,551.27 ಬೃಹತ್ ಮೊತ್ತವನ್ನು ಜಪ್ತಿ ಮಾಡಬೇಕು' ಎಂದು 2022ರ ಏಪ್ರಿಲ್ 29ರಂದು ಆದೇಶಿಸಿದ್ದರು.

'ಇ.ಡಿ ಈ ರೀತಿಯ ಆದೇಶ ಹೊರಡಿಸಬಹುದು ಎಂಬ ಗುಮಾನಿಯಿಂದಲೇ ಏಪ್ರಿಲ್ 29ಕ್ಕೂ ಕೆಲವೇ ದಿನಗಳ ಮುನ್ನ ಸುಮಾರು ಒಂದೂವರೆ ಸಾವಿರ ಕೋಟಿಯಷ್ಟು ಮೊತ್ತದ ಹಣವನ್ನು ಶಿಯೊಮಿ ಚೀನಾದಲ್ಲಿರುವ ಸಂಸ್ಥೆಗೆ ವರ್ಗಾವಣೆ ಮಾಡಿದೆ' ಎಂಬುದು ಇ.ಡಿ ಆಪಾದನೆ. ಶಿಯೊಮಿ ಮೊಬೈಲ್, ಸ್ಮಾರ್ಟ್ ಫೋನ್‌ಗಳ ತಯಾರಿಕೆಯಲ್ಲಿ ಮುಂಚೂಣಿಯಲ್ಲಿರುವ ಕಂಪನಿ. ಇದು ಭಾರತದಲ್ಲಿ 2014ರಿಂದ ಕಾರ್ಯ ನಿರ್ವಹಿಸುತ್ತಿದೆ.

ಕ್ಷೀರ ಪಥ ನಕ್ಷತ್ರಪುಂಜದ ದೈತ್ಯ ಕುಳಿಯ ಮೊದಲ ಚಿತ್ರ ಬಿಡುಗಡೆ

ಪ್ಯಾರಿಸ್: ಖಗೋಳಶಾಸ್ತ್ರಜ್ಞರು ಕ್ಷೀರಪಥ ಗ್ಯಾಲಕ್ಸಿಯಲ್ಲಿರುವ ಕಪ್ಪು ಕುಳಿಯ ಮೊದಲ ಚಿತ್ರವನ್ನು ಬಹಿರಂಗಪಡಿಸಿದ್ದಾರೆ.

ಅಂತರರಾಷ್ಟ್ರೀಯ ಖಗೋಳಶಾಸ್ತ್ರಜ್ಞರ ತಂಡವು ಗುರುವಾರ ಕ್ಷೀರ ಪಥ ನಕ್ಷತ್ರಪುಂಜದ ಮಧ್ಯಭಾಗದಲ್ಲಿರುವ ಬೃಹತ್ ಕಪ್ಪು ಕುಳಿಯ ಮೊದಲ ಚಿತ್ರವನ್ನು ಅನಾವರಣಗೊಳಿಸಿದೆ. 'ಸಾಜಿಟೇರಿಯಸ್ ಎ' ಎಂದು ಇದನ್ನು ಕರೆಯಲಾಗಿದೆ.

ಈವೆಂಟ್ ಹಾರಿಜನ್ ಟೆಲಿಸ್ಕೋಪ್ (ಇಎಚ್‌ಟಿ) ಕೊಲಾಬರೇಶನ್ ಎಂದು ಕರೆಯಲ್ಪಡುವ ಜಾಗತಿಕ ವಿಜ್ಞಾನಿಗಳ ತಂಡವು ಈ ಚಿತ್ರವನ್ನು ಸೆರೆಹಿಡಿದಿದ್ದು, ಕಪ್ಪು ಕುಳಿಯ ಮೊದಲ ನೇರ ದೃಶ್ಯ ಇದಾಗಿದೆ.



ಕ್ಷೀರ ಪಥ ನಕ್ಷತ್ರ ಪುಂಜದ ಕಪ್ಪು ಕುಳಿ

'ಸ್ಯಾಜಿಟೇರಿಯಸ್ ಎ ಕಪ್ಪು ಕುಳಿಯ ಅತ್ಯುತ್ತಮ ಚಿತ್ರವನ್ನು ಇಂದು ನಿಮಗೆ ತೋರಿಸಲು ತುಂಬಾ ರೋಮಾಂಚನಕಾರಿಯಾಗಿದೆ' ಎಂದು ಎಎಚ್‌ಟಿ ಯೋಜನಾ ನಿರ್ದೇಶಕ ಹುಯಿಬ್ ವ್ಯಾನ್ ಲ್ಯಾಂಗೆವೆಲ್ಡೆ ಜರ್ಮನಿಯ ಗಾರ್ಚಿಂಗ್‌ನ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಒಡಿಶಾ ಮಾಜಿ ಶಾಸಕ ಇ.ಡಿ ಬಲೆಗೆ: ₹133 ಕೋಟಿ ಜಪ್ತಿ

ನವದೆಹಲಿ(ಪಿಟಿಐ): ಅನಧಿಕೃತ ಗಣಿಗಾರಿಕೆಗೆ ಸಂಬಂಧಿಸಿ ಅಕ್ರಮವಾಗಿ ಹಣ ವರ್ಗಾವಣೆ ಮಾಡಿದ ಪ್ರಕರಣದಲ್ಲಿ ಒಡಿಶಾದ ಮಾಜಿ ಶಾಸಕ ಜಿತೇಂದ್ರನಾಥ್ ಪಟ್ನಾಯಕ್ ಅವರು ಹೊಂದಿದ್ದ ₹ 133 ಕೋಟಿಗೂ ಹೆಚ್ಚು ಮೊತ್ತದ ನಿಶ್ಚಿತ ಠೇವಣಿ ಮತ್ತು ನಗದು ಜಪ್ತಿ ಮಾಡಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಗುರುವಾರ ತಿಳಿಸಿದೆ.

ಒಡಿಶಾದ ಕಿಯೋಂಜರ್ ಜಿಲ್ಲೆಯ ಜೋಡದಲ್ಲಿ ಜಿತೇಂದ್ರನಾಥ್ ಅವರ ಮನೆ, ಕಚೇರಿ ಹಾಗೂ ಅವರ ಸಂಬಂಧಿಕರ ಮನೆಗಳ ಮೇಲೆ ದಾಳಿ ನಡೆಸಿ, ₹70 ಲಕ್ಷ ನಗದು ಮತ್ತು 124 ನಿಶ್ಚಿತ ಠೇವಣಿಗಳಿಂದ ₹133.17 ಕೋಟಿ, ಇದಕ್ಕೆ ಸಂಬಂಧಿಸಿದ ದಾಖಲೆ ಮತ್ತು ಡಿಜಿಟಲ್ ಸಾಕ್ಷ್ಯಗಳನ್ನು ಜಪ್ತಿ ಮಾಡಲಾಗಿದೆ. ಜಿತೇಂದ್ರನಾಥ್ ಯಾವುದೇ ಕಾನೂನುಬದ್ಧ ಅನುಮತಿ ಇಲ್ಲದೇ, ಅಕ್ರಮ ಗಣಿಗಾರಿಕೆಯಿಂದ ಹಣ ಸಂಪಾದನೆ ಮಾಡಿದ್ದರು' ಎಂದು ಇ.ಡಿ ಆರೋಪಿಸಿದೆ.

ಅಕ್ರಮವಾಗಿ ಹಣ ವರ್ಗಾವಣೆ ಮಾಡಿದ ಸಂಬಂಧ ಜಿತೇಂದ್ರ ಪಟ್ನಾಯಕ್ ವಿರುದ್ಧ ಒಡಿಶಾ ವಿಚಕ್ಷಣ ಘಟಕವು ಎಫ್‌ಐಆರ್ ದಾಖಲಿಸಿ, ದೋಷಾರೋಪ ಪಟ್ಟಿಯನ್ನೂ ಸಲ್ಲಿಸಿತ್ತು. ಅಕ್ರಮ ಗಣಿಗಾರಿಕೆಯಲ್ಲಿ ಭಾಗಿಯಾಗಿ, ಸರ್ಕಾರದ ಬೊಕ್ಕಸಕ್ಕೆ ₹130 ಕೋಟಿ ನಷ್ಟ ಉಂಟು ಮಾಡಿದ್ದಾರೆ ಎಂದು ಆರೋಪಿಸಲಾಗಿತ್ತು.

'ಆರೋಪಿತರು ಸರ್ಕಾರಕ್ಕೆ ನಷ್ಟ ಉಂಟುಮಾಡಿದ್ದ ಅಷ್ಟೂ ಮೊತ್ತವನ್ನು ಸಂಪೂರ್ಣ ವಸೂಲು ಮಾಡುವಲ್ಲಿ ಯಶಸ್ಸು ಸಾಧಿಸಲಾಗಿದೆ' ಎಂದು ಇ.ಡಿ ಹೇಳಿದೆ.

ಜಿತೇಂದ್ರನಾಥ್ ಪಟ್ನಾಯಕ್ ಅವರು ಪ್ರತಿನಿಧಿಸುತ್ತಿದ್ದ ಅವರ ಕ್ಷೇತ್ರದಲ್ಲಿ 'ಜಿತು ಪಟ್ನಾಯಕ್' ಎಂದೇ ಹೆಸರುವಾಸಿಯಾಗಿದ್ದರು. ಚಂಪೂವಾ ವಿಧಾನ ಸಭಾ ಕ್ಷೇತ್ರದಿಂದ ಅವರು ಪಕ್ಷೇತರ ಶಾಸಕರಾಗಿ ಆಯ್ಕೆಯಾಗಿದ್ದರು.

ರಾಜ್ಯದಲ್ಲಿಯೇ ದಾವಣಗೆರೆಯಲ್ಲಿ ಪ್ರಥಮ ಬಾರಿಗೆ ತಪಾಸಣೆ

ಪರೀಕ್ಷಾ ಅಕ್ರಮ ತಡೆಗೆ ಇಎನ್‌ಟಿ ತಜ್ಞರು

ಪ್ರಜಾವಾಣಿ ವಾರ್ತೆ

ದಾವಣಗೆರೆ: ಜಿಲ್ಲೆಯಲ್ಲಿ ಇದೇ 21 ಮತ್ತು 22ರಂದು ನಡೆಯಲಿರುವ ಶಿಕ್ಷಕರ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮಗಳನ್ನು ತಡೆಯಲು ಜಿಲ್ಲಾಡಳಿತ ನೂತನ ಕ್ರಮ ಕೈಗೊಂಡಿದೆ. ಅಭ್ಯರ್ಥಿಗಳು ಪರೀಕ್ಷಾ ಕೊಠಡಿಗೆ ತೆರಳುವ ಮುಂಚೆ ಕಿವಿ, ಮೂಗು, ಗಂಟಲು ತಜ್ಞರು ತಪಾಸಣೆ ಮಾಡಲಿದ್ದಾರೆ.

'ಜಿಲ್ಲೆಯಲ್ಲಿ ಮೂರು ಪರೀಕ್ಷಾ ಕೇಂದ್ರಗಳಲ್ಲಿ 600 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಪ್ರತಿ ಕೊಠಡಿಯಲ್ಲಿ 20 ಅಭ್ಯರ್ಥಿಗಳು ಇರಲಿದ್ದಾರೆ. ಪ್ರತಿ ಕೇಂದ್ರಕ್ಕೆ ಒಬ್ಬ ಇಎನ್‌ಟಿ ತಜ್ಞರನ್ನು ನಿಯೋಜನೆ ಮಾಡುತ್ತಿದ್ದೇವೆ' ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ 'ಪ್ರಜಾವಾಣಿ'ಗೆ ತಿಳಿಸಿದರು.

'ಪರೀಕ್ಷಾ ಕೇಂದ್ರದಲ್ಲಿ ಮೆಟಲ್ ಡಿಟೆಕ್ಟರ್ ಅಳವಡಿಸಲಾಗುವುದು. ಪರೀಕ್ಷಾರ್ಥಿಯು ದೇಹದ ಯಾವುದೇ ಭಾಗದಲ್ಲಿ, ಮುಖ್ಯವಾಗಿ ಕಿವಿಯಲ್ಲಿ ಯಾವುದೇ ಸಾಧನ ಇಟ್ಟುಕೊಂಡು ಪರೀಕ್ಷಾ ಕೇಂದ್ರಕ್ಕೆ ಬಾರದಂತೆ ತಡೆಯಲು ಈ ಕ್ರಮ ಕೈಗೊಳ್ಳಲಾಗಿದೆ' ಎಂದು ವಿವರಿಸಿದರು.

'ಕೊಠಡಿ ಮೇಲ್ವಿಚಾರಕರು ಹಾಗೂ ಅಭ್ಯರ್ಥಿಗಳು ಮೊಬೈಲ್, ಎಲೆಕ್ಟ್ರಾನಿಕ್ ವಾಚ್ ಸೇರಿ ಯಾವುದೇ ರೀತಿಯ ಎಲೆಕ್ಟ್ರಾನಿಕ್ ಉಪಕರಣ ತೆಗೆದುಕೊಂಡು ಹೋಗಲು ಅವಕಾಶ ಇರುವುದಿಲ್ಲ. ಜಾಮಿಟ್ರಿ ಬಾಕ್ಸ್ ಇದ್ದಲ್ಲಿ ತಪಾಸಣೆಗೊಳಪಡಿಸಿ ರೇಖಾಗಣಿತ ಪರಿಕರಗಳನ್ನು ಮಾತ್ರ ಒಯ್ಯಲು ಅನುಮತಿ ನೀಡಲಾಗುವುದು. ಅದನ್ನು ಹೊರತುಪಡಿಸಿ ಬೇರೇನಾದರೂ ಇದ್ದಲ್ಲಿ ತಕ್ಷಣ ಅವರನ್ನು ಪರೀಕ್ಷೆಯಿಂದ ಅಮಾನತು ಮಾಡಲಾಗುವುದು. ಪರೀಕ್ಷಾ ಆವರಣ ಮತ್ತು ಕೊಠಡಿಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ಪಿಎಸ್‌ಐ ನೇಮಕಾತಿ ಸಹಿತ ಕೆಲವು ಪರೀಕ್ಷೆಗಳಲ್ಲಿ ಅಕ್ರಮ ನಡೆದಿರುವುದು ಕಂಡುಬಂದಿದೆ. ಶಿಕ್ಷಕರ ನೇಮಕಾತಿಯಲ್ಲಿ ಹೀಗೆ ಆಗಬಾರದು ಎಂದು ಬಿಗಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪರೀಕ್ಷಾ ಕೇಂದ್ರಗಳಲ್ಲಿ ಸಣ್ಣ ಸಂದೇಹ ಕಂಡುಬಂದರೂ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ತಿಳಿಸಿದ್ದಾರೆ.



ಯಾವುದೇ ರೀತಿಯ ಅಕ್ರಮಗಳು ಆಗಬಾರದೆಂಬ ಕಾರಣಕ್ಕೆ ರಾಜ್ಯದಲ್ಲಿಯೇ ಪ್ರಥಮ ಬಾರಿಗೆ ನಮ್ಮಲ್ಲಿ ಇಎನ್‌ಟಿ ಸರ್ಜನ್‌ಗಳು ಅಭ್ಯರ್ಥಿಗಳನ್ನು ತಪಾಸಣೆ ಮಾಡಲಿದ್ದಾರೆ

ಮಹಾಂತೇಶ ಬೀಳಗಿ
ಜಿಲ್ಲಾಧಿಕಾರಿ, ದಾವಣಗೆರೆ

'ಮತಾಂತರ ನಿಷೇಧ ಮಸೂದೆಗೆ ಸಹಿ ಹಾಕದಿರಿ'

ಬೆಂಗಳೂರು: ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ (ಮತಾಂತರ ನಿಷೇಧ) ಮಸೂದೆಯನ್ನು ಸುಗ್ರೀವಾಜ್ಞೆ ಮೂಲಕ ಕಾಯ್ದೆಯಾಗಿ ಜಾರಿಗೆ ತರುವ ಪ್ರಸ್ತಾವಕ್ಕೆ ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿರುವುದಕ್ಕೆ ಆರ್ಚ್ ಬಿಷಪ್ ರೆ.ಫಾ. ಪೀಟರ್ ಮಚಾಡೊ ಖಂಡಿಸಿದ್ದಾರೆ.

'ಶಿಕ್ಷಣ, ಆರೋಗ್ಯ, ಸಮಾಜ ಕಲ್ಯಾಣವೂ ಸೇರಿದಂತೆ ಈ ರಾಜ್ಯದ ಬೆಳವಣಿಗೆಯಲ್ಲಿ ಕ್ರೈಸ್ತ ಸಮುದಾಯದವರ ಕೊಡುಗೆಯೂ ಇದೆ. ಹಾಗಾಗಿ ರಾಜ್ಯಪಾಲರು ಈ ಮಸೂದೆಗೆ ಸಮ್ಮತಿ ನೀಡಬಾರದು' ಎಂದು ಅವರು ಒತ್ತಾಯಿಸಿದ್ದಾರೆ.



ಆರ್ಚ್ ಬಿಷಪ್ ಪೀಟರ್ ಮಚಾಡೊ

'ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಮಸೂದೆಯನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೆ ತರುವಂತೆ ರಾಜ್ಯಪಾಲರಿಗೆ ಸಚಿವ ಸಂಪುಟ ಶಿಫಾರಸು ಮಾಡಿದೆ. ಇದರಿಂದಾಗಿ ರಾಜ್ಯದಲ್ಲಿ ನಾವು ಇತರ ಎಲ್ಲ ಸಮುದಾಯಗಳ ಜನರ ಜೊತೆ ಹೊಂದಿರುವ ಸಾಮರಸ್ಯಕ್ಕೆ ಧಕ್ಕೆ ಉಂಟಾಗಲಿದೆ' ಎಂದಿದ್ದಾರೆ.

'ಇಲ್ಲಿ ಮತಾಂತರ ಅಥವಾ ಯಾವುದೇ ಸಮುದಾಯದ ವಿರುದ್ಧ ಆಕ್ರಮಣಕಾರಿ ಘಟನೆಗಳು ನಡೆದಿಲ್ಲ. ಸರ್ಕಾರದ ಮನಸ್ಸಿನಲ್ಲಿ ಏನಿದೆಯೋ ತಿಳಿಯದು. ದುಷ್ಕರ್ಮಿಗಳ ಗುಂಪುಗಳು ಇದನ್ನೇ ಬಳಸಿಕೊಂಡು ನಮ್ಮ ಸಮುದಾಯದವರಿಗೆ ತೊಂದರೆ ನೀಡುವುದರಲ್ಲಿ ಸಂದೇಹವಿಲ್ಲ. ಇಂತಹ ಗುಂಪುಗಳ ಮೇಲೆ ಸರ್ಕಾರಕ್ಕೂ ನಿಯಂತ್ರಣ ಇಲ್ಲ ಎಂಬುದನ್ನು ನಾವು ಈ ಹಿಂದಿನ ಘಟನೆಗಳಲ್ಲಿ ನೋಡಿದ್ದೇವೆ' ಎಂದು ಅವರು ತಿಳಿಸಿದ್ದಾರೆ.

'ನಮ್ಮ ಬಗ್ಗೆ ಕಾಳಜಿ ವಹಿಸುತ್ತದೆ ಎಂಬ ನಂಬಿಕೆ ಇಟ್ಟುಕೊಂಡಿದ್ದೇವೆ. ಯಾವುದಾದರೂ ಕಾನೂನುಬಾಹಿರ ಚಟುವಟಿಕೆಗಳು ಅಥವಾ ದೌರ್ಜನ್ಯಗಳು ನಡೆದಾಗ, ಅದನ್ನು ನಡೆಸಿದವರ ವಿರುದ್ಧ ಸರ್ಕಾರವು ಪುರಾವೆಗಳನ್ನು ಆಧರಿಸಿ ಕ್ರಮ ಕೈಗೊಳ್ಳುವುದಕ್ಕೆ ನಮ್ಮ ಯಾವ ಅಭ್ಯಂತರವೂ ಇಲ್ಲ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ರೋಗಗಳ ವೈಜ್ಞಾನಿಕ ಪತ್ತೆಗೆ 'ಬಯೋಬ್ಯಾಂಕ್'

ದೇಶದಲ್ಲೇ ಪ್ರಥಮ ಕೇಂದ್ರ: ದೀರ್ಘಾಯುಷ್ಯ ಕೇಂದ್ರಕ್ಕೆ ನಟ ಪುನೀತ್ ಹೆಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಕಾಲಿಕ ಮರಣ ತಡೆಯಲು ಮತ್ತು ಸಾಂಕ್ರಾಮಿಕ ರೋಗಗಳಿಗೆ ಲಸಿಕೆ ಅಥವಾ ಔಷಧ ಕಂಡುಹಿಡಿಯುವ ಸದುದ್ದೇಶದಿಂದ ಸದ್ಯದಲ್ಲೇ ಎಲೆಕ್ಟ್ರಾನಿಕ್ ಸಿಟಿಯಲ್ಲಿ 'ದೀರ್ಘಾಯುಷ್ಯ' (ಲಾಂಗಿವಿಟಿ ಸೆಂಟರ್) ಮತ್ತು ಸಾಂಕ್ರಾಮಿಕ ರೋಗ ಪರಿಹಾರ ಸಂಶೋಧನಾ ಕೇಂದ್ರಗಳನ್ನು ತೆರೆಯಲಾಗುವುದು' ಎಂದು ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ 'ಬೆಂಗಳೂರು ಬಯೋ-ಇನ್ನೋವೇಷನ್ ಸೆಂಟರ್' (ಬಿಬಿಸಿ) ಮೂಲಕ ವಿವಿಧ ನವೋದ್ಯಮಗಳು ಅಭಿವೃದ್ಧಿಪಡಿಸಿರುವ ಆರು ಜೀವ ವಿಜ್ಞಾನ ಸಾಧನಗಳನ್ನು ಗುರುವಾರ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, 'ದೀರ್ಘಾಯುಷ್ಯ ಸಂಶೋಧನಾ ಕೇಂದ್ರಕ್ಕೆ ನಟ ಪುನೀತ್ ರಾಜಕುಮಾರ್ ಹೆಸರಿಡಲಾಗುವುದು' ಎಂದರು.

'ಸಾಂಕ್ರಾಮಿಕ ಮತ್ತು ಅಸಾಂಕ್ರಾಮಿಕ ರೋಗಗಳನ್ನು ಪತ್ತೆ ಹಚ್ಚಲು ರಕ್ತ, ಎಂಜಲು, ಮಲ, ಮೂತ್ರ, ಕಫ ಇತ್ಯಾದಿಗಳನ್ನು ಸಂಗ್ರಹಿಸಲು ಸಮರ್ಪಕವಾದ ಮತ್ತು ಸುಸಜ್ಜಿತ ವ್ಯವಸ್ಥೆ ಬೇಕಾಗಿದೆ. ಇದಕ್ಕಾಗಿ, ಬಿಬಿಸಿ ಉಪಕ್ರಮದಡಿಯಲ್ಲಿ ದೇಶದ ಮೊಟ್ಟ ಮೊದಲ ಬಯೋ-ಬ್ಯಾಂಕಿಂಗ್ ಮತ್ತು ಸಂಗ್ರಹ ಮಾದರಿಗಳ ಕೋಶ ಸ್ಥಾಪಿಸಲಾಗುವುದು. ಈ ಮೂರು ಕೇಂದ್ರಗಳು ಎಲೆಕ್ಟ್ರಾನಿಕ್ ಸಿಟಿಯ ಬಿಬಿಸಿಯಲ್ಲೇ ಸ್ಥಾಪಿಸಲಾಗುವುದು' ಎಂದು ತಿಳಿಸಿದರು.

'ಲೋಕಾರ್ಪಣೆಗೊಂಡಿರುವ ಆರು ಜೀವ ವಿಜ್ಞಾನ ಸಾಧನಗಳಿಂದ ಡಿಎನ್‌ಎ, ಆರ್‌ಎನ್‌ಎ ಪರೀಕ್ಷೆಗಳು, ಕೋವಿಡ್ ಸ್ವಯಂ ಪರೀಕ್ಷೆ, ಆರಂಭಿಕ ಹಂತದಲ್ಲೇ ಕ್ಯಾನ್ಸರ್ ಪತ್ತೆ, ವರ್ಚುಯಲ್ ರಿಯಾಲಿಟಿ ವಿಧಾನದಲ್ಲಿ ಕಣ್ಣಿನ ಪರೀಕ್ಷೆ, ಶ್ವಾಸಕೋಶ ಮತ್ತು ಹೃದಯದ ಮೇಲಿನ ಒತ್ತಡಗಳನ್ನು ಸುಲಭವಾಗಿ ಮತ್ತು ಶೀಘ್ರ ಪತ್ತೆ ಹಚ್ಚಬಹುದು' ಎಂದು ಸಚಿವರು ಮಾಹಿತಿ ನೀಡಿದರು.

'ಬಿಬಿಸಿ ನೆರವು ಪಡೆದಿರುವ ಕಂಪನಿಗಳ ಮೌಲ್ಯವು ₹800 ಕೋಟಿಗೂ ಹೆಚ್ಚಾಗಿದೆ. ಜತೆಗೆ, 1,000ಕ್ಕೂ ಹೆಚ್ಚು ಉದ್ಯೋಗಗಳು ಕೂಡ ಇಲ್ಲಿ ಸೃಷ್ಟಿಯಾಗಿವೆ. ಜೀವವಿಜ್ಞಾನಗಳ ಅಡಿ ಬರುವ ಆರೋಗ್ಯ ರಕ್ಷಣೆ, ಬಯೋಫಾರ್ಮಾ, ಕೃಷಿ, ಆಹಾರ ಮತ್ತು ಪೌಷ್ಟಿಕತೆ, ಔದ್ಯಮಿಕ ಮತ್ತು ಪರಿಸರ ಜೈವಿಕ ತಂತ್ರಜ್ಞಾನ ಮತ್ತು ಮೆಡ್-ಟೆಕ್ ಕ್ಷೇತ್ರಗಳಲ್ಲಿ ತೊಡಗಿಕೊಂಡಿರುವ ಉದ್ಯಮಿಗಳ ಅಗತ್ಯಗಳನ್ನು ಗಮನಿಸಿ, ಅವುಗಳನ್ನು ಸುಗಮವಾಗಿ ಪೂರೈಸಲು ಈ ಕೇಂದ್ರದ ಮೂಲಕ ಮಹತ್ವದ ನೆರವು ನೀಡಲಾಗುತ್ತಿದೆ' ಎಂದು ವಿವರಿಸಿದರು.



ನವೋದ್ಯಮಗಳು ಅಭಿವೃದ್ಧಿಪಡಿಸಿರುವ ಜೀವ ವಿಜ್ಞಾನ ಸಾಧನಗಳನ್ನು ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಬೆಂಗಳೂರಿನಲ್ಲಿ ಗುರುವಾರ ಬಿಡುಗಡೆ ಮಾಡಿದರು. 'ಬೆಂಗಳೂರು ಬಯೋಇನ್ನೋವೇಶನ್ ಸೆಂಟರ್' ವ್ಯವಸ್ಥಾಪಕ ನಿರ್ದೇಶಕ ಡಾ.ಜಿತೇಂದ್ರ ಕುಮಾರ್, ಬಯೋಕಾನ್ ಮುಖ್ಯಸ್ಥೆ ಕಿರಣ್ ಮುಜುಮ್ದಾರ್ ಶಾ, ಐಟಿಬಿಟಿ ಇಲಾಖೆಯ ನಿರ್ದೇಶಕಿ ಮೀನಾ ನಾಗರಾಜ್ ಇದ್ದರು.

ಬೃಹತ್ ಶಿಲಾಯುಗಕ್ಕೆ ಸೇರಿದ ಅಪರೂಪದ ಸಂಶೋಧನೆ

ಸಮಾಧಿ ಪಕ್ಕದಲ್ಲೇ ಜನವಸತಿ ಅವಶೇಷ!

ಪ್ರಜಾವಾಣಿ ವಾರ್ತೆ

ಮೈಸೂರು: ಬೃಹತ್ ಶಿಲಾಯುಗಕ್ಕೆ ಸೇರಿದ ಸಮಾಧಿಗಳು ಹಾಗೂ ಅವುಗಳ ಪಕ್ಕದಲ್ಲೇ ಊರಿನ ಅವಶೇಷಗಳು ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಬೂದಿಪಡಗ ಗ್ರಾಮದಲ್ಲಿ ಪತ್ತೆಯಾಗಿವೆ.

ಮೈಸೂರು ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಪ್ರಾಧ್ಯಾಪಕರು 1960ರ ದಶಕದಲ್ಲಿ ನಡೆದ ಭಾರತೀಯ ಪುರಾತತ್ವ ಸರ್ವೇಕ್ಷಣೆಯಲ್ಲಿ ದಾಖಲಾದ ಶಿಲಾಸಮಾಧಿಗಳು ಈಗ ಹೇಗಿವೆ ಎಂಬ ಮರು ಸರ್ವೇಕ್ಷಣೆ ವೇಳೆ ಹಲವು ಅಚ್ಚರಿಗಳು ಕಂಡು ಬಂದಿವೆ.

ವರದಿಯಲ್ಲಿ ದಾಖಲಾದ ಬಹುತೇಕ ಸಮಾಧಿಗಳು ಕೃಷಿ ವಿಸ್ತರಣೆಯಿಂದ ಹಾಳಾಗಿದ್ದವು. ಆದರೆ, ಹೊಸದಾಗಿ ಬೂದಿಪಡಗದಲ್ಲಿ 20ರಿಂದ 25 ಸಮಾಧಿಗಳನ್ನು ಪತ್ತೆ ಮಾಡಲಾಯಿತು. ಇವುಗಳು ಅಂದಾಜು ಕ್ರಿ.ಪೂ. 1,000ದಿಂದ 100ನೇ ಇಸವಿಗೆ ಸೇರಿದ್ದಿರಬಹುದೆಂದು ಅಂದಾಜು ಮಾಡಲಾಗಿದೆ.

ಈ ಕುರಿತು ಪ್ರತಿಕ್ರಿಯಿಸಿದ ವಿಭಾಗದ ಸಹಾಯಕ ಪ್ರಾಧ್ಯಾಪಕಿ ವಿ.ಶೋಭಾ, 'ಪತ್ತೆಯಾಗಿರುವ ಸಮಾಧಿಗಳಲ್ಲಿ 3 ಸಮಾಧಿಗಳನ್ನು ಉತ್ಖನನ ಮಾಡಲಾಗುತ್ತಿದೆ. ಒಂದರಲ್ಲಿ 2 ಗುಂಡಿಗಳು ಪತ್ತೆಯಾಗಿದ್ದರೆ, ಮತ್ತೊಂದರಲ್ಲಿ ತೊಟ್ಟಿ ಸಮಾಧಿ ಸಿಕ್ಕಿದೆ. ಇದರಲ್ಲಿ ಚಪ್ಪಡಿ ಬಳಸಿ ಸಮಾಧಿ ನಿರ್ಮಿಸಲಾಗಿದ್ದು, ಮೂಳೆಯ ಚೂರುಗಳು, ಮಡಕೆಗಳು, ಕಬ್ಬಿಣದ ಉಪಕರಣಗಳು ಸಿಕ್ಕಿವೆ' ಎಂದು ಹೇಳಿದರು.

'ಸಮಾಧಿಗಳು ಶವವನ್ನು ಮಲಗಿಸುವಷ್ಟು ಉದ್ದವಿಲ್ಲ. ಬಹುಶಃ ಇವು ಆಂಶಿಕ ಸಮಾಧಿಗಳಿರಬಹುದು ಎನಿಸುತ್ತಿವೆ. ಸಮಾಧಿಗಳ ಪಕ್ಕದಲ್ಲೇ ಊರಿನ ಅವಶೇಷಗಳು ಸಿಕ್ಕಿವೆ. ಈ ಬಗೆಯ ತಾಣಗಳು ರಾಜ್ಯದಲ್ಲಿ ಅಪರೂಪದಲ್ಲಿ ಅಪರೂಪ ಎನಿಸಿವೆ' ಎಂದು ಹೇಳಿದರು.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ವಿಶ್ವವಿದ್ಯಾಲಯದ ಕುಲಸಚಿವ ಆರ್.ಶಿವಪ್ಪ, 'ಸೀಮಿತ ಸಂಪನ್ಮೂಲಗಳನ್ನು ಬಳಸಿಕೊಂಡು ಅತ್ಯಮೂಲ್ಯವಾದ ಸಂಶೋಧನೆ ಮಾಡಲಾಗಿದೆ' ಎಂದರು.

ಪಿಎಸ್ಐ ನೇಮಕಾತಿ ಪರೀಕ್ಷೆ: ಹಣ, ವಸೂಲಿ ಇದ್ದವರಿಗೆ ಹುದ್ದೆ • ಮತ್ತಷ್ಟು ಪೊಲೀಸರು, ರಾಜಕಾರಣಿಗಳ ಬಂಧನ ಸಾಧ್ಯತೆ

2011ರಿಂದಲೇ ಅಕ್ರಮ: ಕೋಟಿ, ಕೋಟಿ ವ್ಯವಹಾರ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಬ್ ಇನ್‌ಸ್ಪೆಕ್ಟರ್ (ಪಿಎಸ್ಐ) ಮಾತ್ರವಲ್ಲದೇ ಪೊಲೀಸ್ ಇಲಾಖೆಯ ಬಹುತೇಕ ನೇಮಕಾತಿಗಳಲ್ಲಿ 2011ರಿಂದಲೇ ಅಕ್ರಮ ನಡೆದಿರುವ ಬಗ್ಗೆ ಸಿಐಡಿ ಅಧಿಕಾರಿಗಳಿಗೆ ಅನುಮಾನ ಬಂದಿದ್ದು, ಮತ್ತಷ್ಟು ಪೊಲೀಸ್ ಅಧಿಕಾರಿಗಳು ಹಾಗೂ ರಾಜಕಾರಣಿಗಳು ಬಂಧನವಾಗುವ ಸಾಧ್ಯತೆ ಇದೆ.

ಪಿಎಸ್ಐ ಅಕ್ರಮದ ಆಳವಾದ ತನಿಖೆ ಆರಂಭಿಸಿರುವ ಅಧಿಕಾರಿಗಳು, ಪ್ರಮುಖ ರೂವಾರಿ ಎನ್ನಲಾದ ಪೊಲೀಸ್ ನೇಮಕಾತಿ ವಿಭಾಗದ ಡಿವೈಎಸ್ಪಿ ಶಾಂತಕುಮಾರ್ ಅವರನ್ನು ಬಂಧಿಸಿ ಮಾಹಿತಿ ಕಲೆಹಾಕುತ್ತಿದ್ದಾರೆ.

ಕಲಬುರಗಿ ಹಾಗೂ ಬೆಂಗಳೂರಿನಲ್ಲಿ ದಾಖಲಾಗಿದ್ದ ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಅಭ್ಯರ್ಥಿಗಳು, ಪೊಲೀಸ್ ಅಧಿಕಾರಿಗಳು, ರಾಜಕಾರಣಿಗಳು ಹಾಗೂ ಮಧ್ಯವರ್ತಿಗಳನ್ನು ಈಗಾಗಲೇ ಸಿಐಡಿ ಬಂಧಿಸಿದ್ದು, ಬಹುತೇಕರು, ಶಾಂತಕುಮಾರ್ ಹೆಸರು, ಅವರಿಗೆ ಹಣ ತಲುಪಿಸಿದ್ದ ಬಗ್ಗೆ ಬಾಯ್ಬಿಟ್ಟಿದ್ದಾರೆ.

‘ಬಂಧಿತರ ಹೇಳಿಕೆ ಆಧರಿಸಿ ಶಾಂತಕುಮಾರ್ ಅವರಿಗೆ ನೋಟಿಸ್ ನೀಡಲಾಗಿತ್ತು. ಅಕ್ರಮದಲ್ಲಿ ಶಾಂತಕುಮಾರ್ ಪಾತ್ರ ಮೇಲ್ನೋಟಕ್ಕೆ ಗೊತ್ತಾಗುತ್ತಿದ್ದಂತೆ, ಬಂಧಿಸಲಾಯಿತು’ ಎಂದು ಸಿಐಡಿ ಮೂಲಗಳು ಹೇಳಿವೆ.

‘ಆಂತರಿಕ ಭದ್ರತಾ ವಿಭಾಗದ (ಐಎಸ್‌ಡಿ) ಕರ್ತವ್ಯದಲ್ಲಿದ್ದ ಶಾಂತಕುಮಾರ್, ನಿಯೋಜನೆ ಮೇರೆಗೆ 2011ರಿಂದ ನೇಮಕಾತಿ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ನೇಮಕಾತಿ ಪ್ರಕ್ರಿಯೆಯ ಪೂರ್ಣ ಜವಾಬ್ದಾರಿ ಇತ್ತು’ ಎಂದೂ ಮೂಲಗಳು ತಿಳಿಸಿವೆ.

‘2011ರಿಂದ ಈವರೆಗೆ ಇಲಾಖೆಯ ಹಲವು ಹುದ್ದೆಗಳಿಗೆ ನೇಮಕಾತಿ ನಡೆದಿದ್ದು, ಇವೆಲ್ಲದರ ಉಸ್ತುವಾರಿಯನ್ನು ಶಾಂತಕುಮಾರ್ ವಹಿಸಿಕೊಂಡಿದ್ದರು. ಪ್ರತಿ ನೇಮಕಾತಿಯಲ್ಲೂ ಅಕ್ರಮ ನಡೆದಿರುವ ಮಾಹಿತಿ ಇದ್ದು, ಕೋಟಿ ಕೋಟಿ ವ್ಯವಹಾರ ನಡೆದಿರುವ ಸಂಶಯವೂ ಇದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

ಹಣ, ವಸೂಲಿ ಇದ್ದವರಿಗೆ ಹುದ್ದೆ: ‘ನೇಮಕಾತಿ ವಿಭಾಗದ ಸಿಬ್ಬಂದಿ ಹಾಗೂ ಅಧಿಕಾರಿಗಳ ಜೊತೆಯಲ್ಲಿ ಒಡನಾಟ ವಿಟ್ಟುಕೊಂಡಿದ್ದ ಮಧ್ಯವರ್ತಿಗಳು, ಹಣ ಹಾಗೂ ವಸೂಲಿ ಇದ್ದವರಿಗೆ ಹುದ್ದೆ ನೀಡಿರುವ ಶಂಕೆ ದಟ್ಟವಾಗಿದೆ’ ಎಂದು ತಿಳಿಸಿವೆ.

‘2011ರಿಂದ ಹಲವು ಎಡಿಜಿಪಿಗಳು, ನೇಮಕಾತಿ ವಿಭಾಗದ ಉಸ್ತುವಾರಿ ವಹಿಸಿಕೊಂಡಿದ್ದರು. ಎಲ್ಲರನ್ನೂ ವಿಚಾರಣೆ ನಡೆಸಲು ಸದ್ಯದಲ್ಲೇ ತೀರ್ಮಾನಿಸಲಾಗುವುದು’ ಎಂದೂ ಮೂಲಗಳು ಹೇಳಿವೆ.

ಎಡಿಜಿಪಿ ವಿಚಾರಣೆ?: ನೇಮಕಾತಿ ವಿಭಾಗದ ಎಡಿಜಿಪಿ ಅಮ್ರಿತ್ ಪೌಲ್ ಅವರ ಅಧೀನದಲ್ಲಿ ಶಾಂತಕುಮಾರ್ ಕೆಲಸ ಮಾಡುತ್ತಿದ್ದರು. ಹೀಗಾಗಿ, ಅಮ್ರಿತ್ ಪೌಲ್ ಅವರನ್ನೂ ವಿಚಾರಣೆ ನಡೆಸಲು ಸಿಐಡಿ ಸಿದ್ಧತೆ ಮಾಡಿಕೊಳ್ಳುತ್ತಿದೆ. ಸದ್ಯದಲ್ಲೇ ಅವರಿಗೂ ನೋಟಿಸ್ ನೀಡುವ ಸಾಧ್ಯತೆ ಇದೆ.

‘ಕಾನ್‌ಸ್ಟೆಬಲ್‌ನಿಂದ ಡಿವೈಎಸ್ಪಿ ಹುದ್ದೆಗೇರಿದ್ದ’

‘1996 ರಲ್ಲಿ ಬೆಂಗಳೂರು ನಗರ ಸಶಸ್ತ್ರ ಮೀಸಲು ಪಡೆಯ (ಸಿಎಆರ್) ಕಾನ್‌ಸ್ಟೆಬಲ್ ಆಗಿ ಶಾಂತಕುಮಾರ್ ವೃತ್ತಿ ಆರಂಭಿಸಿದ್ದರು. ನಂತರ, ಸೇವಾನಿರತ ಕೋಟಾದಡಿ 2006ರಲ್ಲಿ ಆರ್‌ಎಸ್ಐ ಆಗಿ ಆಯ್ಕೆ ಆಗಿದ್ದರು. ಕೆಲವೇ ವರ್ಷಗಳಲ್ಲಿ ಇನ್‌ಸ್ಪೆಕ್ಟರ್ ಹುದ್ದೆಗೆ ಬಡ್ತಿ ಪಡೆದು, ನೇಮಕಾತಿ ವಿಭಾಗಕ್ಕೆ ನಿಯೋಜನೆಗೊಂಡಿದ್ದರು’ ಎಂದು ಸಿಐಡಿ ಮೂಲಗಳು ಹೇಳಿವೆ.

‘ನೇಮಕಾತಿ ವಿಭಾಗದಲ್ಲಿ ಇರುವಾಗಲೇ 2019ರಲ್ಲಿ ಅವರಿಗೆ ಡಿವೈಎಸ್ಪಿ ಹುದ್ದೆಗೆ ಬಡ್ತಿ ಸಿಕ್ಕಿತ್ತು. ಅದಾದ ನಂತರವೂ ಅವರು ನೇಮಕಾತಿ ವಿಭಾಗದಲ್ಲೇ ಮುಂದುವರಿದಿದ್ದರು’ ಎಂದೂ ತಿಳಿಸಿವೆ.

‘ಪೊಲೀಸ್ ಇಲಾಖೆ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ, ಶುಲ್ಕ ಭರಿಸುವ, ಒಎಂಆರ್ ಸ್ಕ್ಯಾನಿಂಗ್, ಅಂತಿಮ ಆಯ್ಕೆ ಪಟ್ಟಿ ಪ್ರಕಟ ಸೇರಿದಂತೆ ಎಲ್ಲ ತಾಂತ್ರಿಕ ಕೆಲಸಗಳ ಜವಾಬ್ದಾರಿ ಶಾಂತಕುಮಾರ್ ಮೇಲಿತ್ತು. ಹೀಗಾಗಿ, ಅವರು ಹೇಳಿದ್ದಂತೆ ವಿಭಾಗದ ಎಲ್ಲ ಅಧಿಕಾರಿಗಳು ಹಾಗೂ ಸಿಬ್ಬಂದಿ ಕೇಳುತ್ತಿದ್ದರು’ ಎಂದೂ ಸಿಐಡಿ ಮೂಲಗಳು ಹೇಳಿವೆ.

ರುದ್ರಗೌಡ ಸಹಚರನ ವಿಚಾರಣೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್ಐ ನೇಮಕಾತಿ ಪರೀಕ್ಷೆಯಲ್ಲಿನ ಅಕ್ರಮಕ್ಕೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳು ಗುರುವಾರ, ಅಫಜಲಪುರದ ಶಿವಪ್ಪ ಆಲಮೇಲ್ ಅವರನ್ನು ವಿಚಾರಣೆಗೆ ಒಳಪಡಿಸಿದರು.

‘ಬ್ಲೂಟೂತ್ ಬಳಸಿ ಅಕ್ರಮ ಎಸಗಿದ ಆರೋಪದಡಿ ಜೈಲು ಸೇರಿರುವ ರುದ್ರಗೌಡ ಡಿ.ಪಾಟೀಲ ಗುಂಪಿನಲ್ಲಿ ಶಿವಪ್ಪ ಕೂಡ ಇದ್ದ. ರುದ್ರಗೌಡ ಬಂಧನದ ಬಳಿಕ ಆತ ತಲೆಮರೆಸಿಕೊಂಡಿದ್ದ. ಶಿವಪ್ಪ ಕಡೆಯಿಂದ ಕೆಲ ಮಾಹಿತಿ ಪಡೆದು ಕಳುಹಿಸಲಾಗಿದೆ. ಅಗತ್ಯಬಿದ್ದರೆ ಮತ್ತೆ ವಶಕ್ಕೆ ತೆಗೆದುಕೊಳ್ಳಲಾಗುವುದು’ ಎಂದು ಮೂಲಗಳು ತಿಳಿಸಿವೆ.

ಸಿಐಡಿ ಕಾರ್ಯಾಚರಣೆಯಿಂದ ಭಯಗೊಂಡಿರುವ ಕೆಲ ಅಭ್ಯರ್ಥಿಗಳು ಊರು ಬಿಟ್ಟು ತಲೆಮರೆಸಿಕೊಂಡಿದ್ದಾರೆ. ರುದ್ರಗೌಡ ಹಾಗೂ ಮಂಜುನಾಥ ಮೇಳಕುಂದಿ ಸಂಪರ್ಕದಲ್ಲಿದ್ದ ಕೆಲವರಿಗೆ ಹುಡುಕಾಟ ನಡೆದಿದೆ.

ಇನ್ನೂ ಸಿಗದ ಶಾಂತಿಬಾಯಿ: ಹಗರಣ ಸಂಬಂಧ ಬೇಕಾಗಿರುವ ಅಭ್ಯರ್ಥಿ ಶಾಂತಿಬಾಯಿ ಮಾತ್ರ ಇನ್ನೂ ಸಿಕ್ಕಿಲ್ಲ. ಏ. 10ರಂದೇ ಶಾಂತಿಬಾಯಿ ಹಾಗೂ ಆಕೆಯ ಪತಿ ಬಸ್ಯನಾಯ್ಕ ತಲೆಮರೆಸಿಕೊಂಡಿದ್ದಾರೆ.

ನ್ಯಾಯಾಂಗ ಬಂಧನಕ್ಕೆ: ಡಿವೈಎಸ್ಪಿ ಮಲ್ಲಿಕಾರ್ಜುನ ಸಾಲಿ ಹಾಗೂ ಸಿಪಿಐ ಆನಂದ ಮೇತ್ರಿ ಅವರ ಸಿಐಡಿ ಕಸ್ಟಡಿ ಗುರುವಾರ (ಮೇ 12) ಅಂತ್ಯವಾದ ಕಾರಣ, ಇಬ್ಬರನ್ನು ಕೋರ್ಟ್‌ಗೆ ಹಾಜರುಪಡಿಸಲಾಯಿತು. ನ್ಯಾಯಾಲಯ ಇಬ್ಬರನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು.

ಡಿವೈಎಸ್‌ಪಿ ವೈಜನಾಥ ಅಮಾನತು

ಕಲಬುರಗಿ: ಅಕ್ರಮ ಆರೋಪದಡಿ ಬಂಧಿತರಾಗಿದ್ದ ಇಲ್ಲಿನ 6ನೇ ಕೆಎಸ್‌ಆರ್‌ಪಿ ಬಟಾಲಿಯನ್‌ನ ಸಹಾಯಕ ಕಮಾಂಡೆಂಟ್ (ಡಿವೈಎಸ್ಪಿ) ವೈಜನಾಥ ರೇವೂರ ಅವರನ್ನು ಅಮಾನತು ಮಾಡಲಾಗಿದೆ. ‘ವೈಜನಾಥ, ರುದ್ರಗೌಡ ಡಿ.ಪಾಟೀಲ ಜತೆಗೆ ಆಪ್ತರಾಗಿ ಗುರುತಿಸಿಕೊಂಡಿದ್ದು, ಹಲವು ಅಭ್ಯರ್ಥಿಗಳ ನೇಮಕಾತಿಗೆ ‘ಡೀಲ್’ ಕುದುರಿಸಿದ್ದರು’ ಎಂಬ ಆರೋಪವಿದೆ.

ಆರೋಪಿಗಳಿಂದ ಹಣ ಜಪ್ತಿ: ಡಿವೈಎಸ್ಪಿ ಮಲ್ಲಿಕಾರ್ಜುನ ಸಾಲಿ ಮತ್ತು ಸಿಪಿಐ ಆನಂದ ಮೇತ್ರಿ ಅಕ್ರಮ ಎಸಗಲು ಪಡೆದಿದ್ದ ದೊಡ್ಡ ಮೊತ್ತದ ಹಣದಲ್ಲಿ, ಕೆಲವಷ್ಟನ್ನು ಅಧಿಕಾರಿಗಳು ಜಪ್ತಿ (ರಿಕವರಿ) ಮಾಡಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ. ಎಷ್ಟು ಮೊತ್ತ ಜಪ್ತಿ ಮಾಡಲಾಗಿದೆ ಎಂದು ಖಚಿತವಾಗಿಲ್ಲ.

ನನ್ನನ್ನು ಬೆಳೆಸಿದ್ದು ರಾಹುಲ್ ಗಾಂಧಿ: ರಮ್ಯಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಸಂಸದೆ ರಮ್ಯಾ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಬೆಂಬಲಿಗರ ಮಧ್ಯೆ ಟ್ವೀಟ್ ಸಮರ ಗುರುವಾರವೂ ಮುಂದುವರಿದಿದೆ.


ರಮ್ಯಾ

‘ರಮ್ಯಾ ಅವರಿಗೆ ಕಾಂಗ್ರೆಸ್ ಸದಸ್ಯತ್ವ ನೀಡಿ, ಸಂಸದೆಯನ್ನಾಗಿ ಮಾಡಿದ್ದು ಡಿ.ಕೆ. ಶಿವಕುಮಾರ್’ ಎಂದು ಶಿವಕುಮಾರ್ ಬೆಂಬಲಿಗರು ಟ್ವೀಟ್ ಮಾಡಿದ್ದಾರೆ. ಅದಕ್ಕೆ ತಿರುಗೇಟು ನೀಡಿರುವ ರಮ್ಯಾ, ‘ನನಗೆ ಅವಕಾಶ ನೀಡಿದ್ದು ಮತ್ತು ನನ್ನ ಪರ ನಿಂತಿದ್ದು ಕೇವಲ ರಾಹುಲ್‌ಗಾಂಧಿ ಹೊರತು ಬೇರಾರೂ ಅಲ್ಲ’ ಎಂದಿದ್ದಾರೆ.

‘ನನಗೆ ಅವಕಾಶ ಕೊಟ್ಟಿದ್ದೇವೆ ಎಂದು ಹೇಳಿಕೊಳ್ಳುವ ಯಾರಾದರೂ ಇದ್ದರೆ ಅವರು ಅವಕಾಶವಾದಿಗಳು. ಈ ಅವಕಾಶವಾದಿಗಳು ನನ್ನನ್ನು ಹಿಮ್ಮೆಟ್ಟಿಸಲು ಹಾಗೂ ಹತ್ತಿಕ್ಕಲು ಯತ್ನಿಸುತ್ತಿದ್ದಾರೆ. ನೀವು ಟಿ.ವಿಯಲ್ಲಿ ನೋಡುತ್ತಿರುವುದೆಲ್ಲವೂ ಅವರ ವಂಚಕ ಮನಸ್ಸನ್ನು ಮರೆ ಮಾಚಲು ನಡೆಸುತ್ತಿರುವ ಪ್ರಹಸನವಾಗಿದೆ’ ಎಂದು ರಮ್ಯಾ ವಾಗ್ದಾಳಿ ನಡೆಸಿದ್ದಾರೆ.

‘ನಾನು ಕಾಂಗ್ರೆಸ್ ಸಾಮಾಜಿಕ ಮಾಧ್ಯಮಗಳ ಉಸ್ತುವಾರಿಯನ್ನು ತ್ಯಜಿಸಿದೆ. ಆ ನಂತರ ₹8 ಕೋಟಿ ವಂಚಿಸಿ ಓಡಿ ಹೋದೆ ಎಂಬ ವರದಿಗಳು ಕನ್ನಡದ ಸುದ್ದಿವಾಹಿನಿಗಳಲ್ಲಿ ಬಂದಿದ್ದವು. ನನ್ನ ವಿಶ್ವಾಸಾರ್ಹತೆಯನ್ನು ನಾಶ ಮಾಡುವ ಪ್ರಯತ್ನ ನಡೆದವು. ನಾನು ಎಲ್ಲಿಯೂ ಓಡಿ ಹೋಗಿರಲಿಲ್ಲ. ವೈಯಕ್ತಿಕ ಕಾರಣಗಳಿಗಾಗಿ ರಾಜೀನಾಮೆ ನೀಡಿದ್ದೆ. ನಾನು ಪಕ್ಷಕ್ಕೆ ₹ 8 ಕೋಟಿ ವಂಚನೆ ಮಾಡಿಲ್ಲ. ಈ ಕುರಿತು ನಾನು ಮೌನವಾಗಿ ಉಳಿದದ್ದು ತಪ್ಪು’ ಎಂದು ಅವರು ಹೇಳಿದ್ದಾರೆ.

ಈ ವಿಚಾರದ ಕುರಿತು ಮಾತನಾಡಬೇಕು ಎಂದು ಎಐಸಿಸಿ ಪ್ರಧಾನಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರನ್ನು ಆಗ್ರಹಿಸಿರುವ ರಮ್ಯಾ, ‘ನೀವು ಕರ್ನಾಟಕಕ್ಕೆ ಬಂದಾಗ ಮಾಧ್ಯಮಗಳಿಗೆ ಸ್ಪಷ್ಟಪಡಿಸಬೇಕು. ಇದು ನೀವು ನನಗಾಗಿ ಮಾಡಬಹುದಾದ ಸಣ್ಣ ಕೆಲಸ. ಇದರಿಂದ ನಾನು ನನ್ನ ಜೀವನದ ಉದ್ದಕ್ಕೂ ನಿಂದನೆ ಮತ್ತು ಟ್ರೋಲ್‌ಗಳೊಂದಿಗೆ ಬದುಕುವುದು ತಪ್ಪಲಿದೆ’ ಎಂದು ಹೇಳಿದ್ದಾರೆ.

ಬುಧವಾರ ಶಾಸಕ ಎಂ.ಬಿ. ಪಾಟೀಲ ಅವರನ್ನು ಸಮರ್ಥನೆ ಮಾಡಿಕೊಂಡು ಮಾತನಾಡಿದ್ದ ರಮ್ಯಾ, ಡಿ.ಕೆ.ಶಿವಕುಮಾರ್ ಹೇಳಿಕೆ ಅಚ್ಚರಿ ಮೂಡಿಸಿದೆ ಎಂದು ಟ್ವೀಟ್ ಮಾಡಿದ ಬಳಿಕ ಅವರು ಡಿ.ಕೆ ಬೆಂಬಲಿಗರ ಕೆಂಗಣ್ಣಿಗೆ ಗುರಿಯಾದರು.

ಬಹಿರಂಗ ಹೇಳಿಕೆ ನೀಡುವುದಿಲ್ಲ:ಡಿಕೆಶಿ

ಮಾಜಿ ಸಂಸದೆ ರಮ್ಯಾ ಬಗ್ಗೆ ಬಹಿರಂಗ ಹೇಳಿಕೆ ನೀಡುವುದಿಲ್ಲ. ಯಾವುದೇ ಗೊಂದಲ ಇದ್ದರೂ ಪಕ್ಷದ ವೇದಿಕೆಯಲ್ಲಿ ಚರ್ಚಿಸಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಎಂ.ಬಿ.ಪಾಟೀಲ ಅವರು ಪಕ್ಷದ ಪ್ರಚಾರ ಸಮಿತಿ ಅಧ್ಯಕ್ಷರು, ರಮ್ಯಾ ಮಾಜಿ ಸಂಸದೆ. ಇಬ್ಬರೂ ನಮಗೆ ಬೇಕಾದವರು. ಎಲ್ಲಿ ಅಪಾರ್ಥ ಆಗಿದೆಯೋ ತಿಳಿದಿಲ್ಲ. ಏನೇ ಇದ್ದರೂ ಪಕ್ಷದ ವೇದಿಕೆಯಲ್ಲಿ ಚರ್ಚಿಸುತ್ತೇನೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

‘ನಿನ್ನ ಮುದ್ದಿನ ಗಿಣಿ, ಹದ್ದಾಗಿ ಕುಕ್ಕಿತಲ್ಲೋ’

ಬೆಂಗಳೂರು: ‘ನೀನೇ ಸಾಕಿದ ಗಿಣಿ, ನಿನ್ನ ಮುದ್ದಿನ ಗಿಣಿ, ಹದ್ದಾಗಿ ಕುಕ್ಕಿತಲ್ಲೋ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಉದ್ದೇಶಿಸಿ ಬಿಜೆಪಿ ಟ್ವೀಟ್ ಮೂಲಕ ವ್ಯಂಗ್ಯವಾಡಿದೆ.

ಮಾಜಿ ಸಂಸದೆ ರಮ್ಯಾ ಅವರು ಡಿ.ಕೆ. ಶಿವಕುಮಾರ್ ಮೇಲೆ ಪರೋಕ್ಷವಾಗಿ ಕಿಡಿ ಕಾರಿರುವುದನ್ನು ಪ್ರಸ್ತಾಪಿಸಿರುವ ಬಿಜೆಪಿ, ‘ಡಿ.ಕೆ.ಶಿ ಈಗ ಅಸಹಾಯಕ ಸ್ಥಿತಿ ತಲುಪಿದ್ದಾರೆ. ಅವರೇ ಬೆಳೆಸಿದ ರಮ್ಯಾ ಈಗ ಸಾಮಾಜಿಕ ಮಾಧ್ಯಮದ ಮೂಲಕ ಬುದ್ಧಿ ಹೇಳುತ್ತಿದ್ದಾರೆ’ ಎಂದಿದೆ.

‘ರಮ್ಯಾ ಅವರನ್ನು ಭ್ರಷ್ಟಾಧ್ಯಕ್ಷರ ವಿರುದ್ಧ ಛೂಬಿಟ್ಟಿದ್ದು ಮೀರ್‌ಸಾದಿಕ್ ಅವರಿರಬಹುದೇ’ ಎಂದು ಸಿದ್ದರಾಮಯ್ಯ ಅವರ ಕಾಲೆಳೆದಿದೆ.

ಡಿಕೆಶಿ ಅವರ ವಿರೋಧಿಗಳ ಸಾಲಿಗೆ ಈಗ ರಮ್ಯಾ ಕೂಡಾ ಸೇರಿದ್ದಾರೆ. ಡಿಕೆಶಿ ಅವರೇ ನಿಮ್ಮ ಜತೆ ಸಹೋದರ ಡಿ.ಕೆ. ಸುರೇಶ್ ಅವರಾದರೂ ನಿಲ್ಲಬಹುದೇ’ ಎಂದು ಬಿಜೆಪಿ ಕಟಕಿಯಾಡಿದೆ.

ಸಮಾಧಿ ಸ್ಥಿತಿ ತಲುಪಿದ್ದೇನೆ: ನಿತ್ಯಾನಂದ

ರಾಮನಗರ: ಬಿಡದಿಯ ಧ್ಯಾನಪೀಠ ತೊರೆದು ಈಕ್ವೆಡಾರ್ ಬಳಿಯ ದ್ವೀಪದಲ್ಲಿ ‘ಕೈಲಾಸ’ ದೇಶ ಸ್ಥಾಪನೆ ಮಾಡಿರುವ ನಿತ್ಯಾನಂದ ಸ್ವಾಮೀಜಿ ಸದ್ಯ ಸಮಾಧಿ ಸ್ಥಿತಿಯಲ್ಲಿ ಇದ್ದಾರಾ?

ನಿತ್ಯಾನಂದರ ಆರೋಗ್ಯ ಸ್ಥಿತಿ ಕುರಿತು ವದಂತಿಗಳು ಹಬ್ಬಿರುವ ಬೆನ್ನಲ್ಲೇ ಅವರ ಫೇಸ್‌ಬುಕ್ ಪುಟದಲ್ಲಿ ಈ ಪೋಸ್ಟ್ ಹಾಕಲಾಗಿದೆ. ಇದರಲ್ಲಿ ನಿತ್ಯಾನಂದರ ಈಚಿನ ಚಿತ್ರಗಳ ಜೊತೆಗೆ, ಕೈ ಬರಹದ ಚಿತ್ರವೂ ಇದೆ. ‘ನಾನು ಸದ್ಯ ಸಮಾಧಿಸ್ಥಿತಿ ತಲುಪಿದ್ದು, 2026ರಲ್ಲಿ ಲೌಕಿಕ ಜಗತ್ತಿನ ಚಟುವಟಿಕೆಗೆ ಹಿಂತಿರುಗುತ್ತೇನೆ’ ಎಂದು ಬರೆದುಕೊಂಡಿದ್ದಾರೆ.

‘ನಾನು ಸತ್ತು ಹೋಗಿದ್ದೇನೆ ಎಂದು ಕೆಲವರು ಸುದ್ದಿ ಹಬ್ಬಿಸಿದ್ದಾರೆ. ಅದು ಸುಳ್ಳು. 27 ವೈದ್ಯರ ತಂಡ ನನ್ನನ್ನು ನೋಡಿಕೊಳ್ಳುತ್ತಿದೆ. ಸಮಾಧಿ ಸ್ಥಿತಿಯಲ್ಲಿದ್ದರೂ ನಿತ್ಯ ಶಿವ ಪೂಜೆಯನ್ನು ಬಿಟ್ಟಿಲ್ಲ. ಆದರೆ ನೀರು-ಆಹಾರ ಸ್ವೀಕರಿಸುತ್ತಿಲ್ಲ’ ಎಂದೂ ನಿತ್ಯಾನಂದ ಸ್ಪಷ್ಟನೆ ನೀಡಿದ್ದಾರೆ.



ಸಮಾಧಿ ಸ್ಥಿತಿಯಲ್ಲಿ ನಿತ್ಯಾನಂದ

‘44 ವರ್ಷವಾಗಿದ್ದರೂ ನನ್ನ ಹೃದಯ 18 ವರ್ಷದ ಯುವಕನಂತೆ ಆರೋಗ್ಯವಾಗಿದೆ. ಎಲ್ಲ ಅಂಗಾಂಗಗಳೂ ಉತ್ತಮವಾಗಿವೆ. ನನ್ನ ಬಗೆಗಿನ ಟ್ರೋಲ್ ಅನ್ನು ತಮಾಷೆಯಿಂದ ಸ್ವೀಕರಿಸುತ್ತಿದ್ದೇನೆ’ ಎಂದು ಹೇಳಿಕೊಂಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕಾಶಿ ಪೀಠ: ನೂತನ ಜಗದ್ಗುರು ಪಟ್ಟಾಭಿಷೇಕ ಇಂದು

ರಾಯಚೂರು: ವೀರಶೈವ ಪಂಚಪೀಠಗಳಲ್ಲಿ ಒಂದಾದ ಕಾಶಿ ಪೀಠಕ್ಕೆ ದೇವದುರ್ಗ ತಾಲ್ಲೂಕು ಜಾಲಹಳ್ಳಿ ಗ್ರಾಮದ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಅವರನ್ನು ಜಗದ್ಗುರುವಾಗಿ ನೇಮಿಸಲಾಗಿದೆ.


ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ

ಶುಕ್ರವಾರ (ಮೇ 13) ಕಾಶಿ ಸಮೀಪದ ಜಂಗಮವಾಡಿಯಲ್ಲಿ ಪಟ್ಟಾಭಿಷೇಕ ಸಮಾರಂಭ ನಡೆಯಲಿದೆ.

ಈವರೆಗೆ ಅವರು ಸೊಲ್ಲಾಪುರದ ಹೊಟಗಿ ಬೃಹನ್ಮಠದ ಪೀಠಾಧಿಕಾರಿಯಾಗಿದ್ದರು. ಹಾಲಿ ಕಾಶಿ ಜಗದ್ಗುರು ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಅವರು ಆರು ತಿಂಗಳ ಹಿಂದೆಯೇ ಇವರ ಹೆಸರು ಘೋಷಿಸಿದ್ದರು.

ಅತ್ಯಾಚಾರ ಯತ್ನ: ಇಬ್ಬರ ಬಂಧನ

ತೀರ್ಥಹಳ್ಳಿ: ಆರಗ ಸಮೀಪ ಗ್ರಾಮವೊಂದರಲ್ಲಿ ಪರಿಶಿಷ್ಟ ಮಹಿಳೆಯನ್ನು ವಿವಸ್ತ್ರಗೊಳಿಸಿ ಅತ್ಯಾಚಾರಕ್ಕೆ ಯತ್ನಿಸಿದ್ದ ಪ್ರಕರಣದ ಸಂಬಂಧ ಇಬ್ಬರು ಆರೋಪಿಗಳನ್ನು ಗುರುವಾರ ಬಂಧಿಸಲಾಗಿದೆ.

ಸಂಪತ್ ಮತ್ತು ಆದರ್ಶ್ ಬಂಧಿತರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಂ.ಲಕ್ಷ್ಮೀಪ್ರಸಾದ್ ಅವರು ತೀರ್ಥಹಳ್ಳಿ ಡಿವೈಎಸ್‌ಪಿ ಕಚೇರಿಗೆ ಭೇಟಿ ನೀಡಿ ಪ್ರಕರಣ ತನಿಖೆ ವಿಚಾರವಾಗಿ ಚರ್ಚಿಸಿದರು.

ದೌರ್ಜನ್ಯಕ್ಕೆ ಒಳಗಾದ ದಂಪತಿ ತಾಲ್ಲೂಕು ಜೆ.ಸಿ.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ವೈದ್ಯಕೀಯ ಪರೀಕ್ಷೆಗೆ ಕ್ರಮವಹಿಸಲಾಗಿದೆ.

‘ರವೀಂದ್ರನಾಥ್ ರಾಜೀನಾಮೆಗೂ, ನನಗೂ ಸಂಬಂಧವಿಲ್ಲ’

ಹೊನ್ನಾಳಿ: ‘ಡಿಜಿಪಿ ಡಾ.ಪಿ. ರವೀಂದ್ರನಾಥ್ ಅವರ ರಾಜೀನಾಮೆಗೂ ನನಗೂ ಯಾವುದೇ ಸಂಬಂಧವಿಲ್ಲ’ ಎಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದರು.

‘ನಾನು ನಕಲಿ ಜಾತಿ ಪ್ರಮಾಣಪತ್ರವನ್ನು ಪಡೆದಿಲ್ಲ. ಡಿ.ಕೆ.ಶಿವಕುಮಾರ್ ಅವರು ನನ್ನ ಮೇಲೆ ಮಾಡಿರುವ ಆರೋಪ ಸುಳ್ಳು. ಅವರು ಸುಳ್ಳು ಹೇಳುವುದನ್ನು ಬಿಡಬೇಕು’ ಎಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ಬೊಮ್ಮಾಯಿ – ನಳಿನ್ ಚರ್ಚೆ

ಬೆಂಗಳೂರು: ವಿಧಾನಪರಿಷತ್ ಮತ್ತು ರಾಜ್ಯಸಭೆಗಳಿಗೆ ತೆರವಾಗುವ ಸ್ಥಾನಗಳಿಗೆ ನಡೆಯುವ ಚುನಾವಣೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಜತೆ ಗುರುವಾರ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಚರ್ಚೆ ನಡೆಸಿದರು.

ವಿಧಾನಸಭೆಯಿಂದ ವಿಧಾನ ಪರಿಷತ್ತು ಮತ್ತು ರಾಜ್ಯಸಭೆಯ ಸ್ಥಾನಗಳಿಗೆ ನಡೆಯುವ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಕುರಿತಂತೆ ಚರ್ಚೆ ನಡೆಯಿತು ಎಂದು ಮೂಲಗಳು ತಿಳಿಸಿವೆ.



ಸಂಪುಟ ಸಭೆಯ ಬಳಿಕ ಸಚಿವ ಜೆ.ಸಿ. ಮಾಧುಸ್ವಾಮಿ ಮಾಹಿತಿ

ಅಟಲ್ ಪರಿವರ್ತನಾ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ರಾಜ್ಯದ 287 ನಗರಗಳನ್ನು 'ಅಟಲ್ ನಗರ ಪರಿವರ್ತನಾ ಅಭಿಯಾನ'ದ ವ್ಯಾಪ್ತಿಗೆ ತರುವ ಪ್ರಸ್ತಾವಕ್ಕೆ ಸಂಪುಟ ಅನುಮೋದನೆ ನೀಡಿದೆ. ಈ ನಗರಗಳಲ್ಲಿ ಐದು ವರ್ಷಗಳ ಅವಧಿಯಲ್ಲಿ ಕುಡಿಯುವ ನೀರು ಪೂರೈಕೆ ಮತ್ತು ಒಳಚರಂಡಿ ನಿರ್ಮಾಣಕ್ಕೆ ₹ 9,237 ಕೋಟಿ ವೆಚ್ಚ ಮಾಡಲಾಗುತ್ತದೆ.

ಸಂಪುಟ ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, 'ನಗರಪಾಲಿಕೆಗಳನ್ನು ಹೊರತುಪಡಿಸಿ ಒಂದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಎಲ್ಲ ನಗರ ಸ್ಥಳೀಯ ಸಂಸ್ಥೆಗಳೂ ಯೋಜನೆ ವ್ಯಾಪ್ತಿಗೆ ಬರುತ್ತವೆ. ಕೇಂದ್ರ, ರಾಜ್ಯ ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗಳ ಪಾಲುದಾರಿಕೆಯಲ್ಲಿ ಯೋಜನೆ ಅನುಷ್ಠಾನಗೊಳ್ಳಲಿದೆ. ಕೇಂದ್ರ ಸರ್ಕಾರ ₹ 4,615 ಕೋಟಿ, ರಾಜ್ಯ ಸರ್ಕಾರ ₹ 3,692 ಕೋಟಿ ಮತ್ತು ನಗರ ಸ್ಥಳೀಯ ಸಂಸ್ಥೆಗಳು ₹ 923 ಕೋಟಿ ಭರಿಸಲಿವೆ' ಎಂದರು.

ಸ್ವಚ್ಛ ಭಾರತ: ಸಣ್ಣ ನಗರಸಭೆಗಳು, ಪಟ್ಟಣ ಪಂಚಾಯಿತಿಗಳು ಮತ್ತು ಪುರಸಭೆಗಳಲ್ಲೂ ಸ್ವಚ್ಛ ಭಾರತ ಯೋಜನೆ ಅನುಷ್ಠಾನಗೊಳಿಸುವ ಪ್ರಸ್ತಾವಕ್ಕೆ ಒಪ್ಪಿಗೆ ನೀಡಲಾಗಿದೆ. ಒಟ್ಟು ₹ 3,966 ಕೋಟಿ ವೆಚ್ಚವಾಗಲಿದೆ. ರಾಜ್ಯವು ₹ 1,292 ಕೋಟಿ ಭರಿಸಲಿದೆ ಎಂದು ತಿಳಿಸಿದರು.

ಬಜೆಟ್‌ನಲ್ಲಿ ಘೋಷಿಸಿದಂತೆ ಸಣ್ಣ ರೈತರಿಗೆ 5 ಎಕರೆಗಳವರೆಗೆ ಪ್ರತಿ ಎಕರೆಗೆ ₹ 250 ರಷ್ಟು ಡೀಸೆಲ್ ಸಹಾಯಧನ ನೀಡುವ ಯೋಜನೆ ಅನುಷ್ಠಾನಕ್ಕೂ ಒಪ್ಪಿಗೆ ನೀಡಲಾಗಿದೆ. 69.81 ಲಕ್ಷ ರೈತರು ಈ ಯೋಜನೆಯ ಲಾಭ ಪಡೆಯಲಿದ್ದಾರೆ ಎಂದರು.

ನಿಯಮ ಸಡಿಲಿಕೆ: ದೌರ್ಜನ್ಯಕ್ಕೊಳಗಾಗಿ ಮೃತರಾಗುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬಗಳ ಸದಸ್ಯರಿಗೆ ಅನುಕಂಪದ ಆಧಾರದಲ್ಲಿ ಸರ್ಕಾರಿ ನೌಕರಿ ನೀಡುವುದಕ್ಕೆ ಸಂಬಂಧಿಸಿದ ನಿಯಮಗಳಿಗೆ ತಿದ್ದುಪಡಿ ತರಲು ನಿರ್ಧರಿಸಲಾಗಿದೆ. ಅರ್ಜಿ ಸಲ್ಲಿಕೆ ಅವಧಿಯನ್ನು ಎರಡು ವರ್ಷಗಳವರೆಗೆ ವಿಸ್ತರಿಸುವ, ಮಗ, ಮಗಳು ಅಥವಾ ಪತ್ನಿಯ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸುವ ತಿದ್ದುಪಡಿಗೆ ಒಪ್ಪಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಸಾರಿಗೆ ಇಲಾಖೆಯಲ್ಲಿ ಮೋಟಾರು ವಾಹನ ಇನ್‌ಸ್ಪೆಕ್ಟರ್‌ಗಳ ಹುದ್ದೆಗಳಲ್ಲಿ ಶೇಕಡ 5 ರಷ್ಟನ್ನು ಮುಂಬಡ್ತಿಯ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಿ ಕರ್ನಾಟಕ ಮೋಟಾರು ವಾಹನಗಳ ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾವಕ್ಕೂ ಸಂಪುಟ ಅಂಗೀಕಾರ ನೀಡಿದೆ ಎಂದರು.

ಉಗ್ರಾಣ ನಿಗಮಕ್ಕೆ ನೆರವು: ರಾಜ್ಯ ಉಗ್ರಾಣ ನಿಗಮವು ₹ 862 ಕೋಟಿ ವೆಚ್ಚದಲ್ಲಿ ಕೈಗೊಂಡಿದ್ದ ಕಟ್ಟಡ ನಿರ್ಮಾಣ ಕಾಮಗಾರಿಗಳಲ್ಲಿನ ತೊಡಕು ನಿವಾರಣೆಗೆ ತೀರ್ಮಾನ ಕೈಗೊಳ್ಳಲಾಗಿದೆ. ನಿಗಮದ ಸಾಲಗಳಿಗೆ ನೀಡಿದ್ದ ಖಾತರಿಯನ್ನು ಭರಿಸುವುದು ಹಾಗೂ ಗುತ್ತಿಗೆದಾರರಿಗೆ ₹ 126 ಕೋಟಿ ಪಾವತಿಗೆ ಒಪ್ಪಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ಪ್ರಮುಖ ತೀರ್ಮಾನಗಳು

- ಔರಾದ್ ತಾಲ್ಲೂಕಿನ ಬಬಲೂರಿನಲ್ಲಿ ₹ 89.94 ಕೋಟಿ ವೆಚ್ಚದಲ್ಲಿ ಕೇಂದ್ರೀಯ ಪೆಟ್ರೋಲಿಯಂ ಎಂಜಿನಿಯರಿಂಗ್ ತಂತ್ರಜ್ಞಾನ ಸಂಸ್ಥೆ ಸ್ಥಾಪನೆ.
- ಹೀಮೋಫಿಲಿಯಾ ರೋಗಿಗಳಿಗೆ ಉಚಿತವಾಗಿ ವಿತರಿಸಲು ₹ 29 ಕೋಟಿ ವೆಚ್ಚದಲ್ಲಿ ಔಷಧಿ ಖರೀದಿ.
- ಸಿಕಲ್‌ಸೆಲ್ ಅನೀಮಿಯಾ ರೋಗಿಗಳಿಗೆ ವಿತರಿಸಲು ₹ 15 ಕೋಟಿ ವೆಚ್ಚದಲ್ಲಿ ಔಷಧಿ ಖರೀದಿ.
- ಶಿಗ್ಗಾಂವಿಯಲ್ಲಿ ಕೆಎಸ್‌ಆರ್‌ಟಿಸಿ ವತಿಯಿಂದ ₹ 28 ಕೋಟಿ ವೆಚ್ಚದಲ್ಲಿ ಚಾಲನಾ ತರಬೇತಿ ಕೇಂದ್ರ ಸ್ಥಾಪನೆ.
- ನಾರಾಯಣಪುರ ಬಲದಂಡೆ ವ್ಯಾಪ್ತಿಯಲ್ಲಿ ದೇವದುರ್ಗ ತಾಲ್ಲೂಕಿನ 33 ಕೆರೆಗಳಿಗೆ ನೀರು ತುಂಬುವ ₹ 330 ಕೋಟಿ ವೆಚ್ಚದ ಕಾಮಗಾರಿ ಅಂದಾಜು ಪಟ್ಟಿಗೆ ಒಪ್ಪಿಗೆ.
- ರಾಜೀವ್ ಗಾಂಧಿ ವಸತಿ ನಿಗಮದಿಂದ ಮೈಸೂರು ಜಿಲ್ಲೆಯ ಸಾತನಹಳ್ಳಿ, ಸಾದನಹಳ್ಳಿ ಮತ್ತು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯಲ್ಲಿ ₹ 49.23 ಕೋಟಿ ವೆಚ್ಚದಲ್ಲಿ 724 ಮನೆಗಳ ನಿರ್ಮಾಣಕ್ಕೆ ಒಪ್ಪಿಗೆ.
- ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅಲ್ಲಿನ ಗೋನಾಳ್ ಗ್ರಾಮದಲ್ಲಿ 50:50ರ ಪಾಲುದಾರಿಕೆಯಲ್ಲಿ 101.98 ಎಕರೆ ವಿಸ್ತೀರ್ಣದಲ್ಲಿ ಬಡಾವಣೆ ನಿರ್ಮಾಣ.
- ಅನುಭವ ಮಂಟಪ ಕಾಮಗಾರಿಯ ಅಂದಾಜು ವೆಚ್ಚವನ್ನು ₹ 612 ಕೋಟಿ ಹೆಚ್ಚಿಸುವ ಪ್ರಸ್ತಾವಕ್ಕೆ ಅನುಮೋದನೆ.
- ಬೆಂಗಳೂರಿನ ಬಸವನಗುಡಿಯ ಕಾರಂಜಿ ಆಂಜನೇಯ ಸ್ವಾಮಿ ದೇವಾಲಯಕ್ಕೆ ಸೇರಿದ ಜಾಗದಲ್ಲಿ ನಿರ್ಮಿಸುತ್ತಿರುವ ಕಲ್ಯಾಣ ಮಂಟಪ ಕಾಮಗಾರಿಯನ್ನು ಶೃಂಗೇರಿ ಶಾರದಾ ಪೀಠದ ಸಹಭಾಗಿತ್ವದಲ್ಲಿ ಪೂರ್ಣಗೊಳಿಸಲು ಒಪ್ಪಿಗೆ.
- ಮೈಸೂರಿನ ಕೆ.ಆರ್.ಎಸ್. ರಸ್ತೆಯ ಆಂಜನೇಯ ಸ್ವಾಮಿ ದೇವಸ್ಥಾನವನ್ನು ಉತ್ತರಾದಿ ಮಠಕ್ಕೆ ದೀರ್ಘಾವಧಿಗೆ ಗುತ್ತಿಗೆಗೆ ನೀಡುವುದು.

ಸಿಎಸ್ ನೇಮಕ: ಸಿಎಂಗೆ ಅಧಿಕಾರ

ಬೆಂಗಳೂರು: ನೂತನ ಮುಖ್ಯ ಕಾರ್ಯದರ್ಶಿಯನ್ನು ನೇಮಕ ಮಾಡುವ ಅಧಿಕಾರವನ್ನು ಮುಖ್ಯಮಂತ್ರಿಯವರ ವಿವೇಚನೆಗೆ ಬಿಡುವ ತೀರ್ಮಾನವನ್ನು ಸಂಪುಟ ಸಭೆ ಕೈಗೊಂಡಿದೆ.

'ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಈ ತಿಂಗಳ ಅಂತ್ಯದಲ್ಲಿ ನಿವೃತ್ತರಾಗುತ್ತಾರೆ. ಒಂಬತ್ತು ಮಂದಿ ಐಎಎಸ್ ಅಧಿಕಾರಿಗಳು ಜೇಷ್ಠತಾ ಪಟ್ಟಿಯಲ್ಲಿದ್ದಾರೆ. ಅವರಲ್ಲಿ ಒಬ್ಬರನ್ನು ಮುಖ್ಯ ಕಾರ್ಯದರ್ಶಿಯನ್ನಾಗಿ ನೇಮಕ ಮಾಡುವ ಅಧಿಕಾರವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ನೀಡಲಾಗಿದೆ' ಎಂದು ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

ಸೈಬರ್ ಭದ್ರತಾ ನೀತಿಗೆ ಒಪ್ಪಿಗೆ: 'ಕರ್ನಾಟಕ ಸೈಬರ್ ಭದ್ರತಾ ನೀತಿ 2022-2027ಕ್ಕೂ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಸೈಬರ್ ಭದ್ರತೆ, ತರಬೇತಿ ಮತ್ತಿತರ ಅಂಶಗಳು ನೀತಿಯಲ್ಲಿವೆ' ಎಂದರು.

ಕೇಂದ್ರ ಸರ್ಕಾರದ ಮಾದರಿಯಲ್ಲೇ ರಾಜ್ಯದಲ್ಲೂ 'ಖಾಸಗಿ ಭದ್ರತಾ ಸಂಸ್ಥೆಗಳ ನಿಯಮಗಳು–2022'ಕ್ಕೂ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಸಚಿವರ ಆಕ್ಷೇಪ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉದ್ಯಮದಾರರಿಗೆ ಕೈಗಾರಿಕಾ ನಿವೇಶನಗಳ ಮಂಜೂರಾತಿಯಲ್ಲಿ ನೀಡುತ್ತಿದ್ದ ಸಹಾಯಧನವನ್ನು ಶೇ 50ರಿಂದ ಶೇ 75ಕ್ಕೆ ಹೆಚ್ಚಿಸುವ ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ. ಕೆಲವು ಸಚಿವರು ಈ ಪ್ರಸ್ತಾವವನ್ನು ವಿರೋಧಿಸಿದರು. ಇದರಿಂದ ಶ್ರೀಮಂತರಿಗೆ ಮಾತ್ರ ಅನುಕೂಲ ಆಗುತ್ತದೆ ಈ ವರ್ಗಗಳಿಗೆ ಸೇರಿದ ಬಡವರಿಗೆ ಅನುಕೂಲ ಆಗುವುದಿಲ್ಲ ಎಂದು ಬಹುತೇಕ ಆಕ್ಷೇಪ ವ್ಯಕ್ತಪಡಿಸಿದರು. ಇದನ್ನು ತಾವು ಪರಿಶೀಲಿಸುವುದಾಗಿ ಮುಖ್ಯಮಂತ್ರಿಗಳು ಭರವಸೆ ನೀಡಿದರು ಮೂಲಗಳು ತಿಳಿಸಿವೆ.

ನಗರ ಯೋಜನಾ ಪ್ರಾಧಿಕಾರ ವ್ಯಾಪ್ತಿ ಕಡಿತ

ಒಂದನೇ ಪುಟದಿಂದ...

ಈ ಆಸ್ತಿಗಳ ಖಾತೆ ಬದಲಾವಣೆ, 11ಇ ನಕ್ಷೆ ಪಡೆಯುವುದು, ಆಸ್ತಿಗಳ ಪರಭಾರೆ ಮತ್ತು ಅಡಮಾನಕ್ಕೂ ಅಡ್ಡಿಯಾಗಿದೆ. ಈ ಎಲ್ಲ ಸಮಸ್ಯೆಗಳಿಗೂ ಪರಿಹಾರ ದೊರಕಿಸುವುದಕ್ಕಾಗಿ ಈ ನಿರ್ಧಾರ ಮಾಡಲಾಗಿದೆ. 2016ಕ್ಕೂ ಹಿಂದೆ ಇದ್ದ ವ್ಯವಸ್ಥೆಯೇ ಮರುಜಾರಿಗೆ ಬರಲಿದೆ ಎಂದರು.

ಹೊಸದಾಗಿ ಪಟ್ಟಣ ಪಂಚಾಯಿತಿ ಮತ್ತು ಪುರಸಭೆ ವ್ಯಾಪ್ತಿಗೆ ಸೇರಿದ ಗ್ರಾಮಗಳ ಗ್ರಾಮ ಠಾಣಾ ವ್ಯಾಪ್ತಿಯಲ್ಲಿರುವ ಆಸ್ತಿಗಳು, ಗ್ರಾಮ ಪಂಚಾಯಿತಿಗಳಲ್ಲಿನ ಆಸ್ತಿ ಪಟ್ಟಿಗಳಲ್ಲಿ ನಮೂದಾಗಿರುವ ಆಸ್ತಿಗಳಿಗೂ ಈ ನಿಯಮ ಅನ್ವಯವಾಗುತ್ತದೆ. ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ ಸಂಬಂಧಿಸಿದಂತೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮೇಲುಸ್ತುವಾರಿಯಲ್ಲಿ ಪರವಾನಗಿ, ನಕ್ಷೆ ಮಂಜೂರಾತಿ ನೀಡುವ ವ್ಯವಸ್ಥೆ ಇರಲಿದೆ ಎಂದರು.

ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಅರಣ್ಯ ವ್ಯಾಪ್ತಿಯಲ್ಲಿದ್ದು, ಈಗಾಗಲೇ ಸರ್ಕಾರದಿಂದ ಪಟ್ಟಾ ವಿತರಣೆಯಾಗಿರುವ ಮನೆಗಳು ಹಾಗೂ ಜಿಪಿಎಸ್ ದತ್ತಾಂಶದಲ್ಲಿ ಮಾಲೀಕರ ಹೆಸರು ನಮೂದಾಗಿರುವ ನಿವೇಶನಗಳನ್ನೂ ನಗರ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಯಿಂದ ಹೊರಗಿಡಲಾಗುವುದು ಎಂದು ವಿವರಿಸಿದರು.

ಬೆಂಗಳೂರಿನಲ್ಲಿ ಯಥಾಸ್ಥಿತಿ: ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ವ್ಯಾಪ್ತಿಯಲ್ಲಿ ನಗರ ಯೋಜನಾ ಪ್ರಾಧಿಕಾರಗಳಿಂದಲೇ ಅನುಮತಿ ಪಡೆಯುವ ವ್ಯವಸ್ಥೆ ಮುಂದುವರಿಯಲಿದೆ. ಇತರ ಪ್ರದೇಶಗಳಲ್ಲೂ ಒಂದು ಎಕರೆವರೆಗಿನ ಪ್ರದೇಶದಲ್ಲಿ ಬಡಾವಣೆ ನಿರ್ಮಿಸುವುದಾದರೆ ಯೋಜನಾ ಪ್ರಾಧಿಕಾರಗಳಿಂದಲೇ ಅನುಮತಿ ಪಡೆಯಬೇಕು ಎಂದು ಮಾಧುಸ್ವಾಮಿ ಹೇಳಿದರು.

'ಸಚಿವರ ಖಾತೆ ಬದಲಾವಣೆ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವ ಸಂಪುಟ ವಿಸ್ತರಣೆ ಕಸರತ್ತು ಮುಂದಕ್ಕೆ ಹೋಗಿರುವುದರಿಂದ ಯಾವುದೇ ಸಚಿವರ ಖಾತೆಗಳೂ ಬದಲಾವಣೆ ಆಗುವುದಿಲ್ಲ. ಆದರೆ, ಸಚಿವರ ಜಿಲ್ಲಾ ಉಸ್ತುವಾರಿಯನ್ನು ಬದಲಿಸಿ, ಸಚಿವರಿಗೆ ತವರು ಜಿಲ್ಲೆಗಳ ಉಸ್ತುವಾರಿ ನೀಡುವ ಸಾಧ್ಯತೆ ಇದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಗೃಹ ಸಚಿವ ಆರಗ ಜ್ಞಾನೇಂದ್ರ, ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಮತ್ತು ಇಂಧನ ಸಚಿವ ವಿ.ಸುನೀಲ್ ಕುಮಾರ್ ಅವರ ಖಾತೆಗಳು ಬದಲಾಗಬಹುದು ಮತ್ತು ಗಣಿ ಸಚಿವ ಹಾಲಪ್ಪ ಆಚಾರ್ ಅವರನ್ನು ಕೈಬಿಡಲಾಗುತ್ತದೆ ಎಂಬ ಚರ್ಚೆ ಪಕ್ಷದ ವಲಯದಲ್ಲಿ ನಡೆದಿತ್ತು. ಆದರೆ, ಆರ್‌ಎಸ್‌ಎಸ್ ಮೂಲದ ಯಾವುದೇ ಸಚಿವರ ಖಾತೆಗಳು ಬದಲಾಗುವುದಿಲ್ಲ ಮತ್ತು ಕೈಬಿಡುವುದೂ ಇಲ್ಲ. ಇದಕ್ಕೆ ಆರ್‌ಎಸ್‌ಎಸ್ ಒಪ್ಪಿಯೂ ಇಲ್ಲ ಎಂದು ಹೇಳಲಾಗಿದೆ.

ಗೃಹ ಖಾತೆಯನ್ನು ಆರಗ ಅವರಿಂದ ಹಿಂದಕ್ಕೆ ಪಡೆದು ಅದನ್ನು ಅಶೋಕ ಅಥವಾ ಸುನೀಲ್ ಕುಮಾರ್ ಅವರಿಗೆ ನೀಡಬಹುದು ಎಂಬ ಚರ್ಚೆ ನಡೆದಿತ್ತು. ಆದರೆ, ಇಂತಹ ಯಾವುದೇ ಪ್ರಸ್ತಾವ ಮುಖ್ಯಮಂತ್ರಿಯವರ ಮುಂದಿಲ್ಲ. ಪಕ್ಷದ ವರಿಷ್ಠರ ಜತೆಗೂ ಅಂತಹ ಚರ್ಚೆ ನಡೆಸಿಲ್ಲ ಎಂದೂ ಮೂಲಗಳು ತಿಳಿಸಿವೆ.

ಆದರೆ ಚುನಾವಣೆಯ ಹಿತದೃಷ್ಟಿಯಿಂದ ಜಿಲ್ಲಾ ಉಸ್ತುವಾರಿ ಸಚಿವರ ಬದಲಾವಣೆ ಆಗಬಹುದು. ಸಚಿವರಿಗೆ ತವರು ಜಿಲ್ಲೆಗಳಲ್ಲೇ ಉಸ್ತುವಾರಿ ನೀಡಲಾಗುವುದು. ಇದರಿಂದ ಚುನಾವಣೆಗೆ ತಯಾರಿ ನಡೆಸಲು ಅನುಕೂಲ ಆಗಬಹುದು ಎಂಬ ಚರ್ಚೆಯೂ ನಡೆದಿದೆ. ಕಳೆದ ಬಾರಿ ಜಿಲ್ಲಾ ಉಸ್ತುವಾರಿ ಬದಲಾವಣೆ ಮಾಡಿದಾಗ, ತವರು ಜಿಲ್ಲೆಗಳು ಸಿಗದೇ ಕೆಲವು ಸಚಿವರು ಮುನಿಸಿಕೊಂಡಿದ್ದರು. ಈ ಬಾರಿ ಅವರನ್ನು ಸಮಾಧಾನ ಪಡಿಸಲಾಗುವುದು ಎಂದು ಹೇಳಲಾಗಿದೆ.


'ಶೀಘ್ರದಲ್ಲೇ ಸಂಪುಟ ವಿಸ್ತರಣೆ ತೀರ್ಮಾನ'

ಮೈಸೂರು: 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನವದೆಹಲಿಯಲ್ಲಿ ಗೃಹ ಸಚಿವ ಅಮಿತಾ ಶಾ ಅವರನ್ನು ಭೇಟಿ ಮಾಡಿ ಬಂದಿದ್ದಾರೆ. 3-4 ದಿನಗಳಲ್ಲಿ ಸಂಪುಟ ವಿಸ್ತರಣೆ ಬಗ್ಗೆ ಕೇಂದ್ರ ನಾಯಕರು ತೀರ್ಮಾನ ಕೈಗೊಳ್ಳಲಿದ್ದಾರೆ' ಎಂದು ಶಾಸಕ ಬಿ.ಎಸ್. ಯಡಿಯೂರಪ್ಪ ಗುರುವಾರ ಇಲ್ಲಿ ವಿಶ್ವಾಸ ವ್ಯಕ್ತಪಡಿಸಿದರು.

ಬಿ.ವೈ.ವಿಜಯೇಂದ್ರ ಅವರಿಗೆ ಸಂಪುಟದಲ್ಲಿ ಅವಕಾಶ ಸಿಗುವುದೇ, ಬಿಜೆಪಿ ಸರ್ಕಾರ ರಚನೆಗೆ ಕಾರಣರಾದ 17 ಮಂದಿ ಸಚಿವರಾಗಿ ಮುಂದುವರಿಯುವರೇ ಎಂಬ ಸುದ್ದಿಗಾರರ ಪ್ರಶ್ನೆಗೆ, 'ಆ ವಿಚಾರ ನನಗೆ ಗೊತ್ತಿಲ್ಲ' ಎಂದರು.

18ಕ್ಕೆ ರಾಜೀನಾಮೆ: ಹೊರಟ್ಟಿ


ಪ್ರಜಾವಾಣಿ ವಾರ್ತೆ



ಧಾರವಾಡ: ವಿಧಾನ ಪರಿಷತ್ ಸಭಾಪತಿ ಸ್ಥಾನಕ್ಕೆ ಇದೇ 18ರಂದು ರಾಜೀನಾಮೆ ನೀಡುವುದಾಗಿ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, '11ರಂದೇ ರಾಜೀನಾಮೆ ನೀಡಬೇಕಿತ್ತು. ಚುನಾವಣೆ ಅಧಿಸೂಚನೆ ಬಂದಿರಲಿಲ್ಲ. ಗುರುವಾರ ಅಧಿಸೂಚನೆ ಹೊರಡಿಸಿದೆ. ಹೀಗಾಗಿ 18ಕ್ಕೆ ನೀಡುತ್ತೇನೆ' ಎಂದರು.

'ಬಿಜೆಪಿಯ ಮೋಹನ ಲಿಂಬಿಕಾಯಿ ಚುನಾವಣೆಗೆ ನಾನೇ ಅಭ್ಯರ್ಥಿ ಎಂದು ಬಿಂಬಿಸುತ್ತಿದ್ದಾರೆ' ಎಂಬ ಪ್ರಶ್ನೆಗೆ ಅವರು, 'ಆ ಬಗ್ಗೆ ನನಗೆ ಗೊತ್ತಿಲ್ಲ. 18ರ ನಂತರ ಬಿಜೆಪಿ ಟಿಕೆಟ್ ಕುರಿತು ಪ್ರತಿಕ್ರಿಯಿಸುತ್ತೇನೆ' ಎಂದರು.





ಗಾಳಿಪಟ-2
ಶರ್ಮಿಳಾ ಮಾಂಡ್ರೆ



ರೇಮೊ
ಇಶಾನ್

ರಾಕ್ ರೇಮೊ

‘ರೋಗ್’ ಚಿತ್ರದ ಮೂಲಕ ನಾಯಕನಾಗಿ ಚಿತ್ರರಂಗ ಪ್ರವೇಶಿಸಿದ ನಟ ಇಶಾನ್, ಆ ಬಳಿಕ ವೆಬ್‌ಸರಣಿಗಳಲ್ಲೂ ಮಿಂಚಿದರು. ಸಂಗೀತಮಯ ಚಿತ್ರವಾಗಿರುವ ‘ರೇಮೊ’ದಲ್ಲಿ ಸ್ಟೈಲಿಷ್ ಆಗಿ ಕಾಣಿಸಿಕೊಂಡು ಹೊಸ ಭರವಸೆ ಮೂಡಿಸಿರುವ ಅವರು ಸಿನಿಬದುಕು ಮತ್ತು ತಮ್ಮ ಚಿತ್ರದ ಬಗ್ಗೆ ಮಾತನಾಡಿದ್ದು ಹೀಗೆ...

ಶರತ್ ಹೆಗ್ಡೆ

● ಸಿನಿಪಯಣ ಹೇಗೆ ಸಾಗಿದೆ?

ತುಂಬಾ ಚೆನ್ನಾಗಿಯೇ ಸಾಗಿದೆ. ಮೊದಲ ಚಿತ್ರ ತೆಲುಗಿನ ‘ರೋಗ್’ ಗಳಿಕೆಯ ದೃಷ್ಟಿಯಿಂದ ಅಷ್ಟಾಗಿ ಓಡಲಿಲ್ಲ. ಆದರೆ, ನನ್ನನ್ನು ಚೆನ್ನಾಗಿ ಅಣಿಗೊಳಿಸಿತು. ಹೊಸತನಕ್ಕೆ ತೆರೆದುಕೊಂಡೆ. ಇನ್ನಷ್ಟು ಕಲಿತೆ. ಈಗಲೂ ಆ ಚಿತ್ರ ನೋಡಿದ ಪ್ರೇಕ್ಷಕರು ನನಗೆ ವೈಯಕ್ತಿಕವಾಗಿ ಪ್ರತಿಕ್ರಿಯೆ ನೀಡುತ್ತಲೇ ಇದ್ದಾರೆ. ಹಾಗೆ ನೋಡಿದರೆ ‘ಒರಟ ಐ ಲವ್ ಯೂ’ ಚಿತ್ರದಲ್ಲಿ ಬಾಲನಟನಾಗಿ ಅಭಿನಯಿಸಿದ್ದೆ. ಆ ದೃಶ್ಯವನ್ನು ಕೇವಲ ಪ್ರಯೋಗಕ್ಕಷ್ಟೇ ತೆಗೆದುಕೊಂಡರು. ತೆರೆಗೆ ಬರಲಿಲ್ಲ. ಆ ಬಳಿಕ ಉಪೇಂದ್ರ ಅವರ ‘ಶಿವಂ’ ಚಿತ್ರದಲ್ಲಿ ಬಣ್ಣ ಹಚ್ಚಿದೆ. ವಿಶಾಖಪಟ್ಟಣಕ್ಕೆ ಹೋಗಿ ಅಭಿನಯ ತರಬೇತಿ ಪಡೆದೆ. ವೆಬ್ ಸರಣಿಗಳಾದ ‘ಪರಂಪರಾ’ ಮತ್ತು ‘3 ರೋಸಸ್’ನಲ್ಲಿಯೂ ಅವಕಾಶಗಳು ಹುಡುಕಿಕೊಂಡು ಬಂದವು. ಹೀಗೆ 2013 ರಿಂದ ಸಿನಿಪಯಣ ಸಾಗಿದೆ.

● ಸಿನಿಗುರು ಯಾರು?

ತುಂಬಾ ಜನ ಇದ್ದಾರೆ. ವಿಶೇಷವಾಗಿ ಹೆಚ್ಚು ಒಡನಾಡಿದ್ದು ಪುರಿ ಜಗನ್ನಾಥ್ ಅವರ ಬಳಿ. ಅವರು ನನ್ನನ್ನು ಬದಲಾಯಿಸಿಬಿಟ್ಟರು. ನನ್ನನ್ನು ಬ್ಯಾಂಕಾಕ್‌ಗೆ ಕರೆದುಕೊಂಡು ಹೋಗಿ ಸಾಕಷ್ಟು ತರಬೇತಿ ಕೊಡಿಸಿದರು. ದೇಹಭಾಷೆ, ನೃತ್ಯ, ಫೈಟ್... ಹೀಗೆ ಹತ್ತಾರು ಬಗೆಯ ಕೌಶಲಗಳನ್ನು ಕಲಿಸಿದರು. ಅದರ ಪರಿಣಾಮವಾಗಿಯೇ ನನ್ನ ಲುಕ್ ಹೀಗಿದೆ. ಈಗ ‘ರೇಮೊ’ ಚಿತ್ರಕ್ಕೆ ಬೇಕಾದಂತೆಯೇ ಹೊಂದಿಕೊಂಡುಬಿಟ್ಟಿದ್ದೇನೆ.

● ‘ರೇಮೊ’ ಯಾರು? ಚಿತ್ರದಲ್ಲಿ ಏನು ಹೇಳುತ್ತಿದ್ದೀರಿ?

ಈ ಪಾತ್ರವೇ ಒಂಥರಾ ಔಟ್ ಆಫ್ ಬಾಕ್ಸ್ ಚಿಂತನೆ. ರೇಮೊ ಪಾತ್ರವೇ ಎಲ್ಲವನ್ನೂ ಮಾಡುತ್ತದೆ. ಮಾತು, ನಗು, ಅಳು, ಹೊಡೆದಾಟ ಎಲ್ಲವೂ ಇದೆ. ‘ರೇಮೊ’ನದ್ದೇ ಒಂದು ಭಿನ್ನಶೈಲಿಯ ಜೀವನ. ರಾಕ್ ಕಲಾವಿದ ಹೇಗೆಲ್ಲಾ ಸ್ಟೈಲಿಷ್ ಆಗಿರುತ್ತಾನೋ ಅದೆಲ್ಲವನ್ನೂ ತೋರಿಸಿದ್ದೇವೆ. ರಾಕ್ ಕಲಾವಿದನ ಮನೋಸ್ಥಿತಿ, ವರ್ತನೆಗಳು ಈ ಚಿತ್ರದಲ್ಲಿವೆ. ಪಾತ್ರ ರೂಪಿಸಲು ನಿರ್ದೇಶಕರು ಸಾಕಷ್ಟು ಕಸರತ್ತು ಮಾಡಿದ್ದಾರೆ. ಚಿತ್ರ ಪ್ರೇಕ್ಷಕನಿಗೆ ಇಷ್ಟವಾಗುತ್ತದೆ ಎಂಬ ನಂಬಿಕೆಯಿದೆ. ನಾಯಕನ ಕಚೇರಿಯೇ ಗಾಜಿನ ಮನೆ. ಅವನ ಕ್ಯಾಬಿನ್ ಒಳಗೂ ಕಾರು ಹೋಗುತ್ತದೆ. ಅಂಥ ಒಂದು ಗಾಜಿನ ಮನೆಯ ಸೆಟ್ಟನ್ನು ವಿಜಯನಗರದಲ್ಲಿ ಹಾಕಿದ್ದೆವು. ಹೀಗೆ ಚಿತ್ರದಲ್ಲಿ ಸೃಜನಶೀಲ ಆಯಾಮ ತುಂಬಾ ಇದೆ.

ಈ ಸಿನಿಮಾ ಒಂದು ಟ್ರೆಂಡ್ ಸೆಟ್ಟರ್ ಆಗಬೇಕು. ಇದರಲ್ಲಿ ತಾಜಾತನ ಇದೆ. ಹಾಗಾಗಿ ಇದು ಕನ್ನಡದ ಮಟ್ಟಿಗೆ ಬೇರೆಯೇ ಅನ್ನಬಹುದಾದ ಸಿನಿಮಾ. ಸಹಜವಾಗಿ ನಮಗೆ ನಿರೀಕ್ಷೆಗಳೂ ಇವೆ. ಜನ ‘ರೇಮೊ’ವನ್ನು ಚಿತ್ರಮಂದಿರಗಳಲ್ಲೇ ನೋಡಬೇಕು.

● ನಿಮ್ಮ ಮತ್ತು ಪವನ್ ಒಡೆಯರ್ ಕಾಂಬಿನೇಷನ್ ಬಗ್ಗೆ?

ಹೌದು, ‘ರೇಮೊ’ದಲ್ಲಿ ಪವನ್ ಅವರ ಆಲೋಚನೆ, ಸೃಜನಶೀಲತೆ ತುಂಬಾ ಇದೆ. ಅದೊಂದು ಅದ್ಭುತವಾದ ಕಾಂಬಿನೇಷನ್. ಅವರು, ನಟಿ ಆಶಿಕಾ ರಂಗನಾಥ್, ತಂತ್ರಜ್ಞರು ಮತ್ತು ಇಡೀ ತಂಡದ ಜೊತೆ ಕೆಲಸ ಮಾಡುವುದೇ ವಿಶೇಷ ಅನುಭವ. ಹಾಗಾಗಿ ಈ ತಂಡದ ಜೊತೆಗೆ ಮತ್ತೆ ಮತ್ತೆ ಸಿನಿಮಾ ಮಾಡುತ್ತೇವೆ.

● ‘ರೇಮೊ’ದಲ್ಲಿ ಗಿಟಾರ್ ಹಿಡಿದಿದ್ದೀರಿ. ಸಂಗೀತದ ಹಿನ್ನೆಲೆ ಇತ್ತೇ?


ಸಂಗೀತ ಅಷ್ಟಾಗಿ ಗೊತ್ತಿಲ್ಲ. ಆದರೆ, ಚಿತ್ರಕ್ಕೆ ಬೇಕಾಗುವಷ್ಟು ಗಿಟಾರ್ ಹಿಡಿಯುವುದನ್ನು ಕಲಿತಿದ್ದೇನೆ. ಕಲಿಯುವ ಆಸಕ್ತಿ ಇದೆ. ಮುಂದೆ ನೋಡೋಣ.

● ಕೃಷಿ– ಸಿನಿಮಾ ಕೃಷಿ ಯಾವುದು ಹೆಚ್ಚು ಇಷ್ಟ?

ಎರಡೂ ಇಷ್ಟವೇ. ನಮ್ಮ ತಂದೆ ರೈತರು. ಅಣ್ಣ, ನಿರ್ಮಾಪಕ ಸಿ.ಆರ್. ಚಂದ್ರಶೇಖರ್ ಅವರೂ ಹೂವು ಬೆಳೆದೇ ಮುಂದೆ ಬಂದವರು. ನಾನೂ ಕೃಷಿಯತ್ತ ಒಲವು ಹೊಂದಿದ್ದೇನೆ. ನಾವೇನೇ ಮಾಡಲಿ ಕೊನೆಗೆ ಬರಬೇಕಾದದ್ದು ಕೃಷಿಯ ಕಡೆಗೇ ಅಲ್ವಾ. ಹಾಗಾಗಿ ಕೃಷಿ ಬದುಕನ್ನು ಪ್ರೀತಿಸುತ್ತೇನೆ. ❖

ಪ್ರಜಾವಾಣಿ ನೋಡಿಯೊ
ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಯುಎಫ್‌ಒದಿಂದ ‘777 ಚಾರ್ಲಿ’ ವಿತರಣೆ



ನಟ ರಕ್ಷಿತ್ ಶೆಟ್ಟಿ ಅಭಿನಯದ ಪ್ಯಾನ್ ಇಂಡಿಯಾ ಸಿನಿಮಾ ‘777 ಚಾರ್ಲಿ’ ವಿಶ್ವದಾದ್ಯಂತ ಜೂನ್ 10ಕ್ಕೆ ಬಿಡುಗಡೆಯಾಗಲಿದ್ದು, ಚಿತ್ರದ ಹಿಂದಿ ಅವತರಣಿಕೆಯನ್ನು ಯುಎಫ್‌ಒ ಸಂಸ್ಥೆ ವಿತರಣೆ ಮಾಡಲಿದೆ. ಚಿತ್ರದ ಟ್ರೇಲರ್ ಮೇ 16ರಂದು ಬಿಡುಗಡೆಯಾಗಲಿದೆ.

ಈಗಾಗಲೇ ಚಿತ್ರದ ಕನ್ನಡ ಆವೃತ್ತಿಯ ಡಿಜಿಟಲ್ ಹಾಗೂ ಸ್ಯಾಟಲೈಟ್ ಪ್ರಸಾರದ ಹಕ್ಕನ್ನು ಕಲರ್ಸ್ ಕನ್ನಡ ಹಾಗೂ ವೂಟ್ ಪಡೆದುಕೊಂಡಿದೆ. ಚಿತ್ರವು ಕನ್ನಡ, ತೆಲುಗು, ತಮಿಳು, ಮಲಯಾಳಂ ಹಾಗೂ ಹಿಂದಿ ಭಾಷೆಯಲ್ಲಿ ತೆರೆಕಾಣಲಿದೆ. ಚಿತ್ರದ ತೆಲುಗು ಅವತರಣಿಕೆಯನ್ನು ನಟ, ನಿರ್ಮಾಪಕ ರಾಣಾ ದಗ್ಗುಬಾಟಿ ಅವರು ತಮ್ಮ ಸುರೇಶ್ ಪ್ರೊಡಕ್ಷನ್ಸ್ ಮೂಲಕ ಪ್ರಸ್ತುತಪಡಿಸುತ್ತಿದ್ದಾರೆ. ಮಲಯಾಳಂನಲ್ಲಿ ನಟ, ನಿರ್ಮಾಪಕ ಪೃಥ್ವಿರಾಜ್ ಸುಕುಮಾರನ್, ತಮಿಳಿನಲ್ಲಿ ನಿರ್ದೇಶಕ ಕಾರ್ತಿಕ್ ಸುಬ್ಬರಾಜ್ ಈ ಚಿತ್ರವನ್ನು ಪ್ರಸ್ತುತಪಡಿಸುತ್ತಿದ್ದಾರೆ.

‘777 ಚಾರ್ಲಿ’ ಚಿತ್ರಕ್ಕೆ ಯು/ಎ ಪ್ರಮಾಣಪತ್ರ ದೊರಕಿದೆ. ಸಂಗೀತಾ ಶೃಂಗೇರಿ ಚಿತ್ರದ ನಾಯಕಿ. ಚಿತ್ರದಲ್ಲಿ ನಟ, ನಿರ್ದೇಶಕ ರಾಜ್ ಬಿ.ಶೆಟ್ಟಿ, ಡ್ಯಾನಿಶ್ ಸೇಠ್ ತಾರಾಗಣದಲ್ಲಿದ್ದಾರೆ. ಜಿ.ಎಸ್.ಗುಪ್ತ ಹಾಗೂ ರಕ್ಷಿತ್ ಶೆಟ್ಟಿ ಈ ಚಿತ್ರದ ನಿರ್ಮಾಪಕ. ❖

ಆ.12ಕ್ಕೆ ‘ಗಾಳಿಪಟ–2’

‘ಮನದ ಮುಗಿಲಲ್ಲಿ ಮೊಹಬ್ಬತ್’ ಎಂಬ ಟ್ಯಾಗ್‌ಲೈನ್‌ನೊಂದಿಗೆ ಮೊದಲ ‘ಗಾಳಿಪಟ’ವನ್ನು ಹಾರಿಬಿಟ್ಟಿದ್ದ ನಿರ್ದೇಶಕ ಯೋಗರಾಜ್ ಭಟ್ ಅವರು ಮತ್ತೊಂದು ಗಾಳಿಪಟ ಹಾರಾಡಿಸಲು ದಿನಾಂಕ ನಿಗದಿಗೊಳಿಸಿದ್ದಾರೆ. ಗೋಲ್ಡನ್ ಸ್ಟಾರ್ ಗಣೇಶ್ ನಟನೆಯ ‘ಗಾಳಿಪಟ–2’ ಆಗಸ್ಟ್ 12ಕ್ಕೆ ಬಿಡುಗಡೆಯಾಗಲಿದೆ.

‘ಒಂದಿಷ್ಟು ಮೊಹಬ್ಬತ್ ಜೊತೆಗೆ ಮತ್ತೊಂದಷ್ಟು ಸ್ನೇಹವನ್ನು ಹೊತ್ತು ನಿಮ್ಮ ಮುಂದೆ ಬರುತ್ತಿದ್ದೇವೆ’ ಎಂದಿದ್ದಾರೆ ಯೋಗರಾಜ್ ಭಟ್. 2008ರಲ್ಲಿ ತೆರೆಕಂಡಿದ್ದ ‘ಗಾಳಿಪಟ’ ಸಿನಿಮಾದಲ್ಲಿ ಗಣೇಶ್, ದಿಗಂತ್, ರಾಜೇಶ್ ಕೃಷ್ಣನ್, ಅನಂತನಾಗ್ ಅವರಿದ್ದ ತಾರಾಗಣ ಚಿತ್ರಪ್ರೇಮಿಗಳ ಮನದ ಮುಗಿಲಲ್ಲಿ ‘ಮೊಹಬ್ಬತ್’ ಸೃಷ್ಟಿಸಿತ್ತು. ಗಣಿ ಪಾತ್ರದಲ್ಲಿ ಗಣೇಶ್ ಮಾತಿನ ಮೋಡಿಯ ಜೊತೆಗೆ ಪ್ರೀತಿಯ ಮಳೆ ಸುರಿಸಿದ್ದರು. ‘ದೂದ್‌ಪೇಢ’ವಾಗಿ ದಿಗಂತ್ ಎರಡನೇ ಭಾಗದಲ್ಲೂ ಮುಂದುವರಿದಿದ್ದು, ಪವನ್ ಕುಮಾರ್ ಹೊಸದಾಗಿ ಕಥೆಗೆ ಸೇರ್ಪಡೆಯಾಗಿದ್ದಾರೆ. ರಾಜೇಶ್ ಕೃಷ್ಣನ್ ಅವರು ಅತಿಥಿ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ನಾಯಕಿಯರಾಗಿ ವೈಭವಿ ಶಾಂಡಿಲ್ಯ, ನಿಶ್ವಿಕಾ ನಾಯ್ಡು ಹಾಗೂ ಶರ್ಮಿಳಾ ಮಾಂಡ್ರೆ ಎರಡನೇ ಭಾಗದಲ್ಲಿದ್ದಾರೆ.

ಇತ್ತೀಚೆಗಷ್ಟೇ ಚಿತ್ರಕ್ಕೆ ‘ಯು’ ಸೆನ್ಸರ್ ಪ್ರಮಾಣಪತ್ರ ದೊರಕಿದೆ. ರಮೇಶ್ ರೆಡ್ಡಿ ನಿರ್ಮಾಣದ ಈ ಚಿತ್ರದ ಡಿಜಿಟಲ್ ಹಾಗೂ ಸ್ಯಾಟಲೈಟ್ ಪ್ರಸಾರದ ಹಕ್ಕನ್ನು ಜೀ5 ಹಾಗೂ ಜೀ ಕನ್ನಡ ಪಡೆದಿದೆ. ❖

ಬರ್ತಿದ್ದಾನೆ ‘ತ್ರಿವಿಕ್ರಮ’


ನಟ ರವಿಚಂದ್ರ ವಿ. ಅವರ ಪುತ್ರ ವಿಕ್ರಮ್ ನಾಯಕನಾಗಿ ನಟಿಸಿರುವ ‘ತ್ರಿವಿಕ್ರಮ’ ಚಿತ್ರ ಜೂನ್ 24ರಂದು ತೆರೆ ಕಾಣಲಿದೆ. ಮೂರು ವರ್ಷಗಳ ಹಿಂದೆ ಚಿತ್ರ ನಿರ್ಮಾಣ ಪೂರ್ಣಗೊಂಡಿತ್ತು. ಕೋವಿಡ್ ಕಾರಣದಿಂದಾಗಿ ಮುಂದೂಡಲ್ಪಟ್ಟಿತ್ತು.

‘ನಾನು ರವಿಚಂದ್ರ ಅವರ ಮಗ ಹೌದು. ಆದರೆ ಚಿತ್ರರಂಗಕ್ಕೆ ನಾಯಕನಾಗಿ ಹೊಸಬ’ ಎಂದಿದ್ದಾರೆ ವಿಕ್ರಮ್.

‘ವಿಕ್ರಮ್ ಅವರಿಲ್ಲಿ ಮಧ್ಯಮವರ್ಗದ ಹುಡುಗನಾಗಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಲಿದ್ದಾರೆ. ಮಿಡಲ್ ಕ್ಲಾಸ್ ಫ್ಯಾಮಿಲಿ ಹುಡುಗ, ಹೈ ಕ್ಲಾಸ್ ಫ್ಯಾಮಿಲಿ ಹುಡುಗಿಯನ್ನು ಏಕೆ ಲವ್ ಮಾಡಬಾರದು? ಎಂಬ ವಿಷಯವನ್ನು ಈ ಚಿತ್ರದಲ್ಲಿ ಹೇಳ ಹೊರಟಿದ್ದೇನೆ. ಅರ್ಜುನ್ ಜನ್ಯ ಅವರು ಸಂಗೀತ ನೀಡಿರುವ ಅಮ್ಮನ ಕುರಿತಾದ ಹಾಡು ಈಗಾಗಲೇ ಜನಮನ ಗೆದ್ದಿದೆ. ಇದು ನನ್ನ ಮೂರನೇ ಚಿತ್ರ’ ಎಂದರು ನಿರ್ದೇಶಕ ಸಹನಾಮೂರ್ತಿ. ❖



ಆಕಾಂಕ್ಷ ಶರ್ಮಾ, ವಿಕ್ರಮ್



❦ ಸುಭಾಷಿತ ❦

ಜನ ತಾವು ಅರ್ಥಮಾಡಿಕೊಂಡಿರುವ ಸಂಗತಿಗಳ ಬಗ್ಗೆ ಮಾತ್ರ ಮಾತನಾಡುವಂತಾದರೆ, ಭೂಮಿಯು ಅತ್ಯಂತ ಶಾಂತವಾದ ಸ್ಥಳವಾಗಿರುತ್ತದೆ.

– ಆಲ್ಬರ್ಟ್ ಐನ್‌ಸ್ಟೀನ್

ಶಾಲೆಗಳ ಪುನರಾರಂಭ: ಕಲಿಕೆಯೊಂದಿಗೆ ವಿದ್ಯಾರ್ಥಿಗಳ ಆರೋಗ್ಯದ ಕಾಳಜಿ ಅಗತ್ಯ

ಬಿಸಿಲ ಝಳ, ಮಳೆಯ ಕಣ್ಣಾಮುಚ್ಚಾಲೆ ಹಾಗೂ ಕೊರೊನಾದ ಸಂಭಾವ್ಯ ನಾಲ್ಕನೇ ಅಲೆಯ ಆತಂಕದ ನಡುವೆಯೇ ಮೇ 16ರಿಂದ ಶಾಲೆಗಳನ್ನು ಆರಂಭಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಸಾಮಾನ್ಯವಾಗಿ ಪ್ರತಿವರ್ಷ ಮೇ ಅಂತ್ಯಕ್ಕೆ ತೆರೆಯುತ್ತಿದ್ದ ಶಾಲೆಗಳು, ಈ ವರ್ಷ ಎರಡು ವಾರ ಮೊದಲೇ ಆರಂಭವಾಗುತ್ತಿವೆ. ಕೊರೊನಾ ಕಾರಣದಿಂದಾಗಿ ಎರಡು ವರ್ಷಗಳಿಂದ ಮಕ್ಕಳ ಕಲಿಕೆಗೆ ತೀವ್ರ ಹಿನ್ನಡೆಯಾಗಿತ್ತು. ಆ ಕೊರತೆಯನ್ನು ಸ್ವಲ್ಪವಾದರೂ ತುಂಬುವ ಉದ್ದೇಶದಿಂದ, ಪ್ರಸಕ್ತ ಬೇಸಿಗೆ ರಜೆಯನ್ನು ಕಡಿತಗೊಳಿಸಿ ಶಾಲೆಗಳನ್ನು ಬೇಗನೆ ಆರಂಭಿಸುವ ರಾಜ್ಯ ಸರ್ಕಾರದ ನಿರ್ಧಾರ ಸ್ವಾಗತಾರ್ಹ. 2022–23ನೇ ಶೈಕ್ಷಣಿಕ ವರ್ಷವನ್ನು 'ಕಲಿಕಾ ಚೇತರಿಕೆ ವರ್ಷ'ವೆಂದು ಘೋಷಿಸಲಾಗಿದ್ದು, ಕೊರೊನಾ ಅವಧಿಯಲ್ಲಿ ಕುಂಠಿತಗೊಂಡಿರುವ ಮಕ್ಕಳ ಕಲಿಕೆಗೆ ಚೈತನ್ಯ ತುಂಬಲು ಸರ್ಕಾರ ಪ್ರಯತ್ನಿಸುತ್ತಿದೆ. ಕಲಿಕಾ ಹಿನ್ನಡೆಯನ್ನು ಸರಿದೂಗಿಸಲು ವಿಶೇಷ ಕಾರ್ಯಕ್ರಮವನ್ನು ರೂಪಿಸಿರುವ ದೇಶದ ಪ್ರಥಮ ರಾಜ್ಯ ಕರ್ನಾಟಕ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದ್ದಾರೆ. ಆತಂಕದ ಸನ್ನಿವೇಶದಲ್ಲೂ ಶಾಲೆಗಳನ್ನು ಆರಂಭಿಸುತ್ತಿರುವ ಹಾಗೂ ವಿದ್ಯಾರ್ಥಿಗಳ ಕಲಿಕೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿರುವ ಸರ್ಕಾರದ ಉದ್ದೇಶ ಮೆಚ್ಚತಕ್ಕದ್ದು. ಆದರೆ, ಶಾಲೆಗಳ ಪುನರಾರಂಭಕ್ಕಷ್ಟೇ ಈ ಉತ್ಸಾಹ ಸೀಮಿತಗೊಳ್ಳಬಾರದು. ಮಕ್ಕಳ ಕಲಿಕೆಯನ್ನು ಪರಿಣಾಮಕಾರಿ ಆಗಿಸುವುದರ ಜೊತೆಗೆ, ಅವರಿಗೆ ಸುರಕ್ಷಿತ ವಾತಾವರಣವನ್ನೂ ಸರ್ಕಾರ ಕಲ್ಪಿಸಬೇಕು. ಕೊರೊನಾ ಆತಂಕದ ಕಾರಣದಿಂದಾಗಿ ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂಜರಿಯುತ್ತಿರುವ ಪೋಷಕರಿಗೆ ಧೈರ್ಯ ತುಂಬುವ ಕೆಲಸವನ್ನು ಮೊದಲು ಮಾಡಬೇಕು. ಐದರಿಂದ ಹನ್ನೆರಡು ವರ್ಷದೊಳಗಿನ ಮಕ್ಕಳಿಗೆ ಲಸಿಕೆ ನೀಡುವುದಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಈ ಅವಕಾಶವನ್ನು ಬಳಸಿಕೊಂಡು ರಾಜ್ಯದ ಎಲ್ಲ ವಿದ್ಯಾರ್ಥಿಗಳಿಗೆ ಉಚಿತ ಲಸಿಕೆಯನ್ನು ಶಾಲೆಗಳಲ್ಲಿಯೇ ನೀಡಲು ವ್ಯವಸ್ಥೆ ಮಾಡುವ ಮೂಲಕ, ಮಕ್ಕಳನ್ನು ಸುರಕ್ಷತಾ ವಲಯದೊಳಗೆ ತರುವುದನ್ನು ಸರ್ಕಾರ ಆದ್ಯತೆಯ ವಿಷಯವಾಗಿ ಪರಿಗಣಿಸಬೇಕು. ರಾಜ್ಯದ ಕೆಲವು ಭಾಗಗಳು ತೀವ್ರ ಬಿಸಿಲಿನ ಝಳದ ಬಾಧೆಗೊಳಗಾಗಿವೆ. ಆ ಪ್ರತಿಕೂಲ ಪರಿಸ್ಥಿತಿ ಮಕ್ಕಳನ್ನು ಗಾಸಿಗೊಳಿಸದಂತೆಯೂ ಎಚ್ಚರ ವಹಿಸಬೇಕಾಗಿದೆ. ವಿದ್ಯಾರ್ಥಿಗಳ ಆರೋಗ್ಯದ ದೃಷ್ಟಿಯಿಂದ ಕೇಂದ್ರ ಶಿಕ್ಷಣ ಸಚಿವಾಲಯ ಬಿಡುಗಡೆ ಮಾಡಿರುವ ಮಾರ್ಗಸೂಚಿಯು ಅಗತ್ಯವಿರುವ ಪ್ರದೇಶಗಳಲ್ಲಿ ಶಾಲೆಗಳನ್ನು ಮುಂಜಾನೆಯಿಂದ ಮಧ್ಯಾಹ್ನದವರೆಗೆ ನಡೆಸಬಹುದು ಎಂದು ಸೂಚಿಸಿದೆ. ಈ ಸಾಧ್ಯತೆಯನ್ನು ಸ್ಥಳೀಯ ಅಗತ್ಯಕ್ಕೆ ತಕ್ಕಂತೆ ರಾಜ್ಯದಲ್ಲೂ ಅನುಸರಿಸಬಹುದು.



ಶಾಲೆಗಳಲ್ಲಿ ಮಕ್ಕಳಿಗೆ ಸುರಕ್ಷಿತ, ಉಲ್ಲಾಸದಾಯಕ ವಾತಾವರಣ ಹಾಗೂ ಶಿಕ್ಷಕರಿಗೆ ಉತ್ತೇಜಕ ಪರಿಸರವನ್ನು ಸರ್ಕಾರ ರೂಪಿಸಬೇಕು

ಕೊರೊನಾ ನಿಯಂತ್ರಣಕ್ಕಾಗಿ ಜಾರಿಗೆ ತಂದಿದ್ದ ಲಾಕ್‌ಡೌನ್ ಸಮಯದಲ್ಲಿ ಅನೇಕ ಮಕ್ಕಳು ಬೇರೆ ಬೇರೆ ಕಾರಣಗಳಿಂದಾಗಿ ಶಾಲೆಗಳಿಂದ ಹೊರಗುಳಿದಿದ್ದಾರೆ. ವಲಸೆ ಕಾರ್ಮಿಕ ಕುಟುಂಬಗಳಲ್ಲಿನ ಎಳೆಯರು ಕಲಿಕೆಯನ್ನು ಬಿಟ್ಟು ಪೋಷಕರೊಂದಿಗೆ ದುಡಿಮೆಗೆ ಕೈಜೋಡಿಸಿದ್ದಾರೆ. ಅಂಥ ಮಕ್ಕಳನ್ನು ಗುರುತಿಸಿ ಶಾಲೆಗಳಿಗೆ ಮರಳಿ ಕರೆತರುವ ನಿಟ್ಟಿನಲ್ಲಿ ಸರ್ಕಾರ ಎಲ್ಲ ಪ್ರಯತ್ನಗಳನ್ನೂ ನಡೆಸಬೇಕಾಗಿದೆ. ಮೇ 16ರಿಂದ 20ರವರೆಗೆ ದಾಖಲಾತಿ ಆಂದೋಲನ ನಡೆಸುವುದಾಗಿ ಹಾಗೂ ಜುಲೈ ಕೊನೆಯ ವೇಳೆಗೆ ದಾಖಲಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದಾಗಿ ಶಿಕ್ಷಣ ಇಲಾಖೆ ಹೇಳಿದೆ. ಕಲಿಕಾ ಪುನಶ್ಚೇತನದ ಜೊತೆಗೆ ಮಕ್ಕಳನ್ನು ಶಾಲೆಗಳಿಗೆ ಮರಳಿ ಕರೆತರುವ ಕೆಲಸವೂ ಶಿಕ್ಷಕರ ಮೇಲಿದೆ. ಶಿಕ್ಷಕರ ಕೊರತೆ ಕೂಡ ಅನೇಕ ಶಾಲೆಗಳನ್ನು ಬಾಧಿಸುತ್ತಿದೆ. 27 ಸಾವಿರ ಅತಿಥಿ ಶಿಕ್ಷಕರನ್ನು ಒಂದು ವರ್ಷದ ಮಟ್ಟಿಗೆ ನೇಮಿಸಿಕೊಳ್ಳುವ ಮೂಲಕ ಶಿಕ್ಷಕರ ಕೊರತೆಗೆ ತಕ್ಷಣದ ಪರಿಹಾರ ಕಂಡುಕೊಳ್ಳಲು ಸರ್ಕಾರ ಮುಂದಾಗಿದೆ. ಆದರೆ, ಶಿಕ್ಷಕರ ಕೊರತೆಯ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳದ ಹೊರತು ಗುಣಮಟ್ಟದ ಕಲಿಕೆ ಸಾಧ್ಯವಾಗುತ್ತದೆಂದು ನಿರೀಕ್ಷಿಸಲಾಗದು. ಎರಡು ವರ್ಷಗಳ ಅವಧಿಯಲ್ಲಿ ಮಕ್ಕಳ ಕಲಿಕೆಯ ಮನಃಸ್ಥಿತಿಗಷ್ಟೇ ಧಕ್ಕೆಯಾಗಿಲ್ಲ, ಶಿಕ್ಷಕರ ಕಲಿಸುವ ಮನಃಸ್ಥಿತಿಗೂ ಪೆಟ್ಟುಬಿದ್ದಿದೆ. ಬೋಧನೆಗಿಂತಲೂ ಅನ್ಯಕಾರ್ಯಗಳೇ ಶಿಕ್ಷಕರನ್ನು ಹಣ್ಣಾಗಿಸಿವೆ. ಮಕ್ಕಳ ಜೊತೆಗೆ ಶಿಕ್ಷಕರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹುರಿದುಂಬಿಸುವ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ. ಬೋಧನೆಯನ್ನು ಹೊರತುಪಡಿಸಿದ ಕಾರ್ಯಕ್ರಮಗಳಿಂದ ಈ ವರ್ಷವಾದರೂ ಶಿಕ್ಷಕರನ್ನು ಹೊರಗಿಟ್ಟು, ಅವರ ಸಂಪೂರ್ಣ ಶಕ್ತಿ ಶೈಕ್ಷಣಿಕ ಚಟುವಟಿಕೆಗಳಿಗೆ ದೊರೆಯುವಂತೆ ನೋಡಿಕೊಳ್ಳುವುದು ಮಕ್ಕಳ ಹಿತಾಸಕ್ತಿಯ ದೃಷ್ಟಿಯಿಂದ ಅಗತ್ಯವಾದುದು. ಸುರಕ್ಷಿತ ಹಾಗೂ ಉಲ್ಲಾಸದಾಯಕ ವಾತಾವರಣವು ಮಕ್ಕಳ ಕಲಿಕೆಗೆ ಅಗತ್ಯವಾಗಿರುವಂತೆಯೇ, ಅದನ್ನು ಸಾಧ್ಯವಾಗಿಸುವ ಶಿಕ್ಷಕರಿಗೂ ಉತ್ತೇಜಕ ಪರಿಸರ ಬೇಕು. ಅನಗತ್ಯ ಒತ್ತಡಗಳಿಂದ ಶಿಕ್ಷಕರನ್ನು ಪಾರು ಮಾಡಿ, ಮಕ್ಕಳ ಕಲಿಕೆಯಲ್ಲಿ ಅವರು ಸಂಪೂರ್ಣವಾಗಿ ತೊಡಗಿಕೊಳ್ಳುವಂತೆ ಆರೋಗ್ಯಕರ ಶೈಕ್ಷಣಿಕ ಪರಿಸರವನ್ನು ಸರ್ಕಾರ ರೂಪಿಸಬೇಕು.

ದಿನದ ಟ್ವೀಟ್


ಅಂದು– ಇಂದು



ಬಸವಣ್ಣ, ಕುವೆಂಪು, ಕಾರಂತ, ಎಚ್.ಎನ್.ರಂತಹ ಕನ್ನಡ ನಾಡಿನ ಎಷ್ಟೋ ಮಹನೀಯರು ತಮ್ಮ ಬದುಕಿನಾದ್ಯಂತ ಕನ್ನಡಿಗರಲ್ಲಿ ವೈಚಾರಿಕತೆ ಮೂಡಿಸುವಂತಹ ಪ್ರಯತ್ನ ಮಾಡಿದರೂ ನಮ್ಮಲ್ಲಿ ಇನ್ನೂ ಅಜ್ಞಾನದ ಕತ್ತಲೇ ಆವರಿಸಿದೆ! ಅಂದಿನವರಲ್ಲಿ ಅಕ್ಷರ ಜ್ಞಾನ, ಡಿಗ್ರಿ ಇರಲಿಲ್ಲ. ಇಂದಿನವರಲ್ಲಿ ಅವೆರಡೂ ಇದ್ದು ಸಮಾಜಕ್ಕೆ ಆಗಿರುವ ಒಳಿತು ಏನೂ ಇಲ್ಲ!

ರಾಮಚಂದ್ರ ಎಮ್., ನಾಗರಿಕ

ಕಿಡಿನುಡಿ



ಫಾರ್ವರ್ಡ್ ಮಾಡಿದ ಸಂದೇಶಗಳಿಗೆ ಶುಲ್ಕ ವಿಧಿಸಲು ವಾಟ್ಸ್‌ಆ್ಯಪ್ ಮುಂದಾದರೆ, ಭಾರತದ ಇಂದಿನ ಎಷ್ಟೋ ಸಮಸ್ಯೆಗಳನ್ನು ತತ್‌ಕ್ಷಣವೇ ಬಗೆಹರಿಸಿಬಿಡಬಹುದು. ಫಾರ್ವರ್ಡ್ ಮಾಡಿದ ಸಂದೇಶವೊಂದಕ್ಕೆ ₹ 50. ಇಪ್ಪತ್ತನಾಲ್ಕು ಗಂಟೆಗಳ ಒಳಗಾಗಿ ಶಾಂತಿ ಮತ್ತು ಸೌಹಾರ್ದ ನೆಲೆಯೂರುವುದಂತೂ ಖಾತರಿ.

ಸುಮಂತ್ ರಾಮನ್, ರಾಜಕೀಯ ವಿಶ್ಲೇಷಕ

25 ವರ್ಷಗಳ ಹಿಂದೆ

ಮಂಗಳವಾರ, 13-5-1997

● **ಮಾಲಿನ್ಯ: ಗಂಗಾವತಿ ಜನಜೀವನ ಅಸಹನೀಯ**

ರಾಯಚೂರು, ಮೇ 12– ಹೊಸಪೇಟೆ ಬಳಿಯ ಸಕ್ಕರೆ ಕಾರ್ಖಾನೆಯಿಂದ ಸೋರಿಕೆಯಾದ ರಾಸಾಯನಿಕ ಸೇರ್ಪಡೆಯಿಂದ ವಿಷಯುಕ್ತವಾಗಿರುವ ತುಂಗಭದ್ರಾ ನೀರಿನಲ್ಲಿ ಸತ್ತಿರುವ ಜಲಚರಗಳು ಗಬ್ಬು ನಾರುತ್ತಿರುವುದರಿಂದ ಗಂಗಾವತಿ ತಾಲ್ಲೂಕಿನ ಅನೇಕ ಗ್ರಾಮಗಳ ಜನಜೀವನ ಅಸಹನೀಯವಾಗಿಯೇ ಮುಂದುವರಿದಿದೆ.

ಅನೇಕ ಕಡೆ ವಾಂತಿ, ತಲೆನೋವು, ಹೊಟ್ಟೆ ತೊಳೆಸುವುದು ಮುಂತಾದ ರೋಗದ ಲಕ್ಷಣಗಳು ಕಂಡುಬಂದಿವೆ. ಪರಿಸ್ಥಿತಿ ಇದೇ ರೀತಿ ಮುಂದುವರಿಯಲು ಬಿಟ್ಟರೆ ಸಾಂಕ್ರಾಮಿಕ ರೋಗಗಳು ಹರಡಬಹುದು ಎಂದು ಭೀತಿಪಡಲಾಗಿದೆ.

ಸತ್ತ ಜಲಚರಗಳನ್ನು ಸುಡಲಾಗಿದೆ ಇಲ್ಲವೆ ಹೂಳಲಾಗಿದೆ ಎಂದು ಜಿಲ್ಲಾಡಳಿತ ತಿಳಿಸಿದ್ದಾಗ್ಯೂ ಅಸಂಖ್ಯಾತ ಕೊಳೆತ ಮೀನುಗಳು ತೇಲುತ್ತಿರುವುದು ಕೆಲ ಗ್ರಾಮಗಳಿಗೆ ಭೇಟಿ ನೀಡಿದ ಈ ವರದಿಗಾರನಿಗೆ ಗೋಚರಿಸಿದೆ.

ನದಿ ಹಾಗೂ ಹಳೆ ವಿಜಯನಗರ ಕಾಲುವೆಯಲ್ಲಿ ಕಂದು ಬಣ್ಣದ ನೀರು ಹರಿಯುತ್ತಿದೆ. ಎಲ್ಲಿ ನೋಡಿದರಲ್ಲಿ ಅರ್ಧಂಬರ್ಧ ಕೊಳೆತಿರುವ ಜಲಚರಗಳು ದುರ್ನಾತ ಬೀರುತ್ತಿವೆ.

50 ವರ್ಷಗಳ ಹಿಂದೆ

ಶನಿವಾರ, 13-5-1972

● **'ಸ್ಟ್ಯಾಂಡರ್ಡ್ ಎಕರೆ' ಬಗ್ಗೆ ಒಂಬತ್ತು ಸದಸ್ಯರ ಸಮಿತಿ ವರದಿ ಇಂದು**

ನವದೆಹಲಿ, ಮೇ 12– ಭೂ ಮಿತಿಯನ್ನು ಕಡಿಮೆಗೊಳಿಸುವ ಉದ್ದೇಶಕ್ಕೆ ಸರ್ಕಾರಿ ಮತ್ತು ಖಾಸಗಿ ನೀರಾವರಿ ಜಮೀನುಗಳನ್ನು ಸಮವಾಗಿ ಪರಿಗಣಿಸಬೇಕೇ ಎಂಬ ವಿವಾದವನ್ನು ಬಗೆಹರಿಸಲು ಕಾಂಗ್ರೆಸ್ ನಾಯಕರ ಸಮ್ಮೇಳನ ಇಂದು ಒಂಬತ್ತು ಸದಸ್ಯರ ಸಮಿತಿಯನ್ನು ರಚಿಸಿತು.

ರಾಷ್ಟ್ರದಾದ್ಯಂತ ಭೂ ಮಿತಿ ಕಾನೂನುಗಳಲ್ಲಿ ಏಕರೂಪತೆ ತರಲು ಸಾಧ್ಯವಾಗುವಂತೆ 'ಸ್ಟ್ಯಾಂಡರ್ಡ್ ಎಕರೆ'ಯ ಅರ್ಥವನ್ನು ಈ ಸಮಿತಿಯು ರಚಿಸುವುದು.

ನಾಳೆ ಮಧ್ಯಾಹ್ನದ ವೇಳೆಗೆ ಈ ಸಮಿತಿ ತನ್ನ ವರದಿ ಕೊಡುತ್ತದೆ. ಸಮಿತಿಯಲ್ಲಿರುವ ಸದಸ್ಯರೆಂದರೆ ಸಿ.ಸುಬ್ರಮಣ್ಯಂ, ಫಕ್ರುದ್ದೀನ್ ಅಲಿ ಅಹ್ಮದ್, ವಿ.ಪಿ. ನಾಯಕ್, ದೇವರಾಜ ಅರಸು, ಕರುಣಾಕರನ್, ಶ್ರೀಮತಿ ರಾಜೇಂದ್ರ ಕುಮಾರಿ ವಾಜಪೈ, ಬರ್ಕತ್ ಉಲ್ಲಾಖಾನ್ ಮತ್ತು ಮೋಹನ ಕುಮಾರ ಮಂಗಳಂ.

● **ಶೃಂಗಸಭೆಗೆ ತಾರೀಖು ಸೂಚಿಸಿ ಭುಟ್ಟೊಗೆ ಇಂದಿರಾ ಪತ್ರ**

ನವದೆಹಲಿ, ಮೇ 12– ತಮ್ಮಿಬ್ಬರ ಭೇಟಿಗೆ ಖಚಿತ ದಿನವನ್ನು ಸೂಚಿಸಿ ಪ್ರಧಾನಿ ಇಂದಿರಾ ಗಾಂಧಿಯವರು ಪಾಕಿಸ್ತಾನದ ಅಧ್ಯಕ್ಷ ಜಡ್.ಎ. ಭುಟ್ಟೊ ಅವರಿಗೆ ಪತ್ರ ಬರೆದಿದ್ದಾರೆ.

ಪ್ರಧಾನಿ ಇಂದಿರಾ ಗಾಂಧಿಯವರು ಸೂಚಿಸಿರುವ ತಾರೀಖನ್ನು ರಹಸ್ಯವಾಗಿ ಇಡಲಾಗಿದೆ.

ದೇಶದ್ರೋಹದ ಕಾನೂನು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಒಟ್ಟೊಟ್ಟಿಗೆ ಮುಂದುವರಿಯಲಾಗದು

ವಾಕ್ ಸ್ವಾತಂತ್ರ್ಯ ಮತ್ತು ದಮನಕಾರಿ ಕಾನೂನು



ವಿಶ್ಲೇಷಣೆ

ನ್ಯಾ. ಎಚ್.ಎನ್.ನಾಗಮೋಹನ ದಾಸ್

ಭಾರತದ ಸ್ವಾತಂತ್ರ್ಯ ಹೋರಾಟ ತೀವ್ರಗೊಳ್ಳುತ್ತಾ ಹೋದಂತೆ, ಕುಪಿತವಾದ ಬ್ರಿಟಿಷ್ ಸರ್ಕಾರವು ಅದನ್ನು ಹತ್ತಿಕ್ಕಲು ಅನೇಕ ಕಠಿಣ ಕ್ರಮಗಳನ್ನು ಕೈಗೊಂಡಿತು. ಇದರ ಭಾಗವಾಗಿ, ಧರ್ಮ ಮತ್ತು ಜಾತಿಗಳ ನಡುವೆ ಭೇದಭಾವವನ್ನು ಹುಟ್ಟುಹಾಕಿ, ಒಡೆದು ಆಳುವ ನೀತಿಯನ್ನು ಅನುಸರಿಸಿತು. ಹಿಂಸೆ, ಚಿತ್ರಹಿಂಸೆ ಮತ್ತು ಕ್ರೌರ್ಯದ ಮೂಲಕ ಜನರಲ್ಲಿ ಭಯ, ಭೀತಿಯನ್ನು ಹುಟ್ಟಿಸಿತು. ಬರ್ಬರ, ದಮನಕಾರಿ ಮತ್ತು ಅಮಾನವೀಯ ಎನಿಸುವ ಕಾನೂನುಗಳನ್ನು ಜಾರಿಗೆ ತಂದಿತು. ಅವುಗಳಲ್ಲಿ ಪ್ರಮುಖವಾದವೆಂದರೆ, ಸೆಡಿಷನ್ (ರಾಜದ್ರೋಹ) ಕಾನೂನು, ಕ್ರಿಮಿನಲ್ ನ್ಯಾಯಾಂಗ ನಿಂದನೆ ಕಾಯ್ದೆ, ಕ್ರಿಮಿನಲ್ ಮಾನನಷ್ಟ ಕಾಯ್ದೆ ಮುಂತಾದವು.

ಬ್ರಿಟಿಷರು ಭಾರತೀಯ ದಂಡ ಸಂಹಿತೆಗೆ (ಐಪಿಸಿ) ತಿದ್ದುಪಡಿ ತಂದು, ಸೆಕ್ಷನ್ 124(ಎ) ಅನ್ನು ಸೇರಿಸಿದರು. ಈ ಸೆಕ್ಷನ್ ಬಳಸಿ ಲಕ್ಷಾಂತರ ಮಂದಿ ಸ್ವಾತಂತ್ರ್ಯ ಹೋರಾಟಗಾರರನ್ನು ಬಂಧಿಸಿ, ಜೈಲಿಗೆ ಕಳುಹಿಸಿದರು. ಅಲ್ಲಿ ಅವರಿಗೆ ಅನೇಕ ರೀತಿಯಲ್ಲಿ ಕಷ್ಟ, ನೋವು, ಹಿಂಸೆಯನ್ನು ನೀಡಿದರು. ಮಹಾತ್ಮ ಗಾಂಧಿ, ಬಾಲಗಂಗಾಧರ ತಿಲಕ್, ಆ್ಯನಿ ಬೆಸೆಂಟ್, ವೀರೇಂದ್ರ ದತ್ ಅವರಂತಹ ನಾಯಕರು ಸಹ ಈ ಕಾನೂನಿನ ಅಡಿಯಲ್ಲಿ ಪ್ರಕರಣಗಳನ್ನು ಎದುರಿಸಿ ಜೈಲುವಾಸ ಅನುಭವಿಸಬೇಕಾಯಿತು. ಲಕ್ಷಾಂತರ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಬಲಿದಾನದ ಪರಿಣಾಮವಾಗಿ 1947ರಲ್ಲಿ ನಮಗೆ ಸ್ವಾತಂತ್ರ್ಯ ಬಂದಿತು. ಆದರೆ ಆನಂತರವೂ ನಮ್ಮ ಸರ್ಕಾರಗಳು ಇಂತಹ ಅಮಾನವೀಯ, ಬರ್ಬರ ಹಾಗೂ ದಮನಕಾರಿ ಕಾನೂನುಗಳನ್ನು ಮುಂದುವರಿಸಿಕೊಂಡು ಬಂದಿದ್ದು ದುರದೃಷ್ಟಕರ.

ನಮ್ಮ ಸರ್ಕಾರದ ಅತಿರೇಕಗಳನ್ನು ಪ್ರಶ್ನಿಸಿದರೆ, ವಿಮರ್ಶಿಸಿದರೆ ಅಥವಾ ಟೀಕಿಸಿದರೆ ಸೆಕ್ಷನ್ 124(ಎ) ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಿ, ಬಂಧಿಸಿ, ಜೈಲಿಗೆ ಕಳುಹಿಸಲಾಗಿದೆ. ಈ ದಿಸೆಯಲ್ಲಿ, ಇತ್ತೀಚಿನ ವರ್ಷಗಳಲ್ಲಿ ದೇಶದ ಗಮನವನ್ನು ಸೆಳೆದ ಪ್ರಕರಣಗಳೆಂದರೆ, 2007ರಲ್ಲಿ ಬಿನಾಯಕ್ ಸೇನ್, 2010ರಲ್ಲಿ ಅರುಂಧತಿ ರಾಯ್, 2012ರಲ್ಲಿ ಅಸೀಮ್ ತ್ರಿವೇದಿ, 2015ರಲ್ಲಿ ತಮಿಳು ಕಲಾವಿದ ಕೋವನ್, 2018ರಲ್ಲಿ ಹಾರ್ದಿಕ್ ಪಟೇಲ್, ನಗರ ನಕ್ಸಲ್‌ವಾದಿಗಳೆಂಬ ಆರೋಪದ ಮೇಲೆ ರೋನಾ ವಿಲ್ಸನ್, ಸುಧೀರ್ ಧವಳೆ, ಶೋಮಾ ಸೇನ್, ಮಹೇಶ್ ರಾವತ್, ಸುರೇಂದ್ರ ಗಡಲಿಂಗ್, ವರವರ ರಾವ್ ಮೊದಲಾದವರನ್ನು ಬಂಧಿಸಲಾಯಿತು. ಪೌರತ್ವ ತಿದ್ದುಪಡಿ ಕಾಯ್ದೆ ಮತ್ತು ಕೇಂದ್ರ ಸರ್ಕಾರ ಜಾರಿಗೆ ತರಲು ಉದ್ದೇಶಿಸಿದ್ದ ಕೃಷಿ ಕಾನೂನುಗಳ ವಿರುದ್ಧ ಪ್ರತಿಭಟಿಸಿದ ನೂರಾರು ಚಳವಳಿಗಾರರ ವಿರುದ್ಧ ಸಹ ದೇಶದ್ರೋಹದ ಪ್ರಕರಣಗಳನ್ನು ದಾಖಲಿಸಲಾಯಿತು. ಸರ್ಕಾರದ ವಿರುದ್ಧ ಧ್ವನಿ ಎತ್ತಿದ ಸಾಹಿತಿಗಳು, ಕಲಾವಿದರು, ಪತ್ರಕರ್ತರು, ಜನಪರ ನಾಯಕರು, ಸಮಾಜಸೇವಕರ ವಿರುದ್ಧವೂ ಈ ಕಾನೂನನ್ನು ಬಳಸಲಾಗುತ್ತಿದೆ. ಸ್ವಾತಂತ್ರ್ಯಾನಂತರ ಈ ಸೆಕ್ಷನ್‌ನ ಸದ್ಬಳಕೆಗಿಂತ ದುರ್ಬಳಕೆಯೇ ಹೆಚ್ಚಾಗಿದೆ. ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ದೇಶದಲ್ಲಿ ಇಂತಹ ದಮನಕಾರಿ ಕಾನೂನಿನ ಅಗತ್ಯ ಇದೆಯೇ?

ಸುಪ್ರೀಂ ಕೋರ್ಟ್ 1962ರಲ್ಲಿ ಕೇದಾರನಾಥ್ ಸಿಂಗ್ ಪ್ರಕರಣದಲ್ಲಿ ದೇಶದ್ರೋಹಕ್ಕೆ ಸಂಬಂಧಿಸಿದ ಸೆಕ್ಷನ್ ಅನ್ನು ರದ್ದುಪಡಿಸಲು ನಿರಾಕರಿಸಿತು. ಆದರೆ, ಈ ತೀರ್ಪಿನಲ್ಲಿ ಸರ್ಕಾರವು ಸೆಡಿಷನ್ ಸೆಕ್ಷನ್ ಅನ್ನು ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಬಳಸಬೇಕೆಂದು ಹೇಳಿತು. ಅವುಗಳೆಂದರೆ:

- ವ್ಯಕ್ತಪಡಿಸಿದ ಅಭಿಪ್ರಾಯಗಳು ಹಿಂಸೆಯನ್ನು ಪ್ರಚೋದಿಸುವಂತೆ ಇರಬೇಕು.
- ಸಾರ್ವಜನಿಕ ಸುವ್ಯವಸ್ಥೆ ಕದಡುವಂತಿರಬೇಕು.
- ತಕ್ಷಣದ ಪರಿಣಾಮಗಳನ್ನು ಉಂಟುಮಾಡುವಂತೆ ಇರಬೇಕು.
- ಕಾನೂನುಬಾಹಿರ ಮತ್ತು ಅಕ್ರಮ ಮಾರ್ಗಗಳಿಂದ ಸರ್ಕಾರವನ್ನು ಬುಡಮೇಲು ಮಾಡುವಂತೆ ಇರಬೇಕು.

ಕೇದಾರನಾಥ್ ಸಿಂಗ್ ಪ್ರಕರಣದ ತೀರ್ಪು ಬಂದು 60 ವರ್ಷಗಳು ಕಳೆದುಹೋಗಿವೆ. ಈ ಕಾಲಾವಧಿಯಲ್ಲಿ ಸರ್ಕಾರಗಳು ನ್ಯಾಯಾಲಯ ರೂಪಿಸಿದ ಮಾನದಂಡಗಳನ್ನು ಪಾಲಿಸಲೇ ಇಲ್ಲ. ದೇಶದ್ರೋಹದ ಸೆಕ್ಷನ್ ಬಳಸಿ ಸಾವಿರಾರು ಜನರನ್ನು ಬಂಧಿಸಿ ಜೈಲಿಗೆ ಕಳುಹಿಸಿವೆ. ಇಂದಿಗೂ ನೂರಾರು ಜನ ಜೈಲಿನಲ್ಲಿ ಕೊಳೆಯುತ್ತಿದ್ದಾರೆ ಮತ್ತು ಪ್ರಕರಣಗಳು ವಿಲೇವಾರಿ ಆಗದೆ ಬಾಕಿ ಉಳಿದುಕೊಂಡಿವೆ.

ಪತ್ರಕರ್ತ ವಿನೋದ್ ದುವಾ ವಿರುದ್ಧ ದಾಖಲಾಗಿದ್ದ ದೇಶದ್ರೋಹದ ಪ್ರಕರಣವನ್ನು ಸುಪ್ರೀಂ ಕೋರ್ಟ್ ಕಳೆದ ಜೂನ್‌ನಲ್ಲಿ ರದ್ದುಗೊಳಿಸಿತು. ಕೇದಾರನಾಥ್ ಸಿಂಗ್ ಪ್ರಕರಣದಲ್ಲಿ ರೂಪಿಸಿರುವ ಮಾನದಂಡಗಳನ್ನು ಸರ್ಕಾರ ಪಾಲಿಸಬೇಕೆಂದು ಈ ಸಂದರ್ಭದಲ್ಲಿ ಅದು ಮತ್ತೆ ಹೇಳಿದೆ. ಆದರೆ ತಾನು ರೂಪಿಸಿರುವ ಮಾನದಂಡಗಳನ್ನು ಸರ್ಕಾರ ಯಾಕೆ ಪಾಲಿಸಲಿಲ್ಲ ಎಂದು ನ್ಯಾಯಾಲಯವು ಪ್ರಶ್ನಿಸಲಿಲ್ಲ ಮತ್ತು ಅದಕ್ಕಾಗಿ ಶಿಕ್ಷಿಸಲಿಲ್ಲ. ನ್ಯಾಯಾಲಯ ವಿಧಿಸಿದ ಮಾನದಂಡಗಳನ್ನು ಸರ್ಕಾರ 60 ವರ್ಷಗಳ ಕಾಲ ಪಾಲಿಸಲಿಲ್ಲ ಎಂಬ ಒಂದೇ ಕಾರಣಕ್ಕೆ ದೇಶದ್ರೋಹದ ಸೆಕ್ಷನ್ ಅನ್ನು ರದ್ದುಗೊಳಿಸಬೇಕಾಗಿತ್ತು. ಇಂತಹ ಒಂದು ಸುವರ್ಣ ಅವಕಾಶವನ್ನು ಸುಪ್ರೀಂ ಕೋರ್ಟ್ ಕಳೆದುಕೊಂಡಿತು.

ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಒಂದು ಮಾನವ ಹಕ್ಕು ಮತ್ತು ನಮ್ಮ ಸಂವಿಧಾನದ ಅಡಿ ಮೂಲಭೂತ ಹಕ್ಕು. ದೇಶದ್ರೋಹದ ಕಾನೂನು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಎರಡೂ ಒಟ್ಟೊಟ್ಟಿಗೆ ಮುಂದುವರಿಯಲು ಸಾಧ್ಯವಿಲ್ಲ. ದೇಶದ್ರೋಹದ ಸೆಕ್ಷನ್ ಅನ್ನು ಅದು ಮೂಲತಃ ಜನ್ಮತಾಳಿದ ಬ್ರಿಟನ್‌ನಲ್ಲೇ ರದ್ದುಗೊಳಿಸಲಾಗಿದೆ. ಅಮೆರಿಕ, ನ್ಯೂಜಿಲೆಂಡ್‌ನಂತಹ ಅನೇಕ ಪ್ರಜಾಪ್ರಭುತ್ವ ದೇಶಗಳಲ್ಲಿ ಈ ರೀತಿಯ ಕಾನೂನನ್ನು ಜಾರಿಗೊಳಿಸಿಲ್ಲ. ಭಾರತವು ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಸೆಡಿಷನ್ ಕಾನೂನನ್ನು ರದ್ದುಗೊಳಿಸಬೇಕು.

ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ವ್ಯಕ್ತಿ ಸ್ವಾತಂತ್ರ್ಯವು ಮೊದಲನೆಯ ಹೆಜ್ಜೆ. ವ್ಯಕ್ತಿಯು ಸತ್ಯಕ್ಕಾಗಿ ನಡೆಸುವ ಹುಡುಕಾಟದ ಸ್ವಾತಂತ್ರ್ಯ ಮೊಟಕುಗೊಳ್ಳಬಾರದು. ಎಲ್ಲ ಪ್ರಮುಖ ವಿಷಯಗಳ ಬಗ್ಗೆಯೂ ಮುಕ್ತವಾದ ಚರ್ಚೆ ನಡೆಯಬೇಕು. ಪ್ರಗತಿ ಸಾಧ್ಯವಾಗುವುದು ಪರಂಪರೆಯನ್ನು ಒಪ್ಪಿಕೊಳ್ಳುವುದರ ಮೂಲಕವಲ್ಲ. ಬದಲಾಗಿ, ಜನರ ಅಭಿಪ್ರಾಯಗಳು ಬದಲಾಗುವಷ್ಟರ ಮಟ್ಟಿಗೆ ಹೊಸ ವಿಷಯಗಳನ್ನು ವೈಜ್ಞಾನಿಕ ಚಿಂತನೆ ಆಧರಿಸಿ ಮಂಡಿಸುವ ಮೂಲಕ. ವ್ಯಕ್ತಿಯ ಚಿಂತನಾ ಕ್ರಮ ವೃದ್ಧಿಯಾಗಲು, ವೈಚಾರಿಕತೆ ಅರಳಲು, ಬೌದ್ಧಿಕ ಜಗತ್ತು ವಿಸ್ತಾರಗೊಳ್ಳಲು ಮತ್ತು ವ್ಯಕ್ತಿತ್ವ ಪರಿಪಕ್ವಗೊಳ್ಳಲು ಎಲ್ಲ ರೀತಿಯ ಅಭಿಪ್ರಾಯಗಳ ಬಗ್ಗೆಯೂ ತಿಳಿದಿರಬೇಕು.

ಜ್ಞಾನ ಮತ್ತು ವಿವೇಕವು ಆಕಾಶದಿಂದ ಉದುರುವುದಿಲ್ಲ. ಮಾನವನ ಅನುಭವ ಜ್ಞಾನವನ್ನು ವಿಮರ್ಶೆಗೆ ಒಳಪಡಿಸಿದಾಗ ಪ್ರಗತಿಪರ ಚಿಂತನೆ ಎಂದು ಕರೆಯಲಾಗುವ ವೈಚಾರಿಕತೆಯು ಉಗಮವಾಗುವುದು. ಮಾನವನ ನಾಗರಿಕತೆಯು ಬೇಟೆಯಾಡುವ ಕಾಲದಿಂದ ಇಂದಿನ ಅತ್ಯಂತ ಆಧುನಿಕ ವೈಜ್ಞಾನಿಕ ಯುಗವನ್ನು ಮುಟ್ಟಿರುವುದು ಈ ಪ್ರಕ್ರಿಯೆಯ ಮೂಲಕವೇ.

ಸೆಕ್ಷನ್ 124(ಎ) ಅನ್ನು ಸುಪ್ರೀಂ ಕೋರ್ಟ್ ಇದೀಗ ಅಮಾನತಿನಲ್ಲಿ ಇರಿಸಿದೆ. 'ಕಾರ್ಯಾಂಗ ಮತ್ತು ನ್ಯಾಯಾಂಗ ಸೇರಿದಂತೆ ಎಲ್ಲ ಸಂಸ್ಥೆಗಳಿಗೆ ಅವುಗಳದ್ದೇ ಆದ ಲಕ್ಷಣ ರೇಖೆಗಳಿವೆ, ಯಾರೂ ಈ ಗಡಿಗಳನ್ನು ದಾಟಬಾರದು' ಎಂದು ಕೇಂದ್ರ ಕಾನೂನು ಸಚಿವರು ಪ್ರತಿಕ್ರಿಯಿಸಿದ್ದಾರೆ. ಆದರೆ ಶಾಸಕಾಂಗ ರಚಿಸಿರುವ ಯಾವುದೇ ಕಾನೂನು ಸಂವಿಧಾನದ ಯಾವುದೇ ವಿಧಿಗೆ ವಿರುದ್ಧವಾಗಿದ್ದರೆ ಅಂತಹ ಕಾನೂನನ್ನು ರದ್ದುಗೊಳಿಸುವ ಅಧಿಕಾರವು ನ್ಯಾಯಾಂಗಕ್ಕೆ ಇದೆಯೆಂಬ ವಿಚಾರವನ್ನು ಯಾರೂ ಮರೆಯಬಾರದು.

ಈ ಸೆಕ್ಷನ್ ಕುರಿತು ಸರ್ಕಾರವು 'ಅರ್ಹ ವೇದಿಕೆ'ಯ ಮೂಲಕ ಮರುಪರಿಶೀಲನೆ ನಡೆಸುವವರೆಗೆ ದೇಶದ್ರೋಹದ ಕಾನೂನಿನ ಅಡಿ ಯಾವುದೇ ಪ್ರಕರಣ ದಾಖಲು ಮಾಡಬಾರದೆಂದು ಸುಪ್ರೀಂ ಕೋರ್ಟ್ ಆದೇಶಿಸಿರುವುದು ಸ್ವಾಗತಾರ್ಹ. ಅದು, ಈ ಸದವಕಾಶವನ್ನು ಬಳಸಿಕೊಂಡು, ದೇಶದ್ರೋಹದ ಕಾನೂನನ್ನು ರದ್ದುಗೊಳಿಸಿ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯಲೆಂದು ಆಶಿಸುತ್ತೇನೆ.

ಲೇಖಕ: ನಿವೃತ್ತ ನ್ಯಾಯಮೂರ್ತಿ, ಕರ್ನಾಟಕ ಹೈಕೋರ್ಟ್



ಚುರುಮುರಿ



ತೆಪರೇಸಿ ದೇವರು!

● ಬಿ.ಎನ್.ಮಲ್ಲೇಶ್

ಹರಟೆಕಟ್ಟೇಲಿ ಲೌಡ್‌ಸ್ಪೀಕರ್ ಮತ್ತು ಭಜನೆ ಬಗ್ಗೆ ಕಾವೇರಿದ ಚರ್ಚೆ ನಡೆದಿತ್ತು. ಮನೇಲಿ ಹೆಂಡತಿಯಿಂದ ಪೂಜೆ, ಮಂಗಳಾರತಿ ಸೇವೆ ಮಾಡಿಸಿಕೊಂಡು ಆ ಸಿಟ್ಟಿಗೆ 'ತೀರ್ಥಸ್ವರೂಪ'ನಾಗಿ ಹರಟೆಕಟ್ಟೆಗೆ ಬಂದಿದ್ದ ತೆಪರೇಸಿ, 'ನೋ ಅವಾಜ್, ನೋ ಸೌಂಡ್... ಯಾರೂ ಮಾತಾಡಂಗಿಲ್ಲ' ಎನ್ನುತ್ತ ಎಲ್ಲರ ಮೇಲೂ ಎಗರಿ ಬೀಳುತ್ತಿದ್ದ.

'ಯಾಕಲೆ, ಹೆಂಗೈತಿ ಮೈಯಾಗೆ? ನಾವಿಲ್ಲಿ ಮಾತಾಡಕೇ ಬಂದಿರೋದು' ದುಬ್ಬೀರ ಸಿಟ್ಟಿಗೆದ್ದ.

'ನನ್ ಪವರ್ ನಿಮಿಗೆ ಗೊತ್ತಿಲ್ಲ, ನಾನು ಹೇಳಿದ್ಮೇಲೆ ಮುಗೀತು. ಯಾರೂ ಪಿಟಿಕ್ಕನ್ನಂಗಿಲ್ಲ...'

'ನಿನ್ತೆಲಿ, ಪವರ್ ಇಳಿದ್ಮೇಲೆ ನಿನ್ ಪುಂಗಿ ಹೆಂಗ್ ಬಂದ್ ಮಾಡ್ಬೇಕು ಅಂತ ನಂಗೊತ್ತು'.

'ಲೇಯ್, ನನ್ ಪುಂಗಿ ಬಂದ್ ಮಾಡೋದಿರ್‍ಲಿ, ಅದೇನೋ ಲೌಡ್‌ಸ್ಪೀಕರ್ ಬಂದ್, ಭಜನಿ ವಿಷಯ ಮಾತಾಡ್ತಿದ್ರಿ? ಹಂಗಾದ್ರೆ ನಮ್ ದೇವರ ಭಜನೀನೂ ಮಾಡ್ರಿ...' ತೆಪರೇಸಿ ವಾದಕ್ಕಿಳಿದ.

'ಯಾವುದಪ್ಪ ನಿನ್ ದೇವರು? ಒಳಗಿರೋದಾ, ಮೈಮೇಲಿರೋದಾ?' ಗುಡ್ಡೆ ನಕ್ಕ.

'ಲೇಯ್ ಸರಿಯಾಗ್ ಮಾತಾಡು, ನಮ್ ದೇವ್ರಿಗೆ ಜಾತಿ ಇಲ್ಲ, ಧರ್ಮ ಇಲ್ಲ. ಎಲ್ರಿಗೂ ಬೇಕಾಗಿರೋ ಏಕೈಕ ದೇವ್ರು ನಮ್ದು...'

'ಆತು ಬಿಡಪ, ನಿಮ್ ದೇವ್ರ ಭಜನಿ ನೀನೇ ಮಾಡ್ಕೊ. ಈಗೇನು ಬೇರೇರು ಮಾತಾಡಕೆ ಬಿಡ್ತೀಯೋ ಇಲ್ಲೋ?' ದುಬ್ಬೀರನಿಗೆ ಕೋಪ.

'ಬಿಡಲ್ಲ, ರಾಜಕೀಯದೋರ ಥರ ಖಾಲಿ ಪುಕ್ಸೆಟ್ಟೆ ಮಾತಾಡೋದು ಬಿಡ್ರಿ. ನೀರು, ವಿಸ್ಕಿ ಮಿಕ್ಸ್ ಆದಂಗೆ ಜನಾನ ಒಂದು ಮಾಡೋದು ಕಲೀರಿ'.

'ತೆಲಿ ಕೆಟ್ಟೋನ ಸಾವಾಸ ಆತಪ, ನಾ ಬರ್ತೀನಿ...' ದುಬ್ಬೀರ ಎದ್ದು ನಿಂತ.

'ಲೇಯ್, ಒಂದ್ ನಿಮಿಷ ತಡಿ, ಅದೇನೋ ಲೌಡ್‌ಸ್ಪೀಕರ್ ಬಂದ್ ಅಂತಿದ್ರಲ್ಲ, ನಿಮಗೆ ಒಂದ್ ಚಾಲೆಂಜು'.

'ಏನು?' ಗುಡ್ಡೆ ಕೇಳಿದ.

'ನಿಮಗೆ ತಾಕತ್ತಿದ್ರೆ ಮೊದ್ಲು 'ನಮ್ಮನಿ' ಲೌಡ್‌ಸ್ಪೀಕರ್ ಬಂದ್ ಮಾಡಿಸ್ರಲೆ ನೋಡಾಣ... ಆಗ್ತತಾ?'

ತೆಪರೇಸಿ ಚಾಲೆಂಜಿಗೆ ಯಾರೂ ಪಿಟಿಕ್ಕೆನ್ನಲಿಲ್ಲ.

ಸಂಗತ

ಮರುಪರೀಕ್ಷೆ ಎಂಬ ಅಗ್ನಿದಿವ್ಯ

ಅಕ್ರಮ ಎಸಗಿದವರಿಗೆ ಶಿಕ್ಷೆ ಕೊಡಲಿ, ಆದರೆ ಪರೀಕ್ಷೆ ಬರೆದ ಪ್ರಾಮಾಣಿಕರಿಗೂ ಅನ್ಯಾಯವಾಗುವುದು ಎಷ್ಟರಮಟ್ಟಿಗೆ ಸರಿ?

● ಡಾ. ಲಕ್ಷ್ಮಣ ವಿ.ಎ.


ತೊಂಬತ್ತರ ದಶಕದಲ್ಲಿ ರಾಜ್ಯದ ಬರಪೀಡಿತ ಪ್ರದೇಶದ ಕೆಲ ಭಾಗಗಳು ಮೆಟ್ರಿಕ್ ಮತ್ತು ಪಿಯು ಪರೀಕ್ಷೆಗಳಲ್ಲಿ ಅಚ್ಚರಿ ಎಂಬಂತೆ ಶೇಕಡಾವಾರು ಫಲಿತಾಂಶದಲ್ಲಿ ಮುನ್ನಡೆ ಕಾಯ್ದುಕೊಂಡಿದ್ದವು. ಈ ಹೆಚ್ಚುವರಿ ಫಲಿತಾಂಶ ಕೆಲವೇ ಪರೀಕ್ಷಾ ಕೇಂದ್ರಗಳಿಂದ ಬರುತ್ತಿದ್ದುದು ಅನುಮಾನಕ್ಕೆ ಎಡೆಮಾಡಿತ್ತು. ತನಿಖೆ ನಡೆಸಿದಾಗ, ಈ ಕೇಂದ್ರಗಳಲ್ಲಿ ಸಾಮೂಹಿಕ ನಕಲು ಮಾಡಿದ್ದುದು ಬಯಲಾಗಿತ್ತು. ಇಂತಹ ಕೇಂದ್ರಗಳ ಕುಖ್ಯಾತಿ ಸುದ್ದಿಯಾಗಿ, ದೂರದೂರಿನ ವಿದ್ಯಾರ್ಥಿಗಳು ಪ್ರವೇಶ ಪಡೆಯಲು ಈ ಶಾಲಾ ಕಾಲೇಜುಗಳಿಗೆ ಮುಗಿಬೀಳುತ್ತಿದ್ದರು!

ಈ ವಿಷಯ ಶಿಕ್ಷಣ ಇಲಾಖೆಯ ಗಮನಕ್ಕೆ ಬಂದಿದ್ದರೂ ಏನೂ ಮಾಡುತ್ತಿರಲಿಲ್ಲ ಅಥವಾ ಜಾಣ ಕುರುಡುತನ ಪ್ರದರ್ಶಿಸುತ್ತಿತ್ತೋ ಕಾಣೆ. ಏಕೆಂದರೆ, ಶೂನ್ಯ ಫಲಿತಾಂಶ ಬಂದ ಶಾಲಾ ಕಾಲೇಜುಗಳು ಮುಚ್ಚುವ ಭೀತಿಯಲ್ಲಿದ್ದವು. ಶೈಕ್ಷಣಿಕ ವರ್ಷದ ಪ್ರಗತಿಗೆ ಹಲವಾರು ಅಡ್ಡಿ ಆತಂಕಗಳಿದ್ದವು. ಸತತ ಬರಗಾಲದಿಂದ ಮಕ್ಕಳು ಅರ್ಧದಲ್ಲೇ ಶಾಲೆ ಬಿಡುವುದು ಅಥವಾ ಪೋಷಕರು ಕೂಲಿಗೆಂದು ನಗರಗಳಿಗೆ ಗುಳೆ ಹೋಗುವುದು ಸಾಮಾನ್ಯವಾಗಿತ್ತು. ಹಳ್ಳಿಗೆ ವರ್ಗವಾಗಿ ಬರಲು ಮೇಷ್ಟ್ರುಗಳು ಹಿಂದೇಟು ಹಾಕುತ್ತಿದ್ದರಿಂದ ಮೇಷ್ಟ್ರುಗಳ ಕೊರತೆಯಾಗಿ, ಇದ್ದ ಸಿಬ್ಬಂದಿಯೇ ಎಲ್ಲ ತರಗತಿಗಳ ಪಾಠ ಮಾಡಿ ಮುಗಿಸಬೇಕಿತ್ತು. ಬಹುಶಃ ಈ ಎಲ್ಲ ಅಂಶಗಳು ಇಲ್ಲಿಯ ಅಕ್ರಮಕ್ಕೆ ಇಂಬು ಕೊಡುತ್ತಿದ್ದವೇನೊ.

ನಾನು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಬೇಕಿದ್ದ ಕೇಂದ್ರವೂ ಇಂತಹ ನಕಲಿಗೆ ಕುಖ್ಯಾತಿಯಾಗಿತ್ತು. ಗಮನಾರ್ಹವೆಂದರೆ, ಪ್ರತಿವರ್ಷ ಕನಿಷ್ಠ ಶೇ 15– 20ರಷ್ಟು ಹುಡುಗರು ತುಂಬ ಪ್ರಾಮಾಣಿಕತೆಯಿಂದ ಪರೀಕ್ಷೆ ಎದುರಿಸುತ್ತಿದ್ದರು. ಅದಕ್ಕೆ ಪ್ರೇರಣೆ ಅವರ ಸಹಜ ಜಾಣ್ಮೆ, ಕುಶಲತೆ ಒಂದು ಕಡೆಯಾದರೆ, ಅಂತಹವರ ನೈತಿಕ ಬೆಂಬಲಕ್ಕೆ ಸ್ವತಃ ಶಿಕ್ಷಕರು ಇರುತ್ತಿದ್ದರು. ಏಕೆಂದರೆ ಇಂತಹವರೇ ಮುಂದೆ ಏನಾದರೂ ಸಾಧಿಸಬಲ್ಲ ಅಸಲಿ ಬಂಗಾರಗಳು, ಉಳಿದ ಶೇ 80ರಷ್ಟು ಮಕ್ಕಳು ಕೇವಲ ಸರ್ಟಿಫಿಕೇಟ್‌ಗಾಗಿ ಬರೆಯುವವರೆಂದು ಶಿಕ್ಷಕರೇ ತೀರ್ಮಾನಿಸಿದಂತಿತ್ತು.

ಈ ಕೇಂದ್ರಗಳಿಗೆ ಸ್ಕ್ವ್ಯಾಡ್ ಅಧಿಕಾರಿಗಳು ಭೇಟಿ ಇತ್ತಾಗ, ಅವರ ಕಾರು ಶಾಲೆಯ ಗೇಟು ಪ್ರವೇಶಿಸುತ್ತಿದ್ದಂತೆಯೇ ಹೊರಗೆ ಕಾಪಿ ಚೀಟಿ ಪೂರೈಸಲೆಂದೇ ಕುಳಿತುಕೊಂಡಿದ್ದ ತಂಡಗಳು ಸಿಳ್ಳೆ ಹೊಡೆದು ಬೊಬ್ಬೆ ಹಾಕಿ ಒಳಗಿನವರನ್ನು ಎಚ್ಚರಿಸುತ್ತಿದ್ದವು. ಆಗ ಒಳಗಿರುವವರು ತಮ್ಮ ಬಳಿ ಇಟ್ಟುಕೊಂಡಿರುತ್ತಿದ್ದ ಕಾಪಿ ಚೀಟಿ, ಗೈಡ್, ಪುಸ್ತಕ ಎಲ್ಲವನ್ನೂ ಸಾರಾಸಗಟಾಗಿ ಕಿಟಕಿಯಿಂದ ಹೊರಕ್ಕೆ ಎಸೆಯುತ್ತಿದ್ದರು. ಆಗ ಯಾರ ಯಾರದೋ ಚೀಟಿಗಳು ಇನ್ಯಾರದೋ ಬಳಿ ಬಂದು ಬೀಳುತ್ತಿದ್ದವು. ಕೆಲವೊಮ್ಮೆ ಇಂತಹ ಚೀಟಿ ಪ್ರಾಮಾಣಿಕರ ಬಳಿ ಬಿದ್ದು, ಅಂತಹವರೂ ಡಿಬಾರ್ ಆಗುತ್ತಿದ್ದರು.

ಇಂತಹುದೇ ಒಬ್ಬ ಪ್ರಾಮಾಣಿಕ ಹುಡುಗ ರಾಮು ಹೀಗೇ ಬಲಿಪಶುವಾಗಿ ಡಿಬಾರ್ ಆದಾಗ ಊರಿಗೆ ಊರೇ ಸೂತಕದ ಛಾಯೆಯಲ್ಲಿತ್ತು. ಭವಿಷ್ಯದ ಬಗ್ಗೆ ಎಷ್ಟೊಂದು ಭವ್ಯ ಕನಸು ಕಂಡಿದ್ದ ಬಡ ರೈತನ ಮಗ, ಸೂಕ್ಷ್ಮಮತಿಯ ರಾಮು ಹಾಗೂ ಅವನ ಪೋಷಕರಿಗೆ ಈ ಅನಿರೀಕ್ಷಿತ ಆಘಾತವನ್ನು ಎದುರಿಸುವುದು ದೊಡ್ಡ ಸವಾಲೇ ಆಗಿತ್ತು. ಒಂದು ವರ್ಷವೆಂಬ ಒಂದು ಯುಗವನ್ನು ಕಳೆದು ಮತ್ತೊಮ್ಮೆ ಪರೀಕ್ಷೆಯೆಂಬ ಅಗ್ನಿದಿವ್ಯವನ್ನು ಹಾಯ್ದು ಇಡೀ ಶಾಲೆಗೆ ಮೊದಲಿಗನಾಗಿದ್ದ. ಆದರೆ ಅವನಿಗಾದ ಅನ್ಯಾಯವನ್ನು ಯಾವ ನ್ಯಾಯಾಲಯದಲ್ಲಿ ಪ್ರಶ್ನಿಸುವುದು? ಮರುಪರೀಕ್ಷೆ ಬರೆಯುವಷ್ಟು ಧೈರ್ಯ, ಮನೆಯವರು, ಶಾಲಾ ಶಿಕ್ಷಕರ ಪ್ರೋತ್ಸಾಹ ಎಲ್ಲರಿಗೂ ಸಿಗುವುದಿಲ್ಲವಲ್ಲ!



ಪ್ರಸ್ತುತ ಪಿಎಸ್‌ಐ ಹಾಗೂ ಇನ್ನಿತರ ಪರೀಕ್ಷಾ ಅಕ್ರಮಗಳನ್ನು ಗಮನಿಸುವಾಗ, ಹೀಗೆ ಪ್ರಾಮಾಣಿಕವಾಗಿ ಪರೀಕ್ಷೆ ಬರೆದು ಪಾಸು ಮಾಡಿಕೊಂಡವರ ಬಗ್ಗೆ ಯೋಚನೆಯಾಗುತ್ತದೆ. ಸರ್ಕಾರಿ ನೌಕರಿ ಅದರಲ್ಲೂ ಪಿಎಸ್‌ಐಯಂತಹ ಹುದ್ದೆಯ ಕನಸು ಹೊತ್ತು ಪ್ರತಿವರ್ಷ ಸಾವಿರಾರು ಆಕಾಂಕ್ಷಿಗಳು ಹಳ್ಳಿ ತೊರೆದು, ಲಕ್ಷಾಂತರ ರೂಪಾಯಿ ಫೀಸು ತೆತ್ತು ಖಾಸಗಿ ತರಬೇತಿ ಕೇಂದ್ರಗಳಲ್ಲಿ ಅಧ್ಯಯನ ಮಾಡುತ್ತಿರುತ್ತಾರೆ. ಇವರಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿತ ಬಡ, ಮಧ್ಯಮ ವರ್ಗದವರೇ ಹೆಚ್ಚು. ಶ್ರಮಸಂಸ್ಕೃತಿ ಹಿನ್ನೆಲೆಯ ಇವರ ದೇಹ ಕೂಡ ಈ ಕೆಲಸಕ್ಕೆ ಹುರಿಗೊಳಿಸಿದಂತೆ ಇರುತ್ತದೆ. ಸಹಜವಾಗಿ ಇವರಿಗೆ ಸುಲಭವಾಗಿ ಕೈಗೆಟುಕುವುದೆಂದರೆ ಮಿಲಿಟರಿ, ಪೊಲೀಸ್‌ನಂತಹ ರಕ್ಷಣಾ ಸಂಸ್ಥೆಗಳಲ್ಲಿನ ಹುದ್ದೆಗಳು. ಓದಿನಲ್ಲಿ ಚುರುಕಿದ್ದವರು ಪಿಎಸ್‌ಐ, ಎಸ್‌ಐನಂತಹ ಹುದ್ದೆಗಳ ಆಕಾಂಕ್ಷಿಗಳಾಗಿರುತ್ತಾರೆ.

ಸದ್ಯದ ಪಿಎಸ್‌ಐ ಪರೀಕ್ಷೆಯಲ್ಲಿ ಇಂತಹ ಪ್ರಾಮಾಣಿಕ ಆಕಾಂಕ್ಷಿಗಳಿಗೆ ಮರುಪರೀಕ್ಷೆ ಎಂಬುದು ದೊಡ್ಡ ಆಘಾತವೇ ಸರಿ. ಈಗ ಅವರು ಮರುಪರೀಕ್ಷೆ ಎಂಬ ಅಗ್ನಿದಿವ್ಯವನ್ನು ಮತ್ತೆ ಶೂನ್ಯದಿಂದ ಆರಂಭಿಸಬೇಕು. ಕೊರೊನೋತ್ತರದ ಈ ದುರಿತ ಕಾಲದಲ್ಲಿ ಬಹುತೇಕರಿಗೆ ಪರೀಕ್ಷಾ ಶುಲ್ಕ ಕಟ್ಟುವುದು, ಮಹಾನಗರದಲ್ಲಿ ಮತ್ತೆ ಬಾಡಿಗೆ ಮನೆ ಹಿಡಿದು ಪರೀಕ್ಷೆ ಬರೆಯುವುದು ದುಬಾರಿಯ ಸಂಗತಿ. ಅನೇಕ ಆಕಾಂಕ್ಷಿಗಳು ವಯೋಮಿತಿ ಮೀರುವ ಹಂತದಲ್ಲಿ ಇರುತ್ತಾರೆ.

ಅಕ್ರಮ ಎಸಗಿದವರಿಗೆ ಶಿಕ್ಷೆ ಕೊಡಲಿ, ಆದರೆ ಪರೀಕ್ಷೆ ಬರೆದ ಪ್ರಾಮಾಣಿಕರಿಗೂ ಅನ್ಯಾಯವಾಗುವುದು ಎಷ್ಟರಮಟ್ಟಿಗೆ ಸರಿ? ಇಲ್ಲಿ ಪಿಎಸ್‌ಐ ನೇಮಕಾತಿ ಎಂಬುದು ಒಂದು ಉದಾಹರಣೆ ಮಾತ್ರ. ಈಗ ಬಯಲಾಗುತ್ತಿರುವ ಸಾಲು ಸಾಲು ಅಕ್ರಮಗಳಿಗೂ ಈ ನೀತಿ ಅನ್ವಯವಾಗಬೇಕು.

ವಾಚಕರ ವಾಣಿ

ತಂಟೆಗೆ ಬಂದರಷ್ಟೇ ಭ್ರಷ್ಟಾಚಾರ ಬಯಲು?!

'ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಕೆರೆಕೋಡಿಗಳನ್ನು ನುಂಗಿದವರನ್ನು ಖಾಲಿ ಮಾಡಿಸುತ್ತೇವೆ' ಎಂಬ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರ ಹೇಳಿಕೆಗೆ, 'ನ್ಯಾಯ ಕೊಡಿಸಲು ಅಧಿಕಾರವೇ ಬೇಕೆ?' ಎಂದು ಪತ್ತಂಗಿ ಎಸ್. ಮುರಳಿ ಕೇಳಿದ್ದಾರೆ (ವಾ.ವಾ., ಮೇ 12). ಇದಕ್ಕೆ ನನ್ನ 100 ಪ್ರತಿಶತ ಸಹಮತವಿದೆ.

ಕುಮಾರಸ್ವಾಮಿ ಅವರು 'ನನ್ನ ಸುದ್ದಿಗೆ ಬಂದರೆ ನಿಮ್ಮೆಲ್ಲಾ ಜಾತಕ ಬಿಚ್ಚಿಡುತ್ತೇನೆ. ನನ್ನ ಬಳಿ ದಾಖಲೆ ಇದೆ' ಎಂದು ಹೇಳುವುದು ಇದೇನೂ ಮೊದಲಲ್ಲ. ಹಾಗಿದ್ದರೆ ಅವರ ಈ ಮಾತಿನ ಅರ್ಥ ಏನು? ನನ್ನ ತಂಟೆಗೆ ಬಂದರೆ ಮಾತ್ರ ನಿಮ್ಮ ಭ್ರಷ್ಟಾಚಾರ ಬಯಲು ಮಾಡುತ್ತೇನೆ ಎಂದೇ? ಇದು ಸರಿಯೇ? ತಪ್ಪು ಯಾರೇ ಮಾಡಲಿ, ಅವರ ಬಗ್ಗೆ ದಾಖಲೆ ಇದ್ದರೆ ಅದನ್ನು 'ಬಹುಜನ ಹಿತಾಯ' ಅನ್ನುವ ಹಾಗೆ, ಸಾರ್ವಜನಿಕ ಹಿತಾಸಕ್ತಿಯಿಂದ ಬಿಡುಗಡೆ ಮಾಡಬೇಕಲ್ಲವೇ? ನೀವು ಅಧಿಕಾರದಲ್ಲಿ ಇರುವವರನ್ನು ಓಲೈಸಬೇಕಾದ ಅಗತ್ಯ ಇಲ್ಲದಿದ್ದರೆ ಅದನ್ನು ಬಿಡುಗಡೆ ಮಾಡಿ, ಸಮಾಜದಲ್ಲಿರುವ ಭ್ರಷ್ಟಾಚಾರ ಅಷ್ಟೋ ಇಷ್ಟೋ ಕಡಿಮೆಯಾದರೆ ಅದರ ಶ್ರೇಯಸ್ಸು ನಿಮಗೇ ಅಲ್ಲವೇ?

ಎ.ವಿ.ಮುರಳೀಧರ ಆಚಾರ್ಯ, ಬೆಂಗಳೂರು

ಜೀವಕಂಟಕ ಆಗದಿರಲಿ ಹೆದ್ದಾರಿ

ಮೈಸೂರು- ಊಟಿ ರಾಷ್ಟ್ರೀಯ ಹೆದ್ದಾರಿಯ ಬೇಗೂರು ಸಮೀಪದ ಹಿರಿಕಾಟಿ ಗೇಟ್ ಬಳಿ ಬೈಕ್– ಕಾರು ನಡುವೆ ಅಪಘಾತವಾಗಿ ಇಬ್ಬರು ಮೃತರಾಗಿರುವುದಾಗಿ ವರದಿಯಾಗಿದೆ. ಈ ಹೆದ್ದಾರಿಯಲ್ಲಿ ಕೆಲ ದಿನಗಳಿಂದ ಒಂದರ ಮೇಲೊಂದರಂತೆ ಅಪಘಾತಗಳು ಸಂಭವಿಸುತ್ತಲೇ ಇರುವುದು ಗಂಭೀರವಾಗಿ ಪರಿಗಣಿಸಬೇಕಾದ ಸಂಗತಿ. ಈ ರಸ್ತೆ ಉನ್ನತೀಕರಣವಾಗುವ ಮೊದಲು ಕೂಡ ಅಪಘಾತಗಳು ಆಗುತ್ತಿದ್ದವಾದರೂ ರಾಷ್ಟ್ರೀಯ ಹೆದ್ದಾರಿಯಾದ ಮೇಲೆ ಅವುಗಳ ಸಂಖ್ಯೆ ಕಡಿಮೆಯಾಗಬೇಕಿತ್ತು. ದುರದೃಷ್ಟವಶಾತ್ ಹಾಗಾಗಿಲ್ಲ. ಇದಕ್ಕೆ ವಾಹನಗಳ ಅತಿಯಾದ ವೇಗವೂ ಕಾರಣವಿರಬಹುದು. ಆದರೆ ಅಪಘಾತಗಳನ್ನು ತಡೆಗಟ್ಟಲು ಹೆದ್ದಾರಿ ಪ್ರಾಧಿಕಾರ ಸೂಕ್ತ ಕ್ರಮ ವಹಿಸದಿರುವುದು ಪ್ರಮುಖ ಕಾರಣಗಳಲ್ಲಿ ಸೇರಿದೆ.

ನಂಜನಗೂಡಿನಿಂದ ಗುಂಡ್ಲುಪೇಟೆವರೆಗಿನ ಸರಳರೇಖೆಯ ಈ ಹೆದ್ದಾರಿಯ ಉದ್ದಕ್ಕೂ ಎಡ-ಬಲಗಳಲ್ಲಿ ಹಲವಾರು ಹಳ್ಳಿಗಳ ಸಂಪರ್ಕ ರಸ್ತೆಗಳಿವೆ. ಇಲ್ಲಿ ಸೂಕ್ತ ಸಂಚಾರ ನಿಯಮ ಫಲಕಗಳನ್ನು ಹಾಕಬೇಕು. ಬೇಗೂರು ಗ್ರಾಮವು ಆ ಭಾಗದ ಪ್ರಮುಖ ವ್ಯಾಪಾರಿ ಕೇಂದ್ರವಾಗಿದ್ದು, ಹೆದ್ದಾರಿಯು ಈ ಪಟ್ಟಣದ ಮುಖ್ಯ ವಾಣಿಜ್ಯ ರಸ್ತೆಯೂ ಆಗಿರುವುದು ಸದಾ ಅಪಘಾತಕ್ಕೆ ತೆರೆದಂತಿದೆ. ಇಲ್ಲಿ ಸೂಕ್ತ ಪಾದಚಾರಿ ದಾಟು ರಸ್ತೆ ಮಾಡಬೇಕು. ಎಲ್ಲೆಂದರಲ್ಲಿ ರಸ್ತೆ ದಾಟದಂತೆ ಬ್ಯಾರಿಕೇಡ್ ಹಾಕಬೇಕು.

ಇನ್ನು ನಂಜನಗೂಡಿನಿಂದ 4 ಕಿ.ಮೀ.ವರೆಗಿನ ಕಳಲೆ ಗೇಟ್‌ವರೆಗೆ ಮಾತ್ರ ರಸ್ತೆ ಚತುಷ್ಪಥವಾಗಿದೆ (ಕಳಲೆ ಕೇಶವಮೂರ್ತಿ ಅವರು ಶಾಸಕರಾಗಿದ್ದಾಗ ತಮ್ಮ ಹುಟ್ಟೂರಿನವರೆಗೆ ಮಾತ್ರ ಅನುಕೂಲ ಮಾಡಿಕೊಂಡರು). ಆದರೆ ಇದೇ ರಸ್ತೆ ಕಳಲೆಯಿಂದ ಮುಂದಕ್ಕೆ ಹೆಚ್ಚು ಅಗಲವಾಗದೆ ದ್ವಿಪಥ ರಸ್ತೆಯಾಗಿದೆ. ಆದ್ದರಿಂದ ಕಳಲೆಯಿಂದ ಮುಂದಕ್ಕೂ ರಸ್ತೆಯನ್ನು ಇನ್ನಷ್ಟು ಅಗಲ ಮಾಡಿ, ಮಧ್ಯದಲ್ಲಿ ತಡೆಗೋಡೆ ನಿರ್ಮಿಸಿ. ಅಪಘಾತಗಳಿಂದ ಆಗುವ ಜೀವಹಾನಿ ತಪ್ಪಿಸಿ.

ಮುಳ್ಳೂರು ಪ್ರಕಾಶ್, ಮೈಸೂರು

ಕಠಿಣ ಪಾಠ ಮತ್ತು ಮೃದು ಪಾಠ

ಬ್ರಿಟಿಷರ ಕಾಲದ ಮತ್ತು ನಮ್ಮ ಸಂವಿಧಾನಕ್ಕೆ ಮುನ್ನ ರೂಪಿತವಾದ ದೇಶದ್ರೋಹಿ ವಿರೋಧಿ ಶಾಸನದ ವಿಚಾರವಾಗಿ ಸುಪ್ರೀಂ ಕೋರ್ಟ್ ಈಗ ಕೊಟ್ಟಿರುವ ಆದೇಶ, ಈ ರಾಜಕೀಯ ಸಂದರ್ಭದಲ್ಲಿ ಒಂದು ಐತಿಹಾಸಿಕ ಆದೇಶ ಎಂದೇ ಹೇಳಬಹುದು. ಇದು, ನಮ್ಮ ನ್ಯಾಯಾಂಗವು ಆಡಳಿತ ಪಕ್ಷಕ್ಕೆ ಹೇಳಿರುವ ಕಠಿಣ ಪಾಠ ಮಾತ್ರವಷ್ಟೇ ಅಲ್ಲದೆ ವಿರೋಧ ಪಕ್ಷಗಳಿಗೆ ಹೇಳಿರುವ ಒಂದು ಮೃದು ಪಾಠವೆಂದೂ ಅರಿಯಬೇಕಿದೆ. ತೋಳ ಬರುವ ಮುನ್ನವೇ ತೋಳ ಎಂದು ಅರಚಿಕೊಂಡು ಜನರಲ್ಲಿ ಅಕಾಲಿಕ ಮತ್ತು ಅನಗತ್ಯ ಭಯ ಹುಟ್ಟಿಸುವ ಹುಡುಗಾಟಿಕೆಯ ಮಟ್ಟಕ್ಕೆ ಜನತಾಂತ್ರಿಕ ಹೋರಾಟ ಹಾಗೂ ಜನಜಾಗೃತಿ ಚಳವಳಿಗಳನ್ನು ಇಳಿಸಿರುವ ವಿರೋಧ ಪಕ್ಷಗಳು, ನಮ್ಮ ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಹುಡುಗಾಟಿಕೆಯ ಚಾಳಿಯನ್ನಾಗಿ ಮಾಡಿಕೊಂಡಿವೆ ಎಂಬುದನ್ನು ಈ ಆದೇಶ ಪರೋಕ್ಷವಾಗಿ ಸೂಚಿಸುತ್ತದೆ.

ಪ್ರಜಾತಂತ್ರ ವ್ಯವಸ್ಥೆಗೆ ಆಗುತ್ತಿರುವ ಆಘಾತವನ್ನು ನಿಖರವಾಗಿ ಗುರುತಿಸಿ ಅದನ್ನು ಪರಿಹರಿಸಲು ನಮ್ಮ ಪ್ರಜಾತಂತ್ರ ವ್ಯವಸ್ಥೆಯಲ್ಲಿಯೇ ಲಭ್ಯ ಇರುವ ಸಾಧನಗಳನ್ನು ಅಗತ್ಯ ಸಹನೆ ಮತ್ತು ವಿಶ್ವಾಸಗಳಿಂದ ಬಳಸಬಹುದಾದ ಸಾಧ್ಯತೆಗಳ ಕಡೆ ಗಂಭೀರ ಗಮನ ಕೊಡದೆ, ಫ್ಯಾಸಿಸ್ಟ್, ಹಿಟ್ಲರ್, ಸರ್ವಾಧಿಕಾರ, ಹಿಂದೂ ರಾಷ್ಟ್ರ ಮುಂತಾದ ಸವೆದ ರಾಜಕೀಯ ನಾಣ್ಯಗಳನ್ನೇ ಜನರತ್ತ ಎಸೆಯುತ್ತಾ ಸ್ವತಃ ತಾವೇ ಸವೆದ ನಾಣ್ಯಗಳಾಗುತ್ತಿವೆ; ಚುನಾವಣೆಗಳಲ್ಲಿ ಪದೇ ಪದೇ ಸೋಲುತ್ತಿವೆ. ಈ ಮೂಲಕ ಪ್ರಜಾತಂತ್ರ ವ್ಯವಸ್ಥೆಯನ್ನು ಅಣಕಕ್ಕೀಡು ಮಾಡುತ್ತಿವೆ.

ನಿಜ, ನಮ್ಮ ದೇಶದ ಪ್ರಜಾತಂತ್ರಕ್ಕೆ ಇದು ಕೆಟ್ಟ ಕಾಲ. ಇದರ ಹಲವು ಅಂಗಗಳು ಹಲವಾರು ಬಾರಿ ಊನಗೊಂಡು ಸೋತಿವೆ. ಆದರೆ ಈ ಎಲ್ಲವೂ ಎಲ್ಲ ಕಾಲದಲ್ಲೂ ಅಲ್ಲ ಮತ್ತು ಇಡೀ ವ್ಯವಸ್ಥೆಯನ್ನು ಉರುಳಿಸಲು ಸಾಧ್ಯವಾಗಿಲ್ಲ. ಆದ್ದರಿಂದ ಈ ದೇಶಕ್ಕೊಂದು ಪ್ರಬುದ್ಧ ಪ್ರಜಾತಂತ್ರ ವ್ಯವಸ್ಥೆ ಕಟ್ಟಿರುವುದಾಗಿ ಹೇಳಿಕೊಳ್ಳುವ ನಮ್ಮ ಈ ರಾಜಕಾರಣಿಗಳು ತೋಳ ಎಂಬ ಶಬ್ದವನ್ನು ತೋಳಗಳಿಗಾಗಿ ಮಾತ್ರ ಬಳಸುವ ಸಮಚಿತ್ತದ ರಾಜಕೀಯ ಮಾರ್ಗವನ್ನು ಅನುಸರಿಸಿ, ನಮ್ಮ ರಾಜಕೀಯ ಸಂವಾದದ ಗುಣಮಟ್ಟ ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚಿಸುವಂತಾಗಲಿ. ಆ ಮೂಲಕ ಈಗಾಗಲೇ ಕುಸಿದುಹೋಗಿರುವ ವಿರೋಧ ಪಕ್ಷಗಳ ವಿಶ್ವಾಸಾರ್ಹತೆಯೂ ಹೆಚ್ಚಾಗಿ, ಅವು ಕೂಡ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದು ಸಂವಿಧಾನದ ಮೌಲ್ಯವನ್ನು ಎತ್ತಿ ಹಿಡಿಯುತ್ತಾ ಆಡಳಿತ ನಡೆಸುವಂತಾಗಲಿ. ಬರೀ ಕೂಗಿ ಕೂಗಿ ಬಾಯಿ ಒಣಗಿಸಿಕೊಳ್ಳುವುದರಿಂದ ಪ್ರಯೋಜನವಿಲ್ಲ. ಸುಪ್ರೀಂ ಕೋರ್ಟ್‌ನ ಈಗಿನ ಆದೇಶ ನಮ್ಮ ವಿರೋಧ ಪಕ್ಷಗಳಿಗೆ ಹೇಳಿರುವ ಮೃದು ಪಾಠ ಇದೇ ಮತ್ತು ಇದು ಈ ಸಂದರ್ಭದ ಒಂದು ಬಹುಮುಖ್ಯ ಪಾಠವೂ ಹೌದು.

ಡಿ.ಎಸ್.ನಾಗಭೂಷಣ, ಶಿವಮೊಗ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವಿರಾಟ್ ಕೊಹ್ಲಿಗೆ ವಿಶ್ರಾಂತಿ ಬೇಕೆ?

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರ ವಿರಾಟ್ ಕೊಹ್ಲಿ ಬ್ಯಾಟಿಂಗ್‌ನಲ್ಲಿ ಸತತ ವೈಫಲ್ಯ ಅನುಭವಿಸುತ್ತಿರುವುದರ ಹಿಂದಿನ ಕಾರಣಗಳನ್ನು ವಿಶ್ಲೇಷಿಸಲಾಗುತ್ತಿದೆ. 'ಅವರು ವಿಶ್ರಾಂತಿ ತೆಗೆದುಕೊಳ್ಳಬೇಕು' ಎಂದು ಮಾಜಿ ಕ್ರಿಕೆಟಿಗ ರವಿಶಾಸ್ತ್ರಿ ಪದೇ ಪದೇ ಸಲಹೆ ನೀಡುತ್ತಿದ್ದಾರೆ

• ಗಿರೀಶ ದೊಡ್ಡಮನಿ



ಮುಂಬೈನಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಪ್ರೇಕ್ಷಕರ ಗ್ಯಾಲರಿಯಲ್ಲಿದ್ದ ಅಭಿಮಾನಿಗಳು ವಿರಾಟ್ ಕೊಹ್ಲಿಗೆ ತೋರಿದ ವಿಶ್ವಾಸದ ಪರಿ

–ಟ್ವಿಟರ್ ಚಿತ್ರ



ಬೆಂಗಳೂರು: ಎರಡೂವರೆ ವರ್ಷಗಳ ಹಿಂದೆ ಶತಕ ಗಳಿಸಿದ ನಂತರ ಔಟಾದರೂ ತಮ್ಮ ಮೇಲೆಯೇ ಅಸಮಾಧಾನದಿಂದ ಬ್ಯಾಟ್‌ನಿಂದ ಪ್ಯಾಡ್‌ಗೆ ಗುದ್ದುತ್ತ, ಮುಖ ಕಿವುಚುತ್ತ, ಕಣ್ಣು ಕೆಂಪಗೆ ಮಾಡಿಕೊಂಡು ಪೆವಿಲಿಯನ್‌ನತ್ತ ಹೆಜ್ಜೆ ಹಾಕುತ್ತಿದ್ದ ವಿರಾಟ್ ಕೊಹ್ಲಿಯನ್ನು ನೋಡದವರು ಯಾರಿದ್ದಾರೆ?

'ಈ ಹುಡುಗನಿಗೆ ರನ್‌ಗಳಿಕೆಯ ಹಸಿವು ಎಷ್ಟೊಂದಿದೆ ನೋಡಿ. ಸಚಿನ್ ತೆಂಡೂಲ್ಕರ್ ರನ್ ದಾಖಲೆಗಳನ್ನು ಮೀರಿ ನಿಲ್ಲುವುದು ವಿರಾಟ್‌ಗೆ ಮಾತ್ರ ಸಾಧ್ಯ' ಎಂದು ನಿರೀಕ್ಷೆಯ ಉದ್ಗಾರ ತೆಗೆದ ಅಭಿಮಾನಿಗಳ ಲೆಕ್ಕ ಕೋಟಿ ಕೋಟಿ ದಾಟಬಹುದು. ಆದರೆ, ಕಳೆದ ಹತ್ತಾರು ಪಂದ್ಯಗಳನ್ನು ನೋಡಿ. 'ಗೋಲ್ಡನ್ ಡಕ್' ಆದರೂ ಕೂಡ ನಗುಮುಖದೊಂದಿಗೆ ಸಮಾಧಾನದ ಭಾವದೊಂದಿಗೆ ಡಗ್‌ಔಟ್‌ನತ್ತ ಮರಳುತ್ತಾರೆ ವಿರಾಟ್. ಸಹ ಆಟಗಾರರು ಅರ್ಧಶತಕ, ಶತಕ, ಸಿಕ್ಸರ್, ಬೌಂಡರಿ ಸಿಡಿಸಿದಾಗ ಹುಚ್ಚೆದ್ದು ಕುಣಿದು ಸಂಭ್ರಮಿಸುತ್ತಾರೆ. ತಾವು ವೈಫಲ್ಯ ಅನುಭವಿಸಿದ ಪಂದ್ಯದಲ್ಲಿ ಫೀಲ್ಡಿಂಗ್ ಮಾಡುವಾಗಲೂ ಅವರ ಹಾವಭಾವಗಳು ಉನ್ಮಾದದ ಉತ್ತುಂಗದಲ್ಲಿರುತ್ತವೆ. ಪಂದ್ಯದ ನಂತರ ಎದುರಾಳಿ ತಂಡಗಳ ಯುವ ಆಟಗಾರರೊಂದಿಗೆ ಮನಬಿಚ್ಚಿ ಮಾತನಾಡುತ್ತ ನಿಲ್ಲುವ ಅವರ ಪರಿ ಅಚ್ಚರಿ ಮೂಡಿಸದಿರದು.

ತಮ್ಮ ವೈಫಲ್ಯದ ಒತ್ತಡದಿಂದ ಹೊರಬರಲು ಮತ್ತು ಮಾನಸಿಕ ದೃಢತೆ ಉಳಿಸಿಕೊಳ್ಳಲು ಅವರು ಈ ರೀತಿಯಾಗಿ ತಮ್ಮನ್ನು ತೊಡಗಿಸಿಕೊಂಡಿರಲಿಕ್ಕೂ ಸಾಕು. ಇಷ್ಟು ಗಟ್ಟಿ ಮನೋಬಲದ ಆಟಗಾರನಿಗೆ ವಿಶ್ರಾಂತಿ ಅಗತ್ಯವಿದೆಯೇ?

ಮುಂದಿನ ತಿಂಗಳು ದಕ್ಷಿಣ ಆಫ್ರಿಕಾ ತಂಡವು ಭಾರತಕ್ಕೆ ಬರಲಿದೆ. ಐದು ಟಿ20 ಪಂದ್ಯಗಳ ಸರಣಿಯನ್ನು ಆಡಲಿದೆ. ಆ ಸರಣಿಯಲ್ಲಿ ಕೊಹ್ಲಿಗೆ ವಿಶ್ರಾಂತಿ ನೀಡಲು ಬಿಸಿಸಿಐ ಆಯ್ಕೆ ಸಮಿತಿಯಲ್ಲಿ ಚಿಂತನೆ ನಡೆದಿದೆ ಎನ್ನಲಾಗಿದೆ. ಈ ಕಠಿಣ ಪರಿಸ್ಥಿತಿಯಿಂದ ಹೊರಬರಲು ಐಪಿಎಲ್‌ನಿಂದ ವಿಶ್ರಾಂತಿ ತೆಗೆದುಕೊಳ್ಳಬೇಕು ಎಂದು ಮಾಜಿ ಕ್ರಿಕೆಟಿಗ ರವಿಶಾಸ್ತ್ರಿ ಸಲಹೆ ನೀಡಿದ್ದಾರೆ.

ಆದರೆ ಕಳೆದ ಎರಡು ವರ್ಷಗಳಲ್ಲಿ ವಿರಾಟ್ ಹಲವು ಬಾರಿ ವಿಶ್ರಾಂತಿ ಪಡೆದುಕೊಂಡಿದ್ದಾರೆ. ಆದರೂ ಏಕಾಗ್ರತೆಯನ್ನು ಸಾಧಿಸುವಲ್ಲಿ ಎಡವಿದ್ದು ಎದ್ದು ಕಾಣುತ್ತಿದೆ. ಇದಕ್ಕೆ ಕಾರಣವನ್ನು ವಿಶ್ಲೇಷಿಸುವ ಪ್ರಯತ್ನ ತಜ್ಞರಿಂದ ನಡೆಯುತ್ತಿದೆ.

'ಎಲ್ಲ ಶ್ರೇಷ್ಠ ಆಟಗಾರರೂ ತಮ್ಮ ವೃತ್ತಿ ಜೀವನದಲ್ಲಿ ಇಂತಹ ಪರಿಸ್ಥಿತಿಯನ್ನು ಎದುರಿಸಿದ್ದಾರೆ. ಒಂದು ಹಂತದಲ್ಲಿ ಈ ಕಠಿಣ ಪರಿಸ್ಥಿತಿಯಿಂದ ಹೊರಬಂದು ಯಶಸ್ವಿಯಾಗಿದ್ದಾರೆ. ಅವರು ರನ್ ಬರವನ್ನು ನಿವಾರಿಸಿಕೊಂಡು ಉತ್ತುಂಗಕ್ಕೇರುವುದು ಖಚಿತ' ಎಂದು ಆರ್‌ಸಿಬಿ ಮುಖ್ಯ ಕೋಚ್ ಸಂಜಯ್ ಬಾಂಗರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.


ಈ ಬಾರಿಯ ಐಪಿಎಲ್‌ನಲ್ಲಿ ಕಳೆದ ಏಳು ಇನಿಂಗ್ಸ್‌ಗಳಲ್ಲಿ ವಿರಾಟ್ (12, 0,0,9,58,30,0) ಗಳಿಸಿದ್ದು ಕೇವಲ ಒಂದು ಅರ್ಧಶತಕ. ಹೆಚ್ಚಾಗಿ ಸ್ಪಿನ್ನರ್‌ಗಳ ಎಸೆತಗಳಲ್ಲಿ ಔಟಾಗಿದ್ದಾರೆ. ಎಲ್ಲ ಮಾದರಿಗಳೂ ಸೇರಿದಂತೆ ಕಳೆದ 104 ಪಂದ್ಯಗಳಲ್ಲಿ ಅವರು ಶತಕವನ್ನೇ ಬಾರಿಸಿಲ್ಲ. ಸಚಿನ್ ತೆಂಡೂಲ್ಕರ್ ಅವರ ಶತಕಗಳ ದಾಖಲೆಯನ್ನು ಮೀರಿ ನಿಲ್ಲುವ ಭರವಸೆ ಮೂಡಿಸಿರುವ ಆಟಗಾರ ವಿರಾಟ್.

1983ರಲ್ಲಿ ಸುನಿಲ್ ಗಾವಸ್ಕರ್ ಮತ್ತು 100ನೇ ಶತಕ ದಾಖಲಿಸುವ ಹಾದಿಯಲ್ಲಿ ಸಚಿನ್ ತೆಂಡೂಲ್ಕರ್ ಕೂಡ ಇಂತಹದ್ದೇ ಹಿನ್ನಡೆ ಅನುಭವಿಸಿದ್ದರು. ನಂತರ ಅವರು ತಮ್ಮ ಲಯಕ್ಕೆ ಮರಳಿದ್ದರು. ಅದೇ ರೀತಿ ವಿರಾಟ್ ಕೂಡ ಮತ್ತೆ ಫಾರ್ಮ್‌ಗೆ ಮರಳುವ ವಿಶ್ವಾಸವೂ ವ್ಯಕ್ತವಾಗುತ್ತಿದೆ. 2014ರಲ್ಲಿ ಸ್ವತಃ ವಿರಾಟ್ ಕೂಡ ಇಂತಹ ಪರಿಸ್ಥಿತಿ ಎದುರಿಸಿದ್ದರು. ನಂತರ ಎಲ್ಲ ಒತ್ತಡವನ್ನೂ ಮೀರಿ ದಾಖಲೆಗಳ ಸುರಿಮಳೆ ಮಾಡಿದರು.

ಕಳೆದ ಎರಡು ವರ್ಷಗಳಲ್ಲಿ ವಿರಾಟ್ ವೈಯಕ್ತಿಕ ಮತ್ತು ವೃತ್ತಿ ಜೀವನದಲ್ಲಿ ಹಲವು ಭಾವನಾತ್ಮಕ ಬದಲಾವಣೆಗಳಾಗಿವೆ. ಎಲ್ಲ ಮಾದರಿಗಳ ಕ್ರಿಕೆಟ್ ತಂಡಗಳ ನಾಯಕತ್ವವನ್ನು ಬಿಟ್ಟುಕೊಟ್ಟಿದ್ದಾರೆ. ಈ ವಿಷಯದಲ್ಲಿ ಬಿಸಿಸಿಐ ಜೊತೆಗಿನ ಮುಸುಕಿನ ಗುದ್ದಾಟವನ್ನೂ ಅನುಭವಿಸಿದ್ದಾರೆ. ಇವೆಲ್ಲವೂ ಅವರ ಆಟದ ಮೇಲೆ ಪ್ರಭಾವ ಬೀರಿರಬಹುದು.

'ಇಲ್ಲಿಯವರೆಗಿನ ವೈಫಲ್ಯಗಳನ್ನು ಮೀರಿ ನಿಲ್ಲುವ ಸಾಮರ್ಥ್ಯ ಮತ್ತು ಇನ್ನೂ ಏಳೆಂಟು ವರ್ಷ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಮಿಂಚುವ ಪ್ರತಿಭೆ ವಿರಾಟ್‌ಗೆ ಇದೆ. ಅವರು ಐಪಿಎಲ್‌ನಿಂದ ವಿಶ್ರಾಂತಿ ಪಡೆದು ತಮ್ಮನ್ನು ಭವಿಷ್ಯಕ್ಕಾಗಿ ಅಣಿಗೊಳಿಸಿಕೊಳ್ಳಬೇಕು' ಎಂದು ರವಿಶಾಸ್ತ್ರಿ ಯೂಟ್ಯೂಬ್ ಸಂದರ್ಶನದಲ್ಲಿ ಹೇಳಿದ್ದಾರೆ.

ಆದರೆ, ದೇಶದ ತಂಡಕ್ಕೆ ಆಡುವುದು ಐಪಿಎಲ್‌ಗಿಂತ ಮುಖ್ಯ. ಕೊಹ್ಲಿ ಈಗಿರುವ ಪರಿಸ್ಥಿತಿಯಲ್ಲಿ ಹೆಚ್ಚು ಪಂದ್ಯಗಳು ಮತ್ತು ಅಭ್ಯಾಸದಲ್ಲಿ ಸಮಯ ಕಳೆಯಬೇಕು. ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಆಡಬೇಕು. ಈ ಹಾದಿಯಲ್ಲಿ ಎಲ್ಲೋ ಒಂದು ಕಡೆ ಅವರಿಗೆ ಹಿಡಿತ ಸಿಕ್ಕಿ, ಮತ್ತೆ ಲಯಕ್ಕೆ ಮರಳಬಹುದು ಎಂದು ಗಾವಸ್ಕರ್ ಸಲಹೆ ನೀಡಿದ್ದಾರೆ. ವಿರಾಟ್ ಕಳೆದ ಎರಡು ವರ್ಷಗಳಲ್ಲಿ ಪಡೆದಿರುವ ವಿಶ್ರಾಂತಿಯ ಅವಧಿಯನ್ನು ಗಮನಿಸಿದರೆ ಗಾವಸ್ಕರ್ ಮಾತುಗಳು ಹೆಚ್ಚು ಮಹತ್ವ ಪಡೆಯುತ್ತವೆ.


ಸುನಿಲ್ ಗಾವಸ್ಕರ್

ವಿಶ್ರಾಂತಿ ವಿವರಗಳು

- 2020ರ ಮಾರ್ಚ್‌ನಿಂದ ಸೆಪ್ಟೆಂಬರ್‌ವರೆಗೆ ಕೋವಿಡ್‌ನಿಂದಾಗಿ ಕ್ರಿಕೆಟ್ ಸ್ಥಗಿತವಾಗಿತ್ತು
- 2021ರ ಜನವರಿಯಲ್ಲಿ ಆಸ್ಟ್ರೇಲಿಯಾ ಟೆಸ್ಟ್ ಸರಣಿಯಿಂದ ಪಿತೃತ್ವ ರಜೆ ತೆಗೆದುಕೊಂಡಿದ್ದರು
- ಐಪಿಎಲ್ 14ನೇ ಆವೃತ್ತಿಯು ಕೋವಿಡ್ ಎರಡನೇ ಅಲೆಯಿಂದಾಗಿ ಅರ್ಧಕ್ಕೆ ಸ್ಥಗಿತ. ಆಗಲೂ ಸುಮಾರು ಎರಡು ತಿಂಗಳು ವಿಶ್ರಾಂತಿ
- 2021ರ ಜುಲೈನಲ್ಲಿ ನ್ಯೂಜಿಲೆಂಡ್ ಎದುರಿನ ವಿಶ್ವ ಟೆಸ್ಟ್ ಫೈನಲ್ ನಂತರ ಇಂಗ್ಲೆಂಡ್ ಸರಣಿಗೂ ಮುನ್ನ ಮೂರು ವಾರಗಳ ವಿಶ್ರಾಂತಿ
- ಟಿ20 ವಿಶ್ವಕಪ್ ಟೂರ್ನಿಯ ನಂತರ ನ್ಯೂಜಿಲೆಂಡ್ ಎದುರು ಭಾರತದಲ್ಲಿಯೇ ನಡೆದ ಟಿ20 ಸರಣಿಯಿಂದ ವಿಶ್ರಾಂತಿ ಪಡೆದಿದ್ದರು
- ದಕ್ಷಿಣ ಆಫ್ರಿಕಾದಲ್ಲಿ ನಡೆದ ಟೆಸ್ಟ್ ಸರಣಿಯ ಸಂದರ್ಭದಲ್ಲಿ ಬೆನ್ನುನೋವಿನ ಕಾರಣಕ್ಕೆ ಎರಡನೇ ಪಂದ್ಯದಲ್ಲಿ ಆಡಿರಲಿಲ್ಲ
- ವೆಸ್ಟ್ ಇಂಡೀಸ್ ಎದುರಿನ ಟಿ20 ಸರಣಿಯ ಕೊನೆಯ ಪಂದ್ಯ ಮತ್ತು ಶ್ರೀಲಂಕಾ ಎದುರಿನ ಟಿ20 ಸರಣಿಯಿಂದಲೂ ಅವರು ಹಿಂದೆ ಸರಿದಿದ್ದರು



ಸಚಿನ್ ತೆಂಡೂಲ್ಕರ್

> ವಿರಾಟ್ ಕೊಹ್ಲಿ ತಮ್ಮ ವೈಭವದ ದಿನಗಳನ್ನು ನೆನಪಿಸಿಕೊಳ್ಳಬೇಕು. ಆ ಅಮೋಘ ಆಟದ ಸ್ಮರಣೆಗಳೇ ಅವರಿಗೆ ಪ್ರೇರಣೆಯಾಗಬೇಕು. ಅದರಿಂದ ಇಂದು ಎದುರಿಸುತ್ತಿರುವ ಕೆಟ್ಟ ಪರಿಸ್ಥಿತಿಯಿಂದ ಹೊರಬರುವ ದಾರಿ ಸಿಗಲಿದೆ
>
> **ಯುವರಾಜ್ ಸಿಂಗ್,** ಭಾರತ ತಂಡದ ಮಾಜಿ ಕ್ರಿಕೆಟಿಗ

> ವಿರಾಟ್ ಅನುಭವಿ ಆಟಗಾರ. ಅವರು ಉನ್ನತ ಸ್ಥಾನದಲ್ಲಿರುವ ಬ್ಯಾಟರ್. ಆ ಹಂತದಲ್ಲಿ ಅವರಲ್ಲಿ ಸ್ವಯಂ ಅವಲೋಕನ ಮಾಡಿಕೊಳ್ಳುವ ಸಾಮರ್ಥ್ಯವು ಅಪಾರವಾಗಿರುತ್ತದೆ. ರವಿಶಾಸ್ತ್ರಿ ಅವರು ವಿರಾಟ್ ಅವರೊಂದಿಗೆ ನಿಕಟವಾಗಿದ್ದಾರೆ. ಕೋಚ್ ಆಗಿದ್ದಾಗ ವಿರಾಟ್ ಅವರೊಂದಿಗೆ ಬಹಳಷ್ಟು ಸಮಯ ವಿನಿಯೋಗಿಸಿದ್ದಾರೆ. ಆದ್ದರಿಂದ ಅವರ ಸಲಹೆಯು ಮೌಲ್ಯಯುತವಾದದ್ದೆ. ಈ ವಿಷಯದಲ್ಲಿ ವಿರಾಟ್ ಅವರೇ ಪರಿಹಾರ ಕಂಡುಕೊಳ್ಳಲು ಸಮರ್ಥರು.
>
> **ಸುಜಿತ್ ಸೋಮಸುಂದರ್,** ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ ಶೈಕ್ಷಣಿಕ ವಿಭಾಗದ ಮುಖ್ಯಸ್ಥ

ವಿರಾಟ್ ಕೊಹ್ಲಿ ರನ್ ಸಾಧನೆ

ಮಾದರಿ	ಪಂದ್ಯ	ರನ್	ಶತಕ	ಅರ್ಧಶತಕ	ಶ್ರೇಷ್ಠ
ಟೆಸ್ಟ್	101	8,043	27	28	254
ಏಕದಿನ	260	12,311	43	64	183
ಟಿ20	97	3,296	0	30	94
ಐಪಿಎಲ್	219	6,499	5	43	113

ಐಪಿಎಲ್ 2022 ಸಾಧನೆ



ಪಂದ್ಯ	ರನ್	ಶ್ರೇಷ್ಠ	ಅರ್ಧಶತಕ	ಸ್ಟ್ರೈಕ್‌ರೇಟ್
12	216	58	1	111.34



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 119

ಕೈಲಾಸ ಪ್ರವೇಶಿಸಿದ ಶಿವ

ಕೈಲಾಸಕ್ಕೆ ಹೋಗಬೇಕೆಂದು ಕಾಷ್ಠಾಗೂಢ, ಸುಕೇಶ ಮತ್ತು ವೃಷಭ ಎಂಬ ಮೂವರು ಪ್ರತ್ಯೇಕವಾಗಿ ಅರವತ್ತನಾಲ್ಕುಕೋಟಿ ಗಣಗಳೊಡನೆ ಬಂದರು. ಚೈತ್ರ, ನಕುಲೀಶ ತಲಾ ಏಳು ಕೋಟಿ ಗಣಗಳೊಡನೆ ಬಂದರೆ, ಲೋಕಾಂತಕ-ದೀಪ್ತಾತ್ಮ-ದೈತ್ಯಾಂತಕ ಹಾಗೂ ದೇವದೇವನಿಗೆ ಪ್ರಿಯವಾದ ಭೃಂಗೀ, ರಿಟಿ, ಅಶನಿ, ಭಾನುಕ ಎಂಬುವರೆಲ್ಲರೂ ಒಬ್ಬೊಬ್ಬರೂ ಏಳು ಕೋಟಿಯಷ್ಟು ಗಣಗಳೊಡನೆ, ಸನಾತನ ಅರವತ್ತು ನಾಲ್ಕು ಕೋಟಿ ಗಣಗಳೊಡನೆ, ಮಹಾಬಲಶಾಲಿಯೂ ಗಣಾಧಿಪತಿಯೂ ಆದ ನಂದಿಕೇಶ್ವರನೂ ನೂರು ಕೋಟಿ ಗಣಗಳೊಡನೆ ಬಂದರು. ಇವರಲ್ಲದೆ ಇನ್ನೂ ಅಸಂಖ್ಯಾತರಾದ ಮಹಾಬಲಿಷ್ಠರಾದ ಗಣೇಶ್ವರರೂ ಬಂದರು.

ಆಗಮಿಸಿದ ಎಲ್ಲಾ ಗಣಗಳಿಗೂ ಸಾವಿರ ತೋಳುಗಳು, ಎಲ್ಲರಿಗೂ ತಲೆಯಲ್ಲಿ ಜಟೆಗಳು, ಕಿರೀಟಗಳು ಇದ್ದವು. ಜೊತೆಗೆ ಎಲ್ಲರೂ ಚಂದ್ರರೇಖೆಯನ್ನು ಧರಿಸಿದ್ದರು. ಎಲ್ಲರ ಕೊರಳೂ ಕಪ್ಪಾಗಿದ್ದು, ಎಲ್ಲರಿಗೂ ಶಿವನಂತೆ ಮೂರು ಕಣ್ಣುಗಳು ಇದ್ದವು. ಒಬ್ಬೊಬ್ಬರೂ ಹಾರ, ಹತ್ತುಕಡಕು, ತೋಳುಬಳೆ, ಕಿರೀಟ ಮೊದಲಾದ ಆಭರಣಗಳಿಂದ ಭೂಷಿತರಾಗಿದ್ದರು. ಎಲ್ಲರೂ ಬ್ರಹ್ಮ, ಇಂದ್ರ, ವಿಷ್ಣುಗಳಿಗೆ ಸರಿಸಮರಾ ಗಿದ್ದರು. ಪ್ರತಿಯೊಬ್ಬರೂ ಅಣುಮಾದಿಸಿದ್ಧಿಗಳನ್ನು ಪಡೆದವರೇ ಆಗಿದ್ದರು. ಅವರೆಲ್ಲರೂ ಕೋಟಿ ಸೂರ್ಯರಿಗೆ ಸಮಾನವಾದ ತೇಜಸ್ಸುಳ್ಳವರಾಗಿದ್ದರು.

ಇಂತಹ ಗಣೇಶ್ವರರು, ಗಣಾಧಿಪತಿಗಳೆಲ್ಲರೂ ನಿರ್ಮಲ ತೇಜಸ್ಸಿನಿಂದ ಬೆಳಗುತ್ತಿದ್ದ ಇತರ ಮಹಾತ್ಮರೂ, ಶಿವನ ದರ್ಶನವನ್ನು ಪಡೆಯಬೇಕೆಂಬ ಅಭಿಲಾಷೆಯಿಂದ ಅಲ್ಲಿಗೆ ಮಹಾಪ್ರೀತಿಯಿಂದ ಬಂದಿದ್ದರು. ವಿಷ್ಣು ಮೊದಲಾದ ದೇವತೆಗಳೆಲ್ಲರೂ, ಅಂಜಲಿಬದ್ಧರಾಗಿ ನಮ್ರತೆಯಿಂದ ತಲೆಬಗ್ಗಿಸಿ ಶಿವನಿಗೆ ನಮಸ್ಕರಿಸಿದರು. ನಂತರ ಸುಶ್ರಾವ್ಯವಾಗಿ ಸ್ತೋತ್ರವನ್ನು ಮಾಡಿದರು. ಹೀಗೆ ವಿಷ್ಣು ಮೊದಲಾದವರೊಡನೆ ಪರಮೇಶ್ವರನಾದ ಆ ಮಹೇಶ್ವರನು, ಮಹಾತ್ಮನಾದ ಕುಬೇರನಿಗೆ ಸೇರಿದ ಕೈಲಾಸವನ್ನು ಪ್ರೀತಿಯಿಂದ ಪ್ರವೇಶಿಸಿದ.

ಕುಬೇರನೂ ಭಕ್ತಿಯಿಂದ ಮತ್ತು ಆದರದಿಂದಲೂ ತನ್ನ ಮನೆಗೆ ದಯಮಾಡಿಸಿದ ಶಿವನನ್ನು ಪರಿವಾರಸಮೇತನಾಗಿ ನಾನಾ ವಿಧವಾದ ಉಪಚಾರಗಳಿಂದ ಪೂಜಿಸಿದ. ನಂತರ, ಶಿವನಜೊತೆಯಲ್ಲಿ ಬಂದಿದ್ದ ವಿಷ್ಣು ಮೊದಲಾದ ಎಲ್ಲ ದೇವತೆಗಳನ್ನೂ ಗಣಗಳನ್ನೂ ಇನ್ನೂ ಇತರರನ್ನೂ ಶಿವನಿಗೆ ಸಂತೋಷವಾಗಲೆಂದು ಕುಬೇರ ಪೂಜಿಸಿದ. ಶಿವನು ಸಂತುಷ್ಟನಾಗಿ ಕುಬೇರನನ್ನು ಆಲಂಗಿಸಿ, ತಲೆಯನ್ನು ನೇವರಿಸಿದ. ಆತನ ಪಟ್ಟಣವಾದ ಅಲಕಾನಗರಿಯ ಬಳಿಯೇ ತನ್ನ ಪರಿವಾದವರೆಲ್ಲರೊಡನೆ ನೆಲೆಸಲು ನಿರ್ಧರಿಸಿದ.

ಕೈಲಾಸಕ್ಕೆ ಬಂದ ಶಿವಪ್ರಭು ತನಗೆ ಮತ್ತು ತನ್ನ ಗಣಗಳು, ಭಕ್ತರೊಡನೆ ವಾಸಮಾಡಲು ಅನುಕೂಲವಾಗುವಂತೆ ಅವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ನಿವಾಸಗಳನ್ನು ನಿರ್ಮಿಸುವಂತೆ ವಿಶ್ವಕರ್ಮನಿಗೆ ಅಪ್ಪಣೆ ಯಿತ್ತ. ಶಿವನ ಅಪ್ಪಣೆಯಂತೆ ವಿಶ್ವಕರ್ಮನು ಕೈಲಾಸಪರ್ವತದಲ್ಲಿ ಲಗುಬಗೆಯಿಂದ ನಾನಾ ವಿಧವಾದ ಶಿಲ್ಪಕಲಾ ವೈಭವಗಳಿಂದ ಬೆಳಗುವ ಬಗೆಬಗೆಯ ಭವನಗಳನ್ನು ನಿರ್ಮಿಸಿದ. ನಂತರ ವಿಷ್ಣುವಿನ ಪ್ರಾರ್ಥನೆಯಂತೆ ಸಂತುಷ್ಟ ಚಿತ್ತನಾದ ಶಿವನು ಕುಬೇರನನ್ನು ಅನುಗ್ರಹಿಸಿ ಕೈಲಾಸಪರ್ವತಕ್ಕೆ ತೆರಳಿದ.

ಭಕ್ತವತ್ಸಲನಾದ ಪರಮೇಶ್ವರನು ಒಳ್ಳೆಯ ಮುಹೂರ್ತದಲ್ಲಿ ತನ್ನ ನಿವಾಸವಾದ ಕೈಲಾಸವನ್ನು ಪ್ರವೇಶಿಸಿ ಎಲ್ಲರನ್ನೂ ಸನಾಥರನ್ನಾಗಿ ಮಾಡಿದ. ವಿಷ್ಣು ಮೊದಲಾದ ದೇವತೆಗಳೂ ಋಷಿಗಳೂ ಸಿದ್ಧರೂ ಎಲ್ಲರೂ ಸೇರಿ ಸಂತೋಷದಿಂದ ಶಿವನಿಗೆ ಅಭಿಷೇಕಮಾಡಿದರು. ನಾನಾ ವಿಧವಾದ ಕಾಣಿಕೆಗಳನ್ನು ಕ್ರಮವಾಗಿ, ಆರತಿಯನ್ನು ಬೆಳಗಿದರು. ಆಗ ಮಂಗಳಸೂಚಕವಾದ ಪುಷ್ಪವೃಷ್ಟಿಯು ನಡೆಯಿತು. ಅಲ್ಲಿ ಅಪ್ಸರ ಸ್ತ್ರೀಯರು ದಿವ್ಯವಾದ ಗಾನವನ್ನು ಹಾಡುತ್ತಾ ಸಂತೋಷವಾಗಿ ನರ್ತನ ಮಾಡಿದರು. ಎಲ್ಲಿ ನೋಡಿದರೂ 'ಜಯ ಜಯ' ಎಂಬ ಶಬ್ದವೂ 'ನಮಃ' ಎಂಬ ಶಬ್ದವೂ ಕೇಳಿಬರುತ್ತಿತ್ತು. ಎಲ್ಲರಲ್ಲಿಯೂ, ಸುಖವನ್ನು ಹೆಚ್ಚಿಸುವಂತಹ ಮಹಾ ಉತ್ಸಾಹವು ತಾಂಡವವಾಡುತ್ತಿತ್ತು. ಆಗ ಸಿಂಹಾಸನದಲ್ಲಿ ಕುಳಿತಿದ್ದ ಶಿವನು ವಿಷ್ಣು ಮೊದಲಾಗಿ ಎಲ್ಲರಿಂದಲೂ ಸೇವೆಯನ್ನು ಯಥೋಚಿತವಾಗಿ ಸ್ವೀಕರಿಸುತ್ತಾ ಅತಿಶಯವಾಗಿ ಪ್ರಕಾಶಿಸುತ್ತಿದ್ದ. ಬಳಿಕ ದೇವತೆಗಳೇ ಮೊದಲಾದ ಎಲ್ಲರೂ ಅರ್ಥಗರ್ಭಿತವೂ ಪ್ರೀತಿವರ್ಧಕವೂ ಆದ ವಾಕ್ಯಗಳಿಂದ ಮಂಗಳವನ್ನುಂಟುಮಾಡುವ ಶಂಕರನನ್ನು ಸ್ತುತಿಸಿದರು. ಶಿವನು ಅವರ ಸ್ತುತಿಯನ್ನು ಕೇಳಿ ಪ್ರಸನ್ನನಾಗಿ, ಪ್ರೀತಿಯಿಂದ ವರಗಳನ್ನಿತ್ತ. ಅವರವರು ಕೋರಿದ ಕೋರಿಕೆಗಳನ್ನೆಲ್ಲಾ ಸಫಲಗೊಳಿಸಿದ. ಎಲ್ಲರೂ ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿಕೊಂಡು ತಮ್ಮ ಮನೆಗಳಿಗೆ ತೆರಳಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಹರಿಯಾಣದ ಕುರುಕ್ಷೇತ್ರದ ದೇವಸ್ಥಾನವೊಂದರ ಪ್ರಾಂಗಣದಲ್ಲಿ ಮುಸ್ಲಿಮರ ಗೋರಿಯನ್ನು ನಿರ್ಮಿಸಲಾಗಿದೆ ಎಂದು ಹೇಳಲಾಗುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಗೀತೋಪದೇಶ ನಡೆದಿದ್ದ ಸ್ಥಳದಲ್ಲಿ ಈ ಗೋರಿ ನಿರ್ಮಾಣವಾಗಿದೆ ಎಂದು ಕೆಲವರು ಉಲ್ಲೇಖಿಸಿದ್ದಾರೆ. ಗೋರಿ ನಿರ್ಮಾಣದ ಹಿಂದೆ ದೇವಸ್ಥಾನವನ್ನು ಒತ್ತುವರಿ ಮಾಡುವ ಹುನ್ನಾರವಿದೆ ಎಂದು ಜಾಲತಾಣ ಬಳಕೆದಾರರು ಆರೋಪಿಸಿದ್ದಾರೆ.



ವಿಡಿಯೊದಲ್ಲಿ ಉಲ್ಲೇಖಿಸಿರುವಂತೆ ಕುರುಕ್ಷೇತ್ರದಲ್ಲಿ ಗೀತೋಪದೇಶ ನಡೆದಿದ್ದ ಸ್ಥಳದಲ್ಲಿ ಇಸ್ಲಾಮ್‌ಗೆ ಸಂಬಂಧಿಸಿದ ಗೋರಿ ಪತ್ತೆಯಾಗಿಲ್ಲ ಎಂದು ಫ್ಯಾಕ್ಟ್ಲಿ ವೆಬ್‌ಸೈಟ್ ವರದಿ ಮಾಡಿದೆ. ಭೋಕ್ರಾ ಎಂಬ ಸ್ಥಳದಲ್ಲಿ ಗೋರಿ ಸ್ವರೂಪದ ನಿರ್ಮಾಣ ಕಂಡುಬಂದಿದೆ. ಬ್ರಾಹ್ಮಣರ ಕುಟುಂಬವೊಂದು ತಮ್ಮ ಪೂರ್ವಜರ ಸಮಾಧಿಗಳನ್ನು ಈ ಜಾಗದಲ್ಲಿ ನಿರ್ಮಿಸಿದೆ. ಇದನ್ನು ಅಧಿಕಾರಿಗಳು ಹಾಗೂ ಪೊಲೀಸರು ಖಚಿತಪಡಿಸಿದ್ದಾರೆ. ಕೆಲವು ಕಿಡಿಗೇಡಿಗಳು ಈ ಸಮಾಧಿಯ ಮೇಲೆ ಚಾದರ್ ಹೊದಿಸಿ, ವಿಡಿಯೊ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ. ಇದು ದಾರಿತಪ್ಪಿಸುವ ವಿಡಿಯೊ ಎಂದು ವೆಬ್‌ಸೈಟ್ ತಿಳಿಸಿದೆ.

ಗುಂಡಣ್ಣ



ಬೆರಗಿನ ಬೆಳಕು



ಗುರುರಾಜ ಕರಜಗಿ

ಆಸೆ-ಪಿಶಾಚಿ

ವಿಷಯಸನ್ನಿಧಿಗಿಂತ ಮಸಣಸನ್ನಿಧಿ ಲೇಸು |
ವಿಷದೂಟಕಿಂತುಪೋಷಿತವೆ ಲೇಸಲ್ತೆ? ||
ತೃಷೆ ಕನಲೆ, ಜೀವ ಬಿಸಿಬಾಣಲೆಗೆ ಬಿದ್ದ ಹುಳು |
ಶಿಶು ಪಿಶಾಚಿಯ ಕೈಗೆ – ಮಂಕುತಿಮ್ಮ || 627 ||

ಪದ-ಅರ್ಥ: ವಿಷಯಸನ್ನಿಧಿಗಿಂತ = ವಿಷಯ(ಇಂದ್ರಿಯಗಳ ಸೆಳೆತ) + ಸನ್ನಿಧಿಗಿಂತ, ಮಸಣಸನ್ನಿಧಿ = ಮಸಣ(ಸಾವಿನ) + ಸನ್ನಿಧಿ, ವಿಷದೂಟಕಿಂತುಪೋಷಿತವೆ = ವಿಷದ = ಊಟಕಿಂತ + ಉಪೋಷಿತವೆ(ಉಪವಾಸವೆ), ತೃಷೆ = ಆಸೆ, ಕನಲೆ = ಕೆರಳಿದರೆ,

ವಾಚ್ಯಾರ್ಥ: ಇಂದ್ರಿಯಗಳ ಸೆಳೆತದ ಸಂಗಕ್ಕಿಂತ ಮರಣವೇ ಮೇಲು. ವಿಷದ ಅಡುಗೆಯನ್ನು ಊಟ ಮಾಡುವುದಕ್ಕಿಂತ ಉಪವಾಸವಿರುವುದೇ ಕ್ಷೇಮ. ಒಂದು ಸಲ ಆಸೆ ಕೆರಳಿದರೆ, ಆ ಜೀವ ಬಿಸಿಯಾದ ಬಾಣಲೆಗೆ ಬಿದ್ದ ಹುಳುವಿದ್ದಂತೆ, ಪುಟ್ಟ ಮಗುವನ್ನು ಪಿಶಾಚಿಯ ಕೈಗೆ ಕೊಟ್ಟಂತೆ.

ವಿವರಣೆ: ಅವರೊಬ್ಬ ಮಹಾನ್ ರಾಷ್ಟ್ರದ ರಾಷ್ಟ್ರಪತಿ. ಕೆಲವು ಕ್ಷಣಗಳ ಇಂದ್ರಿಯದ ಸೆಳೆತಕ್ಕೆ ಬಲಿಯಾದರು. ಇಡೀ ರಾಷ್ಟ್ರದ ಮುಂದೆ ಮೊಣಕಾಲೂರಿ ಕ್ಷಮೆ ಯಾಚಿಸುವ ಪ್ರಸಂಗ ಬಂದಿತು, ಹಿಂದಿನ ಸಾಧನೆಗಳು ಕ್ಷಣದಲ್ಲಿ ಕರಗಿ ಹೋಗಿ, ಈ ವಿಷಯಲಂಪಟತನವೇ ಪ್ರಧಾನವಾಯಿತು. ಆ ಮರ್ಯಾದೆಯನ್ನು ಕಳೆದುಕೊಳ್ಳುವ ಕ್ಷಣ ಸಾವಿಗಿಂತ ಘೋರ. ಅವರೊಬ್ಬ ದೊಡ್ಡ ಅಧಿಕಾರಿ. ಅಧಿಕಾರದ ಬೆಂಬತ್ತಿ ಬಂದಿತು ಹಣದ ಆಸೆ. ಅದೂ ಬಂದು ಬಂದು ತುಂಬಿದಾತ ಕೆಲವು ಕಾಲದ ಸಂತೃಪ್ತಿ. ಮುಂದೆ ಅನ್ಯಾಯ ಬಯಲಾದಾಗ, ಎಲ್ಲರ ಮುಂದೆ ಬತ್ತಲಾದ ಶೋಚನೀಯ ಅನುಭವ. ಒಂದು ಪುಟ್ಟ ನೆಲ. ಅದಕ್ಕಾಗಿ ಸಹೋದರನ ಆಸೆ. ಅದಕ್ಕೆ ಕೋರ್ಟು, ಕಚೇರಿ ಸುತ್ತಾಟ. ಯಾವ ತೀರ್ಮಾನ ಬಂದರೂ ಇನ್ನೊಬ್ಬರಿಗೆ ತೃಪ್ತಿ ಇಲ್ಲ. ಒಬ್ಬ ಇನ್ನೊಬ್ಬನನ್ನು ಕೊಂದ. ತಾನು ಜೈಲು ಸೇರಿ ನೇಣಿಗೇರಿದ.

ಇಂದು ಮಾತ್ರ ನಡೆಯುವ ಸಂಗತಿಗಳಲ್ಲ ಇವು. ಹಿಂದೆಯೂ ಅನೇಕ ಬಾರಿ ಇವು ನಡೆದಿವೆ. ಹಲವಾರು ಅಪ್ಸರೆಯರ ನಾಯಕನಾಗಿದ್ದು ಅಹಲ್ಯೆಗೆ ಅಪೇಕ್ಷೆ ಪಟ್ಟ ಇಂದ್ರ ಸಹಸ್ರಾಕ್ಷನಾದ. ಸೀತೆಗೆ ಮನತೆತ್ತು ರಾವಣ ಪ್ರಾಣತೆತ್ತ. ಪುತ್ರಮೋಹಕ್ಕೆ ಬಲಿಯಾದ ಧೃತರಾಷ್ಟ್ರ ವಂಶವನ್ನೇ ಬಲಿಕೊಟ್ಟ. ಭಗವದ್ಗೀತೆಯಲ್ಲಿ ಈ ವಿಷಯವನ್ನು ಸುಂದರವಾಗಿ ಪ್ರಸ್ತಾಪಿಸಲಾಗಿದೆ. ಇಂದ್ರಿಯ ವಿಷಯಗಳ ಸೆಳೆತಕ್ಕೆ ಬಂದಾಗ ಕಾಮ ಹುಟ್ಟುತ್ತದೆ, ಕಾಮಕ್ಕೆ ಅಡ್ಡಿಯಾದಾಗ ಕ್ರೋಧ ಬರುತ್ತದೆ. ಕ್ರೋಧದಿಂದ ವಿವೇಕ ತಪ್ಪಿಸುವ ಸಂಮೋಹ ಬೆಳೆಯುತ್ತದೆ. ಸಂಮೋಹದಿಂದ ತಿಳಿವಳಿಕೆ ತಲೆಕೆಳಗಾಗುತ್ತದೆ. ಅದರಿಂದಾಗಿ ಬುದ್ಧಿ ನಶಿಸಿಹೋಗುತ್ತದೆ. ಬುದ್ಧಿನಾಶದಿಂದ ಮನುಷ್ಯ ನಾಶಹೊಂದುತ್ತಾನೆ. ವಿಷಯದ ಸೆಳೆತ ಸಾವಿನೆಡೆಗೇ. ಅದನ್ನೇ ಕಗ್ಗ ಹೇಳುತ್ತದೆ. ವಿಷಯದ ಸಂಗಕ್ಕಿಂತ ಸಾವಿನ ಸಂಗ ಲೇಸು. ಸಾವನ್ನು ಖಚಿತಪಡಿಸುವ ವಿಷದ ಊಟಕ್ಕಿಂತ ಉಪವಾಸ ಇರುವುದು ಮೇಲಲ್ಲವೆ?

ಒಂದು ಬಾರಿ ಆಸೆ ಕೆರಳಿಬಿಟ್ಟರೆ, ಮನುಷ್ಯನನ್ನು ಒದ್ದಾಡಿಸಿಬಿಡುತ್ತದೆ. ಅವನು ಬಾಣಲೆಗೆ ಬಿದ್ದ ಹುಳುವಿನಂತೆ ಚಡಪಡಿಸಿಬಿಡುತ್ತಾನೆ. ಅತಿಯಾದ ಆಸೆ ಒಂದು ಪಿಶಾಚಿ ಇದ್ದ ಹಾಗೆ. ಆ ಅನಾಹುತಶಕ್ತಿಯ ಪಿಶಾಚಿಯ ಕೈಗೆ ಒಂದು ಎಳೆಯ ಕೂಸು ಸಿಕ್ಕಿದರೆ ಏನಾದೀತು? ಅದು ಕ್ಷಣಮಾತ್ರದಲ್ಲಿ ಹೊಸಕಿ ಹಾಕೀತು. ಅಂತೆಯೇ ನಮ್ಮ ಆಸೆಗಳು ಮಿತಿಮೀರಿದರೆ, ಅವೇ ಪಿಶಾಚಿಗಳಾಗಿ ನಮ್ಮ ಪ್ರಾಣವನ್ನು ಹೀರಿಬಿಡುತ್ತವೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಮೇ 13, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಶುಕ್ಲ ದ್ವಾದಶಿ ಗಂ. 17-28, ನಕ್ಷತ್ರ: ಹಸ್ತ ಗಂ. 18-48, ಯೋಗ: ವಜ್ರ ಗಂ. 15-41, ಕರಣ: ಬವ ಗಂ. 06-15, ಮೇಷ ಮಾಸದ 29 ನೇ ದಿನ.
ರಾಹುಕಾಲ : ಬೆಳಿಗ್ಗೆ 10:30 – 12:00
ಸೂರ್ಯೋದಯ : 06-09 ಸೂರ್ಯಾಸ್ತ : 06-45
ಮುಸ್ಲಿಂ ದಿನಾಂಕ : 11 ಶವ್ವಾಲ್
ಅದೃಷ್ಟ ಸಂಖ್ಯೆ : 2, 11

ಮೇಷ: ಹಿರಿಯರ ಮಧ್ಯಸ್ತಿಕೆಯಿಂದ ವಿವಾದಗಳು ಬಗೆಹರಿದು ಪುನಃ ಮೊದಲಿನಂತೆ ಸಂಬಂಧ ಗಟ್ಟಿಯಾಗಲಿದೆ. ಸಾಲದ ಹಣ ಹಿಂದಿರುಗಿ ಕೈಸೇರುವುದರಿಂದ ಮನೆಯ ರಿಪೇರಿ ಕೆಲಸಗಳಿಗೆ ಹಣ ಖರ್ಚು ಮಾಡುವಿರಿ.

ವೃಷಭ: ಟ್ರಾವೆಲ್ಸ್ ಉದ್ಯಮದವರಿಗೆ ಲಾಭದಾಯಕವಾದ ಬೆಳವಣಿಗೆ. ಗುತ್ತಿಗೆ ಕೆಲಸದ ಬಾಕಿ ಹಣ ಸಂದಾಯವಾಗುವಂತಾಗಲಿದೆ. ಶ್ರೀ ನವಗ್ರಹ ಆರಾಧನೆಯಿಂದ ಮನಸ್ಸಿಗೆ ಹೆಚ್ಚಿನ ನೆಮ್ಮದಿ ಬರುವುದು.

ಮಿಥುನ: ಸಮಯವನ್ನು ಅರಿತು ಎಚ್ಚರಿಕೆಯಿಂದ ವರ್ತಿಸುವುದರಿಂದ ಯಶಸ್ಸು ಹಾಗೂ ಅಭಿವೃದ್ಧಿ. ಹಾಲು ಉತ್ಪಾದಕರಿಗೆ ಲಾಭ ಇರುವುದು. ಜ್ವರದಂತಹ ಅನಾರೋಗ್ಯ ಸಂಭವಿಸಬಹುದು. ವಿನಾಯಕನ ಸ್ತುತಿ ಮಾಡಿ.

ಕರ್ಕಾಟಕ: ಲೇವಾದೇವಿ ವ್ಯವಹಾರ ನಡೆಸುವವರು ವ್ಯವಹಾರದಲ್ಲಿ ಸ್ವಲ್ಪ ಪ್ರಮಾಣದ ನಷ್ಟ ಸಂಭವಿಸಿ ಹಿನ್ನಡೆ ಕಾಣುವಂತಾಗಲಿದೆ. ಕೆಲಸದಲ್ಲಿ ಅಧಿಕ ಒತ್ತಡ, ದೇಹಾಯಾಸ ತೋರಿಬಂದು ತಪ್ಪು ನಿರ್ಧಾರ ತೆಗೆದುಕೊಳ್ಳುವ ಸ್ಥಿತಿ.

ಸಿಂಹ: ಸಕಾಲಕ್ಕೆ ಸ್ನೇಹಿತರಿಂದ ಹಣದ ಸಹಾಯ ಸಿಗಲಿದೆ. ಹತ್ತು ಬಾರಿ ಯೋಚಿಸಿ ನಂತರದಲ್ಲಿ ದೂರ ದೃಷ್ಟಿ ಇಟ್ಟುಕೊಂಡು ಕಾರ್ಯ ಪ್ರವೃತ್ತರಾಗುವಿರಿ. ತಾಯಿಯ ಅಥವಾ ಹತ್ತಿರದ ಸಂಬಂಧಿಕರಲ್ಲೇ ವರ ನಿಶ್ಚಯವಾಗುವುದು.

ಕನ್ಯಾ: ಈ ದಿನ ನಿಮ್ಮ ಮುಖ್ಯ ಕೆಲಸಗಳತ್ತ ಮಾತ್ರ ಗಮನ ಹರಿಸಿ. ವೃತ್ತಿರಂಗದಲ್ಲಿ ನಿಮ್ಮ ತಿಳಿವಳಿಕೆಯಂತೆಯೇ ನಡೆಯಿರಿ. ಅನ್ಯರ ಮಾತಿಗೆ ಕಿವಿ ಒಡ್ಡಬೇಡಿ. ಸಿನಿಮಾ ನಟ ನಟಿಯರಿಗೆ ಹೆಚ್ಚಿನ ಅವಕಾಶಗಳು ದೊರೆಯಲಿವೆ.

ತುಲಾ: ಕಚೇರಿಯಲ್ಲಿ ಇದ್ದ ಭಿನ್ನಾಭಿಪ್ರಾಯಗಳು ಬಗೆಹರಿದು ನೆಮ್ಮದಿ. ಮನೆಯಲ್ಲಿ ಶುಭಕಾರ್ಯಗಳಿಗೆ ಪ್ರಯತ್ನಿಸುವಿರಿ. ಆಹಾರಪದ್ಧತಿಯನ್ನು ನಿಯಂತ್ರಿಸಿಕೊಂಡು ರಕ್ತದೊತ್ತಡ ಸಮತೋಲನಕ್ಕೆ ಬರುವಂತೆ ಮಾಡಿಕೊಳ್ಳಿ.

ವೃಶ್ಚಿಕ: ಆರೋಗ್ಯದಲ್ಲಿ ಉದಾಸೀನತೆ ತೋರುವುದು ಸರಿಯಲ್ಲ. ಪ್ರಭಾವಿ ವ್ಯಕ್ತಿಗಳ ಜೊತೆಯಲ್ಲಿನ ಓಡಾಟ ನಿಮಗೆ ಹೆಚ್ಚಿನ ಸ್ಥಾನಮಾನವನ್ನು ಜೊತೆಯಲ್ಲಿ ಆಯಾಸವನ್ನು ತಂದು ಕೊಡಲಿದೆ. ಷೇರು ಖರೀದಿಸುವಾಗ ಎಚ್ಚರವಹಿಸಿ.

ಧನು: ಕೃಷಿಕರಿಗೆ ಉತ್ತಮ ಫಸಲು ದೊರಕುವ ಲಕ್ಷಣಗಳಿಂದ ಮನಸ್ಸಿಗೆ ಹರ್ಷ. ಸಣ್ಣ ಕೈಗಾರಿಕೋದ್ಯಮಿಗಳಿಗೆ ಸರ್ಕಾರದಿಂದ ಸಹಾಯ ಹಸ್ತ ದೊರಕಲಿದೆ. ಹೊಸ ಕೆಲಸಕ್ಕೆ ಪ್ರಯತ್ನಿಸುವಿರಿ. ಯಂತ್ರೋಪಕರಣ ಮಾರಾಟದಿಂದ ಲಾಭ.

ಮಕರ: ಈ ದಿನ ಸಮಾಜದಲ್ಲಿ ಅದರಲ್ಲೂ ವಿಶೇಷವಾಗಿ ಹೆಂಡತಿಯ ಬಳಗದಲ್ಲಿ ಆದಷ್ಟು ಮೌನವಾಗಿರಲು ನಿಶ್ಚಯಿಸಿ. ವೈದ್ಯರ ಸಲಹೆಯಂತೆ ಧ್ಯಾನ ಮತ್ತು ಯೋಗ ಅಭ್ಯಾಸ ಮಾಡಿಕೊಳ್ಳಿ.

ಕುಂಭ: ಸ್ನೇಹಿತರೊಂದಿಗೆ ಪ್ರವಾಸ ಮಾಡಬೇಕೆನಿಸಿದ್ದರೂ ಮುಂದೂಡುವುದು ಉತ್ತಮ. ನವವಿವಾಹಿತರಿಗೆ ಸಂತಾನ ಭಾಗ್ಯ. ನಿಮ್ಮ ಜವಾಬ್ದಾರಿಯ ಕೆಲಸಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವಿರಿ.


ಮೀನ: ರಾಸಾಯನಿಕ ವಸ್ತುಗಳ ರಫ್ತು ವ್ಯಾಪಾರವನ್ನು ಮಾಡುವವರಿಗೆ ತಾಪತ್ರಯ. ನೋಂದಾಯಿತ ದಾಖಲೆಗಳಿಗೆ ಸಂಬಂಧಿಸಿದಂತೆ ಬಾಕಿ ಉಳಿಸಿಕೊಂಡಿರುವ ಕೆಲಸಗಳನ್ನು ಬೇಗ ಮುಗಿಸಿಕೊಳ್ಳುವುದು ಸೂಕ್ತ.

ಪದಬಂಧ 4956

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪ್ರಣಾಮ ಮಾಡಿದವನ ವಿಚಾರ ಮಾರ್ಗ (4)
2.ವೇಷ ಧರಿಸಿಕೊಂಡು ಒಳಸೇರುವಿಕೆ! (3)
4.ಹಾಡಿನ ಆರಂಭದ ಸಾಲು (3)
6.ಪ್ರಶ್ನೆಗೆ ಪೂರಕವಾಗಿ ಹೇಳಿದ ಮಾತು (3)
7.ಎಲ್ಲರೂ ಒಟ್ಟಾಗಿಯೇ ಹಾಡುವಿಕೆ (5)
10.ಬಣವೆ ಹಾಕುವಾಗ ಅನುಭವಿಸಿದ ತೊಂದರೆ (3)
11.ರಂಗನ್ನು ಹಚ್ಚಿಕೊಂಡು ಮಾಡಿದ ವರ್ಣನೆ (3)
13.ಪರವಾಗಿಯೇ ಪಡೆದುಕೊಂಡಿರುವ ವೇತನ (3)
14.ರತ್ನ ಖಚಿತ ವಸ್ತು (4)

ಮೇಲಿಂದ ಕೆಳಕ್ಕೆ
1.ತಾಪವಿದ್ದಾಗ ತೋರಿಸಿರುವ ಶೌರ್ಯ (3)
2.ಪ್ರಕರಣದಲ್ಲಿ ಕಾಣಿಸಿದ್ದು ಅತೀ ತೀಕ್ಷ್ಣವಾದುದು (3)
3.ಆಯುಧಗಳನ್ನಿಡುವ ಕೋಣೆ (4)
5.ಲಾಸಾಗಿದ್ದರೂ ತೋರಿಸುತ್ತಿರುವ ಬೆಡಗು! (3)
6.ದಾಹವಿದ್ದಾಗ ತೋರಿಸಿರುವ ದೃಷ್ಟಾಂತ (5)
8.ಈತ ಮುಸಲ್ಮಾನ ದೊರೆ (3)
9.ತಪ್ಪು ಕೆಲಸಕ್ಕಾಗಿ ವಿಷಾದಿಸುವಿಕೆ (4)
10.ಬರದೊಳಗೆ ಅನಾಗರೀಕ ಬಂದಿರುವನಲ್ಲಾ? (3)
12.ನೆಗೆದಾಡಿದಾಗ ತಲೆದೋರಿದ ಶೀತ! (3)



4955ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಾವಕಾಶ 3.ಆರಾಧಕ
5.ಕರಡು 6.ಕುಲಾವಿ
8.ಸ್ವಹಸ್ತಾಕ್ಷರ 11.ಪರಾತ
12.ಸುಕೃತ 14.ಯಥೋಚಿತ
15.ರುಗ್ಣಾಲಯ

ಮೇಲಿಂದ ಕೆಳಕ್ಕೆ:
1.ಸಾಮರಸ್ಯ 2.ಶಕ
3.ಆಡು 4.ಕಲಾವಿದ
6.ಕುಟೀರ 7.ಪ್ರಸ್ತಾಪ
8.ಸ್ವಗತ 9.ತಾಪತ್ರಯ
10.ಅಡಿಪಾಯ 12.ಸುತ
13.ತರು

ಸುಡೊಕು 5342

	6				8			5
				6		8	9	4
	8		5				6	
	9			7			5	
		5	9		3	4	7	
7				1				9
	7		8		1		4	
4		9				5		7
	3		4		7		1	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5341 ಸುಡೊಕು

5	2	6	9	4	1	8	3	7
4	7	8	3	2	6	5	9	1
3	9	1	5	7	8	6	2	4
9	5	4	7	1	2	3	6	8
1	6	7	8	9	3	4	5	2
2	8	3	6	5	4	1	7	9
7	3	9	4	8	5	2	1	6
8	1	5	2	6	9	7	4	3
6	4	2	1	3	7	9	8	5

ಷೇರುಪೇಟೆ ವಹಿವಾಟು 1,158

ಹಿಂದಿನ ಅಂತ್ಯ 54,088 | ಇಂದಿನ ಅಂತ್ಯ 52,930

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,167
ಇಂದಿನ ಅಂತ್ಯ	15,808
▼	359
ದಿನದ ಕನಿಷ್ಠ	16,041

ವಿನಿಮಯ ದರ

$ ಡಾಲರ್	76.50
£ ಪೌಂಡ್	94.34
€ ಯೂರೊ	80.80
¥ ಯೆನ್ (100ಕ್ಕೆ)	60.34



ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹405
12 ಮೊಟ್ಟೆಗೆ	₹56
ಮೈಸೂರು	
100 ಮೊಟ್ಟೆಗೆ	₹410



ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1605 (1605)
ಸೋಯಾ (ರಿಫೈನ್ಡ್)	₹1575 (1580)
ಸೂರ್ಯಕಾಂತಿ (ರಿಫೈನ್ಡ್)	₹1890 (1880)
ಪಾಮೋಲಿನ್	₹1565 (1573)



ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹201-448

ದ್ವಿತಳಿ (ಬಿ.ವಿ) ₹200-681



ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ ₹18000-25000

2ನೇ ದರ್ಜೆ ₹10000-15000



ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹168

ಆರ್‌ಎಸ್‌ಎಸ್-5 ₹162

ಗುಡ್ ಲಾಟ್ ₹158

ಐಎಎಸ್ ಅಧಿಕಾರಿ ಪೂಜಾ ಅಮಾನತು

ರಾಂಚಿ (ಪಿಟಿಐ): ಅಕ್ರಮವಾಗಿ ಹಣ ವರ್ಗಾವಣೆ ಮಾಡಿದ ಪ್ರಕರಣ ಸಂಬಂಧ ಬಂಧನಕ್ಕೆ ಒಳಗಾಗಿದ್ದ ಜಾರ್ಖಂಡ್‌ನ ಗಣಿ ಇಲಾಖೆ ಕಾರ್ಯದರ್ಶಿ ಪೂಜಾ ಸಿಂಘಾಲ್ ಅವರನ್ನು ಅಮಾನತುಗೊಳಿಸಲಾಗಿದೆ. ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ (ನರೇಗಾ) ಅನುದಾನ ದುರುಪಯೋಗ ಮತ್ತಿತರ ಆರೋಪಗಳ ಸಂಬಂಧ ಅವರನ್ನು ಬುಧವಾರ ಬಂಧಿಸಲಾಗಿತ್ತು.

ರೂಪಾಯಿ ಮೌಲ್ಯ @77.50

ಒಂದನೇ ಪುಟದಿಂದ

ಗುರುವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯವು 25 ಪೈಸೆಯಷ್ಟು ಕಡಿಮೆ ಆಗಿದೆ. ರೂಪಾಯಿ ಮೌಲ್ಯವು ಸೋಮವಾರದ ವಹಿವಾಟಿನಲ್ಲಿ 77.44ಕ್ಕೆ ತಲುಪಿತ್ತು. ಅದು ಆ ದಿನದವರೆಗಿನ ಕನಿಷ್ಠ ಮೌಲ್ಯವಾಗಿತ್ತು. ಈಗ ಆ ದಾಖಲೆ ಮೀರಿ ಕುಸಿತ ಕಂಡಿದೆ.

ಗುರುವಾರದ ವಹಿವಾಟಿನಲ್ಲಿ ವಿದೇಶಿ ಬಂಡವಾಳ ಹೂಡಿಕೆದಾರರು ಷೇರು ಮಾರುಕಟ್ಟೆಗಳಿಂದ ಒಟ್ಟು ₹ 5,255 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ. ರೂಪಾಯಿ ಮೌಲ್ಯ ಕುಸಿತ ತಡೆಯುವ ಉದ್ದೇಶದಿಂದ ಆರ್‌ಬಿಐ ಗುರುವಾರ 700 ಶತಕೋಟಿ ಡಾಲರ್‌ನಷ್ಟು (₹ 5,415 ಕೋಟಿ) ವಿದೇಶಿ ಕರೆನ್ಸಿ ಮಾರಾಟ ಮಾಡಿರುವ ಸಾಧ್ಯತೆ ಇದೆ'. ಮೌಲ್ಯ ಕುಸಿತ ತಡೆಯಲು ಡಾಲರ್ ಮಾರಾಟ ಮಾಡಿರುವ ವಿಚಾರ ವಾಗಿ ಆರ್‌ಬಿಐ ಕಡೆಯಿಂದ ಪ್ರತಿಕ್ರಿಯೆ ದೊರೆತಿಲ್ಲ. 'ರೂಪಾಯಿ ಮೌಲ್ಯದಲ್ಲಿನ ಅಸ್ಥಿರತೆಯನ್ನು ಕಡಿಮೆ ಮಾಡುವ ಇರಾದೆಯನ್ನು ಆರ್‌ಬಿಐ ಪ್ರದರ್ಶಿಸಿದೆ' ಎಂದು ವರ್ತಕರೊಬ್ಬರು ತಿಳಿಸಿದ್ದಾರೆ.

ವಿದೇಶಿ ಹೂಡಿಕೆ ಹಿಂತೆಗೆತಕ್ಕೆ ಇಲ್ಲ ತಡೆ ● ಷೇರುಪೇಟೆಯಲ್ಲಿ ನಿಲ್ಲದ ಕುಸಿತ

₹18.74 ಲಕ್ಷ ಕೋಟಿ ನಷ್ಟ



ನವದೆಹಲಿ/ಮುಂಬೈ (ಪಿಟಿಐ): ದೇಶದ ಷೇರು ಮಾರುಕಟ್ಟೆಗಳಲ್ಲಿ ಹೂಡಿಕೆ ಮಾಡಿದವರು ಐದು ದಿನಗಳ ವಹಿವಾಟಿನಲ್ಲಿ ₹ 18.74 ಲಕ್ಷ ಕೋಟಿ ಸಂಪತ್ತು ಕಳೆದುಕೊಂಡಿದ್ದಾರೆ. ದೇಶದ ಷೇರು ಮಾರುಕಟ್ಟೆಗಳಲ್ಲಿ ಸತತ ಐದು ದಿನಗಳಿಂದ ನಕಾರಾತ್ಮಕ ವಹಿವಾಟು ನಡೆದಿದೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಗುರುವಾರದ ವಹಿವಾಟಿನಲ್ಲಿ 1,158 ಅಂಶ ಇಳಿಕೆ ಕಂಡು, 52,930ಕ್ಕೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 359 ಅಂಶ ಕುಸಿದು, 15,808ಕ್ಕೆ ತಲುಪಿತು. ಐದು ದಿನಗಳಲ್ಲಿ ಸೆನ್ಸೆಕ್ಸ್ 2,771 ಅಂಶ ಇಳಿದಿದೆ.

'ಹಣದುಬ್ಬರವು ಷೇರುಪೇಟೆಗಳ ಪಾಲಿಗೆ ಕಳವಳಕಾರಿ ಸಂಗತಿಯಾಗಿ ಮುಂದುವರಿದಿದೆ. ಆರ್ಥಿಕ ಬೆಳವಣಿಗೆ ಅಂದಾಜು ತಗ್ಗಿರುವುದು, ರಷ್ಯಾ-ಉಕ್ರೇನ್ ಯುದ್ಧ ಮುಂದುವರಿದಿರುವುದು, ವಿದೇಶಿ ಹೂಡಿಕೆದಾರರು ಬಂಡವಾಳ ಹಿಂತೆಗೆತವನ್ನು ನಿಲ್ಲಿಸದಿರುವುದು ಮತ್ತು ಬಾಂಡ್ ಮೇಲಿನ ಗಳಿಕೆ ಹೆಚ್ಚಾಗುತ್ತಿರುವುದು ಹೂಡಿಕೆದಾರರ ವಿಶ್ವಾಸವನ್ನು ಕುಗ್ಗಿಸಿದೆ' ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ಸಣ್ಣ ಹೂಡಿಕೆಗಳ ಸಂಶೋಧನಾ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕ ಹೇಳಿದ್ದಾರೆ.

'ಅಮೆರಿಕದ ಹಣದುಬ್ಬರ ಪ್ರಮಾಣದ ಅಂಕಿ-ಅಂಶಗಳು, ಹಣದುಬ್ಬರದ ಒತ್ತಡವು ತಕ್ಷಣಕ್ಕೆ ಕಡಿಮೆ ಆಗುವುದಿಲ್ಲ ಎಂಬುದನ್ನು ಹೇಳುತ್ತಿವೆ. ಆದರೆ, ಅಲ್ಲಿ ಹಣದುಬ್ಬರ ಪ್ರಮಾಣವು ಗರಿಷ್ಠ ಮಟ್ಟವನ್ನು ತಲುಪಿ ಆಗಿದೆ ಎಂಬ ಅಂದಾಜು ಇದೆ. ಅದು ಮುಂದಿನ ದಿನಗಳಲ್ಲಿ ನಿಧಾನವಾಗಿ ಕಡಿಮೆ ಆಗಬಹುದು. ಹಣದುಬ್ಬರ ಮತ್ತು ಅಮೆರಿಕದ ಫೆಡರಲ್ ರಿಸರ್ವ್‌ನ ತೀರ್ಮಾನವನ್ನು ಪರಿಗಣನೆಗೆ ತೆಗೆದುಕೊಂಡು, ವಿದೇಶಿ ಸಾಂಸ್ಥಿಕ ಹೂಡಿಕೆದಾರರು, ಬಂಡವಾಳ ಹಿಂತೆಗೆತವನ್ನು ಕಡಿಮೆ ಮಾಡಿದ ನಂತರದಲ್ಲಿ ಷೇರು ಮಾರುಕಟ್ಟೆಗಳಲ್ಲಿ ಸ್ಥಿರತೆ ಕಾಣಿಸಬಹುದು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

'ಜಾಗತಿಕ ಮಾರುಕಟ್ಟೆಗಳಲ್ಲಿ ಆಗುತ್ತಿರುವಂತೆ ಭಾರತದ ಷೇರು ಮಾರುಕಟ್ಟೆಗಳಲ್ಲಿಯೂ ಒತ್ತಡ ಇರಲಿದೆ' ಎಂದು ಕೋಟಕ್ ಸೆಕ್ಯುರಿಟೀಸ್‌ನ ಸಹಜ್ ಅಗರ್ವಾಲ್ ಹೇಳಿದ್ದಾರೆ. ಸೆನ್ಸೆಕ್ಸ್‌ನ ಮೂವತ್ತು ಷೇರುಗಳ ಪೈಕಿ ವಿಪ್ರೊ ಹೊರತುಪಡಿಸಿ ಬೇರೆ ಎಲ್ಲ ಕಂಪನಿಗಳ ಷೇರುಗಳು ಗುರುವಾರ ಕುಸಿತ ಕಂಡಿವೆ.

ಟೋಕಿಯೊ, ಹಾಂಗ್‌ಕಾಂಗ್, ಸೋಲ್ ಮತ್ತು ಶಾಂಘೈ ಷೇರು ಮಾರುಕಟ್ಟೆಗಳು ಕೂಡ ಕುಸಿತ ಕಂಡಿವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ದರವು ಶೇ 2.02ರಷ್ಟು ಕಡಿಮೆ ಆಗಿದ್ದು, ಪ್ರತಿ ಬ್ಯಾರೆಲ್‌ಗೆ 105.7 ಡಾಲರ್‌ಗೆ ತಲುಪಿದೆ.

ಹಣದುಬ್ಬರ: ಪ್ರಮುಖ ವಸ್ತುಗಳ ಬೆಲೆ ಏರಿಕೆ ಪ್ರಮಾಣ(%)

ಧಾನ್ಯಗಳು ಮತ್ತು ಉತ್ಪನ್ನಗಳು	5.96
ಮಾಂಸ, ಮೀನು	6.97
ಎಣ್ಣೆ, ಕೊಬ್ಬು	17.28
ತರಕಾರಿಗಳು	15.41
ಮಸಾಲೆ ಪದಾರ್ಥ	10.56
ಆಹಾರ, ಪಾನೀಯ	8.10
ಬಟ್ಟೆ, ಪಾದರಕ್ಷೆ	9.85

(ಮಾಹಿತಿ: ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯ)

ಮುಂಬೈ ಧಾರಣೆ

ಶೇಂಗಾ 12-5-2022

ಜಾವಾ 70/80(ಹೊಸ)	10200-10250
ಜಾವಾ 80/90(ಹೊಸ)	9550-9600
ದಪ್ಪ ಮಧ್ಯಪ್ರದೇಶ(ಹೊಸ)	10900-11000
ದಪ್ಪ ಗುಜರಾತ್(ಹೊಸ)	10000-10050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1615 (1615)
ಒಂದು ವಾರದ ಡೆಲಿವರಿ	1610 (1610)
ಸೋಯಾ ಕಚ್ಚಾ	1555 (1560)
ಪಾಮ್ ವಾರದ ಡೆಲಿವರಿ	1563 (1571)
ಸೂರ್ಯಕಾಂತಿ ಎಣ್ಣೆ ಕಚ್ಚಾ	1830 (1820)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 50,900 (51,200)

ಬೆಳ್ಳಿ ಕೆ.ಜಿ 59,580 (61,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊಬ್ಬರಿ ಧಾರಣೆ



ಪುತ್ತೂರು	₹4000-10500
ತುಮಕೂರು	₹6100-7800

ಕೈಗಾರಿಕಾ ವಲಯ: ತಗ್ಗಿದ ಬೆಳವಣಿಗೆ ಪ್ರಮಾಣ



ನವದೆಹಲಿ (ಪಿಟಿಐ): ಕೈಗಾರಿಕಾ ವಲಯದ ಉತ್ಪಾದನೆಗಳ ಬೆಳವಣಿಗೆ ಪ್ರಮಾಣವು ಮಾರ್ಚ್ ತಿಂಗಳಲ್ಲಿ ಮಂದಗತಿಗೆ ತಿರುಗಿದೆ. ಈ ವಲಯದ ಉತ್ಪಾದನೆಯ ಬೆಳವಣಿಗೆ ಶೇ 1.9ರಷ್ಟು ಆಗಿದೆ. ಹಿಂದಿನ ವರ್ಷ ದ ಮಾರ್ಚ್ ತಿಂಗಳಲ್ಲಿ ಕೈಗಾರಿಕಾ ಉತ್ಪಾದನೆಯ ಬೆಳವಣಿಗೆ ಪ್ರಮಾಣವು ಶೇ 24.2ರಷ್ಟು ಇತ್ತು.

ತಯಾರಿಕಾ ವಲಯದ ಸಾಧನೆಯು ದೊಡ್ಡ ಮಟ್ಟದಲ್ಲಿ ಇಲ್ಲದಿದ್ದುದು ಈ ಮಂದಗತಿಗೆ ಕಾರಣ. ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ (ಐಐಪಿ) ಜನವರಿ ಮತ್ತ ಫೆಬ್ರುವರಿಯಲ್ಲಿ ಶೇ 1.5ರಷ್ಟು ಇತ್ತು. ಆ ಸಂದರ್ಭದಲ್ಲಿ ದೇಶದಲ್ಲಿ ಕೋವಿಡ್‌ನ ಮೂರನೆಯ ಅಲೆ ಇತ್ತು.

ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯ ನೀಡಿರುವ ಅಂಕಿ-ಅಂಶಗಳ ಪ್ರಕಾರ, ಮಾರ್ಚ್ ತಿಂಗಳಲ್ಲಿ ಗಣಿಗಾರಿಕೆ ವಲಯದಲ್ಲಿ ಆಗಿರುವ ಬೆಳವಣಿಗೆ ಪ್ರಮಾಣ ಶೇ 4ರಷ್ಟು. ಇದು ಹಿಂದಿನ ವರ್ಷದ ಮಾರ್ಚ್‌ನಲ್ಲಿ ಶೇ 6.1ರಷ್ಟು ಆಗಿತ್ತು. ತಯಾರಿಕಾ ವಲಯವು ಮಾರ್ಚ್ ತಿಂಗಳಲ್ಲಿ ಕೇವಲ ಶೇ 0.9ರಷ್ಟು ಬೆಳವಣಿಗೆ ಸಾಧಿಸಿದೆ. ಹಿಂದಿನ ವರ್ಷದಲ್ಲಿ ಈ ವಲಯವು ಶೇ 28.4ರಷ್ಟು ಬೆಳವಣಿಗೆ ಕಂಡಿತ್ತು.

2021-22ನೆಯ ಹಣಕಾಸು ವರ್ಷದಲ್ಲಿ ಕೈಗಾರಿಕಾ ವಲಯದ ಉತ್ಪಾದನೆಯು ಶೇ 11.3ರಷ್ಟು ಆಗಿದೆ. 2020-21ರಲ್ಲಿ ಕೈಗಾರಿಕಾ ವಲಯದ ಬೆಳವಣಿಗೆಯು ಶೇ 8.4ರಷ್ಟು ಇತ್ತು.

ಆ್ಯಪಲ್ ಹಿಂದಿಕ್ಕಿದ ಆರಾಮ್ಕೊ

ಸ್ಯಾನ್ ಫ್ರಾನ್ಸಿಸ್ಕೊ (ಎಎಫ್‌ಪಿ): ಸೌದಿ ಆರಾಮ್ಕೊ ಕಂಪನಿಯು ಜಗತ್ತಿನ ಅತ್ಯಂತ ಬೆಲೆಬಾಳುವ ಕಂಪನಿಯಾಗಿ ಗುರುವಾರ ಹೊರಹೊಮ್ಮಿದೆ. ಇದುವರೆಗೆ ಈ ಸ್ಥಾನದಲ್ಲಿ ಇದ್ದ ಅಮೆರಿಕದ ಆ್ಯಪಲ್ ಕಂಪನಿಯು ಎರಡನೆಯ ಸ್ಥಾನಕ್ಕೆ ಕುಸಿದಿದೆ.

ಕಚ್ಚಾ ತೈಲ ಬೆಲೆ ಹೆಚ್ಚಾಗುತ್ತಿರುವ ಕಾರಣದಿಂದಾಗಿ ಸೌದಿ ಆರಾಮ್ಕೊ ಕಂಪನಿಯ ಷೇರುಗಳ ಮೌಲ್ಯದಲ್ಲಿ ಹೆಚ್ಚಳವಾಗಿದ್ದು ಈ ಬದಲಾವಣೆಗೆ ಕಾರಣ. ತೈಲ ಉತ್ಪಾದನೆಯಲ್ಲಿ ಸೌದಿ ಆರಾಮ್ಕೊ ವಿಶ್ವದ ಅತಿದೊಡ್ಡ ಕಂಪನಿಯೂ ಹೌದು. ಈ ಕಂಪನಿಯ ಮೌಲ್ಯವು ಈಗ ₹ 187 ಲಕ್ಷ ಕೋಟಿ ಆಗಿದೆ.

ಎಲೆಕ್ಟ್ರಾನಿಕ್ ಉಪಕರಣ ಬೆಲೆ ಏರಿಕೆ ಸಂಭವ

ನವದೆಹಲಿ (ಪಿಟಿಐ): ಟಿ.ವಿ., ವಾಷಿಂಗ್ ಮೆಷಿನ್, ರೆಫ್ರಿಜರೇಟರ್ ಸೇರಿದಂತೆ ಗೃಹಬಳಕೆಯ ಎಲೆಕ್ಟ್ರಾನಿಕ್ ಉಪಕರಣಗಳ ಬೆಲೆಯು ಈ ತಿಂಗಳ ಅಂತ್ಯಕ್ಕೆ ಅಥವಾ ಜೂನ್ ಮೊದಲ ವಾರದಲ್ಲಿ ಶೇಕಡ 3ರಿಂದ ಶೇ 5ರಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಈ ಉತ್ಪನ್ನಗಳ ತಯಾರಕರು ಅಗತ್ಯ ವಸ್ತುಗಳ ಬೆಲೆ ಹೆಚ್ಚಳದ ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸಲು ಮುಂದಾಗಿದ್ದಾರೆ.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿದಿರುವ ಕಾರಣ, ಆಮದು ಮಾಡಿಕೊಳ್ಳುವ ವಸ್ತುಗಳ ಬೆಲೆ ದುಬಾರಿ ಆಗಿರುವುದು ದೊಡ್ಡ ತಲೆನೋವಾಗಿದೆ ಎಂದು ಗ್ರಾಹಕ ಎಲೆಕ್ಟ್ರಾನಿಕ್ಸ್ ಮತ್ತು ಉಪಕರಣಗಳ ತಯಾರಕರ ಸಂಘ (ಸಿಇಎಎಂಎ) ಹೇಳಿದೆ. ಚೀನಾದ ಶಾಂಘೈನಲ್ಲಿ ಕಠಿಣ ಲಾಕ್‌ಡೌನ್ ಜಾರಿಗೆ ತಂದಿದ್ದರಿಂದಾಗಿ, ಅಲ್ಲಿಂದ ಕೆಲವು ಬಿಡಿಭಾಗಗಳು ಸರಿಯಾಗಿ ಪೂರೈಕೆಯಾಗುತ್ತಿಲ್ಲ. ಹವಾ ನಿಯಂತ್ರಕಗಳ ಬೆಲೆ ಕೂಡ ಜಾಸ್ತಿ ಆಗುವ ಸಾಧ್ಯತೆ ಇದೆ. 'ಕಚ್ಚಾ ವಸ್ತುಗಳ ಬೆಲೆಯು ಈಗಾಗಲೇ ದುಬಾರಿ ಆಗುತ್ತಿದೆ. ಈಗ ರೂಪಾಯಿ ಮೌಲ್ಯವು ಕುಸಿಯುತ್ತಿದೆ. ಜೂನ್ ನಂತರ ಗ್ರಾಹಕರು ನೀಡಬೇಕಿರುವ ಬೆಲೆಯಲ್ಲಿ ಶೇ 3ರಿಂದ ಶೇ 5ರವರೆಗೆ ಏರಿಕೆ ಆಗಲಿದೆ' ಎಂದು ಸಿಇಎಎಂಎ ಅಧ್ಯಕ್ಷ ಎರ್ರಿಕ್ ಬ್ರಗ್ಯಾಂಜಾ ಹೇಳಿದ್ದಾರೆ. ಡಾಲರ್ ಎದುರು ರೂಪಾಯಿ ಮೌಲ್ಯವು 75ರ ಮಟ್ಟಕ್ಕೆ ಬಂದರೆ, ಬೆಲೆ ಏರಿಕೆಯ ಅಗತ್ಯ ಬರಲಿಕ್ಕಿಲ್ಲ ಎಂದು ಅಂದಾಜು ಮಾಡಿದ್ದಾರೆ.

ಏರ್ ಇಂಡಿಯಾ ಸಿಇಒ ಆಗಿ ವಿಲ್ಸನ್

ಮುಂಬೈ (ಪಿಟಿಐ): ಏರ್ ಇಂಡಿಯಾ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಆಗಿ ಕ್ಯಾಂಪ್‌ಬೆಲ್ ವಿಲ್ಸನ್ ಅವರನ್ನು ನೇಮಕ ಮಾಡುತ್ತಿರುವುದಾಗಿ ಟಾಟಾ ಸನ್ಸ್ ಹೇಳಿದೆ.

ವಿಲ್ಸನ್ ಅವರು ಈಗ ಸಿಂಗಪುರ ಏರ್‌ಲೈನ್ಸ್ ಕಂಪನಿಯ ಅಂಗಸಂಸ್ಥೆಯಾಗಿರುವ ಸ್ಕೂಟ್ ಏರ್‌ನ ಸಿಇಒ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430- 450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750 - 800
ಹೆರಕಿದ್ದು	1,100-1,150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1,200-1,250
ಕಾಳು ಮೆಣಸು -	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಚನ್ನಗಿರಿ	
ರಾಶಿ	45236-50999
ಚಿತ್ರದುರ್ಗ	
ಆಪಿ	49909-50319
ಬೆಟ್ಟೆ	39139-39589
ಕೆಂಪುಗೋಟು	32200-32600
ರಾಶಿ	49429-49869
ಕಾರ್ಕಳ	
ಹೊಸತು	40000-45000
ಹಳತು	46000-54500
ಕುಮಟಾ	
ಚಿಪ್ಪು	26509-32469
ಕೋಕ	17230-17230
ಹಳೆಚಾಲಿ	48949-49269
ಹೊಸಚಾಲಿ	36000-39169
ಕುಂದಾಪುರ	
ಹೊಸಚಾಲಿ	43500-44500
ಮಂಗಳೂರು	
ಕೋಕ	20000-25000
ಪುತ್ತೂರು	
ಕೋಕ	11000-26000
ಹೊಸತು	27500-45000
ಸಾಗರ	
ಬಿಳಿಗೋಟು	22119-31501
ಚಾಲಿ	35166-39009
ಕೋಕ	20009-36299
ಕೆಂಪುಗೋಟು	27929-40899
ರಾಶಿ	33786-50899
ಸಿಪ್ಪೆಗೋಟು	12199-22159
ಶಿವಮೊಗ್ಗ	
ಬೆಟ್ಟೆ	51029-53599
ಗೊರಬಲು	18009-37669
ರಾಶಿ	46010-50899
ಸರಕು	56359-80296
ಸಿದ್ದಾಪುರ	
ಬಿಳಿಗೋಟು	24911-31499
ಕೋಕ	22699-33000
ಹೊಸಚಾಲಿ	34899-40199
ಕೆಂಪುಗೋಟು	27089-30589
ರಾಶಿ	46689-50399
ತಟ್ಟಿಬೆಟ್ಟೆ	36469-42109
ಶಿರಸಿ	
ಬೆಟ್ಟೆ	21669-46659
ಬಿಳಿಗೋಟು	23899-32399
ಚಾಲಿ	34191-40499
ರಾಶಿ	42908-49699
ತುಮಕೂರು	
ರಾಶಿ	49100-50200

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16200	15850	16050	219.09 ಸೆಂಟ್ಸ್
ಎಸಿ	8960	8500	8800	
ಆರ್‌ಪಿ	9600	9800	9975	ಲಂಡನ್
ಆರ್‌ಸಿ	4600	4200	4450	2078 ಡಾಲರ್ಸ್

ದುರ್ಬಲವಾದ 'ಅಸನಿ': ಒಡಿಶಾ, ಬಂಗಾಳ ನಿಟ್ಟುಸಿರು

ಭುವನೇಶ್ವರ (ಪಿಟಿಐ): 'ಅಸನಿ' ಚಂಡಮಾರುತದ ವೇಗವು ತಗ್ಗಿದ್ದು, ಆಂಧ್ರಪ್ರದೇಶ ಕರಾವಳಿಯಲ್ಲಿ ಮತ್ತಷ್ಟು ದುರ್ಬಲಗೊಂಡಿದೆ. ಹೀಗಾಗಿ ಒಡಿಶಾ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳು ಅಪಾಯದಿಂದ ಪಾರಾಗಿವೆ.

'ಅಸನಿ' ಚಂಡಮಾರುತದ ಪರಿಣಾಮ ಮುಂದಿನ 24 ಗಂಟೆಗಳಲ್ಲಿ ಆಂಧ್ರಪ್ರದೇಶದ ಕರಾವಳಿಯ ಕೆಲವು ಸ್ಥಳಗಳಲ್ಲಿ ಭಾರಿ ಮಳೆಯಾಗಬಹುದು. ಆದರೆ, ಒಡಿಶಾ ಮತ್ತು ಪಶ್ಚಿಮ ಬಂಗಾಳದ ಕೆಲವು ಜಿಲ್ಲೆಗಳಲ್ಲಿ ಹಗುರದಿಂದ ಸಾಧಾರಣ ಮಳೆ ಬೀಳಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಗುರುವಾರ ತಿಳಿಸಿದೆ.

ಮುಂದಿನ 12 ಗಂಟೆಗಳಲ್ಲಿ ಪಶ್ಚಿಮಕೇಂದ್ರ ಮತ್ತು ಪಕ್ಕದ ವಾಯುವ್ಯ ಬಂಗಾಳ ಕೊಲ್ಲಿಯಲ್ಲಿ ಸಮುದ್ರದಲ್ಲಿ ಅಲೆಗಳ ಅಬ್ಬರ ಜೋರಾಗಿರಲಿದ್ದು, ಕ್ರಮೇಣ ಸಹಜ ಸ್ಥಿತಿಯತ್ತ ಮರಳುವ ನಿರೀಕ್ಷೆ ಇದೆ. ಮುಂದಿನ 12 ಗಂಟೆಗಳ ಕಾಲ ಪಶ್ಚಿಮ ಬಂಗಾಳ ಕೊಲ್ಲಿ ಮತ್ತು ವಾಯವ್ಯ ಬಂಗಾಳ ಕೊಲ್ಲಿಯಲ್ಲಿ ಮೀನುಗಾರಿಕೆಯನ್ನು ಸಂಪೂರ್ಣ ನಿಷೇಧಿಸಲಾಗಿದೆ.

ಒಡಿಶಾದ ಕೆಲವು ಪ್ರದೇಶಗಳಲ್ಲಿ ಶುಕ್ರವಾರ ಬೆಳಿಗ್ಗೆ 8.30ರವರೆಗೆ ಹಗುರದಿಂದ ಸಾಧಾರಣ ಮಳೆ ಅಥವಾ ಗುಡುಗು ಸಹಿತ ಮಳೆಯಾಗುವ ಮುನ್ಸೂಚನೆ ಇದೆ. ಕಳೆದ 24 ಗಂಟೆಗಳಲ್ಲಿ ಬರಿಪದದಲ್ಲಿ (ಮಯೂರ್‌ಭಂಜ್ ಜಿಲ್ಲೆ) 50 ಮಿ.ಮೀ ಅತಿ ಹೆಚ್ಚು ಮಳೆಯಾಗಿದೆ. ಕಿಯೋಂಜಾರ್‌ನ ಆನಂದಪುರದಲ್ಲಿ 44.2 ಮಿ.ಮೀ ಮತ್ತು ಗಂಜಾಮ್‌ನ ಸೊರಡಾದಲ್ಲಿ 37.2 ಮಿ.ಮೀ ಮಳೆ ಬಿದ್ದಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕಳೆದ ಆರು ಗಂಟೆಗಳಲ್ಲಿ ಹವಾಮಾನ ಪರಿಸ್ಥಿತಿಯು ಸ್ಥಿರವಾಗಿದ್ದು, ಚಂಡಮಾರುತದ ವೇಗ ದುರ್ಬಲಗೊಂಡಿದೆ. ಮುಂದಿನ 12 ಗಂಟೆಗಳಲ್ಲಿ ಕಡಿಮೆ ಒತ್ತಡದ ಪ್ರದೇಶವಾಗಿ ಮಾರ್ಪಡುವ ಸಾಧ್ಯತೆಯಿದೆ ಎಂದು ಅದು ತಿಳಿಸಿದೆ.

ಕಳೆದ ವಾರ ಉದ್ಭವಿಸಿದ 'ಅಸನಿ' ಚಂಡಮಾರುತದ ಪಥದ ಮೇಲೆ ಹವಾಮಾನ ತಜ್ಞರು ನಿಗಾ ಇರಿಸಿದ್ದು, ಸಂಭವನೀಯ ಹಾನಿ ತಡೆಗೆ ಮುನ್ನೆಚ್ಚರಿಕೆ ವಹಿಸಲು ರಾಜ್ಯ ಸರ್ಕಾರಗಳಿಗೆ ಎಚ್ಚರಿಕೆ ರವಾನಿಸಿದ್ದರು.

'ತಾಜ್‌ಮಹಲ್‌ನ ಜಾಗ ಜೈಪುರ ದೊರೆಗೆ ಸೇರಿದ್ದು'

ಜೈಪುರ: 'ತಾಜ್‌ಮಹಲ್ ಜಾಗವು ಮೂಲತಃ ಜೈಪುರದ ದೊರೆ ಜೈಸಿಂಗ್ ಅವರಿಗೆ ಸೇರಿದ್ದು, ಅದನ್ನು ಮೊಘಲ್ ಚಕ್ರವರ್ತಿ ಷಹಜಹಾನ್ ಸ್ವಾಧೀನಪಡಿಸಿಕೊಂಡರು. ಈ ಬಗ್ಗೆ ಜೈಪುರದ ರಾಜ ಕುಟುಂಬದಲ್ಲಿ ದಾಖಲೆಗಳು ಲಭ್ಯವಿವೆ' ಎಂದು ಬಿಜೆಪಿ ಸಂಸದೆ ಹಾಗೂ ರಾಜಮನೆತನದ ಸದಸ್ಯೆ ದಿಯಾ ಕುಮಾರಿ ಬುಧವಾರ ಪ್ರತಿಪಾದಿಸಿದ್ದಾರೆ.

ತಾಜ್‌ಮಹಲ್‌ನ ಇತಿಹಾಸದ ಬಗ್ಗೆ ಸತ್ಯಶೋಧನೆ ತನಿಖೆಗೆ ಕೋರಿ ಅಲಹಾಬಾದ್ ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ಬೆಂಬಲಿಸಿರುವ ದಿಯಾ, 'ಸತ್ಯ ಏನೇ ಇರಲಿ, ಅದನ್ನು ಅರಿಯುವ ಸಲುವಾಗಿ ಮಹಲಿನ 22 ಕೋಣೆಗಳ ಬಾಗಿಲುಗಳನ್ನು ತೆರೆಯಬೇಕು' ಎಂದೂ ಒತ್ತಾಯಿಸಿದ್ದಾರೆ. 'ಸ್ಮಾರಕ ನಿರ್ಮಾಣಕ್ಕೂ ಮುನ್ನ ಅಲ್ಲಿ ಏನಿತ್ತು ಎಂಬುದನ್ನು ತಿಳಿಯುವ ಹಕ್ಕು ಜನರಿಗೆ ಇದೆ. ಈ ಬಗ್ಗೆ ಜೈಪುರ ರಾಜಮನೆತನದ ಕುಟುಂಬದ ಬಳಿ ದಾಖಲೆಗಳಿವೆ. ಅಗತ್ಯವಿದ್ದಲ್ಲಿ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಒದಗಿಸುತ್ತೇನೆ' ಎಂದು ದಿಯಾ ಕುಮಾರಿ ತಿಳಿಸಿದ್ದಾರೆ.

ಭಾರತದಲ್ಲಿ ಇ.ವಿ. ತಯಾರಿಕೆ ಇಲ್ಲ: ಫೋರ್ಡ್



ರಾಯಿಟರ್ಸ್: ವಿದ್ಯುತ್ ಚಾಲಿತ ವಾಹನಗಳನ್ನು ಭಾರತದಲ್ಲಿ ತಯಾರಿಸಿ ರಫ್ತು ಮಾಡುವ ಆಲೋಚನೆಯನ್ನು ಕೈಬಿಟ್ಟಿರುವುದಾಗಿ ಫೋರ್ಡ್ ಮೋಟರ್ ಕಂಪನಿ ಗುರುವಾರ ತಿಳಿಸಿದೆ.

ಇ.ವಿ.ಗಳನ್ನು ಭಾರತದ ತನ್ನ ಘಟಕಗಳಲ್ಲಿ ತಯಾರಿಸಲಾಗುವುದು ಎಂದು ಕಂಪನಿಯು ಫೆಬ್ರುವರಿಯಲ್ಲಿ ಹೇಳಿತ್ತು. 'ಆದರೆ, ಭಾರತದ ಯಾವುದೇ ಘಟಕದಲ್ಲಿ ಇ.ವಿ. ತಯಾರಿಸಿ ರಫ್ತು ಮಾಡುವುದು ಬೇಡ ಎಂಬ ತೀರ್ಮಾನಕ್ಕೆ ಬಂದಿದ್ದೇವೆ' ಎಂದು ಕಂಪನಿಯ ವಕ್ತಾರರೊಬ್ಬರು ತಿಳಿಸಿದ್ದಾರೆ. ಈ ತೀರ್ಮಾನಕ್ಕೆ ಕಾರಣ ಏನು ಎಂಬುದನ್ನು ಕಂಪನಿಯು ತಿಳಿಸಿಲ್ಲ.

ರಾಜೀವ್ ಹಂತಕರಿಗೆ ಕ್ಷಮಾಪಣೆ ಅರ್ಜಿ: ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಪ್ರಶ್ನೆ

‘ರಾಜ್ಯಪಾಲರ ಕ್ಷಮಾಪಣೆ ಅಸಿಂಧುವೇ?’

ನವದೆಹಲಿ (ಪಿಟಿಐ): ‘ರಾಜೀವ್ ಗಾಂಧಿ ಹತ್ಯೆ ಪ್ರಕರಣದ ಅಪರಾಧಿ ಎ.ಜಿ.ಪೇರರಿವಾಳನ್ ಅವರನ್ನು ಅವಧಿ ಪೂರ್ವ ಬಿಡುಗಡೆ ಮಾಡಬಹುದು ಎಂದು ತಮಿಳುನಾಡು ರಾಜ್ಯ ಸರ್ಕಾರ ಮಾಡಿದ್ದ ಶಿಫಾರಸನ್ನು ರಾಜ್ಯಪಾಲರು, ರಾಷ್ಟ್ರಪತಿಯ ಪರಾಮರ್ಶೆಗೆ ಕಳುಹಿಸಿದ್ದಾರೆ. ರಾಜ್ಯಪಾಲರ ಈ ನಿರ್ಧಾರವನ್ನು ಸಮರ್ಥಿಸಿಕೊಳ್ಳಲು ಕೇಂದ್ರ ಸರ್ಕಾರಕ್ಕೆ ಯಾವ ಅಧಿಕಾರವಿದೆ’ ಎಂದು ಸುಪ್ರೀಂ ಕೋರ್ಟ್ ಪ್ರಶ್ನಿಸಿದೆ. ಈ ಬಗ್ಗೆ ಲಿಖಿತ ರೂಪದಲ್ಲಿ ವಿವರಣೆ ನೀಡಿ ಎಂದು ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ತಮಿಳುನಾಡು ಸರ್ಕಾರದ ಶಿಫಾರಸನ್ನು ರಾಷ್ಟ್ರಪತಿಯ ಪರಾಮರ್ಶೆಗೆ ಕಳುಹಿಸಿದ ರಾಜ್ಯಪಾಲರ ನಿರ್ಧಾರವನ್ನು ಪ್ರಶ್ನಿಸಿ, ಪೇರರಿವಾಳನ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ಪ್ರಶ್ನೆ ಕೇಳಿದೆ. ನ್ಯಾಯಮೂರ್ತಿಗಳಾದ ಎಲ್.ನಾಗೇಶ್ವರ ರಾವ್, ಬಿ.ಆರ್.

ಮುಖ್ಯಾಂಶಗಳು

- ಹಂತಕ ಪೇರರಿವಾಳನ್ ಕ್ಷಮಾಪಣೆ ಶಿಫಾರಸು ರಾಷ್ಟ್ರಪತಿಗೆ ವರ್ಗ
- ತಮಿಳುನಾಡು ರಾಜ್ಯಪಾಲರ ನಿರ್ಧಾರ ಸಮರ್ಥಿಸಿಕೊಂಡ ಕೇಂದ್ರ
- ಕೇಂದ್ರ ಸರ್ಕಾರದ ಅಧಿಕಾರ ಪ್ರಶ್ನಿಸಿದ ಸುಪ್ರೀಂ ಕೋರ್ಟ್

ಗವಾಯಿ ಮತ್ತು ಎ.ಎಸ್.ಬೋಪಣ್ಣ ಅವರಿದ್ದ ಪೀಠವು ಈ ಅರ್ಜಿಗೆ ಸಂಬಂಧಿಸಿದ ತೀರ್ಪನ್ನು ಕಾಯ್ದಿರಿಸಿದೆ.

‘ರಾಜ್ಯದ ಶಿಫಾರಸನ್ನು ರಾಷ್ಟ್ರಪತಿಯ ಪರಾಮರ್ಶೆಗೆ ಕಳುಹಿಸಲು ಸಂವಿಧಾನದ ಯಾವ ಅಂಶ ರಾಜ್ಯಪಾಲರಿಗೆ ಅಧಿಕಾರ ನೀಡಿದೆ? ರಾಜ್ಯಪಾಲರು ರಾಜ್ಯದ ಮುಖ್ಯಸ್ಥರು. ಹೀಗಿದ್ದ ಮೇಲೆ ಅವರನ್ನು ಸಮರ್ಥಿಸಿಕೊಳ್ಳಬೇಕಿದ್ದದ್ದು ರಾಜ್ಯವಲ್ಲವೇ? ಅವರ ಕ್ರಮವನ್ನು ಸಮರ್ಥಿಸಿಕೊಳ್ಳಲು ಕೇಂದ್ರ ಸರ್ಕಾರಕ್ಕೆ ಅಧಿಕಾರ ಎಲ್ಲಿದೆ ಎಂಬುದನ್ನು ವಿವರಿಸಿ’ ಎಂದು ಪೀಠವು ಪ್ರಶ್ನಿಸಿತು.

> **ರಾಜ್ಯ ಸಚಿವ ಸಂಪುಟದ ಶಿಫಾರಸು ಒಪ್ಪಿತವಲ್ಲದೇ ಇದ್ದರೆ, ವಾಪಸ್ ಕಳಿಸಬೇಕಿತ್ತು. ಹಾಗೇ ಮಾಡದೇ ಇದ್ದದ್ದು ಒಕ್ಕೂಟವ ವ್ಯವಸ್ಥೆಗೆ ವಿರುದ್ಧವಲ್ಲವೇ?**
> **ಸುಪ್ರೀಂ ಕೋರ್ಟ್**

‘ಇಂತಹ ಎಲ್ಲಾ ಪ್ರಕರಣಗಳಲ್ಲೂ ರಾಜ್ಯಪಾಲರು ರಾಜ್ಯ ಸರ್ಕಾರವನ್ನೇ ಪ್ರತಿನಿಧಿಸುತ್ತಾರೆ. ಆದರೆ ರಾಜ್ಯ ಸರ್ಕಾರವು ತೆಗೆದುಕೊಂಡ ನಿರ್ಧಾರವು ಸಂವಿಧಾನಕ್ಕೆ ವಿರುದ್ಧವಾಗಿದ್ದಾಗ, ಆ ಶಿಫಾರಸನ್ನು ರಾಷ್ಟ್ರಪತಿಯ ಪರಾಮರ್ಶೆಗೆ ವರ್ಗಾಯಿಸುವ ಅಧಿಕಾರ ರಾಜ್ಯಪಾಲರಿಗೆ ಇದೆ’ ಎಂದು ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜ್ ಪೀಠಕ್ಕೆ ವಿವರಿಸಿದರು.



ಇದಕ್ಕೆ ಪೀಠವು ಆಕ್ಷೇಪ ವ್ಯಕ್ತಪಡಿಸಿತು. ‘ನಿಮ್ಮ ವಾದವನ್ನು ಒಪ್ಪುವುದಾದರೆ, ಕೊಲೆ ಪ್ರಕರಣಗಳಲ್ಲಿ ರಾಜ್ಯಪಾಲರು ಈ ಹಿಂದೆ ನೀಡಿದ ಕ್ಷಮಾಪಣೆಗಳೆಲ್ಲವನ್ನೂ ರಾಷ್ಟ್ರಪತಿಗೆ ಕಳಿಸಬೇಕಾಗಿತ್ತಲ್ಲವೇ. ಸರ್ಕಾರದ ಶಿಫಾರಸು ರಾಜ್ಯಪಾಲರಿಗೆ ಒಪ್ಪಿಗೆಯಾಗದೇ ಇದ್ದರೆ, ಅದರ ಪರಿಷ್ಕರಣೆಗೆ ರಾಜ್ಯ ಸಂಪುಟಕ್ಕೇ ಅದನ್ನು ವಾಪಸ್ ಕಳಿಸಿಬೇಕಿತ್ತಲ್ಲವೇ’ ಎಂದು ಪೀಠವು ಆಕ್ಷೇಪ ವ್ಯಕ್ತಪಡಿಸಿತು.

‘ಭಾರತೀಯ ದಂಡ ಸಂಹಿತೆಯ ಅಡಿ ಬರುವ ಪ್ರಕರಣಗಳ ಕ್ಷಮಾಪಣೆ ಅರ್ಜಿಗಳು ಸಮವರ್ತಿ ಪಟ್ಟಿಯಲ್ಲಿ ಬರುತ್ತವೆ. ಹೀಗಾಗಿ ಇದನ್ನು ನಿರ್ಧರಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇದೆ’ ಎಂದು ನಟರಾಜ್ ಪ್ರತಿಪಾದಿಸಿದರು.

ಆಗ ಪೀಠವು, ‘ಹಾಗಿದ್ದರೆ, ಕೊಲೆಪ್ರಕರಣಗಳಲ್ಲಿ 161ನೇ ವಿಧಿಯ ಅಡಿ ರಾಜ್ಯಪಾಲರು ನೀಡಿದ ಎಲ್ಲಾ ಕ್ಷಮಾಪಣೆಗಳು ಅಸಿಂಧುವಾಗುತ್ತವೆಯಲ್ಲವೇ?’ ಎಂದು ಪ್ರಶ್ನಿಸಿತು. ಇದಕ್ಕೆ ಪ್ರತಿಕ್ರಿಯೆ ನೀಡಿದ ನಟರಾಜ್, ‘ಇಂತಹ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಅಧಿಕಾರವಿದ್ದರೂ, ಪ್ರಾಥಮಿಕ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇರುತ್ತದೆ ಎಂದು 246 ಮತ್ತು 254ನೇ ವಿಧಿಗಳು ಹೇಳುತ್ತವೆ’ ಎಂದು ಪ್ರತಿಪಾದಿಸಿದರು.

ಆಗ ಪೀಠವು, ‘ನಾವು ಈ ಅರ್ಜಿಯ ತೀರ್ಪನ್ನು ಕಾಯ್ದಿರಿಸಿದ್ದೇವೆ. ನೀವು ಏನೇ ಹೇಳುವುದಿದ್ದರೂ ಅದನ್ನು ಲಿಖಿತ ರೂಪದಲ್ಲಿ ನೀಡಿ’ ಎಂದು ಸೂಚಿಸಿತು.

ವಿರೋಧದ ನಡುವೆಯೂ ತೆರವು

ದೆಹಲಿ: ಬುಲ್ಡೋಜರ್ ಕಾರ್ಯಾಚರಣೆ, ಶಾಸಕ ಬಂಧನ

ನವದೆಹಲಿ (ಪಿಟಿಐ): ಅಕ್ರಮ ನಿರ್ಮಾಣ ಮತ್ತು ಒತ್ತುವರಿ ತೆರವು ಕಾರ್ಯಾಚರಣೆ ದೆಹಲಿಯಲ್ಲಿ ಭಾರಿ ವಿರೋಧದ ನಡುವೆಯೂ ಮುಂದುವರಿದಿದೆ. ಉತ್ತರ ದೆಹಲಿ ಮಹಾನಗರಪಾಲಿಕೆ ಮತ್ತು ದಕ್ಷಿಣ ದೆಹಲಿ ಮಹಾನಗರಪಾಲಿಕೆಗಳು ತಮ್ಮ ವ್ಯಾಪ್ತಿಯಲ್ಲಿನ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಗುರುವಾರ ನಡೆಸಿವೆ. ಈ ವೇಳೆ ಸ್ಥಳೀಯರು ಭಾರಿ ವಿರೋಧ ವ್ಯಕ್ತಪಡಿಸಿದ್ದಾರೆ. ಕಲ್ಲುತೂರಾಟ ಮತ್ತು ಲಾಠಿ ಪ್ರಹಾರ ನಡೆದಿದೆ.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಎಎಪಿ ಶಾಸಕ ಅಮಾನತ್‌ಉಲ್ಲಾ ಖಾನ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಮದನಪುರ ಖಾದರ್ ಮತ್ತು ಧಿರ್ಸೆನ್ ಪ್ರದೇಶದಲ್ಲಿ ತೆರವು ಕಾರ್ಯಾಚರಣೆಯನ್ನು ದಕ್ಷಿಣ ದೆಹಲಿ ಮಹಾನಗರ ಪಾಲಿಕೆ (ಎಸ್‌ಡಿಎಂಸಿ) ಕೈಗೊಂಡಿತ್ತು. ಉತ್ತರ ದೆಹಲಿ ಮಹಾನಗರ ಪಾಲಿಕೆಯು ರೋಹಿಣಿ ಮತ್ತು ಕರೋಲ್ ಭಾಗ್ ಪ್ರದೇಶಗಳಲ್ಲಿ ತೆರವು ಕಾರ್ಯ (ಎನ್‌ಡಿಎಂಸಿ) ಕೈಗೊಂಡಿತ್ತು.

ಮದನಪುರ ಖಾದರ್ ಪ್ರದೇಶದಲ್ಲಿ ಕಾರ್ಯಾಚರಣೆ ವಿರುದ್ಧ ಸ್ಥಳೀಯರು ಭಾರಿ ವಿರೋಧ ವ್ಯಕ್ತಪಡಿಸಿದರು. ಶಾಸಕ ಖಾನ್ ನೇತೃತ್ವದಲ್ಲಿ ಹಲವರು ಪ್ರತಿಭಟನೆ ನಡೆಸಿದರು. ‘ಸಕ್ರಮ ನಿರ್ಮಾಣಗಳನ್ನು ಬಿಜೆಪಿ ನೇತೃತ್ವದ ಪಾಲಿಕೆ ನೆಲಸಮ ಮಾಡುತ್ತಿದೆ’ ಎಂದು ಅವರು ಆರೋಪಿಸಿದರು. ಬಿಜೆಪಿ ವಿರುದ್ಧ ಪ್ರತಿಭಟನಕಾರರು ಘೋಷಣೆ ಕೂಗಿದರು.



ದೆಹಲಿಯ ಕರೋಲ್ ಬಾಗ್‌ನಲ್ಲಿ ದೆಹಲಿ ನಗರ ಪಾಲಿಕೆ ಗುರುವಾರ ಕೈಗೊಂಡಿದ್ದ ಅಕ್ರಮ ನಿರ್ಮಾಣ ತೆರವು ಕಾರ್ಯಾಚರಣೆಯನ್ನು ಕೈಬಿಡುವಂತೆ ಸ್ಥಳೀಯರು ಮನವಿ ಮಾಡಿದರು –ಪಿಟಿಐ ಚಿತ್ರ

> **ಬಡವರ ಸೂರುಗಳನ್ನು ನೆಲಸಮ ಮಾಡಲಾಗುತ್ತಿದೆ. ಆದರೆ, ದೆಹಲಿ ಶ್ರೀಮಂತರ ಅಕ್ರಮ ನಿರ್ಮಾಣಗಳ ವಿಚಾರಕ್ಕೆ ಬಿಜೆಪಿ ಹೋಗುತ್ತಿಲ್ಲ**
> **ಅಮಾನತ್‌ಉಲ್ಲಾ ಖಾನ್,** ಎಎಪಿ ಶಾಸಕ

> **ಕಾನೂನುಬಾಹಿರ ನಿರ್ಮಾಣಗಳನ್ನು ತೆರವು ಮಾಡುತ್ತಿದ್ದೇವೆ. ಕಾರ್ಯಾಚರಣೆಗೆ ಯಾರೇ ಅಡ್ಡಿಪಡಿಸಿದರೂ, ತಕ್ಕ ಕ್ರಮ ಎದುರಿಸಬೇಕಾಗುತ್ತದೆ**
> **ರಾಜ್‌ಪಾಲ್ ಸಿಂಗ್,** ಎಸ್‌ಡಿಎಂಸಿ ಕೇಂದ್ರ ವಲಯದ ಮುಖ್ಯಸ್ಥ

ತೆರವು ಕಾರ್ಯಾಚರಣೆಯನ್ನು ಬಡವರ ವಿರೋಧಿ ಎಂದು ಕರೆದಿರುವ ಅಮಾನತ್‌ಉಲ್ಲಾ ಖಾನ್, ಕಾರ್ಯಾಚರಣೆ ವಿರುದ್ಧ ಪ್ರತಿಭಟನೆ ನಡೆಸುವಂತೆ ಟ್ವಿಟರ್‌ನಲ್ಲಿ ಕರೆ ನೀಡಿದ್ದರು. ಆನಂತರ ಪ್ರತಿಭಟನೆ ತೀವ್ರತೆ ಪಡೆಯಿತು. ಪೊಲೀಸರು ಪ್ರತಿಭಟನಕಾರರ ಮೇಲೆ ಲಾಠಿ ಪ್ರಹಾರ ನಡೆಸಿ, 10 ಜನರನ್ನು ವಶಕ್ಕೆ ಪಡೆದರು.

‘ಪ್ರತಿಭಟನಕಾರರು ಕಲ್ಲುತೂರಾಟ ನಡೆಸಿದರು. ಅದನ್ನು ನಿಯಂತ್ರಿಸುವ ಸಲುವಾಗಿ ಲಾಠಿ ಪ್ರಹಾರ ನಡೆಸಿದ್ದೇವೆ. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಜನರನ್ನು ವಶಕ್ಕೆ ಪಡೆದಿದ್ದೇವೆ’ ಎಂದು ಪೊಲೀಸರು ಹೇಳಿದ್ದಾರೆ.

ರಷ್ಯಾ ಭದ್ರತಾ ಮಂಡಳಿ ಉಪಾಧ್ಯಕ್ಷ ಡಿಮಿಟ್ರಿ ಮೆಡ್ವೆಡೆವ್ ನ್ಯಾಟೊಗೆ ಬೆದರಿಕೆ

‘ಉಕ್ರೇನ್‌ಗೆ ನೆರವಾದರೆ ಅಣ್ವಸ್ತ್ರ ಯುದ್ಧ’

ಮಾಸ್ಕೊ/ಕೀವ್: ‘ನಮ್ಮ ವಿಶೇಷ ಸೇನಾ ಕಾರ್ಯಾಚರಣೆಗೆ ವಿರುದ್ಧವಾಗಿ ನ್ಯಾಟೊ, ಉಕ್ರೇನ್ ಬೆಂಬಲಕ್ಕೆ ನಿಂತರೆ ಅಣ್ವಸ್ತ್ರ ಯುದ್ಧ ಎದುರಾಗಲಿದೆ’ ಎಂದು ರಷ್ಯಾ ಭದ್ರತಾ ಮಂಡಳಿ ಉಪಾಧ್ಯಕ್ಷ ಡಿಮಿಟ್ರಿ ಮೆಡ್ವೆಡೆವ್ ಗುರುವಾರ ನೇರ ಎಚ್ಚರಿಕೆ ನೀಡಿದ್ದಾರೆ.

‘ನ್ಯಾಟೊ ಉಕ್ರೇನ್‌ಗೆ ಶಸ್ತ್ರಾಸ್ತ್ರಗಳನ್ನು ಪೂರೈಸುವುದು, ಉಕ್ರೇನಿಗರಿಗೆ ಯುದ್ಧಾಸ್ತ್ರಗಳ ತರಬೇತಿ ಕೊಡುವುದು ನ್ಯಾಟೊ ಮತ್ತು ರಷ್ಯಾ ನಡುವೆ ನೇರ ಸಂಘರ್ಷದ ಸಾಧ್ಯತೆಯನ್ನು ಹೆಚ್ಚಿಸಲಿದೆ. ಈ ಸಂಘರ್ಷವು ಅಣ್ವಸ್ತ್ರ ಯುದ್ಧವಾಗಿ ಬದಲಾಗಬಹುದು’ ಎಂದು ಮೆಡ್ವೆಡೆವ್ ಅವರು ಟೆಲಿಗ್ರಾಮ್‌ನಲ್ಲಿ ಎಚ್ಚರಿಕೆ ನೀಡಿರುವುದಾಗಿ ಉಕ್ರೇನಿನ ಸುದ್ದಿಸಂಸ್ಥೆ ‘ದಿ ಕೀವ್ ಇಂಡಿಪೆಂಡೆಂಟ್’ ವರದಿ ಮಾಡಿದೆ.

‘ಉಕ್ರೇನ್‌ಗೆ ಶಸ್ತ್ರಾಸ್ತ್ರಗಳನ್ನು ತಂದು ಸುರಿಯುತ್ತಿರುವುದು ರಷ್ಯಾದೊಂದಿಗೆ ನ್ಯಾಟೊದ ಸಂಘರ್ಷದ ಸಂಭಾವ್ಯತೆಯನ್ನು ಹೆಚ್ಚಿಸಿದೆ. ಇದು ಅಣ್ವಸ್ತ್ರ ಯುದ್ಧವಾಗಿ ಬೆಳೆಯಬಹುದು. ಹಾಗಾದರೆ ‘ಅದು ಎಲ್ಲರಿಗೂ ದುರಂತದ ಸನ್ನಿವೇಶ’ವಾಗಿರಲಿದೆ’ ಎಂದು ಮೆಡ್ವೆಡೆವ್ ಹೇಳಿದ್ದಾರೆ.

ವಿಟಾಲಿ ಆತಂಕ: ಉಕ್ರೇನ್ ರಾಜಧಾನಿ ಕೀವ್ ನಗರದ ಮೇಲೆ ರಷ್ಯಾ ಯುದ್ಧತಂತ್ರದ ಅಣ್ವಸ್ತ್ರ ದಾಳಿ ನಡೆಸುವ ಸಾಧ್ಯತೆ ಹೆಚ್ಚಿದೆ ಎಂದು ನಗರದ ಮೇಯರ್ ವಿಟಾಲಿ ಕ್ಲಿಟ್‌ಸ್ಕೊ ಗುರುವಾರ ಆತಂಕ ವ್ಯಕ್ತಪಡಿಸಿದ್ದಾರೆ.



ಉಕ್ರೇನ್ ಸಂಘರ್ಷ ಕುರಿತು ಜಿನೀವಾದಲ್ಲಿ ಗುರುವಾರ ನಡೆದ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯ ವಿಶೇಷ ಅಧಿವೇಶನದ ಸಂದರ್ಭ ಕಚೇರಿಯ ಮುಂದೆ ಉಕ್ರೇನ್ ಮಹಿಳೆಯೊಬ್ಬರು ತಮ್ಮ ಮಕ್ಕಳೊಂದಿಗೆ ಪ್ರತಿಭಟನೆಯಲ್ಲಿ ಕಾಣಿಸಿಕೊಂಡಿದ್ದು ಹೀಗೆ — ಎಎಫ್‌ಪಿ ಚಿತ್ರ

> **ಸದ್ಯದ ಪರಿಸ್ಥಿತಿಯನ್ನು ಗಮನಿಸಿದರೆ, ಉಕ್ರೇನ್‌ನಲ್ಲಿ ಶಾಂತಿ ಸ್ಥಾಪನೆ ಅಥವಾ ಕದನ ವಿರಾಮ ಘೋಷಣೆಯ ಯಾವುದೇ ಸಾಧ್ಯತೆಗಳು ಕಾಣಿಸುತ್ತಿಲ್ಲ**
> **ಆಂಟೋನಿಯೊ ಗುಟೆರೆಸ್,** ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ

‘ಮಧ್ಯಪ್ರವೇಶಿಸಿದರೆ ತಕ್ಕ ಉತ್ತರ’

‘ಸೇನಾ ಕಾರ್ಯಾಚರಣೆಯಲ್ಲಿ ಯಾವುದೇ ರಾಷ್ಟ್ರ ಮಧ್ಯಪ್ರವೇಶಿಸುವ ದುಸ್ಸಾಹಸ ಮಾಡಿದರೆ, ತಕ್ಕ ಪ್ರತ್ಯುತ್ತರ ನೀಡಲು ಮಾಸ್ಕೊ ಸಿದ್ಧವಾಗಿದೆ’ ಎಂದು ರಷ್ಯಾ ಅಧ್ಯಕ್ಷ ಪುಟಿನ್ ಅವರ ವಕ್ತಾರ ಡಿಮಿಟ್ರಿ ಪೆಸ್ಕೊವ್ ಕೂಡ ಗುರುವಾರ ಗಂಭೀರ ಎಚ್ಚರಿಕೆ ನೀಡಿದ್ದಾರೆ.

‘ರಷ್ಯಾದ ಸಶಸ್ತ್ರ ಪಡೆಗಳು ಫೆಬ್ರುವರಿ 24ರಿಂದ ಉಕ್ರೇನ್‌ನಲ್ಲಿ ನಡೆಸುತ್ತಿರುವ ಸೇನಾ ಕಾರ್ಯಾಚರಣೆಗೆ ಯಾರೇ ಅಡ್ಡಿಪಡಿಸಿದರೂ ಅಥವಾ ಮಧ್ಯಪ್ರವೇಶಿಸಿದರೂ ಇತಿಹಾಸದಲ್ಲಿ ಕಂಡರಿಯದ ಪರಿಣಾಮ ಎದುರಿಸಬೇಕಾದೀತು ಎಂದು ಪುಟಿನ್ ಎಚ್ಚರಿಕೆ ನೀಡಿದ್ದರು. ಅಧ್ಯಕ್ಷರ ಈ ಹೇಳಿಕೆ ಎಲ್ಲರಿಗೂ ನೆನಪಿರಬಹುದು. ಅಧ್ಯಕ್ಷರ ಹೇಳಿಕೆಯಂತೆ ತಕ್ಕ ಪ್ರತ್ಯುತ್ತರ ಕೊಡಲು ನಾವು ಸಿದ್ಧರಾಗಿದ್ದೇವೆ’ ಎಂದು ಅವರು ಹೇಳಿದ್ದಾರೆ.

ಕ್ಷಿಪಣಿ ದಾಳಿ: ಮೂವರ ಸಾವು

ಚೆರ್ನಿವ್‌ನ ನೊವ್ಗೊರೊಡ್ ಸಿವರ್‌ಸ್ಕಿಯ ಮೇಲೆ ರಷ್ಯಾ ನಡೆಸಿರುವ ಕ್ಷಿಪಣಿ ದಾಳಿಯಲ್ಲಿ ಮೂವರು ನಾಗರಿಕರು ಮೃತಪಟ್ಟಿದ್ದು, 12 ಮಂದಿ ಗಾಯಗೊಂಡಿದ್ದಾರೆ.

ಪಟ್ಟಣದ ಶೈಕ್ಷಣಿಕ ಸೌಲಭ್ಯಗಳನ್ನು ಗುರಿಯಾಗಿಸಿ ಗುರುವಾರ ರಾತ್ರಿಯಿಡೀ ಹಲವು ಕ್ಷಿಪಣಿಗಳನ್ನು ರಷ್ಯಾ ಸೇನೆ ಉಡಾಯಿಸಿದೆ ಎಂದು ಉತ್ತರದ ಕಾರ್ಯಾಚರಣೆಯ ಕಮಾಂಡ್ ಹೇಳಿದೆ.

ಸುಮಿ ಪ್ರಾಂತ್ಯದ ಮೇಲೆ 20 ಬಾರಿ ಶೆಲ್ ದಾಳಿ ನಡೆಸಿದ್ದು, ನೊವಿ ವಿರ್ಕಿ ಗ್ರಾಮದಲ್ಲಿ ಒಬ್ಬ ನಾಗರಿಕ ಮೃತಪಟ್ಟಿದ್ದಾರೆ ಎಂದು ಗವರ್ನರ್ ಡಿಮಿಟ್ರೊ ಝ್ಯುವಿಟ್‌ಸ್ಕಿ ತಿಳಿಸಿದ್ದಾರೆ.

15 ವರ್ಷದ ಉಳಿತಾಯ: ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಿದ ದಲಿತ ಮಹಿಳೆ

ಅಹಮದಾಬಾದ್: ನಗರ ಕೇಂದ್ರದಲ್ಲಿರುವ ಕೊಬ್ರಾಬ್ ಗ್ರಾಮದಲ್ಲಿ ತಲೆ ಎತ್ತಿರುವ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಹೊಸ ಆಕರ್ಷಣೆಯಾಗಿ ಕಂಗೊಳಿಸುತ್ತಿದೆ. ಜತೆಗೆ ಕುತೂಹಲಕ್ಕೂ ಕಾರಣವಾಗಿದೆ.

ಈ ಪ್ರತಿಮೆ ಸ್ಥಾಪಿಸಿರುವುದು ರಾಜಕೀಯ ನಾಯಕರು ಅಥವಾ ಪುರಸಭೆ ಆಡಳಿತವಲ್ಲ. ದಲಿತ ಮಹಿಳೆಯೊಬ್ಬರು ತಾನು 15 ವರ್ಷಗಳಿಂದ ಕೂಡಿಟ್ಟ ಉಳಿತಾಯದ ಹಣದಲ್ಲಿ ತಮ್ಮ ಮನೆ ಬಳಿಯೇ, ಹನುಮಾನ್ ದೇವಸ್ಥಾನದ ಪಕ್ಕದಲ್ಲಿ ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಿ, ಎಲ್ಲರ ಗಮನ ಸೆಳೆದಿದ್ದಾರೆ.

68 ವರ್ಷದ ನಂದಾಬೆನ್ ಚೌಹಾಣ್ ಅವರು ಪುರಸಭೆಯಿಂದ ಖರೀದಿಸುವ ಮರಗಳನ್ನು ಮಾರಾಟ ಮಾಡುವ ಮೂಲಕ ಜೀವನೋಪಾಯ ನಡೆಸುತ್ತಿದ್ದಾರೆ. ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಿದ ಉದ್ದೇಶದ ಬಗ್ಗೆ ಪ್ರತಿಕ್ರಿಯಿಸಿರುವ ನಂದಾಬೆನ್ ‘ಹನುಮಾನ್ ದೇವರಂತೆ ಬಾಬಾ ಸಾಹೇಬ್ ಅಂಬೇಡ್ಕರ್ ಕೂಡ ನಮ್ಮ ಪಾಲಿಗೆ ದೇವರು’ ಎಂದಿದ್ದಾರೆ.

‘ಈ ಪ್ರತಿಮೆ ನಿರ್ಮಿಸಲು ನಾನು ವಿನಿಯೋಗಿಸಿರುವ ಮೊತ್ತದ ಬಗ್ಗೆ ಹೇಳಲಾರೆ. ಆದರೆ, ಕಳೆದ 14-15 ವರ್ಷಗಳಿಂದ ಬಾಬಾ ಸಾಹೇಬರಿಗೆ ಗೌರವ ಸಲ್ಲಿಸಲು ಹಣ ಉಳಿತಾಯ ಮಾಡುತ್ತಿದ್ದೆ. ಬಾಬಾ ಸಾಹೇಬ್ ಜೀ ಅವರು ನನ್ನ ಸಮುದಾಯ ಸೇರಿದಂತೆ ಎಲ್ಲ ಜನರ ಏಳಿಗೆಗೆ ಶ್ರಮಿಸಿದ್ದಾರೆ. ಅವರ ನೆನಪಿನಾರ್ಥ ಏನನ್ನಾದರೂ ಮಾಡಬೇಕೆಂಬುದು ನನ್ನ ಬಾಲ್ಯದ ಆಸೆಯಾಗಿತ್ತು’ ಎಂದು ತಿಳಿಸಿದರು.

ಚುನಾವಣಾ ಸಿದ್ಧತೆ, ಪಕ್ಷದ ಮರು ಸಂಘಟನೆ ಚರ್ಚೆ

ಕಾಂಗ್ರೆಸ್ ಚಿಂತನ ಶಿಬಿರ ಇಂದಿನಿಂದ

ಪ್ರಜಾವಾಣಿ ವಾರ್ತೆ

ಉದಯಪುರ: ಶುಕ್ರವಾರದಿಂದ ಆರಂಭವಾಗಲಿರುವ ಮೂರು ದಿನಗಳ ಚಿಂತನ ಶಿಬಿರದಲ್ಲಿ ಪಾಲ್ಗೊಳ್ಳಲು ಕಾಂಗ್ರೆಸ್ ಮುಖಂಡರು ಉದಯಪುರದತ್ತ ಹೆಜ್ಜೆ ಹಾಕುತ್ತಿದ್ದಾರೆ. ಲೋಕಸಭೆ, ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣಾ ಸೋಲುಗಳಿಂದ ಕಂಗೆಟ್ಟಿರುವ ಕಾಂಗ್ರೆಸ್, 2024ರ ಲೋಕಸಭಾ ಚುನಾವಣೆ ಸಜ್ಜಾಗುವ ಹಾಗೂ ಪಕ್ಷವನ್ನು ಮರುಸಂಘಟಿಸುವ ಕುರಿತು ಸಭೆಯಲ್ಲಿ ಚಿಂತನ ಮಂಥನ ನಡೆಯಲಿದೆ.

ಕಾಲಮಿತಿಯೊಳಗೆ ಪಕ್ಷದ ಮರು ಸಂಘಟನೆಗೆ ಇರುವ ಮಾರ್ಗಗಳು, ಬಿಜೆಪಿಯ ರಾಜಕೀಯ ಧ್ರುವೀಕರಣ ಹಾಗೂ ಬುಲ್ಡೋಜರ್ ಸಂಸ್ಕೃತಿಯನ್ನು ಎದುರಿಸುವ ಬಗ್ಗೆ ಚರ್ಚೆಗಳು ನಡೆಯಲಿವೆ. ‘ಚಿಂತನ ಶಿಬಿರವು ಕೇವಲ ಆಚರಣೆಗೆ ಸೀಮಿತವಾಗಬಾರದು. ಪಕ್ಷದ ಪುನರ್ ಸಂಘಟನೆಗೆ ವೇಗ ನೀಡಲು ಎಲ್ಲರ ಒಗ್ಗಟ್ಟು ಹಾಗೂ ಬದ್ಧತೆ ಅಗತ್ಯವಿದೆ’ ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಇತ್ತೀಚೆಗೆ ನಡೆದ ಸಿಡಬ್ಲ್ಯುಸಿ ಸಭೆಯಲ್ಲಿ ಹೇಳಿದ್ದರು.

> **2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ–ಎನ್‌ಡಿಎಯೇತರ ಒಕ್ಕೂಟ ರಚನೆಯಲ್ಲಿ ಕಾಂಗ್ರೆಸ್ ಆಧಾರ ಸ್ಥಂಭವಾಗಿರಲಿದೆ**
> **ಸಚಿನ್ ಪೈಲಟ್,** ಕಾಂಗ್ರೆಸ್ ನಾಯಕ

ರಾಜಕೀಯ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ, ಕಾಂಗ್ರೆಸ್ ಸಂಘಟನೆ, ರೈತರು ಮತ್ತು ಕೃಷಿ ಕಾರ್ಮಿಕರು, ಯುವಜನತೆ – ವಿಚಾರಗಳ ಬಗ್ಗೆ ವಿಷಯ ಮಂಡನೆಯಾಗಲಿದೆ. ವಿವಿಧ ವಿಚಾರಗಳ ಬಗ್ಗೆ ಪ್ರತ್ಯೇಕ ಗುಂಪುಗಳಲ್ಲಿ ಚರ್ಚೆ ನಡೆಯಲಿದ್ದು, ಈ ವಲಯಗಳಲ್ಲಿ ಪಕ್ಷ ಅಳವಡಿಸಿಕೊಳ್ಳಬೇಕಿರುವ ಹಾದಿಯನ್ನು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ವಿವರಿಸಲಾಗುತ್ತದೆ. ಈ ವಿಚಾರಗಳನ್ನು ಕ್ರೋಢೀಕರಿಸಿ, ಸಿಡಬ್ಲ್ಯುಸಿ ಅಂತಿಮ ನಿರ್ಣಯವನ್ನು ಸಿದ್ಧಪಡಿಸಲಿದೆ.

ಆರ್ಥಿಕ ಕುಸಿತ, ಸಂಪತ್ತಿನ ಅಸಮಾನತೆ ಹೆಚ್ಚಳ, ಅಗತ್ಯ ವಸ್ತುಗಳ ಬೆಲೆ ಏರಿಕೆ ವಿಚಾರಗಳ ಬಗ್ಗೆಯೂ ಚರ್ಚೆ ನಡೆಯಲಿದೆ ಎಂದು ಪಕ್ಷದ ವಕ್ತಾರ ರಣದೀಪ್ ಸುರ್ಜೇವಾಲಾ ಹೇಳಿದ್ದಾರೆ.

ಒತ್ತಡ ಆರೋಪ: ಉದಯಪುರದಿಂದ ಹೊರ ನಡೆಯುವಂತೆ ಪೊಲೀಸರು ತಮ್ಮ ಮೇಲೆ ಒತ್ತಡ ಹಾಕುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಸಭಾ ಸದಸ್ಯ ಕಿರೋಡಿ ಲಾಲ್ ಮೀನಾ ಗುರುವಾರ ಆರೋಪಿಸಿದ್ದಾರೆ. ಬುಡಕಟ್ಟು ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಲು ಬುಧವಾರ ರಾತ್ರಿ ಉದಯಪುರಕ್ಕೆ ಬಂದು ಹೋಟೆಲ್‌ನಲ್ಲಿ ತಂಗಿದ್ದೇನೆ ಎಂದು ಅವರು ಹೇಳಿದ್ದಾರೆ. ಆದರೆ ಪೊಲೀಸರು ಹೋಟೆಲ್ ಬಿಟ್ಟು ಹೊರಹೋಗಲು ಅವಕಾಶ ನೀಡುತ್ತಿಲ್ಲ ಎಂದು ಆರೋಪಿಸಿರುವ ಅವರು, ರಾಜಸ್ಥಾನ ವಿಧಾನಸಭೆಯ ಪ್ರತಿಪಕ್ಷ ನಾಯಕರಿಗೆ ದೂರು ನೀಡಿದ್ದೇನೆ ಎಂದಿದ್ದಾರೆ.

ಕ್ಯಾಮರೂನ್: ವಿಮಾನ ಪತನ 11 ಮಂದಿ ಸಾವು

ಯಾವುಂದೆ, ಕ್ಯಾಮರೂನ್ (ಎಎಫ್‌ಪಿ): ಹನ್ನೊಂದು ಜನರಿದ್ದ ಖಾಸಗಿ ವಿಮಾನವೊಂದು ಕ್ಯಾಮರೂನ್‌ನ ಅರಣ್ಯದಲ್ಲಿ ಪತನಗೊಂಡಿದ್ದು, ಅದರಲ್ಲಿದ್ದ ಎಲ್ಲರೂ ಮೃತಪಟ್ಟಿದ್ದಾರೆ ಎಂದು ಮಾಧ್ಯಮಗಳು ಗುರುವಾರ ವರದಿ ಮಾಡಿವೆ.

ನೆರೆಯ ಚಾಡ್‌ನಲ್ಲಿ ಹೈಡ್ರೊ ಕಾರ್ಬನ್ ಪೈಪ್‌ಲೈನ್‌ನ ನಿರ್ವಹಣೆ ಮಾಡುತ್ತಿರುವ ಕ್ಯಾಮರೂನ್ ಆಯಿಲ್ ಟ್ರಾನ್ಸ್‌ಪೋರ್ಟೇಷನ್ ಕಂಪನಿಯು ಈ ವಿಮಾನವನ್ನು ಬಾಡಿಗೆಗೆ ಪಡೆದಿತ್ತು. ವಿಮಾನವು ಯಾವುಂದೆಯ ಎನ್‌ಸಿಮಾಲೆನ್ ವಿಮಾನ ನಿಲ್ದಾಣದಿಂದ ದೇಶದ ಪೂರ್ವದಲ್ಲಿರುವ ಬೆಲಾಬೊಗೆ ತೆರಳುತ್ತಿದ್ದಾಗ ಪತನಗೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೃದಯಾಘಾತ: ದುಬೈನಲ್ಲಿ ಶಿವಸೇನಾ ಶಾಸಕ ನಿಧನ

ಮುಂಬೈ(ಪಿಟಿಐ): ಶಿವಸೇನಾ ಶಾಸಕ ರಮೇಶ್ ಲಟ್ಕೆ (52) ಅವರು ದುಬೈನಲ್ಲಿ ಹೃದಯಾಘಾತದಿಂದ ಮೃತಪಟ್ಟಿದ್ದಾರೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ಲಟ್ಕೆ ಕುಟುಂಬಸ್ಥರೊಂದಿಗೆ ದುಬೈಗೆ ಪ್ರವಾಸ ಹೋಗಿದ್ದರು. ಬುಧವಾರ ತಡ ರಾತ್ರಿ ಹೃದಯಾಘಾತದಿಂದ ಸಾವನ್ನಪ್ಪಿದ್ದು ಅವರ ಪಾರ್ಥಿವ ಶರೀರವನ್ನು ಗುರುವಾರ ಭಾರತಕ್ಕೆ ತರುವ ನಿರೀಕ್ಷೆ ಇದೆ.

ಮಾಹಿತಿ ಸೋರಿಕೆ: ಸಾರ್ಜೆಂಟ್ ಬಂಧನ

ನವದೆಹಲಿ (ಪಿಟಿಐ): ಪಾಕ್ ಮೂಲದ ಮಹಿಳೆಯ ‘ಹನಿಟ್ರ್ಯಾಪ್’ ಜಾಲಕ್ಕೆ ಬಿದ್ದು ಸೇನೆಗೆ ಸಂಬಂಧಿಸಿದ ಸೂಕ್ಷ್ಮ ಮಾಹಿತಿ ಸೋರಿಕೆ ಮಾಡಿದ ಆರೋಪದ ಮೇಲೆ ಭಾರತೀಯ ವಾಯುಪಡೆಯ (ಐಎಎಫ್) ಅಧಿಕಾರಿಯೊಬ್ಬರನ್ನು ಬಂಧಿಸಿರುವುದಾಗಿ ಎಂದು ದೆಹಲಿ ಅಪರಾಧ ವಿಭಾಗದ ಪೊಲೀಸರು ಗುರುವಾರ ತಿಳಿಸಿದ್ದಾರೆ.

ವಾಯುಪಡೆಯ ಸಾರ್ಜೆಂಟ್ ದೇವೇಂದರ್ ನಾರಾಯಣ್ ಶರ್ಮಾ (32) ಬಂಧಿತ ಅಧಿಕಾರಿ. ನವದೆಹಲಿಯ ಸುಬ್ರೊತೊ ಪಾರ್ಕ್‌ನಲ್ಲಿ ಐಎಎಫ್‌ನ ದಾಖಲೆಗಳ ಕಚೇರಿಯಲ್ಲಿ ಆಡಳಿತ ಸಹಾಯಕರಾಗಿ (ಜಿಡಿ) ಕಾರ್ಯನಿರ್ವಹಿಸುತ್ತಿದ್ದರು. ವಿಚಾರಣೆ ವೇಳೆ ಶರ್ಮಾ, ಪಾಕ್ ಮೂಲದ ಮಹಿಳೆಯ ಹನಿಟ್ರ್ಯಾಪ್ ಜಾಲಕ್ಕೆ ಬಿದ್ದಿರುವುದು, ರಾಷ್ಟ್ರೀಯ ಭದ್ರತೆ, ಸೇನೆ ಮತ್ತು ಸೇನಾ ಸಿಬ್ಬಂದಿಯ ಬಗ್ಗೆ ಸೂಕ್ಷ್ಮ ಮಾಹಿತಿಯನ್ನು ವಾಟ್ಸ್‌ಆ್ಯಪ್ ಮೂಲಕ ಹಂಚಿಕೊಂಡಿರುವುದು, ಇದಕ್ಕಾಗಿ ಆ ಮಹಿಳೆಯಿಂದ ಹಣ ಪಡೆದಿರುವುದು ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಂಪ್ಯೂಟರ್ ಮತ್ತು ಇನ್ನಿತರ ಕಡತಗಳಿಂದ ಸೂಕ್ಷ್ಮ ಮಾಹಿತಿ ಸೋರಿಕೆಯಾಗಿರುವ ಸಂಬಂಧ ಐಎಎಫ್ ನೀಡಿದ ದೂರು ಆಧರಿಸಿ, ಅಧಿಕೃತ ರಹಸ್ಯ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಇದೇ ವರ್ಷದ ಮೇ 6ರಂದು ಶರ್ಮಾ ಅವರನ್ನು ದೆಹಲಿ ಅಪರಾಧ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

ಬಂಧಿತ ವ್ಯಕ್ತಿಯಿಂದ ಎಲೆಕ್ಟ್ರಾನಿಕ್ ಸಾಧನಗಳು, ದಾಖಲಾತಿಗಳನ್ನು ವಶಕ್ಕೆ ಪಡೆಯಲಾಗಿದೆ. ಆರೋಪಿಯನ್ನು ಸೇವೆಯಿಂದ ಅಮಾನತು ಮಾಡಲಾಗಿದೆ. ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಳೆದ ವರ್ಷ ಜುಲೈನಲ್ಲಿ ಪಾಕಿಸ್ತಾನದ ಬೇಹುಗಾರಿಕೆ ಸಂಸ್ಥೆಗೆ (ಐಎಸ್‌ಐ) ರಹಸ್ಯ ದಾಖಲೆಗಳನ್ನು ಒದಗಿಸಿದ ಆರೋಪದ ಮೇಲೆ ಅಧಿಕೃತ ರಹಸ್ಯ ಕಾಯ್ದೆಯಡಿ ಸೇನಾಧಿಕಾರಿ ಸೇರಿ ಇಬ್ಬರನ್ನು ಬಂಧಿಸಲಾಗಿತ್ತು.

ಅಸ್ಸಾಂನಲ್ಲಿ ಕರ್ನಾಟಕ ಮಾದರಿ ಕೌಶಲ ಅಭಿವೃದ್ಧಿ ಯೋಜನೆ ಜಾರಿ

ಗುವಾಹಟಿ: ಕರ್ನಾಟಕದಲ್ಲಿ ಜಾರಿಯಲ್ಲಿರುವ ಕೌಶಲ ಅಭಿವೃದ್ಧಿ ಯೋಜನೆ ಮಾದರಿಯಲ್ಲೇ ಯುವಜನರಿಗೆ ಕೌಶಲ ಅಭಿವೃದ್ಧಿ ತರಬೇತಿ ನೀಡುವ ಯೋಜನೆಯನ್ನು ಅಸ್ಸಾಂನ ಬಿಜೆಪಿ ನೇತೃತ್ವದ ಸರ್ಕಾರ ಜಾರಿಗೊಳಿಸಲಿದೆ.

ಯುವಜನರಿಗೆ ತರಬೇತಿ, ಮಾನವ ಸಂಪನ್ಮೂಲ ಅಭಿವೃದ್ಧಿಗೆ ಸಂಬಂಧಿಸಿದಂತೆ ಸರ್ಕಾರವು, ಟಾಟಾ ಟೆಕ್ನಾಲಜಿಸ್ ಲಿಮಿಟೆಡ್ ಕಂಪನಿಯ ಜೊತೆಗೆ ಗುರುವಾರ ಒಡಂಬಡಿಕೆ ಮಾಡಿಕೊಂಡಿತು. ಒಪ್ಪಂದದನ್ವಯ ಟಾಟಾ ಟೆಕ್ನಾಲಜಿಸ್ ಸಂಸ್ಥೆಯು ರಾಜ್ಯದಲ್ಲಿ 34 ಪಾಲಿಟೆಕ್ನಿಕ್‌ಗಳು, 43 ಐಟಿಐಗಳನ್ನು ಕೌಶಲ ಅಭಿವೃದ್ಧಿ ತರಬೇತಿ ಕೇಂದ್ರಗಳಾಗಿ ಅಭಿವೃದ್ಧಿಗೊಳಿಸಲು ₹ 2,390 ಕೋಟಿ ಹೂಡಿಕೆ ಮಾಡಲಿದೆ.

ಒಪ್ಪಂದಕ್ಕೆ ಸಹಿಹಾಕುವ ಸಂದರ್ಭದಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರು, ಕರ್ನಾಟಕದಲ್ಲಿ ಇಂಥ ಯೋಜನೆ ಜಾರಿಯಲ್ಲಿದೆ. ಅಲ್ಲಿನ ಮುಖ್ಯಮಂತ್ರಿ ಇದೊಂದು ನವೀನ ಕಾರ್ಯಕ್ರಮ ಎಂದಿದ್ದಾರೆ. ಅಸ್ಸಾಂನಲ್ಲಿಯೂ ಯುವಜನರ ಕೌಶಲ ಅಭಿವೃದ್ಧಿಗೆ ಇದು ಸೂಕ್ತ ಯೋಜನೆ. ಟಾಟಾ ಟೆಕ್ನಾಲಜಿಸ್ ಜೊತೆಗೆ ಚರ್ಚಿಸಿ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದರು.

ಚೀನಾ ಅಧ್ಯಕ್ಷರಿಗೆ ಮೆದುಳಿನ ರಕ್ತನಾಳ ಸಂಬಂಧಿ ಕಾಯಿಲೆ

ಬೀಜಿಂಗ್: ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಮೆದುಳಿನ ರಕ್ತನಾಳಕ್ಕೆ ಸಂಬಂಧಿಸಿದ ಕಾಯಿಲೆಯಿಂದ ಬಳಲುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ 2021ರ ಅಂತ್ಯದಿಂದ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ.

‘ರಕ್ತನಾಳಗಳನ್ನು ದುರ್ಬಲಗೊಳಿಸಲಿದೆ ಎಂಬ ಕಾರಣಕ್ಕೆ ಅವರು ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳದೆ, ಚೀನೀ ಸಾಂಪ್ರದಾಯಿಕ ಚಿಕಿತ್ಸೆಗೆ ಒಲವು ಹೊಂದಿದ್ದಾರೆ’ ಎಂದು ಸ್ಥಳೀಯ ಮಾಧ್ಯಮವನ್ನು ಉಲ್ಲೇಖಿಸಿ ಎನ್‌ಡಿಟಿವಿ ವರದಿ ಮಾಡಿದೆ.

ಡೆಫ್‌ಲಿಂಪಿಕ್ಸ್‌ನಲ್ಲಿ ಎರಡು ಪದಕ ಗೆದ್ದ ಮೊದಲ ಗಾಲ್ಫರ್

ಚಿನ್ನಕ್ಕೆ ಮುತ್ತಿಕ್ಕಿದ ದೀಕ್ಷಾ

ಕಕ್ಸಿಯಾಸ್, ಬ್ರೆಜಿಲ್ (ಪಿಟಿಐ): ಬಲಿಷ್ಠ ಪ್ರತಿಸ್ಪರ್ಧಿ, ಅಮೆರಿಕದ ಆ್ಯಶ್ಲಿನ್ ಗ್ರೇಸ್ ವಿರುದ್ಧ ಅಮೋಘ ಆಟವಾಡಿದ ಭಾರತದ ದೀಕ್ಷಾ ದಾಗರ್ ಅವರು ಡೆಫ್‌ಲಿಂಪಕ್ಸ್‌ನ (ಕಿವುಡರ ಒಲಿಂಪಿಕ್ ಕೂಟ) ಗಾಲ್ಫ್‌ನಲ್ಲಿ ಚಿನ್ನದ ಪದಕ ತಮ್ಮದಾಗಿಸಿಕೊಂಡರು.

2017ರಲ್ಲಿ ಟರ್ಕಿಯ ಸಾಮ್ಸುನ್‌ನಲ್ಲಿ ನಡೆದ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದ ದೀಕ್ಷಾ ಈ ಬಾರಿ ಚಿನ್ನದ ಪದಕ ಗೆಲ್ಲುವುದಾಗಿ ಭರವಸೆ ವ್ಯಕ್ತಪಡಿಸಿದ್ದರು. ಈ ಮಾತಿಗೆ ತಕ್ಕಂತೆ ಆಡಿದ ಅವರು ಮೊದಲ ಸುತ್ತಿನಿಂದಲೇ ಪಾರಮ್ಯ ಮೆರೆದಿದ್ದರು. ಚಿನ್ನ ಗೆಲ್ಲುವುದರೊಂದಿಗೆ ಡೆಫ್‌ಲಿಂಪಿಕ್ಸ್‌ನಲ್ಲಿ ಎರಡು ಪದಕ ಗೆದ್ದ ಮೊದಲ ಗಾಲ್ಫರ್ ಎನಿಸಿಕೊಂಡರು.

ಎಡಗೈ ಆಟಗಾರ್ತಿಯಾದ 21 ವರ್ಷದ ದೀಕ್ಷಾ ಅವರಿಗೆ ಆರನೇ ವಯಸ್ಸಿನಲ್ಲಿ ಕಿವುಡುತನ ಕಾಡಿತ್ತು. ವೃತ್ತಿಪರ ಗಾಲ್ಫ್ ಆಟಗಾರ್ತಿಯೂ ಆಗಿರುವ ಅವರು ಮಹಿಳೆಯರ ಯುರೋಪಿಯನ್ ಟೂರ್‌ನಲ್ಲಿ ಜಯ ಗಳಿಸಿ ಗಮನ ಸೆಳೆದಿದ್ದಾರೆ. 2017ರ ಡೆಫ್‌ಲಿಂಪಿಕ್ಸ್‌ನಲ್ಲಿ ಫೈನಲ್ ಪ್ರವೇಶಿಸುವಾಗ ಅವರಿಗೆ ಇನ್ನೂ 17 ವರ್ಷ ತುಂಬಿರಲಿಲ್ಲ. ಆದರೂ ಅಮೋಘ ಆಟವಾಡಿದ್ದರು. ಆಗ ವೃತ್ತಿಪರ ಗಾಲ್ಫ್‌ಗೆ ಅವರು ಪ್ರವೇಶಿಸಿರಲಿಲ್ಲ. ಕಳೆದ ವರ್ಷ ಟೋಕಿಯೊ ಒಲಿಂಪಿಕ್ಸ್‌ಗೆ ಕೊನೆಯ ಅವಕಾಶದಲ್ಲಿ ಆಯ್ಕೆಯಾಗಿ ಅಚ್ಚರಿ ಮೂಡಿಸಿದ್ದ ಅವರು ಒಲಿಂಪಿಕ್ ಕ್ರೀಡಾಕೂಟ ಮತ್ತು ಡೆಫ್‌ಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ ಮೊದಲ ಗಾಲ್ಫರ್ ಎನಿಸಿಕೊಂಡಿದ್ದರು.



ದೀಕ್ಷಾ ದಾಗರ್ –ಟ್ವಿಟರ್ ಚಿತ್ರ

2019ರಲ್ಲಿ ದೀಕ್ಷಾ ವೃತ್ತಿಪರ ಗಾಲ್ಫ್‌ಗೆ ಪದಾರ್ಪಣೆ ಮಾಡಿದ್ದರು. ಆ ವರ್ಷ ದಕ್ಷಿಣ ಆಫ್ರಿಕಾದಲ್ಲಿ ನಡೆದಿದ್ದ ಇನ್ವೆಸ್ಟೆಕ್ ಮಹಿಳೆಯರ ಮುಕ್ತ ಟೂರ್ನಿಯಲ್ಲಿ ಆಡಿದ್ದ ಅವರು 2021ರಲ್ಲಿ ಲಂಡನ್‌ನಲ್ಲಿ ನಡೆದಿದ್ದ ಅರಮ್ಕೊ ಟೀಮ್ ಸೀರಿಸ್‌ನಲ್ಲಿ ಗೆದ್ದ ತಂಡದ ಸದಸ್ಯೆಯಾಗಿದ್ದರು. ಇವೆರಡೂ ಮಹಿಳೆಯರ ಯುರೋಪಿಯನ್ ಟೂರ್‌ನ ಭಾಗವಾಗಿದ್ದವು.

ಡೆಫ್‌ಲಿಂಪಿಕ್ಸ್‌ನಲ್ಲಿ ಕಂಚಿನ ಪದಕಕ್ಕಾಗಿ ನಡೆದ ಸ್ಪರ್ಧೆ ಜಿದ್ದಾಜಿದ್ದಿಯಿಂದ ಕೂಡಿತ್ತು. ಫ್ರಾನ್ಸ್‌ನ ಮಾರ್ಗಕ್ಸ್ ಮತ್ತು ನಾರ್ವೆಯ ಆ್ಯಂಡ್ರಿಯಾ ಹಾಟ್ಸೆನ್ ನಡುವಿನ ಹಣಾಹಣಿಯಲ್ಲಿ ಮಾರ್ಗಕ್ಸ್ ಜಯ ಸಾಧಿಸಿದರು.

ಆ್ಯಂಡ್ರಿಯಾ ಕಳೆದ ಬಾರಿ ಕಂಚಿನ ಪದಕ ಗೆದ್ದುಕೊಂಡಿದ್ದರು.

ಭಾರತದ ಬಾಕ್ಸರ್‌ಗಳ ಗೆಲುವಿನ ಆರಂಭ

ನವದೆಹಲಿ (ಪಿಟಿಐ): ಭಾರತದ ಅನಾಮಿಕ, ಶಿಕ್ಷಾ ಮತ್ತು ಜಾಸ್ಮಿನ್ ಅವರು ಐಬಿಎ ಮಹಿಳೆಯರ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಪ್ರೀ ಕ್ವಾರ್ಟರ್ ಫೈನಲ್ ಹಂತಕ್ಕೆ ಲಗ್ಗೆ ಇರಿಸಿದರು. ಗುರುವಾರ ನಡೆದ 50 ಕೆಜಿ ವಿಭಾಗದ ಬೌಟ್‌ನಲ್ಲಿ ರೊಮೇನಿಯಾದ ಯೂಜಿನಿಯಾ ಏಂಜೆಲ್ ವಿರುದ್ಧ ಅನಾಮಿಕ 5–0ಯಿಂದ ಜಯ ಗಳಿಸಿದರು.

54 ಕೆಜಿ ವಿಭಾಗದಲ್ಲಿ ಶಿಕ್ಷಾ ಅವರು ಅರ್ಜೆಂಟೀನಾದ ಹೆರೆರಾ ಮಿಲಾಗ್ರೊಸ್ ರೊಜಾರೊಯೊ ವಿರುದ್ಧ 5–0ಯಿಂದ ಜಯ ಸಾಧಿಸಿದರು. ಥಾಯ್ಲೆಂಡ್‌ನ ಪೊರ್ನ್‌ಟಿಪ್ ಬುವಾಪ ಎದುರು ಜಾಸ್ಮಿನ್ 4–1 ಅಂತರದಲ್ಲಿ ಗೆಲುವು ಸಾಧಿಸಿದರು.

ಸುನಿತಾಗೆ ಜಯ

ಬೆಂಗಳೂರು: ಅಗ್ರ ಶ್ರೇಯಾಂಕಿತ ಸುನಿತಾ ಪಟೇಲ್ ಅವರು ಬೆಂಗಳೂರು ಕ್ಲಬ್‌ನಲ್ಲಿ ಗುರುವಾರ ಆರಭಗೊಂಡ ಬೆಂಗಳೂರು ಓಪನ್ ಸ್ಕ್ವಾಷ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿದರು. ಅಮೃತರಾಜ್ ಜಯಲಕ್ಷ್ಮಿ ಎದುರಿನ ಪಂದ್ಯದಲ್ಲಿ ಸುನಿತಾ 11-3, 11-8, 11-2ರಲ್ಲಿ ಗೆದ್ದರು.

ಬಾಲಕರ ವಿವಿಧ ವಯೋಮಾನದವರ ವಿಭಾಗದಲ್ಲಿ ಅಗ್ರ ಶ್ರೇಯಾಂಕಿತರಾದ ಅಕ್ಷತ್ ಅಗರವಾಲ್, ಅರಿಹಂತ್ ಕೆ.ಎಸ್, ವೇದಾಂತ್ ಛೆಡ್ಡಾ, ವಿವಾನ್ ಶ್ರೀವಾಸ್ತರವ ಮತ್ತು ದೇವಾಂಶ್ ಅಗರವಾಲ್ ಜಯ ಗಳಿಸಿದರು.

ಸಂಕ್ಷಿಪ್ತ ಸುದ್ದಿ

ಅಪಘಾತ: ಕನ್ನಡಿಗ ಸೇರಿ ಐವರ ಸಾವು

ನೊಯ್ಡಾ(ಪಿಟಿಐ): ಉತ್ತರ ಪ್ರದೇಶದ ಗ್ರೇಟರ್ ನೊಯ್ಡಾದ ಯಮುನಾ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಕರ್ನಾಟಕದ ಬೆಳಗಾವಿಯ ನುವಜಂನ್ ಮುಜಾವರ್(53) ಸೇರಿದಂತೆ 5 ಮೃತಪಟ್ಟಿದ್ದಾರೆ. ಗುರುವಾರ ನಸುಕಿನ ಜಾವ ನಡೆದೆ. ಅಪಘಾತದಲ್ಲಿ ಕಾರಿನಲ್ಲಿದ್ದ ಮತ್ತಿಬ್ಬರು ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಕಲಿ ದಾಳಿ: ನಾಲ್ವರು ಸಿಬಿಐ ಅಧಿಕಾರಿಗಳ ವಜಾ

ನವದೆಹಲಿ(ಪಿಟಿಐ): ಚಂಡೀಗಡದ ಕಂಪನಿಯೊಂದರ ಮೇಲೆ ನಕಲಿ ದಾಳಿ ನಡೆಸಿ ಹಣ ವಸೂಲಿಗೆ ಯತ್ನಿಸಿದ ಆರೋಪದ ಮೇಲೆ ಬಂಧನಕ್ಕೆ ಒಳಗಾಗಿರುವ ಸಿಬಿಐನ ನಾಲ್ವರು ಸಬ್ ಇನ್‌ಸ್ಪೆಕ್ಟರ್‌ಗಳನ್ನು ಸೇವೆಯಿಂದ ವಜಾಗೊಳಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಸಿಬಿಐನ ದೆಹಲಿ ಘಟಕದಲ್ಲಿರುವ ಸುಮಿತ್ ಗುಪ್ತಾ, ಪ್ರದೀಪ್ ರಾಣಾ, ಅಂಕುರ್ ಕುಮಾರ್ ಮತ್ತು ಆಕಾಶ್ ಅಹ್ಲಾವತ್ ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ಆರೋಪ ಎದುರಿಸುತ್ತಿದ್ದಾರೆ.

ಈ ಕುರಿತು ಮಾಹಿತಿ ನೀಡಿರುವ ಸಿಬಿಐ ವಕ್ತಾರ ಆರ್.ಸಿ ಜೋಶಿ, ‘ಮುಜುಗರದ ಪ್ರಸಂಗವನ್ನು ಸಿಬಿಐ ನಿರ್ದೇಶಕ ಸುಬೋಧ್ ಕುಮಾರ್ ಜೈಸ್ವಾಲ್ ಗಮನಕ್ಕೆ ತಂದ ಬಳಿಕ ನಾಲ್ವರನ್ನು ಕೆಲಸದಿಂದ ವಜಾಗೊಳಿಸಲಾಗಿದೆ’ ಎಂದು ಹೇಳಿದರು.

16ರಂದು ನೇಪಾಳದ ಲುಂಬಿಣಿಗೆ ಮೋದಿ ಭೇಟಿ

ನವದೆಹಲಿ (ಪಿಟಿಐ): ಬುದ್ಧ ಪೌರ್ಣಿಮೆಯ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಮೇ 16ರಂದು ನೇಪಾಳದ ಲುಂಬಿಣಿಗೆ ಭೇಟಿ ನೀಡಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ನೇಪಾಳದ ಪ್ರಧಾನಿ ಶೇರ್ ಬಹದ್ದೂರ್ ದೇವುಬಾ ಅವರ ಆಹ್ವಾನದ ಮೇರೆಗೆ ಮೋದಿ ಲುಂಬಿಣಿಗೆ ಹೋಗುತ್ತಿದ್ದು, 2014ರ ಬಳಿಕ ಮೋದಿ ನೇಪಾಳಕ್ಕೆ ನೀಡುತ್ತಿರುವ ಐದನೇ ಭೇಟಿ ಇದಾಗಿದೆ.

ಪ್ರಥಮ ‘ಅಮೃತ ಸರೋವರ’ ಉದ್ಘಾಟನೆ

ನವದೆಹಲಿ (ಪಿಟಿಐ): ದೇಶದ ಮೊದಲ ‘ಅಮೃತ ಸರೋವರ’ ಉತ್ತರ ಪ್ರದೇಶದ ರಾಮ್‌ಪುರ್‌ನಲ್ಲಿ ನಿರ್ಮಾಣವಾಗಿದ್ದು ಕೇಂದ್ರದ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಮುಕ್ತಾರ್ ಅಬ್ಬಾಸ್ ನಖ್ವಿ ಶುಕ್ರವಾರ ಉದ್ಘಾಟಿಸಲಿದ್ದಾರೆ.

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ನೆನಪಿಗೆ ‘ಅಮೃತ ಸರೋವರ’ ಹೆಸರಿನಲ್ಲಿ ಪ್ರತಿ ಜಿಲ್ಲೆಯಲ್ಲಿ ಕನಿಷ್ಠ 75 ಕೊಳಗಳನ್ನು ಅಭಿವೃದ್ಧಿಪಡಿಸಬೇಕು ಎಂದು ಪ್ರಧಾನಿ ಮೋದಿ ‘ಮನ್ ಕೀ ಬಾತ್’ನಲ್ಲಿ ಕರೆ ನೀಡಿದ್ದರು.

ಈ ಕುರಿತ ಹೇಳಿಕೆಯಲ್ಲಿ ನಖ್ವಿ ಅವರು, ಅಲ್ಪಾವಧಿಯಲ್ಲಿ ಈ ಸರೋವರವನ್ನು ಅಭಿವೃದ್ಧಿಪಡಿಸುವಲ್ಲಿ ಜಿಲ್ಲಾಡಳಿತ ಮತ್ತು ಸ್ಥಳೀಯ ಜನರ ಸಹಭಾಗಿತ್ವ ಪ್ರಮುಖ ಪಾತ್ರವಹಿಸಿದೆ ಎಂದು ನಖ್ವಿ ಹೇಳಿದ್ದಾರೆ.

ವಿಎಚ್‌ಪಿ ಮುಖಂಡನ ಮೇಲೆ ಹಲ್ಲೆ ವದಂತಿ, ಉದ್ವಿಗ್ನ ಸ್ಥಿತಿ

ಹನುಮಾನ್‌ಘರ್, ರಾಜಸ್ಥಾನ (ಪಿಟಿಐ): ಜಿಲ್ಲೆಯ ನೋಹರ್ ಪಟ್ಟಣದಲ್ಲಿ ವಿಎಚ್‌ಪಿ ನಾಯಕರೊಬ್ಬರ ಮೇಲೆ ಗುಂಪೊಂದು ಹಲ್ಲೆ ನಡೆಸಿದ್ದು, ಪಟ್ಟಣದಲ್ಲಿ ಉದ್ವಿಗ್ನ ಸ್ಥಿತಿ ನಿರ್ಮಾಣಗೊಂಡಿದೆ.

ಘಟನೆ ಕುರಿತಂತೆ ವದಂತಿ ಹರಡುವುದನ್ನು ತಪ್ಪಿಸಲು ಮುಂಜಾಗ್ರತೆಯಾಗಿ ನೋಹರ್, ಭದ್ರಾ, ರಾವತ್‌ಸರ್ ಪಟ್ಟಣಗಳಲ್ಲಿ ಮೊಬೈಲ್ ಇಂಟರ್‌ನೆಟ್ ಸಂಪರ್ಕವನ್ನು ಸ್ಥಗಿತಗೊಳಿಸಲಾಗಿತ್ತು. ವಿಎಚ್‌ಪಿ ನಾಯಕ ಸತ್ವೀರ್ ಸಹ ರಣ್ ಮೇಲೆ ಬುಧವಾರ ಸಂಜೆ ಗುಂಪು ದಾಳಿ ನಡೆದಿತ್ತು. ದೇಗುಲದ ಪಕ್ಕದ ಖಾಲಿ ಸ್ಥಳದಲ್ಲಿ ಗುಂಪು ಕುಳಿತಿದ್ದು, ಗಲಾಟೆ ಮಾಡುತ್ತಿದ್ದಾರೆ ಎಂದು ಆಕ್ಷೇಪಿಸಿದ್ದು ಹಲ್ಲೆಗೆ ಕಾರಣವೆನ್ನಲಾಗಿದೆ.

ಅಲ್ಪಸಂಖ್ಯಾತ ಸಮುದಾಯದ ಗುಂಪು ದಾಳಿ ನಡೆಸಿದೆ ಎಂಬ ವದಂತಿ ಹಬ್ಬುತ್ತಿದಂತೆಯೇ ವಿವಿಧ ಹಿಂದೂಪರ ಸಂಘಟನೆಗಳು ಪ್ರತಿಭಟನೆ ನಡೆಸಿದ್ದವು. ಮುಂಜಾಗ್ರತೆಯಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.



ಬೆಂಗಳೂರಿನಲ್ಲಿ ಈಚೆಗೆ ನಡೆದ ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟದಲ್ಲಿ ಸಮಗ್ರ ಚಾಂಪಿಯನ್ ಆದ ಆತಿಥೇಯ ಜೈನ್ ವಿವಿ ಕ್ರೀಡಾಪಟುಗಳನ್ನು ಶೇಷಾದ್ರಿಪುರದ ಸಿಎಂಎಸ್ ಬ್ಯುಸಿನೆಸ್ ಸ್ಕೂಲ್ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಸನ್ಮಾನಿಸಲಾಯಿತು. ಕುಲಪತಿ ಚನ್‌ರಾಜ್ ರಾಯ್‌ಚಂದ್ (ಬಿಳಿ ಶರ್ಟ್), ಸ್ಪ್ರಿಂಟರ್ ಪ್ರಿಯಾ ಅವರ ತಂದೆ ಮೋಹನ್ (ಕೋಟ್ ತೊಟ್ಟವರು) ಮತ್ತು ತಾಯಿ ಚಂದ್ರಕಲಾ ಇದ್ದಾರೆ



ಪ್ಲೇ ಆಫ್ ಸ್ಪರ್ಧೆಯಿಂದ ಹೊರಬಿದ್ದ ಮಹೇಂದ್ರ ಸಿಂಗ್ ಧೋನಿ ಬಳಗ; ತಿಲಕ್ ತಾಳ್ಮೆಯ ಆಟ

ಮುಂಬೈಗೆ ಮಣಿದ ಚೆನ್ನೈ ಸೂಪರ್ ಕಿಂಗ್ಸ್

ಮುಂಬೈ (ಪಿಟಿಐ): ವಾಂಖೆಡೆ ಕ್ರೀಡಾಂಗಣದಲ್ಲಿ ಸಂಭವಿಸಿದ ಶಾರ್ಟ್ ಸರ್ಕಿಟ್‌ನಿಂದ ಕೈಕೊಟ್ಟ ಡಿಆರ್‌ಎಸ್ ವ್ಯವಸ್ಥೆ, ಅಂಪೈರ್ ತಪ್ಪು ತೀರ್ಪು ಮತ್ತು ಮುಂಬೈ ಇಂಡಿಯನ್ಸ್ ಬೌಲರ್ ಡ್ಯಾನಿಯಲ್ ಸ್ಯಾಮ್ಸ್ ದಾಳಿಯ ಮುಂದೆ ಚೆನ್ನೈ ಸೂಪರ್ ಕಿಂಗ್ಸ್ ತಂಡ ಪರಾಭವಗೊಂಡಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಮುಂಬೈ ಇಂಡಿಯನ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ವೇಗಿ ಸ್ಯಾಮ್ಸ್ (16ಕ್ಕೆ3) ಕೊಟ್ಟ ಪೆಟ್ಟಿಗೆ ನಲುಗಿದ ಹಾಲಿ ಚಾಂಪಿಯನ್ ಚೆನ್ನೈ ತಂಡವು 16 ಓವರ್‌ಗಳಲ್ಲಿ 97 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು. ಮುಂಬೈ ತಂಡವು 14.5 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 103 ರನ್ ಗಳಿಸಿತು. ಇದರೊಂದಿಗೆ ಚೆನ್ನೈ ತಂಡದ ಪ್ಲೇ ಆಫ್ ಹಾದಿ ಸಂಪೂರ್ಣವಾಗಿ ಮುಚ್ಚಿತು. ಮೊದಲ ಎಂಟು ಪಂದ್ಯಗಳಲ್ಲಿ ಸತತ ಸೋಲನುಭವಿಸಿದ್ದ ಮುಂಬೈ ಈಗಾಗಲೇ ಪ್ಲೇ ಆಫ್ ರೇಸ್‌ನಿಂದ ಹೊರಬಿದ್ದಿದೆ.


ಇನಿಂಗ್ಸ್‌ನ ಮೊದಲ ಓವರ್‌ನಲ್ಲಿಯೇ ಡೆವೊನ್ ಕಾನ್ವೆ ಮತ್ತು ಮೋಯಿನ್ ಅಲಿ ವಿಕೆಟ್ ಗಳಿಸಿದ ಸಾಮ್ಸ್ ಮುಂಬೈ ತಂಡಕ್ಕೆ ಅಮೋಘ ಆರಂಭ ನೀಡಿದರು. ಕಾನ್ವೆ ಎಲ್‌ಬಿಡಬ್ಲ್ಯು ತೀರ್ಪು ಅನುಮಾನಾಸ್ಪದವಾಗಿತ್ತು. ಆದರೆ, ಶಾರ್ಟ್ ಸರ್ಕಿಟ್‌ನಿಂದಾಗಿ ಡಿಆರ್‌ಎಸ್ ಬಳಕೆಯ ತಂತ್ರಜ್ಞಾನ ಕಾರ್ಯನಿರ್ವಹಿಸಲಿಲ್ಲ.

ಎರಡನೇ ಓವರ್‌ನಲ್ಲಿ ರಾಬಿನ್ ಉತ್ತಪ್ಪ ಅವರನ್ನು ಜಸ್‌ಪ್ರೀತ್ ಬೂಮ್ರಾ ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ಋತುರಾಜ್ ಗಾಯಕವಾಡ ಏಳು ರನ್ ಗಳಿಸಿ ಔಟಾದರು. ಅಂಬಟಿ ರಾಯುಡು (10) ಮತ್ತು ಶಿವಂ ದುಬೆ (10 ರನ್) ಪೆವಿಲಿಯನ್‌ಗೆ ಮರಳಿದಾಗ ತಂಡದ ಮೊತ್ತವು 6 ವಿಕೆಟ್‌ಗಳಿಗೆ 39 ರನ್‌ಗಳಾಗಿತ್ತು.

ನಾಯಕ ಮಹೇಂದ್ರಸಿಂಗ್ ಧೋನಿ (ಔಟಾಗದೆ 36; 33ಎ, 4X4, 6X2) ತೋರಿದ ಛಲದಿಂದಾಗಿ ಒಂದಿಷ್ಟು ರನ್‌ಗಳು ತಂಡದ ಮೊತ್ತ ಸೇರಿದವು. ಆದರೆ ಉಳಿದ ಬ್ಯಾಟರ್‌ಗಳು ಛಲದ ಆಟ ತೋರದ ಕಾರಣ ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗಲಿಲ್ಲ.

ಗುರಿ ಬೆನ್ನತ್ತಿದ ಮುಂಬೈ ತಂಡಕ್ಕೆ ಜಯ ಸುಲಭವಾಗಿ ಒಲಿಯಲಿಲ್ಲ. ಮುಕೇಶ್ ಚೌಧರಿ (23ಕ್ಕೆ3) ಉತ್ತಮ ಬೌಲಿಂಗ್ ಮುಂದೆ ತಂಡವು ಆತಂಕ ಎದುರಿಸಿತು. 33 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡ ಮುಂಬೈ ಸೋಲಿನತ್ತ ಸಾಗಿತ್ತು. ಆದರೆ, ತಿಲಕ್ ವರ್ಮಾ (ಔಟಾಗದೆ 34) ಮತ್ತು ಟಿಮ್ ಡೇವಿಡ್ (ಔಟಾಗದೆ 16) ತಂಡವನ್ನು ಗೆಲುವಿನ ದಡ ಸೇರಿಸಿದರು.


ವಿಕೆಟ್ ಗಳಿಸಿದ ಡ್ಯಾನಿಯಲ್ ಸ್ಯಾಮ್ಸ್ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಪಿಟಿಐ ಚಿತ್ರ


ತಿಲಕ್ ವರ್ಮಾ – ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್ 97 (16 ಓವರ್)
ಋತುರಾಜ್ ಸಿ ಇಶಾನ್ ಬಿ ಸ್ಯಾಮ್ಸ್ 7 (6 ಎ, 4x1), ಕಾನ್ವೆ ಎಲ್‌ಬಿಡಬ್ಲ್ಯು ಸ್ಯಾಮ್ಸ್ 0 (1 ಎ), ಮೋಯಿನ್ ಸಿ ಶೋಕೀನ್ ಬಿ ಸ್ಯಾಮ್ಸ್ 0 (2 ಎ), ರಾಬಿನ್ ಎಲ್‌ಬಿಡಬ್ಲ್ಯು ಬೂಮ್ರಾ 1 (6 ಎ), ಅಂಬಟಿ ಸಿ ಇಶಾನ್ ಬಿ ಮೆರೆಡಿತ್ 10 (14 ಎ, 4x2), ಮಹೇಂದ್ರ ಸಿಂಗ್ ಔಟಾಗದೆ 36 (33 ಎ, 4x4, 6x2), ಶಿವಂ ಸಿ ಇಶಾನ್ ಬಿ ಮೆರೆಡಿತ್ 10 (9 ಎ, 4x1), ಡ್ವೇನ್ ಬ್ರಾವೊ ಸಿ ತಿಲಕ್ ಬಿ ಕಾರ್ತಿಕೇಯ 12 (15 ಎ, 6x1), ಸಿಮ್ರನ್‌ಜೀತ್ ಎಲ್‌ಬಿಡಬ್ಲ್ಯು ಬಿ ಕಾರ್ತಿಕೇಯ 2 (3 ಎ), ಮಹೀಶ ಸಿ ರೋಹಿತ್ ಬಿ ರಮಣ್‌ದೀಪ್ 0 (3 ಎ), ಮುಕೇಶ್ ರನ್ ಔಟ್ (ಇಶಾನ್) 4 (4 ಎ, 4x1)
ಇತರೆ (ಲೆಗ್‌ಬೈ 3, ವೈಡ್ 12) 15
ವಿಕೆಟ್ ಪತನ: 1-1 (ಡೆವೊನ್ ಕಾನ್ವೆ, 0.2), 2-2 (ಮೋಯಿನ್ ಅಲಿ, 0.4), 3-5 (ರಾಬಿನ್ ಉತ್ತಪ್ಪ, 1.4), 4-17 (ಋತುರಾಜ್ ಗಾಯಕವಾಡ್, 4.1), 5-29 (ಅಂಬಟಿ ರಾಯುಡು, 5.4), 6-39 (ಶಿವಂ ದುಬೆ, 7.3), 7-78 (ಡ್ವೇನ್ ಬ್ರಾವೊ, 12.2), 8-80 (ಸಿಮ್ರನ್‌ಜೀತ್ ಸಿಂಗ್, 12.5), 9-81 (ಮಹೀಶ್ ತೀಕ್ಷಣ, 13.3), 10-97 (ಮುಕೇಶ್ ಚೌಧರಿ, 15.6)
ಬೌಲಿಂಗ್: ಡ್ಯಾನಿಯಲ್ ಸ್ಯಾಮ್ಸ್ 4-0-16-3, ಜಸ್‌ಪ್ರೀತ್ ಬೂಮ್ರಾ 3-1-12-1, ರಿಲೆ ಮೆರೆಡಿತ್ 3-0-27-2, ಹೃತಿಕ್ ಶೋಕೀನ್ 2-0-12-0, ಕುಮಾರ್ ಕಾರ್ತಿಕೇಯ 3-0-22-2, ರಮಣ್‌ದೀಪ್ ಸಿಂಗ್ 1-0-5-1

ಮುಂಬೈ ಇಂಡಿಯನ್ಸ್ 5ಕ್ಕೆ 103 (14.5 ಓವರ್)
ಇಶಾನ್ ಸಿ ಧೋನಿ ಬಿ ಮುಕೇಶ್ 6 (5 ಎ, 4x1), ರೋಹಿತ್ ಸಿ ಧೋನಿ ಬಿ ಸಿಮ್ರನ್‌ಜೀತ್ 18 (14 ಎ, 4x4), ಡ್ಯಾನಿಯಲ್ ಸ್ಯಾಮ್ಸ್ ಎಲ್‌ಬಿಡಬ್ಲ್ಯು ಬಿ ಮುಕೇಶ್ 1 (6 ಎ), ತಿಲಕ್ ಔಟಾಗದೆ 34 (32 ಎ, 4x4), ಟ್ರಿಸ್ಟನ್ ಎಲ್‌ಬಿಡಬ್ಲ್ಯು ಬಿ ಮುಕೇಶ್ 0 (2 ಎ), ಹೃತಿಕ್ ಬಿ ಅಲಿ 18 (23 ಎ, 4x2), ಟಿಮ್ ಔಟಾಗದೆ 16 (7 ಎ, 6x2)
ಇತರೆ (ಲೆಗ್‌ಬೈ 1, ವೈಡ್ 9) 10
ವಿಕೆಟ್ ಪತನ: 1-6 (ಇಶಾನ್ ಕಿಶನ್, 0.5), 2-30 (ರೋಹಿತ್ ಶರ್ಮಾ, 3.3), 3-33 (ಡ್ಯಾನಿಯಲ್ ಸ್ಯಾಮ್ಸ್, 4.3), 4-33 (ತ್ರಿಸ್ತಾನ್, 4.5), 5-81 (ಹೃತಿಕ್ ಶೋಕೀನ್, 12.4)
ಬೌಲಿಂಗ್: ಮುಕೇಶ್ 4-0-23-3, ಸಿಮ್ರನ್‌ಜೀತ್ 4-0-22-1, ಡ್ವೇನ್ ಬ್ರಾವೊ 2-0-16-0, ಮಹೀಶ್ 3-0-24-0, ಮೋಯಿನ್ ಅಲಿ 1.5-0-17-1

ಫಲಿತಾಂಶ: ಮುಂಬೈ ಇಂಡಿಯನ್ಸ್‌ಗೆ 5 ವಿಕೆಟ್‌ಗಳ ಜಯ

ಶಾರ್ಟ್ ಸರ್ಕಿಟ್‌ನಿಂದ ಡಿಆರ್‌ಎಸ್ ಸ್ಥಗಿತ

ಮುಂಬೈ (ಪಿಟಿಐ): ಶಾರ್ಟ್ ಸರ್ಕಿಟ್‌ನಿಂದಾಗಿ ವಿದ್ಯುತ್ ಕಡಿತಗೊಂಡ ಕಾರಣ ಅಂಪೈರ್ ಮರುಪರಿಶೀಲನಾ ವ್ಯವಸ್ಥೆ ತಂತ್ರಜ್ಞಾನ ಸ್ಥಗಿತಗೊಂಡಿದ್ದು ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಆರಂಭಿಕ ಆಘಾತ ಅನುಭವಿಸಲು ಕಾರಣವಾಯಿತು. ಡೇನಿಯಲ್ ಸ್ಯಾಮ್ಸ್ ಹಾಕಿದ ಮೊದಲ ಓವರ್‌ನ ಎರಡನೇ ಎಸೆತವು ಡೆವೊನ್ ಕಾನ್ವೆ ಪ್ಯಾಡ್‌ಗೆ ಅಪ್ಪಳಿಸಿತು. ಚೆಂಡು ಆಫ್‌ಸ್ಟಂಪ್‌ನಿಂದ ಹೊರಗೆ ತಿರುವು ಪಡೆದಿತ್ತು. ಆದರೆ ಅಂಪೈರ್ ಔಟ್ ತೀರ್ಪು ನೀಡಿದರು.

ಈ ಹಂತದಲ್ಲಿ ಕಾನ್ವೆಗೆ ಡಿಆರ್‌ಎಸ್ ಪಡೆಯುವ ಅವಕಾಶ ಸಿಗಲಿಲ್ಲ.

ಸ್ವಲ್ಪ ಹೊತ್ತು ಕ್ರೀಸ್‌ನಲ್ಲಿಯೇ ಇದ್ದ ಅವರು ನಂತರ ನಿರಾಶೆಯಿಂದ ಡಗ್‌ಔಟ್‌ಗೆ ಮರಳಿದರು. ಇನ್ನೊಂದು ಬದಿಯಲ್ಲಿದ್ದ ಋತುರಾಜ್ ಗಾಯಕವಾಡ್ ಅಂಪೈರ್‌ಗಳೊಂದಿಗೆ ಈ ಕುರಿತು ಮಾತನಾಡಿದರು. ಚೆನ್ನೈ ಇನಿಂಗ್ಸ್‌ನ ಮೊದಲ ಹತ್ತು ಎಸೆತಗಳವರೆಗೂ ಡಿಆರ್‌ಎಸ್ ವ್ಯವಸ್ಥೆ ಕಾರ್ಯನಿರ್ವಹಿಸಲಿಲ್ಲ. ನಂತರ ಆರಂಭವಾಯಿತು.

‘ಕ್ರೀಡಾಂಗಣದ ವಿವಿಧ ಭಾಗಗಳಿಗೆ ವಿದ್ಯುತ್ ಪ್ರಸರಣ ಘಟಕಗಳಿವೆ ಅದರಲ್ಲಿ ಒಂದರಲ್ಲಿ ಶಾರ್ಟ್ ಸರ್ಕಿಟ್ ಆಗಿದ್ದು ಈ ಸಮಸ್ಯೆಗೆ ಕಾರಣವಾಗಿದೆ’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ. ಮುಂಬೈ ಕ್ರಿಕೆಟ್ ಸಂಸ್ಥೆ (ಎಂಸಿಎ) ಮತ್ತು ಬಿಸಿಸಿಐನ ಯಾರೂ ಸಮಸ್ಯೆಯ ಕುರಿತು ಅಧಿಕೃತ ಹೇಳಿಕೆ ನೀಡಲಿಲ್ಲ. ಆದರೆ, ಪವರ್ ಕಟ್‌ಗೆ ಕಾರಣವನ್ನು ಸ್ಪಷ್ಟಪಡಿಸಲಿಲ್ಲ.

‘ಫ್ಲಡ್‌ಲೈಟ್‌ಗೆ ಸಂಬಂಧಿಸಿದ ಸಮಸ್ಯೆಯನ್ನು ಕೂಡಲೇ ಪರಿಹರಿಸಿದೆವು’ ಎಂದು ಎಂಸಿಎ ಅಧಿಕಾರಿಯೊಬ್ಬರು ತಿಳಿಸಿದರು.

ಪಾಯಿಂಟ್ ಪಟ್ಟಿ							
ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ	ರನ್‌ರೇಟ್
ಗುಜರಾತ್	12	9	3	0	0	18	0.376
ಲಖನೌ	12	8	4	0	0	16	0.385
ರಾಜಸ್ಥಾನ	12	7	5	0	0	14	0.228
ಬೆಂಗಳೂರು	12	7	5	0	0	14	-0.115
ಡೆಲ್ಲಿ	12	6	6	0	0	12	0.210
ಹೈದರಾಬಾದ್	11	5	6	0	0	10	-0.031
ಕೋಲ್ಕತ್ತ	12	5	7	0	0	10	-0.057
ಪಂಜಾಬ್	11	5	6	0	0	10	-0.231
ಚೆನ್ನೈ	12	4	8	0	0	8	-0.181
ಮುಂಬೈ	12	3	9	0	0	6	-0.613

*ಗುರುವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	625
ರಾಹುಲ್	ಲಖನೌ	459
ವಾರ್ನರ್	ಡೆಲ್ಲಿ	427

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	23
ಹಸರಂಗ	ಬೆಂಗಳೂರು	21
ಕುಲದೀಪ್	ಡೆಲ್ಲಿ	18

ಇಂದಿನ ಪಂದ್ಯ
ರಾಯಲ್ ಚಾಲೆಂಜರ್ಸ್ ಬೆಂಗಳೂರು Vs ಪಂಜಾಬ್ ಕಿಂಗ್ಸ್
ಸ್ಥಳ: ಬ್ರೆಬೋರ್ನ್ ಕ್ರೀಡಾಂಗಣ
ಲೈವ್ ರಾತ್ರಿ 7.30
ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಬೆಳವಣಿಗೆಗೆ ನೆರವಾದ ಬೋಲ್ಟ್ ಪೈಪೋಟಿ: ಗ್ಯಾಟ್ಲಿನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಜಮೈಕಾದ ಉಸೇನ್ ಬೋಲ್ಟ್ ಮತ್ತು ಅಮೆರಿಕದ ಜಸ್ಟಿನ್ ಗ್ಯಾಟ್ಲಿನ್ ಅವರ ’ವೈರತ್ವ’ ಜನಜನಿತ.

ಸ್ಪ್ರಿಂಟ್‌ನಲ್ಲಿ ಚಿನ್ನದ ಪದಕಕ್ಕೆ ಕೊರಳೊಡ್ಡಲು ಇವರಿಬ್ಬರಲ್ಲಿ ಏರ್ಪಡುತ್ತಿದ್ದ ಪೈಪೋಟಿಯಿಂದಾಗಿ ಹಲವು ವಿಶ್ವದಾಖಲೆಗಳು ಮೂಡಿದವು. ಉಸೇನ್ ಬೋಲ್ಟ್ ವೇಗದ ಓಟದ ದಂತಕಥೆ ಆದರು. ಅವರಿಗೆ ನಿಕಟ ಪೈಪೋಟಿಯೊಡ್ಡಿದ ಗ್ಯಾಟ್ಲಿನ್ ಕೂಡ ತಾರೆಯಾದರು. ಪರಸ್ಪರರನ್ನು ಹಿಂದಿಕ್ಕಿ ಬೆಳೆಯುವ ಛಲದಲ್ಲಿ ಇಬ್ಬರೂ ಅಥ್ಲೆಟಿಕ್ ರಂಗದ ದಿಗ್ಗಜರಾದರು.

ಗುರುವಾರ ಶ್ರೀಕಂಠೀರವ ಕ್ರೀಡಾಂಗಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಜಸ್ಟಿನ್ ಗ್ಯಾಟ್ಲಿನ್ ಹೇಳಿದ ಮಾತುಗಳ ಸಾರ ಇದು. ಇದೇ 15ರಂದು ನಡೆಯಲಿರುವ ಟಿಸಿಎಸ್ ಟೆನ್ ಕೆ ಓಟದ ಪ್ರಚಾರ ರಾಯಭಾರಿಯಾಗಿರುವ ಅವರು ತಮ್ಮ ಸ್ಪರ್ಧೆಯ ದಿನಗಳಲ್ಲಿ ನೆನಪಿಸಕೊಂಡರು.

‘ನಾನು ಮತ್ತು ಉಸೇನ್ ಬೋಲ್ಟ್ ಕ್ರೀಡಾಕೂಟಗಳಲ್ಲಿ ಸ್ಪರ್ಧಿಸುವ ಕಾಲಘಟ್ಟದಲ್ಲಿ ವೈರತ್ವ ಮೂಡಲು ನಮ್ಮೊಳಗಿನ ಅಹಂಭಾವ ಕಾರಣವಾಗಿತ್ತು. ಆದರೆ, ಒಬ್ಬರನ್ನೊಬ್ಬರು ಮೀರಿಸಲು ಶ್ರಮಪಟ್ಟಿದ್ದರಿಂದ ಇಬ್ಬರೂ ಬೆಳೆದೆವು ಎಂಬುದು ನಿವೃತ್ತಿಯ ನಂತರವೇ ಗೊತ್ತಾಯಿತು. ಒಬ್ಬರನ್ನೊಬ್ಬರು ಮೀರಿಸುವ ಭರದಲ್ಲಿ ಪರಸ್ಪರ ಬೆಳೆಯಲು ನೆರವಾದೆವು ಎಂಬುದನ್ನು ಉಸೇನ್ ಮತ್ತು ನಾನು ಈಗ ಮುಕ್ತವಾಗಿ ಒಪ್ಪುತ್ತೇವೆ’ ಎಂದರು.

‘ಓಟದ ಸ್ಪರ್ಧೆಗಾಗಿ ಕಣಕ್ಕಿಳಿದ ಯಾವುದೇ ಸಂದರ್ಭದಲ್ಲಿಯೂ ನಾನು ಅಧೀರನಾಗಲಿಲ್ಲ. ಏಕೆಂದರೆ, ಈ ರೇಸ್‌ಗಾಗಿ ನಾನು ಸಿದ್ಧನಾಗಿದ್ದೇನೆ ಎಂಬ ಆತ್ಮವಿಶ್ವಾಸ ಮತ್ತು ನಾನು ಹುಟ್ಟಿರುವುದೇ ಈ ರೇಸ್‌ಗಾಗಿ ಎಂಬ ಮನೋಭಾವ ಇರುತ್ತಿದ್ದುದೇ ಅದಕ್ಕೆ ಕಾರಣ. ನಾವು ಯಾವುದೇ ಕ್ರೀಡೆಯಲ್ಲಿ ಇರಲಿ. ಅದು ನಮಗಾಗಿಯೇ ಇರುವುದು. ನಾವು ಅದಕ್ಕಾಗಿಯೇ ಜನಿಸಿರುವುದು ಎಂಬುದನ್ನು ಅರಿತಾಗ ಯಶಸ್ಸು ಸಲೀಸು’ ಎಂದರು.

‘ನನ್ನ ಜೀವನದಲ್ಲಿ 10 ಕಿ.ಮೀ ಅಂತರದ ಓಟವನ್ನು ಓಡಿಲ್ಲ. ಆದರೆ ಇವತ್ತು ಈ ಓಟಕ್ಕೆ ರಾಯಭಾರಿಯಾಗಿರುವುದು ಸಂತಸವಾಗುತ್ತಿದೆ. ಬೆಂಗಳೂರಿನ ವಾತಾವರಣವು ಕ್ರೀಡೆಗೆ ಉತ್ತಮವಾಗಿದೆ. ಎಲ್ಲ ಓಟಗಾರರೂ ಯುವಜನರಿಗೆ ಪ್ರೇರಣೆಯಾಗಲಿ’ ಎಂದು ಹೇಳಿದರು.


ಗುರುವಾರ ಕಂಠೀರವ ಕ್ರೀಡಾಂಗಣದಲ್ಲಿ ಅಮೆರಿಕದ ಒಲಿಂಪಿಯನ್ ಅಥ್ಲೀಟ್ ಜಸ್ಟಿಸ್ ಗ್ಯಾಟ್ಲಿನ್ –ಪ್ರಜಾವಾಣಿ ಚಿತ್ರ

ಥಾಮಸ್ ಕಪ್: ಭಾರತ ತಂಡ ಸೆಮಿಫೈನಲ್‌ಗೆ

ಬ್ಯಾಂಕಾಕ್ (ಪಿಟಿಐ): ಮಲೇಷ್ಯಾ ವಿರುದ್ಧ ಅಮೋಘ 3-2ರ ಜಯ ಸಾಧಿಸಿದ ಭಾರತ ತಂಡ ಥಾಮಸ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು. ಮಹಿಳೆಯರ ತಂಡ ಉಬರ್ ಕಪ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಮುಗ್ಗರಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ಪುರುಷರ ತಂಡಕ್ಕೆ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ, ಸಿಂಗಲ್ಸ್‌ನಲ್ಲಿ ಕಿದಂಬಿ ಶ್ರೀಕಾಂತ್ ಮತ್ತು ಎಚ್.ಎಸ್.ಪ್ರಣಯ್ ಜಯ ತಂದುಕೊಟ್ಟರು.

ಮೊದಲ ಪಂದ್ಯದಲ್ಲಿ ಲಕ್ಷ್ಯಸೇನ್ 21-23, 9-21ರಲ್ಲಿ ಲೀ ಜೀ ಜಿಯಾಗೆ ಮಣಿದರು. ನಂತರ ಡಬಲ್ಸ್‌ನಲ್ಲಿ ಸಾತ್ವಿಕ್ ಮತ್ತು ಚಿರಾಗ್ 21-19, 21-15ರಲ್ಲಿ ಗೊಹ್ ಶೆ ಮತ್ತು ನೂರ್ ಇಜುದ್ದೀನ್‌ಗೆ ಸೋಲುಣಿಸಿದರು.

21-11, 21-17ರಲ್ಲಿ ತ್ಸೆ ಯಾಂಗ್‌ಗೆ ಸೋಲುಣಿಸಿದ ಶ್ರೀಕಾಂತ್ ಭಾರತಕ್ಕೆ 2-1ರ ಮುನ್ನಡೆ ಗಳಿಸಿಕೊಟ್ಟರು. ಡಬಲ್ಸ್‌ನಲ್ಲಿ ಕೃಷ್ಣಪ್ರಸಾಧ್ ಗರಗ ಮತ್ತು ವಿಷ್ಣುವರ್ಧನ್ ಗೌಡ್ ಆ್ಯರನ್ ಚಿಯಾ ಮತ್ತು ತೊಯ್ ಯೀಗೆ ಮಣಿದ ಕಾರಣ ಭಾರತದ ಮೇಲೆ ಒತ್ತಡ ಹೆಚ್ಚಿತು. ಆದರೆ ಪ್ರಣಯ್ 21-13, 21-8ರಲ್ಲಿ ಜುನ್ ಲ್ಯಾಂಗ್‌ಗೆ ನಿರ್ಣಾಯಕ ಪಂದ್ಯದಲ್ಲಿ ಸೋಲುಣಿಸಿ ಹಣಾಹಣಿಯಲ್ಲಿ ಭಾರತಕ್ಕೆ ಗೆಲುವು ತಂದುಕೊಟ್ಟರು.

ಉಬರ್ ಕಪ್‌ನಲ್ಲಿ ನಿರಾಸೆ: ಥಾಯ್ಲೆಂಡ್ ವಿರುದ್ಧದ ಹಣಾಹಣಿಯಲ್ಲಿ 0-3ರಲ್ಲಿ ಸೋತ ಭಾರತ ಮಹಿಳೆಯರ ಅಭಿಯಾನ ಮುಕ್ತಾಯಗೊಂಡಿತು.

ಪಿ.ವಿ.ಸಿಂಧು ಅವರು ರಚನಾಕ್ ಇಂಟನನ್ ಎದುರು ಸೋತರು. ಡಬಲ್ಸ್‌ನಲ್ಲಿ ಶ್ರುತಿ ಮಿಶ್ರಾ-ಸಿಮ್ರಾನ್ ಜೋಡಿ ಜೊಂಗ್‌ಕೊಲ್ಫನ್ ಕಿತಿತರ್ಕುಲ್ ಮತ್ತು ರವಿಂದ ಪ್ರಜೊಂಗಯ್ ಎದುರು ಸೋತರು. ಎರಡನೇ ಸಿಂಗಲ್ಸ್ ಪಂದ್ಯದಲ್ಲಿ ಆಕರ್ಷಿ ಕಶ್ಯಪ್ ಅವರು ಪೊರ್ನಪೊವಿ ಚೊಚುವಾಂಗ್‌ಗೆ ಮಣಿದರು. ಥಾಯ್ಲೆಂಡ್ 3-0ಯಿಂದ ಗೆದ್ದ ಕಾರಣ ಉಳಿದೆರಡು ಪಂದ್ಯಗಳಿಗೆ ಮಹತ್ವ ಇರಲಿಲ್ಲ. ಆದ್ದರಿಂದ ಆ ಪಂದ್ಯಗಳನ್ನು ಕೈಬಿಡಲಾಯಿತು.


ಎಚ್.ಎಸ್. ಪ್ರಣಯ್ ಅವರು ಷಟಲ್ ರಿಟರ್ನ್ ಮಾಡಿದ ಬಗೆ –ಎಎಫ್‌ಪಿ ಚಿತ್ರ

ಫೋಬ್ಸ್: ಮೆಸ್ಸಿಗೆ ಅಗ್ರಸ್ಥಾನ

ಟೊರೊಂಟೊ (ರಾಯಿಟರ್ಸ್): ಫುಟ್‌ಬಾಲ್ ಮಾಂತ್ರಿಕ ಲಯೊನೆಲ್ ಮೆಸ್ಸಿ ಅವರು ಫೋಬ್ಸ್ ಶ್ರೀಮಂತ ಕ್ರೀಡಾಪಟುಗಳ ಪಟ್ಟಿಯ ಅಗ್ರಸ್ಥಾನದಲ್ಲಿದ್ದಾರೆ.

ಅರ್ಜೆಂಟೀನಾ ಆಟಗಾರ ಮೆಸ್ಸಿ ಈಗ ಲೀಗ್‌ಗಳಲ್ಲಿ ಪ್ಯಾರಿಸ್ ಸೇಂಟ್ ಜರ್ಮನ್ ತಂಡದಲ್ಲಿ ಆಡುತ್ತಿದ್ದಾರೆ. ಎನ್‌ಬಿಎಯಲ್ಲಿ ಆಡುತ್ತಿರುವ ಬ್ಯಾಸ್ಕೆಟ್‌ಬಾಲ್ ಆಟಗಾರ ಲೀಬ್ರಾನ್ ಜೇಮ್ಸ್ ಮತ್ತು ಮ್ಯಾಂಚೆಸ್ಟರ್ ಯುನೈಟೆಡ್‌ನ ಫುಟ್‌ಬಾಲ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಅವರನ್ನು ಹಿಂದಿಕ್ಕಿದ್ದಾರೆ.